ನೊಳಂಬರ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಪಿಎಚ್ ಡಿ
(ಸಮಾಜಶಾಸ್ತ್ರ) ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ

ಸಂಶೋಧನಾ ವಿದ್ಯಾರ್ಥಿನಿ
ನಾಗವೀಣಾ ಎಲ್
ಕಣಿವೇಹಳ್ಳಿ, ಸಿಂಗೇನಹಳ್ಳಿ
ಹೊಳಲ್ಕೆರೆ ತಾ. ಚಿತ್ರದುರ್ಗ ಜಿಲ್ಲೆ

ಮಾರ್ಗದರ್ಶಕರು
ಡಾ ಕೆ ಎಂ ಮೇತ್ರಿ
ಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ- ೫೮೩ ೨೭೬
೨೦೧೬

ನೊಳಂಬರ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಪಿಎಚ್ ಡಿ
(ಸಮಾಜಶಾಸ್ತ್ರ) ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ

ಸಂಶೋಧನಾ ವಿದ್ಯಾರ್ಥಿನಿ
ನಾಗವೀಣಾ ಎಲ್
ಕಣಿವೇಹಳ್ಳಿ, ಸಿಂಗೇನಹಳ್ಳಿ
ಹೊಳಲ್ಕೆರೆ ತಾ. ಚಿತ್ರದುರ್ಗ ಜಿಲ್ಲೆ

ಮಾರ್ಗದರ್ಶಕರು
ಡಾ ಕೆ ಎಂ ಮೇತ್ರಿ
ಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
೫೮೩ ೨೭೬

೨೦೧೬

ಸಂಶೋಧಕರ ಪ್ರಮಾಣಪತ್ರ

ನೊಳಂಬರ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನ ಎಂಬ ವಿಷಯದಲ್ಲಿ ಮಹಾಪ್ರಬಂಧವನ್ನು ಡಾ ಕೆ ಎಂ ಮೇತ್ರಿ, ಪ್ರಾಧ್ಯಾಪಕರು ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಪಿಎಚ್ ಡಿ (ಸಮಾಜಶಾಸ್ತ್ರ) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಸಲ್ಲಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ.

ಸ್ಥಳ: ವಿದ್ಯಾರಣ್ಯ

ದಿನಾಂಕ: 15-08-2016

ನಾಗವೇಣಾ ಎಲ್
ಸಂಶೋಧನ ವಿದ್ಯಾರ್ಥಿನಿ
ಬುಡುಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮಾರ್ಗದರ್ಶಕರ ದೃಢೀಕರಣ ಪತ್ರ

ನೊಳಂಬರ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನ ಎಂಬ ವಿಷಯದಲ್ಲಿ ಪಿಎಚ್ ಡಿ (ಸಮಾಜಶಾಸ್ತ್ರ) ಪದವಿಗಾಗಿ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ನಾಗವೀಣಾ ಎಲ್ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸಲಾಗಿದೆ.

ಸ್ಥಳ: ವಿದ್ಯಾರಣ್ಯ

ದಿನಾಂಕ: 15-8-2016

ಡಾ ಕೆ ಎಂ ಮೇತ್ರಿ
ಮಾರ್ಗದರ್ಶಕರು
ಬುಡುಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗದಲ್ಲಿ ನೊಳಂಬರ, ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನ ಎಂಬ ವಿಷಯದ ಮೇಲೆ ಪಿಎಚ್ ಡಿ ಸಂಶೋಧನೆಗೆ ಅವಕಾಶ ಮಾಡಿಕೊಟ್ಟು ಹಾಗೂ ಮಾರ್ಗದರ್ಶನ ಮಾಡಿದ ಪ್ರೊ ಕೆ ಎಂ ಮೇತ್ರಿ ಅವರಿಗೆ ಹೃದಯ ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಹಾಗೇ ನನ್ನ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾಗಿರುವ ಡಾ. ಚಲುವರಾಜು, ಡಾ. ಗಂಗಾಧರ ದೈವಜ್ಞ, ಡಾ. ಕೇಶವನ್‌ಪ್ರಸಾದ, ಡಾ. ಎ. ಪ್ರಭಾಕರ ಅವರೆಲ್ಲರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ನನ್ನನ್ನು ಹೆತ್ತು, ಸಾಕಿ-ಸಲುಹಿ, ಈ ವರೆಗೆ ಅಧ್ಯಯನ ಮಾಡಲು ಅವಕಾಶ ಕೊಟ್ಟು, ಪ್ರೋತ್ಸಾಹಿಸಿದ ನನ್ನ ತಂದೆ, ಲೋಕೇಶಪ್ಪ, ತಾಯಿ, ವಿಜಯಮ್ಮ ಜೊತೆಗೆ ಇದ್ದು ಸದಾ ಪ್ರೋತ್ಸಾಹದ ಮಾತುಗಳನ್ನು ಆಡುತ್ತಾ ಅಧ್ಯಯನಕ್ಕೆ ಬೆಂಬಲ ಕೊಡುವ ಸಹೋದರಿ ವಾಣಿ ಎಲ್., ಸಹೋದರ ಮಂಜುನಾಥ ಎಲ್., ಅಜ್ಜ ದಿ. ಕಲ್ಲಿಂಗಪ್ಪ ಇವರ ಪ್ರೀತಿಗೆ ನನ್ನ ನಮನಗಳು.

ನನ್ನ ಅಧ್ಯಯನಕ್ಕೆ ಗ್ರಾಂಥಿಕ ನೆರವು ನೀಡಿದ ಬೆಂಗಳೂರಿನ ದಿ. ಕೂಗೂರು ನಿರಂಜನ, ಮೈಸೂರಿನ ವಿದ್ವಾನ್ ಬಸವರಾಜಯ್ಯ, ಬೆಳಗಾವಿಯ ಪ್ರೊ. ಸಿದ್ಧಣ್ಣ ಉತ್ನಾಳ, ಕೊಪ್ಪಳದ ಮಲ್ಲಪ್ಪ ಹೋರಿ, ಹೊಸಪೇಟೆಯ ಪಂಪನಗೌಡ, ತುಮಕೂರಿನ ಪ್ರೊ. ಶಂಕರಪ್ಪ ಎಂ.ಪಿ., ಹಾಗೂ ಶಿವಮೊಗ್ಗದ ನಂದಿ ವಸತಿ ನಿಲಯದ ಗ್ರಂಥಾಲಯದ ವ್ಯವಸ್ಥಾಪಕರು, ಇನ್ನಿತರರಿಗೆ ನಾನು ತುಂಬ ಋಣಿಯಾಗಿದ್ದೇನೆ.

ನನ್ನೀ ಸಂಶೋಧನ ಕಾರ್ಯಕ್ಕೆ ಬೆಂಗಾವಲಾಗಿ ನಿಂತ ನನ್ನೂರಿನ ಜನ ಹಾಗೂ ನನಗೆ ಪ್ರೀತಿಯಿಂದ ಸಹಕರಿಸಿದ ಸಮುದಾಯವರಿಗೆ ತುಂಬು ಹೃದಯದ ಕೃತಜ್ಞತೆಗಳು.

ಈ ಸಂದರ್ಭದಲ್ಲಿ, ದಾಕ್ಷಾಯಣಿ ಮೇತ್ರಿ, ಅನ್ನಪೂರ್ಣ ಗೋಸ್ವಾಳ, ಹಿ.ಚಿ. ಶಾಂತವೀರಯ್ಯ, ಗಿರಿಯಪ್ಪ ಎಲಿವಾಳ, ಸಂಶೋಧಕರಾದ ಡಾ. ಎಂ. ಚಿದಾನಂದಮೂರ್ತಿ, ಬಸವರಾಜಯ್ಯ, ಉಪನ್ಯಾಸಕರಾದ ಡಾ. ರಾಕೇಶ, ಎಸ್.ಎಚ್. ಪ್ಯಾಟಿ ಪ್ರಾಂಶುಪಾಲರು, ನೊಳಂಬವಾಣಿ ಪತ್ರಿಕೆ ಸಂಪಾದಕರಾದ ಶ್ರೀ ಚನ್ನಬಸವಯ್ಯ ಇವರ ಸಹಕಾರವನ್ನು ನೆನೆಯುತ್ತೇನೆ.

ಜೊತೆಗೆ, ಶಿವಮೊಗ್ಗದ ಶಶಿಕಾಂತ ಬಿ.ಎ., ಮೀನಾ ಶಶಿಕಾಂತ ಇವರಿಗೆ ನನ್ನ ನೆನಹುಗಳು.

ಸಂಶೋಧನೆಗೆ ಸಹಕರಿಸಿದ ಎಲ್ಲ ನನ್ನ ಮಿತ್ರವೃಂದ, ತಿಮ್ಮೇಶ್ ಸೊಲ್ಲಾಪುರ, ಗಿರಿಧರ್ ಎಸ್., ರಾಧಾ ತುಮಕೂರು, ದಾವಣಗೆರೆಯ ಶ್ರೀಮತಿ ಶಾಂತಾ ಎಲ್ಲರಿಗೂ ಕೃತಜ್ಞತೆಗಳನ್ನು ಸಲ್ಲಿಸಲು ಬಯಸುತ್ತೇನೆ.

ಧನ್ಯವಾದಗಳು

ಪರಿವಿಡಿ

ಸಂಕ್ಷೇಪ ಸೂಚಿ

ಆಕಶಾಸಂ	: ಆಂಧ್ರಪ್ರದೇಶ ಶಾಸನ ಸಂಪುಟ
ಇದ	: ಇತಿಹಾಸ ದರ್ಶನ
ಎಆರ್ಐಇ	: ಎನ್ಯುವಲ್ ರಿಪೋರ್ಟ್ಸ್ ಆಫ್ ಇಂಡಿಯನ್ ಎಪಿಗ್ರಫಿ
ಎಇ	: ಎಪಿಗ್ರಾಫಿಯಾ ಇಂಡಿಕಾ
ಎಕ	: ಎಪಿಗ್ರಾಫಿಯಾ ಕರ್ನಾಟಿಕಾ
ಎಸ್ಐಐ	: ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಶ್ಯನ್ಸ
ಎಮ್ಎಆರ್	: ಮೈಸೂರ ಆರ್ಕಿಯೋಲೋಜಿಕಲ್ ರಿಪೋರ್ಟ್ಸ್
ಕವಿವಿಶಾಸಂ	: ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ
ಕ್ರಿ ಶ	: ಕ್ರಿಸ್ತಶಕ
ಕೆಐ	: ಕರ್ನಾಟಕ ಇನ್ಸ್‌ಕ್ರಿಪ್ಶ್ಯನ್ಸ
ನೊಇದ	: ನೊಳಂಬ ಇತಿಹಾಸ ದರ್ಶನ
ಪ್ರ ಕ	: ಪ್ರಬುದ್ಧ ಕರ್ನಾಟಕ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವಿಧಾನ, ವ್ಯಾಪ್ತಿ ಮತ್ತು ಸ್ವರೂಪ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವಿಧಾನ, ವ್ಯಾಪ್ತಿ ಮತ್ತು ಸ್ವರೂಪ

ಭಾರತೀಯ ಸಮಾಜವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಅನೇಕ ರೀತಿಯ ವೈವಿಧ್ಯತೆಗಳು ಗೋಚರವಾಗುತ್ತವೆ. ಸಮಾಜದ ಸಾಮಾಜಿಕ ರಚನೆ ಪ್ರಮುಖವಾಗಿ ಬುಡಕಟ್ಟು, ಜಾತಿ ಆಧಾರಿತ ಲಕ್ಷಣಗಳಿಂದ ಕೂಡಿದೆ. ಒಂದು ಕಡೆ ನಾಗರಿಕತೆಯಲ್ಲಿ ಉತ್ಕೃಷ್ಟ ಮಟ್ಟವನ್ನು ತಲುಪಿದ ಜನ ಸಮುದಾಯ, ಮತ್ತೊಂದೆಡೆ ಕಾಡು ಮೇಡುಗಳಲ್ಲಿ ಗಿರಿ-ಕಂದರಗಳಲ್ಲಿ ವಾಸಿಸುವ ಬುಡಕಟ್ಟು ಸಮುದಾಯಗಳು ಕಂಡುಬರುತ್ತವೆ. ಬಡತನ-ಶ್ರಿಮಂತಿಕೆ, ವಿದ್ಯಾವಂತರು-ಅವಿದ್ಯಾವಂತರು, ನಾಗರಿಕರು-ನಾಗರಿಕತೆಯಿಂದ ದೂರ ಉಳಿದವರು ಇಂತಹ ವ್ಯತ್ಯಾಸಗಳಿಂದ ಪ್ರತಿಯೊಂದು ಸಮುದಾಯಗಳು ತನ್ನದೆಯಾದ ಆಚಾರ-ವಿಚಾರ, ನಡೆ-ನುಡಿ, ನಂಬಿಕೆ-ನಡವಳಿಕೆ, ಸಂಸ್ಕೃತಿ, ಭಾಷೆ, ಧಾರ್ಮಿಕ ಭಾವನೆ ಹಾಗೂ ಸಾಮಾಜಿಕ ಜೀವನವನ್ನು ರೂಪಿಸಿಕೊಂಡಿರುತ್ತದೆ.

ಭಾರತ, ಐತಿಹಾಸಿಕ ಹಾಗೂ ಸಾಂಪ್ರದಾಯಿಕ ಹಿನ್ನೆಲೆಯಲ್ಲಿ ಅನೇಕ ಸಮೂಹಗಳನ್ನು ತನ್ನ ಒಡಲಿನಲ್ಲಿ ಇಟ್ಟುಕೊಂಡು, ಸಾಮಾಜಿಕ ಜೀವನವನ್ನು ರೂಪಿಸಿಕೊಂಡ ರಾಷ್ಟ್ರವಾಗಿದೆ. ಅದೇ ರೀತಿ ಕರ್ನಾಟಕದಲ್ಲಿಯೂ ಹಲವು ಸಮುದಾಯಗಳನ್ನು ಕಾಣಬಹುದು. ಇದರಲ್ಲಿ ನೊಳಂಬ ಸಮುದಾಯವು ಒಂದು. ಪ್ರತಿಯೊಂದು ಸಮುದಾಯವು ಸ್ವಯಂ ಪರಿಪೂರ್ಣತೆಯನ್ನು ಹೊಂದಲು ವಿವಿಧ ವೃತ್ತಿ ಸಮೂಹಗಳನ್ನು ಒಳಗೊಂಡಿರುವಂತೆ ನೊಳಂಬ ಸಮುದಾಯವು ಸಹ ವಿವಿಧ ವೃತ್ತಿಗಳನ್ನು ಒಳಗೊಂಡು ಸ್ವಯಂ ಪರಿಪೂರ್ಣತೆ ಪಡೆಯುವ ಆಶಯ ಹೊಂದಿದೆ. ಆದ ಕಾರಣ ನೊಳಂಬರ ಸ್ಥಾನವನ್ನು ವಿಶಿಷ್ಟವಾಗಿ ಗುರುತಿಸಲು ಹಾಗೂ ಐತಿಹಾಸಿಕ ಮತ್ತು ಸಾಂಸ್ಕೃತಿಕ ವಿಶಿಷ್ಟ ಲಕ್ಷಣಗಳನ್ನು ತಿಳಿಯುವ ಪ್ರಯತ್ನವನ್ನು ಈ ಸಂಶೋಧನ ಮಹಾಪ್ರಬಂಧದಲ್ಲಿ ಮಾಡಲಾಗಿದೆ.

ಯಾವುದೇ ಜಾತಿ ಇರಲಿ, ಧರ್ಮವಿರಲಿ ಅಥವಾ ಭಾಷೆಯೇ ಇರಲಿ, ಸಾಂಸ್ಕೃತಿಕ ವಿನ್ಯಾಸಗಳಿರಲಿ, ಪ್ರತಿಯೊಂದಕ್ಕೂ ನಿರ್ದಿಷ್ಟ ಬೆಳವಣಿಗೆಯ ಒಂದು ನಿರ್ದಿಷ್ಟ ಕ್ರಮದ ಅಭಿವ್ಯಕ್ತಿಗಳು ಇರುತ್ತವೆ. ಎಷ್ಟೋ ಪುರಾತನ ಬೇರುಗಳನ್ನು ಹೊಂದಿರುವಂತೆ ಬಾಸವಾಗುವ ಜಾತಿ ಕೂಡ ಜನಾಂಗೀಯತೆ ಮೂಲವಾದುದಲ್ಲ. ಆದರೆ, ಒಂದು ಸಮಾಜದ ಉತ್ಪಾದನಾ ವಿನ್ಯಾಸದೊಳಗೆ ಒಂದು ಪಂಗಡವಾಗಿ ಏರ್ಪಟ್ಟು ಕಡೆಗೆ ಒಂದು ಸಾಂಸ್ಕೃತಿಕ ಗುರುತಿಸಿಕೊಳ್ಳುವಿಕೆಯನ್ನು ರೂಢಿಸಿಕೊಂಡ **ಜಾತಿ** ಎಂಬುದು ಹೇಗೆ ಒಂದು ನಿರ್ದಿಷ್ಟ ಜನಸಮುದಾಯದ ಸಾಮಾಜಿಕ ಸಂಘಟೀಸಿಕೊಳ್ಳಲು ಜನಸಮುದಾಯಗಳು ಆರಂಭಿಸುವಂತೆಯೇ, ಅದರ ಮೂಲ ಅವರವರ ಗುರುತಿಗೆ ಸಿಗದಷ್ಟು ಪ್ರಾಚೀನ ಕಾಲದಲ್ಲಿ ಮುಳುಗಿ ಹೋಗಿರಬಹುದು. ಅಥವಾ ಒಂದು ನಿರ್ದಿಷ್ಟ ವ್ಯಕ್ತಿ ಅಥವಾ ಘಟನೆಯಿಂದ ಆರಂಭವಾಗಿರಬಹುದು.

ಪ್ರಪಂಚದಲ್ಲಿ ಜೀವವಿಕಾಸದ ನಂತರ ಮನುಷ್ಯ ಎಂಬ ಪ್ರಾಣಿ ಇನ್ನಿತರ ಪ್ರಾಣಿಗಳಿಗಿಂತ ಭಿನ್ನವಾಗಿರಲು ಅವನಿಗಿರುವ ಏಕೈಕ ಆಧಾರ 'ಸಂಸ್ಕೃತಿ' ಮನುಷ್ಯನೇ ಸಂಸ್ಕೃತಿಯ ಮೂಲ ನಿರ್ಮಾಪಕನಾಗಿದ್ದರಿಂದ ಅವನ ಶ್ರಮ ಎಷ್ಟೆಷ್ಟು ಬಳಕೆಯಾಗುತ್ತಾ ಬಂತೋ ಅಷ್ಟಷ್ಟು ಸಂಸ್ಕೃತಿಯು ವಿಕಾಸವಾಗುತ್ತಾ ಬಂತು ಆಗ ಅಂತಸ್ತು ಮತ್ತು ಜಾತಿ ಇವು ಮುಖ್ಯವಾಗಿರುವುದಿಲ್ಲ.

ಮಾನವನು ಮೂಲತಹ ಅರಣ್ಯವಾಸಿಯಾಗಿದ್ದು, ಅವನಿಗೆ ಆಹಾರ ಶೇಖರಣೆಯ ಸಮಸ್ಯೆ ತಲೆದೂರಿರುವದರಿಂದ, ಕಾಡಿನಲ್ಲಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಅಲೆಮಾರಿಯಾಗಿ ಅಲೆದಾಡುತ್ತಿದ್ದ. ಅರಣ್ಯದಲ್ಲಿ ಸಾಮಾನ್ಯವಾಗಿ ದೊರೆಯುವ ಗೆಡ್ಡೆ ಗೆಣಸು ಇಲ್ಲವೆ, ಪ್ರಾಣಿಗಳನ್ನು ಬೇಟೆಯಾಡಿ, ತನ್ನ ಹಸಿವನ್ನು ನೀಗಿಸಿಕೊಳ್ಳುತ್ತಿದ್ದನು. ಇದಕ್ಕೆ ಅನೇಕ ಸಹಚರರ ನೆರವಿನ ಅಗತ್ಯ ಮಾನವನಿಗಿತ್ತು. ಆಹಾರ ಸಂಪಾದನೆಗಾಗಿ ಕಾಡಿನ ಮೃಗಗಳು, ಪ್ರಾಕೃತಿಕ ಪ್ರತಿಕೂಲಗಳು ಇತರೆ ಸಹಚರರ ತೊಂದರೆಗಳಿಂದ ಮನುಷ್ಯ ತನ್ನನ್ನು ತಾನು ರಕ್ಷಣೆ ಮಾಡಿಕೊಳ್ಳಬೇಕಿತ್ತು. ಹೀಗಾಗಿ ಮನುಷ್ಯನಿಗೆ ಗುಂಪು ಜೀವನದ ಅವಶ್ಯಕತೆ ಇತ್ತು.

ಕಾಡಿನಲ್ಲಿ ಬೇಟೆ ಆಡುತ್ತಿದ್ದ ಮಾನವ, ಆಹಾರ ಉತ್ಪಾದನೆಯ ವಿಧಾನ ತಿಳಿದಾದ ಮೇಲೆ ತನ್ನ ಅಲೆಮಾರಿತನವನ್ನು ತೊರೆದು ಒಂದೆಡೆ ನೆಲೆಯೂರಲು ತೊಡಗಿದನು. ಮಾನವನು ತನ್ನ ಗುಂಪಿನೊಂದಿಗೆ, ಅಲ್ಲಲ್ಲಿ ನೆಲೆಯೂರಿದ ತಾಣಗಳೇ ಗ್ರಾಮಗಳಾಗಿವೆ. ಆಹಾರ ಉತ್ಪಾದನೆಗಾಗಿ ವ್ಯವಸಾಯ ವೃತ್ತಿಯನ್ನು ಅವಲಂಬಿಸಿದನು. ಅಂದರೆ, ತಾನು ನೆಲೆನಿಂತ ಕಾಡಿನಲ್ಲಿ ಇಲ್ಲವೆ ಕಾಡಿನಂಚಿನ ಬಯಲಿನಲ್ಲಿ ನೆಲವನ್ನು ಅಗೆದು, ಹದಮಾಡಿ

ಬೀಜಗಳನ್ನು ಬಿತ್ತಿದ. ವ್ಯವಸಾಯಕ್ಕೆ ಪೂರಕವಾದ ಪ್ರಾಣಿಗಳ ನೆರವನ್ನು ಪಡೆದನು. ಕಾಡು ಪ್ರಾಣಿಗಳನ್ನು ಪಳಗಿಸಿ, ಸಾಕಾಣಿಕೆ ಆರಂಭಿಸಿದನು. ಇದರಿಂದ ಪಶುಸಂಗೋಪನೆ ಮತ್ತು ವ್ಯವಸಾಯದ ಜೀವನವನ್ನು ರೂಪಿಸಿಕೊಂಡನು. ಕಾಡು ತೊರೆದು ಹೊರಗೆ ಬಂದ ಮಾನವ ತನ್ನದೇ ಆದ ಸಮಾಜವನ್ನು ರಚಿಸಿಕೊಂಡನು. ಹೀಗೆ ರಚಿಸಿಕೊಳ್ಳುವದರ ಮೂಲಕ ತನ್ನ ಸಮಾಜದ ವ್ಯವಸ್ಥಿತ ಬೆಳವಣಿಗೆಗೆ ಅನುಕೂಲವಾಗುವಂತಹ ನೀತಿ–ನಿಯಮ, ಕಟ್ಟಳೆ, ಸಂಪ್ರದಾಯ, ವಿಧಿ–ವಿಧಾನಗಳನ್ನು ರೂಪಿಸಿಕೊಂಡನು. ಅವುಗಳನ್ನು ಎಲ್ಲರೂ ಕಟ್ಟುನಿಟ್ಟಿನಿಂದ ಪಾಲಿಸಬೇಕಿತ್ತು. ಅವುಗಳನ್ನು ಉಲ್ಲಂಘಿಸಿದರೆ, ತಪಿತಸ್ಥರಿಗೆ ಬಹಿಸ್ಕಾರ, ಗಡಿಪಾರು, ದಂಡ ಇಲ್ಲವೇ ಶಿಕ್ಷೆಯನ್ನು ವಿಧಿಸಲಾಗುತ್ತಿತ್ತು. ಈ ರೀತಿಯಾಗಿ ಆದಿಮಾನವ ಸಂಸ್ಕೃತಿಯು ಒಂದು ವ್ಯವಸ್ಥಿತ ಸಮುದಾಯವಾಗಿ ಬೆಳೆದಬಂದಿದೆ.

ಒಂದು ಸಮುದಾಯದ ಅಧ್ಯಯನದ ಹಿಂದೆ ಮಾನವನ ಸಂಸ್ಕೃತಿಯ ಹಿನ್ನೆಲೆಯು ಕಾರಣವಾಗಿರುತ್ತದೆ. ಹೀಗಾಗಿ ಸಂಸ್ಕೃತಿಯ ವಿಕಾಸದ ಹಂತಗಳನ್ನು ಗುರುತಿಸಬೇಕಾಗುತ್ತದೆ. ಪ್ರಸ್ತುತ ಮಾನವ ಸಂಸ್ಕೃತಿಯ ಮಜಲುಗಳಾದ ಆದಿಮಾನವ ಸಂಸ್ಕೃತಿ. ಗ್ರಾಮೀಣ ಸಂಸ್ಕೃತಿ, ನಗರ ಸಂಸ್ಕೃತಿ, ಭವ್ಯ ನಗರ ಸಂಸ್ಕೃತಿ ಎಂದು ವಿಭಾಗಿಸಿಕೊಳ್ಳಬೇಕಾಗುತ್ತದೆ. ಹೀಗೆ ನಾಲ್ಕು ಹಂತದ ಸಂಸ್ಕೃತಿಯ ಮಧ್ಯ ಆದಿಮಾನವನ ಸಂಸ್ಕೃತಿಯ ಕಾಲವನ್ನು ನಿರ್ಧರಿಸಲು ನಮಗೆ ಅನೇಕ ತೊಡಕುಗಳಿವೆ. ಆ ಕಾರಣಕ್ಕಾಗಿ ಯಾವುದೇ ಸಮಾಜದ ಒಬ್ಬ ಸದಸ್ಯನಾಗಿ ಗಳಿಸಿಕೊಂಡ ಜ್ಞಾನ, ಕಲೆ, ನಂಬಿಕೆ, ನೀತಿ–ನಿಯಮ, ಆಚರಣೆಗಳು, ಸ್ವಭಾವಗಳನ್ನೊಳಗೊಂಡ ಸ್ಥಿತಿಯನ್ನು ನಾವು ಸಂಸ್ಕೃತಿಯೆಂದು ಕರೆಯುತ್ತೇವೆ. ಈ ಹಿನ್ನೆಲೆಯಲ್ಲಿ ನೊಳಂಬ ಸಮುದಾಯದ ಸಂಸ್ಕೃತಿಯನ್ನು ಪರಿಚಯಿಸುವಾಗ ಆ ಸಮುದಾಯದ ಇತಿಹಾಸ, ಆಚಾರ–ವಿಚಾರಗಳು, ಅವರ ಆಚರಣೆಗಳು, ಸಂಸ್ಕಾರಗಳು, ಸಾಹಿತ್ಯ ಕಲೆ ಹಾಗೂ ಧಾರ್ಮಿಕ ಆಚರಣೆಗಳಲ್ಲಿ ಭಿನ್ನತೆ ಕಾಣಬಹುದು.

ನೊಳಂಬ ಸಮುದಾಯದ ಮೂಲ ವೃತ್ತಿ ಪಶುಪಾಲನೆ ಮತ್ತು ಕೃಷಿ 'ನೊಳಂಬರು ಮೂಲತಃ ಕುಡಿಯರು' ಮತ್ತು ದಕ್ಷಿಣ ಭಾರತದ ನಿವಾಸಿಗಳು. ಈ ಹಿನ್ನೆಲೆಯಲ್ಲಿ ನೊಳಂಬ ಸಮುದಾಯವನ್ನು ಅವಲೋಕಿಸಿದಾಗ 'ಕುಡಿ' ಎಂಬುದು ದ್ರಾವಿಡ ಭಾಷೆಯ ಪದ ಇದರ ಅರ್ಥ ಒಕ್ಕುವುದು ಎಂಬುದಾಗಿರತ್ತದೆ. ಮನೆತನ ಒಕ್ಕಲುತನದ ಆರಂಭವನ್ನು ವ್ಯಕ್ತಪಡಿಸುತ್ತದೆ. ಇಲ್ಲಿ 'ಕುಡಿ' ಪದಕ್ಕೆ ಚಿಗುರು, ಬೆಳೆಯುವ ಗುಣ. ಒಕ್ಕಲುತನ ಎಂದಿರುವುದು ಸಂಸ್ಕೃತದಲ್ಲಿ 'ಪಲ್ಲವ' ಎಂಬುದು ಪರ್ಯಾಯ ಪದವಾಗಿದೆ. 'ಪಲ್ಲವ' ಎನ್ನುವುದನ್ನು ತಮಿಳಿನಲ್ಲಿ "ನೊಳಂಬ" ಎಂದು ಕರೆಯುತ್ತಾರೆ. ನೊಳಂಬರೇ ಕಂಚಿಯ ಪಲ್ಲವರು ಅವರ ವಂಶಸ್ಥರು ಹಿಂದಿನ ನೊಳಂಬರು ಎಂದು ಕರೆಯಲಾಗುತ್ತದೆ. ಚರಿತ್ರೆ ಎನ್ನುವುದು

ಆಗಿ ಹೋದ ಘಟನೆಗಳ ನಿರ್ವಾತ ವರದಿ ಎನ್ನುವುದು ಆ ಚರಿತ್ರೆಯ ಏಕಸ್ವಾಮ್ಯವನ್ನು ಸೂಚಿಸುತ್ತದೆ. ಚರಿತ್ರೆ ಹಳೆಯದು, ಅದು ಹಳೆಯದರ ಅಧ್ಯಯನ ಎನ್ನುವ ಮಾತು ಪ್ರಚಲಿತವಿರುವ ವ್ಯಾಖ್ಯಾನ ಹೊಂದಿದೆ. ಆದರೆ, ಸೂಕ್ಷ್ಮವಾಗಿ ಗಮನಿಸಿದಾಗ, ಚರಿತ್ರೆ ಹಳೆಯದಲ್ಲ. ಅದು ಎಲ್ಲ ಕಾಲಕ್ಕೂ ಪ್ರಸ್ತುತವಾದ ಆಖ್ಯಾನವನ್ನು ನೀಡುತ್ತಾ ಕಾಲಕಾಲಕ್ಕೆ ಸದಾ ಪರಿಸ್ಕರಣೆಗೊಳ್ಳುತ್ತಿರುತ್ತದೆ. ಹೀಗಾಗಿ, ಆಯಾ ಸಮಕಾಲೀನ ಚರಿತ್ರೆಯ ಮೂಲ ರೂಪಗಳನ್ನಾಗಿ ಪುನರ್ ವಿಮರ್ಶೆಗೆ ಒಳಪಡಿಸಲಾಗುತ್ತಿದೆ.

ಇತಿಹಾಸದ ಹಿನ್ನೆಲೆಯಲ್ಲಿ ಮಾನವನು ಅಧಿಕಾರ, ಧರ್ಮ, ಸವಲತ್ತು ಜಾತಿ, ಶೋಷಣೆ, ಯುದ್ಧ, ಸೈನ್ಯ, ಈ ಎಲ್ಲವೂ ಚರಿತ್ರೆ ಉದ್ಧಕ್ಕೂ ಕಂಡುಬರುವ ಸರ್ವೇಸಾಮಾನ್ಯ ಅಂಶಗಳನ್ನು ರೂಪಿಸಿಕೊಂಡಿದ್ದಾನೆ. ಇವುಗಳನ್ನು ಯಾವುದೇ ಒಂದು ರಾಜ ವಂಶಗಳ ಅಭೀಪ್ಸೆಯನ್ನು ಹಾಗೂ ಅವರು ಬಿಟ್ಟುಹೋದ ದಾಖಲೆಗಳನ್ನು ಸರಿಯಾಗಿ ಜೋಡಿಸಿ ಕ್ರಮಬದ್ಧವಾದ ಅಧ್ಯಯನವನ್ನು ಕೈಗೊಂಡಾಗ, ಸಮುದಾಯದ ಅರಸು ಮನೆತನಗಳ ನೈಜ ಚರಿತ್ರೆಯು ದೊರೆಯುತ್ತವೆ. ಅಲ್ಲದೇ ಅವರು ಹಾಕಿಕೊಟ್ಟ ಅನೇಕ ವೃತ್ತಿಪರತೆಯನ್ನು ನೋಡಿಕೊಂಡು, ಸಮಂಜಸವಾದ ನಿರ್ಧಾರಕ್ಕೆ ಬರುಲು ಸಾಧ್ಯವಾಗುತ್ತದೆ. ಆಯಾ ರಾಜವಂಶಗಳ ಆಡಳಿತದ ಕಾಲಾವಧಿಯಲ್ಲಿ ಕಂಡುಬರುವ ಅನೇಕ ಆಚರಾಣತ್ಮಾಕ ಸಂಪ್ರದಾಯಗಳು, ಇಂದಿನ ಸಮುದಾಯಗಳ ಮೇಲೆ ಪ್ರಭಾವವನ್ನು ಬೀರಿರುವ ರೀತಿ ಮತ್ತು ಕುರುಹುಗಳು ಆಚರಣೆಗಳು ಯಾವ ರೀತಿಯಲ್ಲಿ ಸಾಮಾಜಿಕ ಚರಿತ್ರೆಗಳನ್ನು ನಿರ್ಮಿಸಬಲ್ಲದು ಎಂಬುದನ್ನು ಗಮನದಲ್ಲಿರಿಸಿಕೊಂಡು ಈ ಸಂಶೋಧನ ಅಧ್ಯಯನವನ್ನು ರೂಪಿಸಲಾಗಿದೆ.

ಜೇನುಕುರುಬರನ್ನು ದ್ರಾವಿಡ ಮೂಲದ ಕರ್ನಾಟಕ ರಾಜ್ಯದ ಪ್ರಾಚೀನ ಬುಡಕಟ್ಟು ಎಂದು ಬಲ್ಲಮೂಲಗಳು ಹೇಳುವವು. ಇವರ ಪ್ರಾಚೀನತೆಯನ್ನು ಕುರಿತು ಐತಿಹಾಸಿಕ ವಿಚಾರಗಳು, ಇವರು ಬಹಳ ಪರಾಕ್ರಮಶಾಲಿಗಳಾಗಿ ತುಂಬಾ ವರ್ಷಗಳ ಕಾಲ ದಕ್ಷಿಣ ಭಾರತವನ್ನು ಆಳಿದ, ಪಲ್ಲವ ವಂಶಕ್ಕೆ ಸೇರಿದವರು ಎಂದು ತಿಳಿಸುವುದಲ್ಲದೆ, ಕಾಲಾನಂತರ ಕೊಂಗ, ಚೋಳ ಮತ್ತು ಚಾಲುಕ್ಯರ ಪ್ರಬಲವಾದ ದಾಳಿಯಿಂದ ಏಳು ಅಥವಾ ಎಂಟನೆಯ ಶತಮಾನದ ಅವನತಿಹೊಂದಿ ಸಮೀಪದ ಗುಡ್ಡ ಬೆಟ್ಟಗಳಿಂದ ಆವೃತವಾದ ಮಲಬಾರ, ನೀಲಗಿರಿ, ಕೊಡಗು ವೈನಾಡು ಮತ್ತು ಮೈಸೂರು ಪ್ರದೇಶಗಳಲ್ಲಿನ ದಟ್ಟವಾದ ಅರಣ್ಯವನ್ನು ಸೇರಿಕೊಂಡು ಬಹಳ ಕಾಲದವರೆಗೂ ತಲೆಮರೆಸಿಕೊಂಡಿದ್ದು, ಕಾಲಕ್ರಮೇಣ ಯಾವುದೇ ಸಂಪರ್ಕವಿಲ್ಲದೇ ಇವರ ಸಹಜವಾದ ಏಕಾಂಗಿತನ ಅವರನ್ನು ಕಾಡು ಜನರನ್ನಾಗಿ ಮಾಡಿ ತಮ್ಮ ಗತಕಾಲದ ವೈಭವ ಸಂಸ್ಕೃತಿಯನ್ನು ಕಳೆದುಕೊಳ್ಳುವುದಕ್ಕೆ ಕಾರಣವಾಗಿರಬಹುದು ಎಂದು ತಿಳಿದುಬರುತ್ತದೆ. ಹೀಗಾಗಿ ಬಹಳ ಹಿಂದೆ ಗೊಂಡರು, ಊರುಕುರುಬರು,

ಜೇನುಕುರುಬರು ಮತ್ತು ಕಾಡುಕುರುಬರು ಒಂದೇ ಆಗಿದ್ದರು ಎಂಬುದಕ್ಕೆ ಕೇರಳ ವಿಶ್ವವಿದ್ಯಾಲಯದ ತಿರುವನಂತಪುರದ ಚಿಂತಕ ಡಾ. ಗೋಪಿನಾಥನ್ ಅವರು ೨೦೧೧, ಜುಲೈ ೧ರಲ್ಲಿ ವನ್ಯಜೀವಿ ಪತ್ರಿಕೆಯ 'ದಿ ವಿಜನ್ ಆಫ್ ಟ್ರೈಬಲಿಜಮ್' ಎಂಬ ಲೇಖನವು ಪುಷ್ಠಿಕರಿಸುತ್ತದೆ.

ಕೇರಳದ ಪ್ರಥಮ ಸಾಮ್ರಾಟರು ಚೇರರು, ಇವರು ತಮ್ಮ ಏಳು ಶಾಖೆಗಳ ಒಕ್ಕೂಟದ ಸಾಮ್ರಾಜ್ಯವನ್ನು ಕ್ರಿಸ್ತಪೂರ್ವ ೩ನೆಯ ಶತಮಾನದಲ್ಲಿ ಆಳುತ್ತಿದ್ದರು. ಇದರ ಸಂಸ್ಥಾಪಕರು ಇವರ ಪೂರ್ವಿಕರಾದ ವೈನಾಡಿನ ಕುರುಮ(ಕುರುಂಬ)ರು. ವೈನಾಡಿನ ಕುರುಂಬರು ಕುಂಬ್ರಿ ಬೇಸಾಯ ಪೂರ್ವದ ಆಹಾರ ಸಂಗ್ರಹಕರು ಎಂಬುದು ಚಾರಿತ್ರಿಕ ವಾಸ್ತವ. ಡಾ ಬಿ ಆರ್ ಅಂಬೇಡ್ಕರವರು ಚೇರರ ಕುರಿತು ತಮ್ಮ ಅಭಿಪ್ರಾಯವನ್ನು ಹೀಗೆ ವ್ಯಕ್ತಪಡಿಸುತ್ತಾರೆ. "ಚೇರ ಸಾಮ್ರಾಜ್ಯದ ಸಂಸ್ಥಾಪಕರು ನಾಗ ವಂಶೀಯ ಕುಡಿಗಳು. ಏಷ್ಯಾ ಖಂಡದ ಉತ್ತರ-ಪಶ್ಚಿಮ(ವಾಯವ್ಯ ದಿಕ್ಕಿನ) ಭಾಗದಿಂದ ದಕ್ಷಿಣದತ್ತ ಚಲನೆಗೊಂಡು, ನಂತರ ಗೊಂಡರೆಂದು ಕರೆಯಲ್ಪಟ್ಟರು. ಗೊಂಡರು ದಖ್ಖನಿ ವಿಭಾಗದಲ್ಲಿ ಗೊಂಡವಾನ್ ಸಾಮ್ರಾಜ್ಯವನ್ನು ಸ್ಥಾಪಿಸಿದರು. ದಖ್ಖನ ವಿಭಾಗವು ಆಹಾರ ಸಂಗ್ರಹಣೆ ಮತ್ತು ಬೇಸಾಯಕ್ಕೆ ಪ್ರಶಸ್ತವಾದ ಪ್ರದೇಶ. ತರುವಾಯ ಗೊಂಡರಲ್ಲಿ ಒಂದು ಗುಂಪು ಭಾರತದ ಕರಾವಳಿಗೆ ಚಲಿಸಿ ಅರಬ್ಬಿ ಸಮುದ್ರದ ತೀರದ ಪಶ್ಚಿಮಘಟ್ಟ ಪ್ರದೇಶದಲ್ಲಿ ನೆಲೆಗೊಂಡಿರುವುದು" ಕೇರಳದ ಚೇರರು, ವೈನಾಡಿನ ಕುರುಂಬರು ಮತ್ತು ಕರ್ನಾಟಕದ ಗೊಂಡ ಆದಿವಾಸಿಗಳು ಕಳ್ಳುಬಳ್ಳಿಗಳೆಂಬುದು ಈ ಚಾರಿತ್ರಿಕ ಮಾಹಿತಿಯಿಂದ ಅಲ್ಲದೇ ಇವರು ನಾಗವಂಶಿಗಳೆಂಬುದು ಸ್ಪಷ್ಟವಾಗುತ್ತದೆ. ನಾಗವಂಶೀಗಳು ಮೂಲ ದ್ರಾವಿಡರಾಗಿದ್ದು, ಇವರೇ ಮುಂದೇ ಪಲ್ಲವರಾಗಿರುವದರ ಬಗೆಗೆ ಈ ಮೇಲಿನ ಚಾರಿತ್ರಿಕ ದಾಖಲೆಗಳು ತಿಳಿಸುತ್ತವೆ. ಹೀಗಾಗಿ ಕರ್ನಾಟಕದ ದಕ್ಷಿಣ ಭಾಗದ ಆಳ್ವಿಕೆಯನ್ನು ಮಾಡಿದ ನೊಳಂಬರು ಮೂಲವು ಪಲ್ಲವರದ್ದೇ ಎಂದಾಯಿತು. ವೈನಾಡಿನ ಮತ್ತು ಕನ್ನಡ ನಾಡಿನ ಕುರುಂಬ, ಕುರುಬ, ಜೇನುಕುರುಬ, ಕಾಡು ಕರುಬ, ಹಾಲು ಕುರುಬ ಬುಡಕಟ್ಟುಗಳ ಮತ್ತು ನೊಣಬ ಸಮುದಾಯ ಮೂಲವು ಪಲ್ಲವರದ್ದಾಗಿದೆ ಎಂಬ ಅಂಶಗಳು ಹಲವು ಐತಿಹ್ಯಗಳಿಂದ ಅರಿವಾಗುತ್ತದೆ. ಹೀಗಾಗಿ ಎಲ್ಲ ಸಾಮಾಜಿಕ ವರ್ಗಗಳು ಒಂದೇ ಮೂಲದವು ಎಂದಾಗುತ್ತದೆ.

ಚಾರಿತ್ರಿಕವಾಗಿ ನೋಡುವ ಸಂದರ್ಭದಲ್ಲಿ ಕನ್ನಡ ನಾಡು ಅನೇಕ ರಾಜಮನೆತನಗಳಿಗೆ ಆಶ್ರಯ ನೀಡಿದೆ ಮತ್ತು ರಾಜ್ಯ-ಮತ-ಧರ್ಮಗಳ ಸ್ಥಾಪನೆಗೆ ಪ್ರಯೋಗ ಶಾಲೆಯಂತೆ ಕಾಣಸಿಗುತ್ತದೆ. ಈ ಕನ್ನಡನಾಡನ್ನು ಮೌರ್ಯರು, ಶಾತವಾಹನರು, ಕದಂಬರು, ರಾಷ್ಟ್ರಕೂಟರು,

ಬಾದಾಮಿ ಹಾಗೂ ಕಲ್ಯಾಣದ ಚಾಳುಕ್ಯರು ಸೇರಿದಂತೆ ಹಲವು ಅರಸು ಮನೆತನಗಳು ಆಳ್ವಿಕೆ ನಡೆಸಿರುವುದರ ಜೊತೆಗೆ ಚಾರಿತ್ರಿಕವಾಗಿ, ಸಾಂಸ್ಕೃತಿಕವಾಗಿ ಈ ನಾಡನ್ನು ಕಟ್ಟಿಬೆಳೆಸಿರುವುದನ್ನು ಹಲವು ಹತ್ತು ಚಾರಿತ್ರಿಕ ಆಧಾರಗಳ ಹಿನ್ನೆಲೆಯಲ್ಲಿ ಗುರುತಿಸಬಹುದಾಗಿದೆ.

ಹಾಗೇಯೇ ಕೇವಲ ನಾಡನ್ನು ಕಟ್ಟುವುದು ಮೇರೆಯನ್ನು ವಿಸ್ತರಿಸುವುದು ನಮ್ಮ ರಾಜಮನೆತನಗಳ ಉದ್ದೇಶ ಮಾತ್ರವಾಗಿರದೇ ತಾವು ಅನುಸರಿಸಿಕೊಂಡು ಬಂದ ಮತ–ಸಂಪ್ರದಾಯಗಳನ್ನು ಈ ನೆಲದಲ್ಲಿ ಬಿತ್ತಿ ಪೋಷಣೆಯನ್ನು ಮಾಡಿರುವುದು ತಿಳಿದುಬರುತ್ತದೆ. ಅಶೋಕನ ಹಾಗೂ ಶಾತವಾಹನರ ಕಾಲದಲ್ಲಿ ಬೌದ್ಧ ಧರ್ಮದ ನೆರಳನ್ನು ಕಾಣಬಹುದು. ಮುಂದೆ, ಕದಂಬರು, ಬಾದಾಮಿ ಚಾಲುಕ್ಯ, ಹೊಯ್ಸಳರು ವೈಷ್ಣವ ಧರ್ಮಕ್ಕೆ ಆಶ್ರಯವನ್ನು ನೀಡುವುದರ ಮೂಲಕ ಇಲ್ಲಿ ಧರ್ಮ ಹಾಗೂ ಸಂಪ್ರದಾಯಗಳನ್ನು ಬೆಳೆಸುವ ಪ್ರಯತ್ನವನ್ನು ಮಾಡಿದ್ದಾರೆ.

ಮೂರು ಶತಮಾನಗಳ ಕಾಲ ಅರಸರಾಗಿ ಕನ್ನಡ ನಾಡನ್ನು ಆಳಿ, ನಂತರ ನಾಡಗೌಡರಾಗಿ ನೊಳಂಬರು ಕರ್ನಾಟಕದ ಇತಿಹಾಸ ಪರಂಪರೆಗೆ ಪೂರಕ ಕಾರ್ಯವನ್ನು ಮಾಡಿದ್ದಾರೆ. ಇವರ ಕಾಲದಲ್ಲಿ ವಾಸ್ತುಶಿಲ್ಪ ಕಲೆಗೆ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ನೀಡಿದ್ದಾರೆ. ಇತಿಹಾಸದ ಪ್ರಕಾರ ನೊಳಂಬರು ಶೈವ ಮತಾವಲಂಬಿಗಳಾಗಿರುವುದು ಕಂಡುಬರುತ್ತದೆ.

ಈವರೆಗೆ ನಡೆದ ಅಧ್ಯಯನಗಳು

ನೊಳಂಬರನ್ನು ಕುರಿತಾಗಿ ಈವರೆಗೆ ಅನೇಕ ವಿದ್ವಾಂಸರು ಅಧ್ಯಯನಗಳನ್ನು ಮಾಡಿದ್ದಾರೆ. ಈ ಅಧ್ಯಯನಗಳೆಲ್ಲವೂ ದೇವಾಲಯ, ಶಾಸನಗಳನ್ನು ಕೇಂದ್ರಿಕರಿಸಿಕೊಂಡು ಅವರ ಚಾರಿತ್ರಿಕ ರಾಜವಂಶವನ್ನು ಹಿಡಿದಿಡುವ ನಿಟ್ಟಿನಲ್ಲಿ ಆ ಅಧ್ಯಯನಗಳನ್ನು ಸೀಮಿತಗೊಳಿಸಿಕೊಂಡಿದ್ದು ಇದೆ ಎಂಬುದಾಗಿ ಕಂಡುಬರುತ್ತದೆ. ಅಂತಹ ಕೆಲವೊಂದು ಅಧ್ಯಯನಗಳು ಈ ರೀತಿಯಾಗಿವೆ. ನೊಳಂಬರ ಶಾಸನಗಳನ್ನು ಕುರಿತಾಗಿ ಜೆ.ಎಫ್. ಫ್ಲೀಟ್, ಬಿ.ಎಲ್.ರೈಸ್ ಹಾಗೂ ಮುಂತಾದ ಅನೇಕ ವಿದ್ವಾಂಸರು ಶಾಸನಗಳನ್ನು ಕ್ರೋಢೀಕರಿಸಿ ಕೊಟ್ಟಿದ್ದಾರೆ. ಅವು ಎಪಿಗ್ರಫಿ ಕರ್ನಾಟಿಕಾ, ಸೌಥ್ ಇಂಡಿಯನ್ ಇನಿಸ್ಕ್ರಪ್ಸನ್ ಮತ್ತು ಎಪಿಗ್ರಫಿಯಾ ಇಂಡಿಕಾ ಎಂಬ ಸಂಪುಟಗಳಲ್ಲಿ ಹಾಗೂ ಅಲ್ಲಲ್ಲಿ ಸಂಪಾದಿಸಿದ ನೊಳಂಬರ ಶಾಸನಗಳನ್ನು ಕಾಣಬಹುದಾಗಿದೆ.

- ಎಪಿಗ್ರಫಿಯ ಕರ್ನಾಟಿಕದ ಕೆಲವು ಸಂಪುಟಗಳಲ್ಲಿ, ಆ ಸಂಪುಟಗಳ ಸಂಪಾದಕರು ಆಯಾ ಸಂಪುಟಗಳ ವ್ಯಾಪ್ತಿಯಲ್ಲಿ ಬರುವ ಪ್ರದೇಶದಲ್ಲಿದ್ದ ನೊಳಂಬರ ಬಗೆಗೆ

ಉಲ್ಲೇಖವಿರುವ ಮಾಹಿತಿಯನ್ನು ನೀಡಿದ್ದಾರೆ. ಉದಾಹರಣೆಗೆ, ಸಂಪುಟ ೭ ರಲ್ಲಿನ ಪೀಠಿಕೆ ಭಾಗದಲ್ಲಿ ತಾಯಲೂರಿನ ಶಾಸನದಲ್ಲಿ ನೊಳಂಬಾಧಿರಾಜ ಆಳ್ವಿಕೆಯ ಉಲ್ಲೇಖ ಬಂದಿರುವುದನ್ನು ಗಮನಿಸಿದ್ದಾರೆ. ತೈರೂರು ಗಾಮುಣ್ಡ ಸಾಮಿಯ ಮಗ ನಾಗಮಯ್ಯ ಶಿಲಾಮಯವಾದ ದೇವಾಲಯ ಕಟ್ಟಿಸಿದ್ದನ್ನು ಈ ಶಾಸನ ತಿಳಿಸುತ್ತದೆ. ಈ ಶಾಸನದಲ್ಲಿ ಉಲ್ಲೇಖಿತವಾಗಿರುವ ತೈರೂರು ಈಗಿನ ತಾಯಲೂರು. ಅದೇ ಶಾಸನ ಶಿಲೆಯ ದಕ್ಷಿಣಮುಖದಲ್ಲಿರುವ ಶಾಸನದಲ್ಲಿನ ಸತ್ಯವಾಕ್ಯ ಪೆರ್ಮಾನಡಿಯ ಆಳ್ವಿಕೆಯ ೨೭ನೆಯ ವರ್ಷವನ್ನೂ ನೊಲಂಬಾಧಿರಾಜನನ್ನೂ ಉಲ್ಲೇಖಿಸುತ್ತದೆ. ಕ್ರಿಸ್ತಶಕ ೯೯೭ರ ಸುಮಾರಿನಲ್ಲಿ ನೊಲಂಬ ಅಧಿಪ ಮಹೇಂದ್ರನನ್ನು ಎಱೆಯಪ್ಪ ಕೊಂದನೆಂದು ಇಲ್ಲಿ ಹೇಳಿದೆ. ಈತ ಬಹುಶಃ ಮಹೇಂದ್ರಾಧಿರಾಜನಿದ್ದಿರಬಹುದು. ಆತ ತನ್ನ ಪರಾಭವ ಮತ್ತು ಸಾವಿಗೆ ಕೆಲವು ತಿಂಗಳ ಮೊದಲಷ್ಟೇ ಈ ದೇವಾಲಯವನ್ನು ಕಟ್ಟಿಸಿರಬೇಕು. ಈ ಶಾಸನ ನೊಳಂಬ ರಾಜರು ಸ್ವತಂತ್ರವಾಗಿ ಆಳ್ವಿಕೆ ನಡೆಸುತ್ತಿದ್ದಂತೆ ಉಲ್ಲೇಖಿಸುವುದನ್ನು ಗಮನಿಸಬಹುದು. ಮುಂದೆ ಇಮ್ಮಡಿ ರಾಚಮಲ್ಲ ತನ್ನ ಆಳ್ವಿಕೆಯ ೨೭ನೆಯ ವರ್ಷದಲ್ಲಿ ಬಹುಶಃ ಈ ದತ್ತಿಯನ್ನು ಸ್ಥಿರೀಕರಿಸಿ ಅದೇ ಶಾಸನ ಶಿಲೆಯ ದಕ್ಷಿಣಮುಖದ ಮೇಲೆ ಶಾಸನ ಹಾಕಿಸಿದ್ದಾನೆ. ಈ ಪ್ರದೇಶದಲ್ಲಿ ಮೊದಲು ಇಟ್ಟಿಗೆಯಿಂದ ನಿರ್ಮಿತವಾದ ದೇವಾಲಯಗಳಿದ್ದು(ಅರೆತಿಪ್ಪೂರು) ಬಹುಶಃ ಮಹೇಂದ್ರನು ಈ ಶಿಲೆಯಲ್ಲಿ ದೇವಾಲಯವನ್ನು ಕಟ್ಟಿಸಿ ಅದರ ಬಗೆಗೆ ವಿಶೇಷವಾಗಿ ಹೇಳಿಕೊಂಡಿದ್ದಾನೆ ಎಂಬುದಾಗಿ ಈ ಸಂಪುಟದಲ್ಲಿ ದಾಖಲಿಸಿದ್ದಾರೆ.

ಎಪಿಗ್ರಫಿಯ ಕರ್ನಾಟಿಕದ ಸಂಪಾದಕರು ನೊಳಂಬರ ಕುರಿತ ಶಾಸನಗಳನ್ನು ಇಲ್ಲಿ ಸಂಗ್ರಹಿಸಿ ಕೊಟ್ಟಿರುವುದನ್ನು ಸಂಶೋಧನ ಅಧ್ಯಯನಕ್ಕೆ ಬಳಸಿಕೊಂಡು, ಸಂಗ್ರಹಿತ ಶಾಸನಗಳ ಮೂಲಕ ನೊಳಂಬರ ಚರಿತ್ರೆಯಲ್ಲಿ ಅವರ ಪ್ರಾಮುಖ್ಯತೆಯನ್ನು ಗುರುತಿಸಲಾಗಿದೆ.

- ಬಂಜಗೇರೆ ಜಯಪ್ರಕಾಶರವರು ರಚಿಸಿರುವ <u>ಕನ್ನಡ ರಾಷ್ಟ್ರೀಯತೆ</u> ಈ ಕೃತಿಯಲ್ಲಿ ಕರ್ನಾಟಕವನ್ನು ಆಳಿಹೋದ ರಾಜ ವಂಶಗಳ ಒಂದೇ ರಾಜ ವಂಶದ ಒಂದು ಕಾಲಘಟ್ಟ ವಿಭಿನ್ನ ಬಗೆಯ ವಿದ್ಯಮಾನಗಳ ಬಗ್ಗೆ ಗಮನ ಹರಿಸಲಾಗಿದಿಯೇ ಹೊರತು, ಕನ್ನಡ ನಾಡನ್ನು ಆಳಿದ ಎಲ್ಲ ರಾಜವಂಶಗಳ ಅನುಕ್ರಮಣಿಕೆಯ ಪಟ್ಟಿಯಲ್ಲಿ ಸೂಚಿಸಲು ಪ್ರಯತ್ನಿಸಿಲ್ಲ. ಜಾತಿ ಎಂಬುದು ಮಾಯೆ ಹೇಗೆ ಒಂದು ನಿರ್ದಿಷ್ಟ ಜನಸಮುದಾಯದ ಸಾಮಾಜಿಕ ಸಂಗತಿಕಣವಾಗಿ ಒಂದು ಸಮಾಜದ ಉತ್ಪಾದನಾ ವಿನ್ಯಾಸದೊಳಗೆ ಒಂದು

ಪಂಗಡವಾಗಿ ಏರ್ಪಟ್ಟು ಕೊನೆಗೆ ಸಾಂಸ್ಕತಿಕವಾಗಿ ಗುರುತಿಸಿಕೊಂಡು, ಎಷ್ಟೋ ಜಾತಿಗಳ ಒಳಗೆ ಮತ್ತು ಧರ್ಮದೊಳಗೆ ಪರಂಪರೆಯು ಹಲವು ಮೂಲಗಳಿಂದ ತಾವೆಲ್ಲ ಒಂದು ಮತ್ತು ಇತರರಿಗಿಂತ ಭಿನ್ನ ಎಂದು ಭಾವಿಸಿಕೊಳ್ಳಲು ಜನಸಮುದಾಯಗಳು ಆರಂಭಿಸಿವೆ. ಹಾಗಾಗಿ ಎಷ್ಟೋ ಪುರಾತನ ಬೇರುಗಳನ್ನು ಹೊಂದಿರುವಂತೆ ಕಾಣುವ, ಜಾತಿಯು ಕೂಡ ಜನಾಂಗೀಯ ತಳಿ ಮೂಲದ್ದಲ್ಲ. ಅವರ ಗುರುತಿಗೆ ಸಿಗದಷ್ಟು ಪೂರ್ವ ಪ್ರಾಚೀನ ಕಾಲದಲ್ಲಿ ಮುಳಗಿ ಹೋಗಿರಬಹುದು. ಅಥವಾ ಒಂದು ನಿರ್ದಿಷ್ಟ ವ್ಯಕ್ತಿ ಅಥವಾ ಒಂದು ಘಟನೆಯಿಂದ ಆರಂಭವಾಗಿರಬಹುದು. ಜಾತಿ ಧರ್ಮ, ಭಾಷೆ, ಸಾಂಸ್ಕೃತಿಕ ವಿನ್ಯಾಸಗಳು ಪ್ರತಿಯೊಂದು ನಿರ್ದಿಷ್ಟ ಬೆಳವಣಿಗೆಗೆ ಮತ್ತು ನಿರ್ದಿಷ್ಟ ಅಭಿವ್ಯಕ್ತಗೊಂಡಿರುವುದನ್ನು ಈ ಕೃತಿಯಿಂದ ತಿಳಿಯಬಹುದಾಗಿದೆ. ಹಾಗಾಗಿ ಸಮುದಾಯದ ಅಧ್ಯಯನಕ್ಕೆ ಒಂದು ಉತ್ತಮ ಮಾರ್ಗದರ್ಶನ ಮಾಡುವ ಗ್ರಂಥವಾಗಿದೆ.

- ಬಸವಣ್ಣ ಮತ್ತು ಲಿಂಗಾಯತ ಧರ್ಮ: ಭಾಗ ೨, ಹಿರೇಮಗಳೂರು ಈಶ್ವರನ್ ಅವರ ಈ ಕೃತಿಯು ಲಿಂಗಾಯತ ಧರ್ಮಕ್ಕೆ ಸಂಬಂಧಿಸಿದ ಸಾಮಾಜಿಕ ಅಧ್ಯಯನವಾಗಿದೆ. ಕರ್ನಾಟಕವು ಅನೇಕ ಧರ್ಮ, ಜಾತಿ–ಭಾಷೆಗಳ ತವರೂರು ಆಗಿದೆ. ಹೀಗಾಗಿ ಇಲ್ಲಿ ಉಪಸಂಸ್ಕೃತಿಗಳ ವೈವಿಧ್ಯತೆಯನ್ನು ಸಹಜವಾಗಿ ಕಾಣಬಹುದು. ಅಂತಹ ಸಮುದಾಯಗಳೊಂದಿಗೆ ಸಮಾನತೆಯನ್ನು ಸಾಧಿಸಿಕೊಂಡು ಬರುವದರ ಜತೆಗೆ, ತಮ್ಮ ಧರ್ಮ ಮತ್ತು ಸಂಸ್ಕೃತಿಯ ಐಕ್ಯಮತ್ಯಯನ್ನು ಮತ್ತು ವಿಭಿನ್ನತೆಯನ್ನು ಇದು ಸಹಜವಾಗಿ ಪೋಷಿಸಿಕೊಂಡು ಹೋಗಲು ಈ ಮಠಗಳು ಯಾವ ರೀತಿ ಸಹಾಯವನ್ನು ಮಾಡುತ್ತಿವೆ ಎಂಬುದನ್ನು ತಿಳಿಸಿವೆ.

ಬಸವಣ್ಣ ಹುಟ್ಟಿ ಬಂದ ಪರಿಸರ ಹಾಗು ಶರಣರ ಸಂಕುಲದಲ್ಲಿ ಯಾವ ರೀತಿ ಪಾತ್ರವಾದರು ಎಂಬವದನ್ನು, ಮತ್ತು ಕರ್ನಾಟಕದ ರಾಜಕೀಯ, ಸಾಮಾಜಿಕ ಇತಿಹಾಸದಲ್ಲಿ ಲಿಂಗಾಯತ ಸಮುದಾಯವು ಹೇಗೆ ತನ್ನನ್ನು ಬದಲಾಯಿಸಿಕೊಂಡಿತು ಎಂಬದನ್ನು ತಿಳಿಸಲಾಗಿದೆ. ನಿರ್ದಿಷ್ಟವಾಗಿ ಹೇಳಬೇಕಾದರೆ, ಲಿಂಗಾಯತ ಧರ್ಮದ ಆರಂಭದ ಗುರುತುಗಳು ಇತರ ಧರ್ಮಗಳ ಇತಿಹಾಸದಲ್ಲಿಯು ಅಸ್ಪಷ್ಟವಾಗಿರುವಂತೆ, ಈ ಕೃತಿಯಲ್ಲಿ ಸ್ಪಷ್ಟ ಪಡಿಸಲು ಸಾಧ್ಯವಾಗಿಲ್ಲ.

- ಲಿಂಗಾಯತ, ಜೈನ ಮತ್ತು ಬ್ರಾಹ್ಮಣ ಧರ್ಮಗಳು(ಮಠಗಳ ಒಂದು ತೌಲನಿಕ ಅಧ್ಯಯನ): ಭಾಗ ೩, ಹಿರೆಮಲ್ಲೂರು ಈಶ್ವರನ್ ಅವರ ಈ ಕೃತಿಯಲ್ಲಿ ಸಮಕಾಲೀನ ಲಿಂಗಾಯತ

ಧರ್ಮದ ನೈಜ ಸ್ವರೂಪವನ್ನು ಆ ಧರ್ಮದ ಪ್ರಸಾರಕರಾದ ಜಂಗಮರನ್ನು ಹಾಗೂ ಅವರ ಮಠಗಳ ತುಲನಾತ್ಮಕ ಅಧ್ಯಯನದ ಮೂಲಕ ತಿಳಿಸುವ ಪ್ರಯತ್ನ ಮಾಡಲಾಗಿದೆ. ಮುಂದುವರೆದು, ಲಿಂಗಾಯತ ಧರ್ಮದಲ್ಲಿ ಕಾಣಿಸಿಕೊಂಡಿರುವ ಪ್ರತ್ಯೇಕತೆ, ಪರಂಪರೆ, ಬದಲಾವಣೆ ಮತ್ತು ಹೊಂದಾಣಿಕೆಗಳನ್ನು ಮುಂತಾದ ವಿಷಯಗಳ ಮೇಲೆ ಬೆಳಕು ಚೆಲ್ಲಿದ್ದಾರೆ. ಲಿಂಗಾಯತ ಮಠಗಳಲ್ಲಿ ಪ್ರಮುಖವಾಗಿ ಸುತ್ತೂರು, ಸಿದ್ದಗಂಗಾ, ಮುರಘಾ, ತರಬಾಳು ಮತ್ತು ಮೂರುಸಾವಿರ ಮಠಗಳ ಕಾರ್ಯ, ಹಾಗೂ ಆ ಮಠಗಳ ಆವರಣದಲ್ಲಿರುವ ಶಿಲಾಶಾಸನಗಳು, ಪ್ರಾಚ್ಯವಸ್ತು ವರದಿಗಳು, ಧಾರ್ಮಿಕ ಗ್ರಂಥಗಳು, ಮಠಗಳ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಕಾರ್ಯಗಳನ್ನು ತಿಳಿಸಲಾಗಿದೆ. ಹೀಗಾಗಿ ಕೃತಿಯು ನನ್ನ ಮುಂದಿನ ಅಧ್ಯಯನಕ್ಕೆ ಉತ್ತಮ ತಳಪಾಯವನ್ನು ಹಾಕಿದೆ.

- ಲಿಂಗಾಯತ(ಉಪಪಂಗಡಗಳ ದಾಖಲೀಕರಣ): ಕಲಬುರ್ಗಿ ಎಂ ಎಂ. ಅವರ ಕೃತಿಯಲ್ಲಿ ಲಿಂಗಾಯತ ಒಳಪಂಗಡಗಳ ಸಾಮಾಜಿಕ ಅಧ್ಯಯನ ಮಾಡಲಾಗಿದೆ. ಇಲ್ಲಿ ಪ್ರಮುಖವಾಗಿ ಸಮಾಜದ ಒಳವಿನ್ಯಾಸ, ಸಾಮಾಜಿಕ ಧಾರ್ಮಿಕ ಆಚರಣೆ, ಉಡಿಗೆ ತೊಡಿಗೆ, ನಂಬಿಕೆ, ಮೂಢನಂಬಿಕೆ, ಕೌಟುಂಬಿಕ, ಸಾಮಾಜಿಕ ಸಂಬಂಧ, ಆಹಾರ ಪದ್ಧತಿ ಇತ್ಯಾದಿಗಳು ಬಗೆಗೆ ಬೆಳಕುಚೆಲ್ಲುವಂತಹ ಒಂದು ಉತ್ತಮ ಕೃತಿಯಾಗಿದೆ. ಇನ್ನೊಂದು ಮುಖ್ಯ ಸಂಗತಿಯೆಂದರೆ, ಇಂದಿನ ಬದಲಾದ ಪರಿಸ್ಥಿತಿಯಲ್ಲಿ ಈ ಉಪಪಂಗಡಗಳು ತೀವ್ರ ಬದಲಾಗುತ್ತಿವೆ. ಸಮಾಜದ ಸ್ವರೂಪ ಕಾಲದಿಂದ ಕಾಲಕ್ಕೆ, ಪ್ರದೇಶದಿಂದ ಪ್ರದೇಶಕ್ಕೆ ಒಂದಿಷ್ಟು ಭಿನ್ನವಾಗಿರುತ್ತವೆ. ಕೆಲವೊಮ್ಮೆ ಒಂದೇ ಪ್ರದೇಶದಲ್ಲಿ, ಒಂದೇ ಊರಿನಲ್ಲಿ ಒಂದಿಷ್ಟು ಭಿನ್ನ-ವಿಭಿನ್ನವಾಗಿರುತ್ತವೆ. ಈ ಅಂಶಗಳನ್ನು ಗ್ರಂಥದಲ್ಲಿ ತೆರೆದಿಡಲಾಗಿದೆ. ಇಲ್ಲಿ ಪ್ರಮುಖವಾಗಿ ಲಿಂಗಾಯತವೆನ್ನುವುದು ಒಂದು ಜನಾಂಗವಲ್ಲ, ಒಂದು ಸಮಾಜ. ಇಲ್ಲಿ ಬೇರೆ ಬೇರೆ ಮೂಲಗಳ ಜನವರ್ಗ ಮತಾಂತರಗೊಂಡಿವೆ. ಇದು ಇತ್ತೀಚಿನವರೆಗೂ ನಡೆದುಬಂದಿದೆ ಎಂಬ ಅಂಶವನ್ನು ಸ್ಪಷ್ಟಪಡಿಸಿದ್ದಾರೆ. ಈ ಕೃತಿಯಲ್ಲಿ ಇನ್ನೂ ಅನೇಕ ಉಪಪಂಗಡಗಳನ್ನು ಶೋಧಿಸಿ ವಿಷಯವನ್ನು ಪೂರ್ಣಗೊಳಿಸುಬಹುದಾಗಿತ್ತು. ಈ ಉಪಪಂಗಡಗಳ ದಾಖಲೀಕರಣದ ಸಂದರ್ಭದಲ್ಲಿ ಅತ್ಯಂತ ಕೆಲವು ಗಂಭೀರವಾಗಿ ಚರ್ಚಿಸುವ ಸೂಕ್ಷ್ಮ ವಿಷಯಗಳನ್ನು ಇಲ್ಲಿ ಹೆಚ್ಚು ಸಂಕ್ಷಿಪ್ತವಾಗಿ ವಿವರಣೆ ನೀಡಲಾಗಿದೆ. ಈ ಕೃತಿಯು ಹಿನ್ನೆಲೆಯುಲ್ಲಿ ನೊಳಂಬರು ಲಿಂಗಾಯುತದೊಳಗೆ ಹೇಗೆ ಸಮೀಕರಿಣಗೊಳ್ಳುತ್ತದೆ ಎಂಬುದನ್ನು ನೋಡಲಾಗಿದೆ.

• ನೊಳಂಬರು: ನರಸಿಂಹಮೂರ್ತಿ ಪಿ ಎನ್. ಅವರು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಪ್ರಕಟಿಸಿದ ಕಿರುಪುಸ್ತಕದಲ್ಲಿ ನೊಳಂಬರರು ಕರ್ನಾಟಕಕ್ಕೆ ಬಂದು ಪ್ರಾರಂಭದಲ್ಲಿ ಸಣ್ಣ ರಾಜ್ಯವನ್ನು ಸ್ಥಾಪಿಸಿ ೩೦೦ ವರ್ಷಗಳ ಸುದೀರ್ಘ ಕಾಲ ಇಂದಿನ ದಕ್ಷಿಣ ಭಾರತದಲ್ಲಿ ರಾಜ್ಯಭಾರ ಮಾಡಿರುವುದನ್ನು ವಿವೇಚಿಸುವದರ ಜೊತೆಗೆ, ಅವರ ಸಾಹಿತ್ಯ ಮತ್ತು ಸಂಸ್ಕೃತಿಗಳಿಗೆ ಪ್ರೋತ್ಸಾಹ ಕೊಟ್ಟು ಕರ್ನಾಟಕ ಇತಿಹಾಸದಲ್ಲಿ ವಿಶೇಷ ಸ್ಥಾನಗಳಿಸಿರುವುದನ್ನು ಸಂಕ್ಷಿಪ್ತವಾಗಿ ಹೇಳಿದ್ದಾರೆ.

ನರಸಿಂಹಮೂರ್ತಿ ಪಿ ಎನ್. ಅವರ ನೊಳಂಬರು ಎಂಬ ಕೃತಿಯಲ್ಲಿ, ನೊಳಂಬರು ಕರ್ನಾಟಕದಲ್ಲಿ ತಮ್ಮ ರಾಜಕೀಯ ಅಸ್ತಿತ್ವವನ್ನು ಕಾಯ್ದುಕೊಳ್ಳುವದರ ಮೂಲಕ ರಾಜ್ಯಭಾರಬಾರ ಮಾಡಿರುವುದನ್ನು ತಿಳಿಸಿರುವದರ ಕೆಲವು ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟದಲ್ಲಿ ನೊಳಂಬರು ಸಾಂಸ್ಕೃತಿಕ ಅಸ್ತಿತ್ವವನ್ನು ಸಾಮಾಜಿಕವಾಗಿ ಹೇಗೆ ರೂಪಿಸಿದರು ಎಂಬುದನ್ನು ಈ ಸಂಶೋಧನ ಅಧ್ಯಯನದಲ್ಲಿ ಮಾಡಲಾಗಿದೆ.

• ಕುಡು ಒಕ್ಕಲಿಗರು ಒಂದು ಕೈಪಿಡಿ: ಸಿದ್ದಣ್ಣ ಉತ್ನಾಳ, ಈ ಗ್ರಂಥವು ಸಂಶೋಧಕರಿಗೆ ಒಂದು ಗಮನಾರ್ಹ ಆಕರವಾಗಿದೆ. ಇಲ್ಲಿ ಕುಡು ಒಕ್ಕಲಿಗರು ನೇರವಾಗಿ ಗುರುಸಿದ್ಧರಾಮರ ವಂಶಸ್ಥರು. ಆ ಪ್ರಾಂತ್ಯದಲ್ಲಿ ಹರಡಿಕೊಂಡು ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ಕರ್ನಾಟಕದ ಉತ್ತರ ಭಾಗದಲ್ಲಿ ಖ್ಯಾತರಾಗಿದ್ದಾರೆ. ಈಗ 'ಕುಡಿಯಾ' 'ಕುಡು' ಒಂದೇ ಆದರೆ ಎರಡು ಟಿಸೀಳುಗಳು ಒಂದೇ ಬುಡಕ್ಕೆ ಅಂಟಿಕೊಂಡು ನೊಳಂಬ ಎಂಬ ಮಹಾಮರಕ್ಕೆ ಮೆರಗು ತಂದಿವೆ ಎಂಬುದಾಗಿ ಕುತುಹಲಕಾರಿಯಾಗಿ ವಿವರಿಸಿದ್ದಾರೆ. ಕುಡು ಒಕ್ಕಲಿಗರು (ನೊಳಂಬ) ಸಮಗ್ರ ಇತಿಹಾಸವನ್ನು ಹಾಗು ವೈಜ್ಞಾನಿಕ ಮನೋಭೂಮಿಕೆಯ ಅಡಿಯಲ್ಲಿ ಕಾರ್ಯ ಕೈಗೊಳ್ಳಲು ಒಂದು ಉತ್ತಮ ಮಾರ್ಗಸೂಚಿಯಾಗಿದೆ.

ಮೂಲದಲ್ಲಿ ನೊಳಂಬರಿಗೂ ಕುಡು ಒಕ್ಕಲಿಗರಿಗೂ ಇರುವ ಸಾಮ್ಯತೆಯನ್ನು ಗುರುತಿಸಲು ಹಾಗೂ ನೊಳಂಬರು ಮೂಲದಲ್ಲಿ ಪಶುಪಾಲನೆ ಮತ್ತು ಕೃಷಿಯ ಜತೆಗೆ ಹೇಗೆ ಸಂಬಂಧವನ್ನು ಅರಿಯುವ ಸಲುವಾಗಿ ಕೃತಿಯನ್ನು ಬಳಸಿಕೊಳ್ಳಲಾಗಿದೆ.

• ಶಂಕ್ರಪ್ಪ ಬಿ ಬಿ ಅವರು ಸಂಪಾದಿಸಿದ ನಂದಿಶ್ರೀ ಎಂಬ ಸ್ಮರಣ ಸಂಚಿಕೆಯು ಅನೇಕ ಸಂಶೋಧನ ಲೇಖನಗಳು ಪ್ರಕಟಗೊಂಡಿವೆ. ಪಲ್ಲವ ನೊಳಂಬರ ಮೂಲ ಮತ್ತು ಇತಿಹಾಸವನ್ನು ತೆರೆದು ಇಡುವ ಪ್ರಯತ್ನ ಈ ಕೃತಿಯಲ್ಲಿ ಮಾಡಲಾಗಿದೆ. ಮಲೆನಾಡು ಭಾಗಕ್ಕೆ ನೊಳಂಬರು ಬಿಜಾಪುರ, ಸೊಲ್ಲಾಪುರ, ಲಾತೂರು ಭಾಗದ ಕಡೆಯಿಂದ

ಬಂದವರು, ಹಾಗೂ ಕರ್ನಾಟಕದಲ್ಲಿ ಯಾವ ಯಾವ ಹಳ್ಳಿಗಳಲ್ಲಿ ನೊಳಂಬರು ನೆಲೆಸಿದ್ದಾರೆ, ಅವರ ರಾಜಕೀಯ, ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಪ್ರಗತಿಯನ್ನು ಕುರಿತು ತಿಳಿಸುವ ಸಂಕ್ಷಿಪ್ತ ಪ್ರಯತ್ನವನ್ನು ಮಾಡಲಾಗಿದೆ.

ಕರ್ನಾಟಕದಲ್ಲಿ ನೊಳಂಬರ ಅಸ್ತಿತ್ವವನ್ನು ಗುರುತಿಸುವ ನಿಟ್ಟಿನಲ್ಲಿ ಶಂಕ್ರಪ್ಪ ಅವರು ಸೂಚಿಸಿದ ಕೆಲವು ಸ್ಥಳಗಳೊಂದಿಗೆ ತೌಲನಿಕರಿಸಿ ನೊಳಂಬರ ಮೂಲವನ್ನು ಸಾಧ್ಯಂತವಾಗಿ ನಿರೂಪಿಸಲು ಸಂಶೋಧನ ಅಧ್ಯಯನದಲ್ಲಿ ಪ್ರಯತ್ನಿಸಲಾಗಿದೆ.

- ಶಾಂತವೀರಯ್ಯ ಹೀ ಚಿ ಅವರು ಸಂಪಾದಿಸಿದ ನೊಳಂಬ ಸಿದ್ಧೇಶ್ವರ ಕೃತಿಯು, ೮೪ನೆಯ ಗುರುಸಿದ್ಧರಾಮೇಶ್ವರ ಜಯಂತಿ ಮಹೋತ್ಸವದ ಅಂಗವಾಗಿ ನೊಳಂಬ ಸಿದ್ಧೇಶ್ವರ ಎಂಬ ಹೆಸರಿನ ಸ್ಮರಣ ಸಂಚಿಕೆಯ ಮೂಲಕ ಇಲ್ಲಿ ಅನೇಕ ಲೇಖನಗಳನ್ನು ಹೊರತರಲಾಗಿದೆ. ಎಷ್ಟೋ ರಾಜವಂಶಗಳು ಭಾರತದ ಇತಿಹಾಸದಲ್ಲಿ ತಮ್ಮ ಬೆಳಕನ್ನು ಚೆಲ್ಲಿ ಕಣ್ಮರೆಯಾಗಿರುವವೋ ಕೆಲವು ವಂಶಗಳು ಇತಿಹಾಸದ ಪುಟಗಳನ್ನೇ ಕಾಣದೇ ಕಾಲಗರ್ಭದಲ್ಲಿ ಲೀನವಾಗಿ ಹೋಗಿರುವ ಅನೇಕ ಅರಸು ಮನೆತನಗಳ ಬಗ್ಗೆ ತಿಳುವಳಿಕೆ ಮೂಡಿಸುವ ಪ್ರಯತ್ನ ಮಾಡಲಾಗಿದೆ.

  ಇಲ್ಲಿಗೆ ಸುಮಾರು ೧೫೦೦ ವರ್ಷಗಳ ಹಿಂದೆಯೇ ಪಲ್ಲವ ರಾಜರು ಲಿಂಗಾಧಾರಿಗಳಾಗಿದ್ದರು ಎಂಬುದನ್ನು ಸ್ಪಷ್ಟಪಡಿಸಲಾಗಿದೆ. ಅಂದಮೇಲೆ ಆ ಕಾಲದಲ್ಲಿ ವೀರಶೈವ ಧರ್ಮದ ವೈಭವವೂ ಉನ್ನತ ಸ್ಥಾನದಲ್ಲಿತ್ತು ಎಂದು ತಿಳಿಯಬಹುದು. ಆದ್ದರಿಂದ ಲಿಂಗಧಾರಣೆ ಪದ್ಧತಿಯು ಬಹು ಪುರಾತನವಾದದ್ದು ಎಂಬುದನ್ನು ಕಾಣಬಹುದು. ಅಂದಿನ ನೊಳಂಬರು ಇಂದಿನ ಸಮುದಾಯವಾಗಿ ಹೇಗೆ ಗುರುತಿಸಿಕೊಳ್ಳುತ್ತಿದೆ ಎಂದು ಸಂಕ್ಷಿಪ್ತವಾಗಿ ತಿಳಿಸಲಾಗಿದೆ.

  ಈ ಸ್ಮರಣ ಸಂಚಿಕೆಯಲ್ಲಿ ಕರ್ನಾಟಕದಲ್ಲಿದ್ದ ಕೆಲವು ಕಣ್ಮರೆಯಾದ ರಾಜವಂಶಗಳನ್ನು ಗುರುತಿಸಿ ಚರಿತ್ರೆಯಲ್ಲಿ ದಾಖಲಿಸಲಾಗಿದೆ. ಹೀಗೆ ದಾಖಲಿಸಿದ ರಾಜವಂಶಗಳ ಪೈಕಿ ನೊಳಂಬ ರಾಜವಂಶವು ಒಂದು. ಈ ಕೃತಿಯಲ್ಲಿ ದಾಖಲಾದ ನೊಳಂಬರ ಕೆಲವು ಅಂಶಗಳ ಹಿನ್ನೆಲೆಯಲ್ಲಿ ಅವರ ಚರಿತ್ರೆಯನ್ನು ಮತ್ತೊಷ್ಟು ದೀರ್ಘಕ್ಕೆ ಕೊಂಡೊಯ್ಯುವ ಪ್ರಯತ್ನವನ್ನು ಈ ಪ್ರಬಂಧದಲ್ಲಿ ಮಾಡಲಾಗಿದೆ.

- ಮಹೇಶ್ವರಯ್ಯ ಕೆ ಎಲ್ ಅವರು ಸಂಪಾದಿಸಿದ ದಶದರ್ಶಿನಿ ಎಂಬ ೨೦೦೨ರ ಸ್ಮರಣ ಸಂಚಿಕೆಯು ಸಂಶೋಧನೆಗೆ ಒಂದು ಉತ್ತಮ ಕೈಪಿಡಿಯಾಗಿದೆ. ನೊಳಂಬ ದೊರೆಗಳ ಇತಿಹಾಸ ಇನ್ನು ನೊಳಂಬರು ಪಾಶುಪತ, ಲಕುಲೀಶ ಪರಂಪರೆಯ

ಕಾಳಾಮುಖ ಗುರುಗಳ ಶಿಷ್ಯರೇ ನೋಳಂಬ ವೀರಶೈವರು ಎಂದು ತಿಳಿಸಿದ್ದಾರೆ. ನೊಳಂಬರ ಕುಲ ಮತ್ತು ಪಲ್ಲವರು ಕರ್ನಾಟಕದಲ್ಲಿ ಹುಟ್ಟಿಬೆಳೆದವರು ಎಂದು ಶಾಸನದಲ್ಲಿ ಉಲ್ಲೇಖಿತವಾಗಿರುವುದನ್ನು ತಿಳಿಸಿದ್ದಾರೆ. ನೊಳಂಬರ ವಿದ್ಯಾಸಂಸ್ಥೆಯನ್ನು ಹಾಗು ಅವುಗಳ ಕಾರ್ಯವೈಖರಿಯನ್ನು ಸಂಕ್ಷಿಪ್ತವಾಗಿ ತಿಳಿಸಲಾಗಿದೆ.

ಈ ಕೃತಿಯ ಮೂಲಕ ಸಂಶೋಧನ ಅಧ್ಯಯನದಲ್ಲಿ ನೊಳಂಬರು ಮತ್ತು ಪಲ್ಲವರ ಸಂಬಂಧವನ್ನು ವಿಸ್ತರಿಸಲಾಗಿದೆ. ಅನೇಕ ರಾಜವಂಶಗಳು ಮೂಲದಲ್ಲಿ ತಮ್ಮ ಅಸ್ತಿತ್ವವನ್ನು ಸ್ಥಿರಸ್ಥಾಯಿಗೊಳಿಸಲು ಸಾಹಿತ್ಯ ಕೃತಿಗಳು, ಶಾಸನಗಳು ಇತ್ಯಾದಿಯಾಗಿ ಬಳಸುತ್ತಾರೆ. ಅದೇ ರೀತಿ ನೊಳಂಬರು ತಮ್ಮ ಅಸ್ಥಿತ್ವವನ್ನು ನಿರೂಪಿಸಲು ಶಾಸನಗಳ ಮೊರೆಹೋಗಿರುವುದನ್ನು ಇಲ್ಲಿ ಬಳಸಿಕೊಳ್ಳಾಗಿದೆ.

- ನೊಳಂಬವಾಣಿ ಸಂಪುಟ:ಇನ್ನು ಚನ್ನಬಸವಯ್ಯ ವೈ ಆರ್ ಅವರು ಸಂಪಾದಿಸಿದ್ದಾರೆ. ಈ ತ್ರೈಮಾಸಿಕ ಪತ್ರಿಕೆಯಲ್ಲಿ ಅನೇಕ ಸಂಶೋಧನ ಲೇಖನಗಳನ್ನು ಹೊರತರುವಂತ ಪ್ರಯತ್ನಮಾಡಲಾಗಿದೆ. ಇಲ್ಲಿ ನೊಳಂಬರ ವಂಶಾವಳಿಯಿಂದ ಅವರ ರಾಜ್ಯಭಾರ ಅಂತ್ಯದವರೆಗೂ ವಿವರವಾಗಿ ತಿಳಿಸಿದ್ದಾರೆ. ಮಹಾನಾಡು ಪ್ರಭುಗಳು ಹಾಗೂ ನೊಳಂಬರ ಲಾಂಛನ ತಿಳಿಸಿದ್ದಾರೆ. ಹಾಗು ಸಮಕಾಲೀನ ಸಮಾಜದ ಸಂಕ್ಲಿಷ್ಟತೆಯನ್ನು ಮತ್ತು ಇಡೀ ಸಮಾಜದ ಸ್ಥಿತ್ಯಂತರವನ್ನು ಬಿಚ್ಚಿಡುವ ಪ್ರಯತ್ನವಾಗಿದೆ. ಈ ಕೃತಿಯಲ್ಲಿ ನೊಳಂಬರ ಮೂಲ ಮತ್ತು ಅವರು ರಾಜ್ಯಭಾರ ಮಾಡಿರುವದನ್ನು ಗಮನದಲ್ಲಿರಿಸಿಕೊಂಡು ಅಧ್ಯಯನದಲ್ಲಿ ಅವರ ಅಸ್ಥಿತ್ವನ್ನು ಗುರುತಿಸುವ ಕ್ರಮಕ್ಕೆ ಮುಂದಾಗಲಾಗಿದೆ.

- ನೊಳಂಬರ ಇತಿಹಾಸ ದರ್ಶನ(ವಿವಿಧ ಲೇಖಕರಿಂದ ಬರೆಸಿದ ಲೇಖನಗಳ ಮಾಲಿಕೆ), ಈ ಗ್ರಂಥದಲ್ಲಿ ನೊಳಂಬರಿಗೆ ಸಂಬಂಧಿಸಿದ ಲೇಖನಗಳಿವೆ. ನೊಳಂಬ ಶಬ್ಧದ ಅರ್ಥ, ವಿವೇಚನೆ, ರಾಜಕೀಯ ಮತ್ತು ಇತಿಹಾಸ, ವಾಸ್ತು ಶಿಲ್ಪಗಳ ಬಗೆಗೆ ಸ್ವಲ್ಪ ವಿವರಗಳನ್ನು ನೀಡಲಾಗಿದೆ. ವಿವಿಧ ಲೇಖಕರು ಬರೆದ ಹಲವು ಲೇಖನಗಳ ಮೂಲಕ ನೊಳಂಬ ಶಬ್ಧವನ್ನು ವಿವೇಚಿಸಿದ್ದಾರೆ. ಅದನ್ನು ಈ ಪ್ರಬಂಧದಲ್ಲಿ ದಾಖಲಿಸಿಕೊಂಡು ಅದರ ಸವಿಸ್ತಾರವಾದ ಹಲವು ಮಜಲುಗಳನ್ನು ನೋಡಲಾಗಿದೆ.

- ನೊಳಂಬರ ಶಾಸನಗಳ ಸಾಂಸ್ಕೃತಿಕ ಅಧ್ಯಯನ: ಮತ್ತು ನೊಳಂಬರ ಶಾಸನಗಳಲ್ಲಿ ದಾನದತ್ತಿಗಳು: ಜಯಮ್ಮ ಕರಿಯಣ್ಣ ಎಚ್ ಅವರು ಈ ಕೃತಿಗಳಲ್ಲಿ ನೊಳಂಬರ ಚರಿತ್ರೆ, ಅವರು ಚಾರಿತ್ರಿಕವಾಗಿ ಬೆಳೆದು ಬಂದ ಬಗೆಯನ್ನು ಸವಿವರಿಸಿದ್ದಾರೆ. ಜೊತೆಗೆ ಅವರ ಇನ್ನೊಂದು ಕೃತಿಯಾದ ನೊಳಂಬರ ಶಾಸನಗಳಲ್ಲಿ ದಾನದತ್ತಿಗಳು ಎಂಬುದರಲ್ಲಿ

ನೊಳಂಬರು ಸಾಮಾಜಿಕ ವ್ಯವಸ್ಥೆಯಲ್ಲಿ ನೀಡಿದ ದಾನಗಳನ್ನು ಶಾಸನಗಳ ಮೂಲಕ ದಾಖಲಿಸಿರುವುದನ್ನು ಅಧ್ಯಯನಗಳ ಕ್ರಮದಲ್ಲಿ ದಾಖಲಿಸಿದ್ದಾರೆ.

ನೊಳಂಬರ ಶಾಸನಗಳ ಹಿನ್ನೆಲೆಯಲ್ಲಿ ಅವರ ಸಾಂಸ್ಕೃತಿಕತೆಯನ್ನು ಇಲ್ಲಿರುವುದರಿಂದ, ಮುಂದುವರೆದು ಅಂದಿನ ಅವರ ಸಾಂಸ್ಕೃತಿಕ ಆಚರಣೆಗಳಿಗೂ, ಇಂದಿನ ಅವರ ಹಲವು ಆಚರಣೆಗಳಿಗೂ ಇರುವ ಸಾಮ್ಯತೆಗಳು ಮುಂದುವರೆದು ಅವರ ಪರಂಪರೆಯನ್ನು ಒರೆಗೆ ಹಚ್ಚಿ ನೋಡುವಂತಹ ಪ್ರಯತ್ನ ಇಲ್ಲಿ ಮಾಡಲಾಗಿದೆ.

- ನೊಳಂಬರು: ಸಮಾಜಶಾಸ್ತ್ರೀಯ ನೆಲೆಯಲ್ಲಿ: ಶಂಕರಪ್ಪ ಎಂ ಪಿ ಅವರು ಈ ಕೃತಿಯಲ್ಲಿ ನೊಳಂಬ ಸಮುದಾಯವು ಇತಿಹಾಸದಲ್ಲಿ ಒಂದು ಸಮಾಜವಾಗಿ ರೂಪುಗೊಂಡ ಬಗೆಯನ್ನು ಸಮಾಜಶಾಸ್ತ್ರೀಯ ನೆಲೆಯಲ್ಲಿ ಸವಿವರವಾಗಿ ವಿಶ್ಲೇಷಿಸಿದ್ದಾರೆ. ಜೊತೆಗೆ ನೊಳಂಬ ಸಮುದಾಯದಲ್ಲಿರುವ ಸಂಪ್ರದಾಯಗಳು, ಆಚರಣಾಕ್ರಮಗಳು, ಸಮುದಾಯದ ಪರಂಪರೆಯನ್ನು ದಾಖಲಿಸಿದ್ದಾರೆ.

  ಐತಿಹಾಸಿಕ ನೆಲೆಯನ್ನು ಹೊಂದಿದ ನೊಳಂಬರು ತಮ್ಮ ಸಾಮಾಜಿಕ ಜೀವನವನ್ನು ಇಲ್ಲಿ ಕಟ್ಟಿಕೊಡುವಂತಹ ಪ್ರಯತ್ನವನ್ನು ಈ ಪ್ರಬಂಧದಲ್ಲಿ ಮಾಡಲಾಗಿದೆ.

- ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಎಂಬ ಕೃತಿಯನ್ನು ಚಿದಾನಂದಮೂರ್ತಿ ಎಂ ಅವರ ಈ ಕೃತಿಯಲ್ಲಿ ಒಟ್ಟಾರೆ ಕನ್ನಡ ಶಾಸನಗಳನ್ನು ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ವಿಶ್ಲೇಷಿಸಿದ್ದಾರೆ. ಆ ಮೂಲಕ ಸಣ್ಣ ಸಣ್ಣ ಸಮುದಾಯಗಳನ್ನು ಗುರುತಿಸಿ, ಅವುಗಳನ್ನು ಕನ್ನಡ ನಾಡಿನಲ್ಲಿ ಆ ಸಮುದಾಯಗಳ ಚಾರಿತ್ರಿಕವಾದ ಅವುಗಳ ಪಾತ್ರವನ್ನು ಗಮನಾರ್ಹವಾಗಿ ಚರ್ಚಿಸಿದ್ದಾರೆ. ಈ ಹಲವು ವಿಚಾರಗಳನ್ನು ಇಟ್ಟುಕೊಂಡು ನೊಳಂಬರು ಚಾರಿತ್ರಿಕವಾಗಿ ಹೇಗೆ ತಮ್ಮನ್ನು ತಾವು ಚರಿತ್ರೆಯಲ್ಲಿ ಸ್ಥಿರಿಕರಿಸಿಕೊಳ್ಳಲು ಪ್ರಯತ್ನ ಮಾಡಿದರು ಎಂಬುದನ್ನು ಈ ಅಧ್ಯಯನದಲ್ಲಿ ನೋಡಲಾಗಿದೆ.

- ಸಾಲೆತೊರೆ ಬಿ ಎ ಹಾಗೂ ಪಾಂಡುರಂಗರಾಯ ದೇಸಾಯಿಯವರು ರಚಿಸಿರುವ ಕನ್ನಡನಾಡಿನ ಚರಿತ್ರೆ ಎಂಬ ಕೃತಿಯಲ್ಲಿ, ಕರ್ನಾಟಕದ ವೈಶಿಷ್ಟ್ಯತೆಯನ್ನು ಕುರಿತು ಹೇಳಿದ್ದಾರೆ. ಕರ್ನಾಟಕದ ರಾಜರೊಂದಿಗೆ, ನೆರೆಯ ರಾಜರಸರು, ಸಾಮಂತರಸರು ಅವರುಗಳ ಮಧ್ಯದ ಸಂಬಂಧವನ್ನು ವಿವರಿಸದ್ದಾರೆ. ಜತೆಗೆ ಪಲ್ಲವರು ಮತ್ತು ನೊಳಂಬರ ರಾಜವಂಶವನ್ನು ಕುರಿತು ಸಂಕ್ಷಿಪ್ತ ಮಾಹಿತಿ ನೀಡಲಾಗಿದೆ.

ನೊಳಂಬರು ಮೂಲತಃ ಪಲ್ಲವರ ವಂಶಜರು. ೧೦ನೆಯ ಶತಮಾನದ ಕೊನೆಯಲ್ಲಿ, ೧೧ನೆಯ ಶತಮಾನದ ಮೊದಲು ನೊಳಂಬರು ಕರ್ನಾಟಕದ ಹಲವು ಭಾಗಗಳನ್ನು ಗೆದ್ದುಕೊಂಡಿದ್ದರು. ಆದರೆ, ೧೦ನೆಯ ಶತಮಾನದ ಕೊನೆಯಲ್ಲಿ ಉಚ್ಚಂಗಿ ಪಾಂಡ್ಯರು, ನೊಳಂಬವಾಡಿ ೨೦೦೦ ಪ್ರಾಂತ್ಯವನ್ನು ವಶಮಾಡಿಕೊಂಡಾಗ, ನೊಳಂಬರು ಪಾಂಡ್ಯರಲ್ಲಿ ವಿಲಿನಗೊಂಡರು ಎಂಬುದು ತಿಳಿದು ಬರುತ್ತದೆ. ಆದರೆ, ಈ ಪಾಂಡ್ಯರನ್ನು ಕುರಿತು ಹೆಚ್ಚು ವಿವರವಾದ ಮಾಹಿತಿಯನ್ನು ನೀಡಲಾಗಿಲ್ಲ. ಈ ಹಿನ್ನೆಲೆಯಲ್ಲಿ ನೊಳಂಬರ ಅಸ್ತಿತ್ವವನ್ನು ಗುರುತಿಸುವ ವಿಧಾನವನ್ನು ಇದರಿಂದ ಪಡೆಯುವಂತಹ ಪ್ರಯತ್ನ ಮಾಡಲಾಗಿದೆ.

- *ಆಂಡ್ರೆವ್ ಎಲ್ ಕೊಹೆನ್* ಅವರು *ದಿ ಟೆಂಪಲ್ ಆರ್ಕಿಟೆಕ್ಚರ್ ಆಂಡ್ ಸ್ಕಲ್ಪ್ಚರ್ ಆಫ್ ದಿ ನೊಳಂಬಾಸ್* ಎಂಬ ಪುಸ್ತಕವನ್ನು ಬರೆದಿದ್ದು, ಇದರಲ್ಲಿ ಐದು ಅಧ್ಯಾಯಗಳಿವೆ. ಇವುಗಳಲ್ಲಿ ನೊಳಂಬರ ಇತಿಹಾಸವನ್ನು ಸಂಕ್ಷಿಪ್ತವಾಗಿ ಹೇಳಿ ಉಳಿದ ಅಧ್ಯಾಯಗಳಲ್ಲಿ ವಾಸ್ತು ಮತ್ತು ಮೂರ್ತಿಶಿಲ್ಪದ ವಿವರಗಳನ್ನು ನೀಡಲಾಗಿದೆ. ನೊಳಂಬರ ಆಳ್ವಿಕೆಯ ಹೃದಯಭಾಗ, ಪೂರ್ವಭಾಗ, ಮತ್ತು ದಕ್ಷಿಣಭಾಗದ ಅವಶೇಷಗಳನ್ನು ವಿಂಗಡಿಸಿಕೊಂಡು ಅನೇಕ ದೇವಾಲಯಗಳ ವಿವರಗಳನ್ನು ಕೊಟ್ಟಿದ್ದಾರೆ. ಪ್ರತಿ ವಿಭಾಗದಲ್ಲಿರುವ ದೇವಾಲಯಗಳ ವಿವರಣೆಗಳನ್ನು ಮತ್ತು ಹೋಲಿಕೆಗಳನ್ನು ನೀಡಿದ್ದು, ವಾಸ್ತು ಮತ್ತು ಮೂರ್ತಿಶಿಲ್ಪದ ಬಗೆಗೆ ಗಮನಾರ್ಹ ಬೆಳಕು ಚೆಲ್ಲಲಾಗಿದೆ. ಈ ಹಿನ್ನೆಲೆಯನ್ನು ಗಮನಿಸಿ ನೊಳಂಬರು ಮೂಲದಲ್ಲಿ ಸಾಂಸ್ಕೃತಿಕವಾದ ತಮ್ಮ ಅಸ್ಥಿತ್ವವನ್ನು ಹೇಗೆ ರೂಪಿಸಿಕೊಂಡರು ಎಂಬುದನ್ನು ಸಂಶೋಧನ ಅಧ್ಯಯನ ಕ್ರಮದಲ್ಲಿ ನೋಡಲಾಗಿದೆ.

- ನೊಳಂಬಾಸ್ ಸ್ಕಲ್ಪ್ಚರ್ಸ್: ಎ ಕಲ್ಚರಲ್ ಸ್ಟಡಿ ಎಂಬ ಕೃತಿಯನ್ನು ಕೃಷ್ಣಮೂರ್ತಿ ಕೆ ಅವರ ಇಂಗ್ಲಿಷ್ ಪುಸ್ತಕವು ನೊಳಂಬರ ಕಾಲದ ಸಾಮಾಜಿಕ, ಧಾರ್ಮಿಕ ವಿಷಯಗಳನ್ನೊಳಗೊಂಡಿದೆ. ಅವರ ಕಾಲದ ಶಿಲ್ಪಗಳಲ್ಲಿನ ವೇಷಭೂಷಣಗಳು, ಆಯುಧಗಳು ಮುಂತಾದವುಗಳ ಬಗೆಗೆ ಈ ಕೃತಿಯಲ್ಲಿ ಬೆಳಕು ಚೆಲ್ಲಲಾಗಿದೆ. ಆದರೆ ಈ ಕೃತಿಯಲ್ಲಿ ನೊಳಂಬರ ಶಿಲ್ಪಗಳನ್ನು ರೇಖಾಚಿತ್ರಗಳ ಮೂಲಕ ಸೆರೆಹಿಡಿದಿರುವುದು ತುಂಬಾ ಉಪಯುಕ್ತವಾಗಿದೆ. ಈ ರೇಖಾಚಿತ್ರಗಳನ್ನು ಹೊರತುಪಡಿಸಿ ಹೊಸದಾದ ಮಾಹಿತಿ ಇರುವುದಿಲ್ಲ. ಎಲ್ಲವೂ ಹೇಮಾವತಿಯ ಶಿಲ್ಪಗಳನ್ನಾಧರಿಸಿದೆ. ಸಾಂಸ್ಕೃತಿಕ ಬದುಕಿಗೆ ಸಂಬಂಧಿಸಿ ಅವರು ವಾಸ್ತು ರಚನೆ ಮತ್ತು ಶಿಲ್ಪಗಳ ಕೆತ್ತನೆಯಲ್ಲಿ ಅವರ ಅಭಿಪ್ಸೆಯನ್ನು ಗುರುತಿಸುವಂತಹ ಪ್ರಯತ್ನ ಮಾಡಲಾಗಿದೆ.

- ಪಲ್ಲವ–ನೊಳಂಬ ಕುಡಿಯರ ಮಹಾನಾಡಿನ ನೊಳಂಬ ಸಿದ್ಧೇಶ್ವರ : ಎಂಬ ಹೆಸರಿನ ಸ್ಮರಣ ಸಂಚಿಕೆ(೨೦೦೨)ಯಲ್ಲಿ ಪಲ್ಲವ ಮತ್ತು ನೊಳಂಬರನ್ನು ಇನ್ನೂ ಮೂಲಕ್ಕೆ ಕರೆದುಂಯ್ಯುವ ನೊಳಂಬರ ಬಗೆಗೆ ಈಗಾಗಲೇ ಪ್ರಕಟವಾಗಿರುವ ವಿವರಗಳನ್ನೊಳಗೊಂಡಂತೆ ಮಾಹಿತಿಯನ್ನು ಕ್ರೋಢೀಕರಿಸಿ ನೀಡಲಾಗಿದೆ.

- ಹಾಗೆಯೇ ಕನ್ನಡ ವಿಶ್ವವಿದ್ಯಾಲಯದ ಶಾಸನ ಸಂಪುಟಗಳು ಮಹತ್ವದ ವಿಷಯಗಳನ್ನು ಒದಗಿಸಿರುವುದು. ಸಂಪುಟ ಒಂದು ಬಳ್ಳಾರಿ ಜಿಲ್ಲೆಯ ಶಾಸನ ಸಂಪುಟ, ಸಂಪುಟ ೨ ಕೊಪ್ಪಳ ಜಿಲ್ಲೆಯ, ೪ ಮತ್ತು ೫ ಕ್ರಮವಾಗಿ ತಮಿಳುನಾಡು ಹಾಗೂ ಆಂಧ್ರಪ್ರದೇಶದ ಈ ಶಾಸನ ಸಂಪುಟಗಳಲ್ಲಿ ನೊಳಂಬರ ಚಾರಿತ್ರಿಕ ಕುರುಹುಗಳನ್ನು ಗುರುತಿಸಲಾಗಿದೆ.

  ಈ ಶಾಸನ ಸಂಪುಟಗಳಲ್ಲಿ ಕ್ರೋಢೀಕರಿಸಿಕೊಂಡ ನೊಳಂಬ–ಪಲ್ಲವರ ಶಾಸನಗಳನ್ನು ಅಧ್ಯಯನಕ್ಕೆ ಒಳಪಡಿಸಿಕೊಂಡು, ನೊಳಂಬ ಅರಸರು ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯವಾಗಿ ನೀಡಿದ ಕೊಡುಗೆಯನ್ನು ಗುರುತಿಸುವಂತಹ ಪ್ರಯತ್ನವನ್ನು ಈ ಸಂಶೋಧನ ಅಧ್ಯಯನದಲ್ಲಿ ಮಾಡಲಾಗಿದೆ. ಹಾಗೇ ಮೇಲೆ ವಿವೇಚಿಸಿದ ಅಧ್ಯಯನಗಳ ಹಿನ್ನೆಲೆಯಲ್ಲಿ ನೊಳಂಬರ ಚಾರಿತ್ರಿಕ, ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಹಾಗೂ ಧಾರ್ಮಿಕ ವಿಷಯಗಳ ಅಭ್ಯಾಸವನ್ನು ಕೇಂದ್ರಿಕರಿಸಿಕೊಂಡು, ಇಲ್ಲಿ ಅವರ ಆಳ್ವಿಕೆಯ ಕಾಲಾವಧಿಯಲ್ಲಿ ಒಟ್ಟು ಸಾಮಾಜಿಕವಾಗಿ ನೀಡಿದ ಕೊಡುಗೆಯನ್ನು ಅಭ್ಯಸಿಸಲು ಪ್ರಯತ್ನ ಮಾಡಿದ್ದೇನೆ.

- ಪ್ರಶಾಂತ ಎಚ್ ಡಿ. ಅವರ ಕರ್ನಾಟಕ ರಾಜ್ಯ ವಿಶ್ವ ಕೋಶ: ಜನಸಮುದಾಯ ಸಂಪುಟದಲ್ಲಿ ಲಿಂಗಾಯತ ಸಮುದಾಯವನ್ನು ಕುರಿತು ಹಾಗೂ ಲಿಂಗಾಯತ ಸಮುದಾಯದಲ್ಲಿ ೪೬ ಒಳಪಂಗಡಗಳಿವೆ ಎಂದು ತಿಳಿಸಲಾಗಿದೆ. ಈ ಒಳಪಂಗಡಗಳಲ್ಲಿ ನೊಳಂಬ ಸಮುದಾಯವು ಒಂದು. ಇವರು ಹೆಚ್ಚಾಗಿ ತುಮಕೂರು, ಚಿತ್ರದುರ್ಗ ಜಿಲ್ಲೆಗಳಲ್ಲಿ ಕಾಣಸಿಗುತ್ತಾರೆ. ಹಾಗೆ ಧಾರ್ಮಿಕ ವಿಧಿವಿಧಾನಗಳಿಗೆ ಪ್ರಾಮುಖ್ಯತೆ ನೀಡಿದ್ದಾರೆ. ನೊಳಂಬರಲ್ಲಿ ಪ್ರಮುಖ ಒಳ ಬಾಂಧವ್ಯ ಪಂಗಡಗಳನ್ನು ೩ ದಿವಸದವರು, ೪ ದಿಸವದವರು ಎಂದು ಗುರುತಿಸಬಹುದಾಗಿದೆ. ಆದರೆ, ಇವಗಳನ್ನು ಹೆಚ್ಚಿನ ಮಾಹಿತಿಯನ್ನು ತಿಳಿಸಿಲ್ಲ. ಮುಂದಿನ ಸಂಶೋಧನೆಗೆ ಇದೊಂದು ಉತ್ತಮ ಕೃತಿಯಾಗಿ ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗಿ ಬಳಸಾಗಿದೆ.

- ಹಾಲುಮತ ವ್ಯಾಸಂಗ: ಹಳ್ಳಿಕೇರಿ ಎಫ್ ಟಿ. ಅವರು ಸಂಪಾದಿತ ಕೃತಿಯಲ್ಲಿ ನೊಳಂಬರ ಅರ್ಥವನ್ನು ತಿಳಿಸುತ್ತಾರೆ. ನೊಳಂಬ ಅಂದರೆ, ಸುಂದರ, ಮುಂದುವರೆದವನು,

ಮುಂದಾಳತ್ವ ವಹಿಸಿದವನು, ಒಬ್ಬ ನಾಯಕನ ಮುಂದಾಳತ್ವದಲ್ಲಿನ ಜನರ ಗುಂಪು. ನೊಳಂಬ ಎಂದರೆ, ವೀರ ಜನರು, ಇತರರನ್ನು ಮುನ್ನಡೆಸುವವರು ಎಂಬಂಥ ಅರ್ಥ ಕೊಡಲಾಗಿದೆ.

ಹಿಂದಿನ ಪಲ್ಲವರು ಅನಂತರದ ನೊಳಂಬರಾಗಿ ರಾಜ್ಯಭಾರ ಮಾಡಿದರು. ಅವರ ಆಡಳಿತದಲ್ಲಿ ಕೃಷಿ, ನೀರಾವರಿ ಯೋಜನೆಗೆ ಯಾವ ರೀತಿಯಲ್ಲಿ ಆಧ್ಯತೆಯನ್ನು ನೀಡಿದ್ದರು, ಹಾಗೂ ನೊಳಂಬರು ಶಿಕ್ಷಣ ಪ್ರೇಮಿಗಳು. ಇವರ ಕಾಲದಲ್ಲಿ ಹೆಂಜೇರು ಒಂದು ಘಟೀಕಾಸ್ಥಾನವಗಿತ್ತು. ನೊಳಂಬರ ನಂದಿ ವಿಗ್ರಹ ಮತ್ತು ಅವರ ನಾಣ್ಯಗಳ ಬಗೆಗೆ ಸಂಕ್ಷಿಪ್ತವಾಗಿ ತಿಳಿಸಿದ್ದಾರೆ. ಇದು ಒಂದು ಜಾತಿ ಅಲ್ಲ. ಅದೊಂದು ವಂಶದ ಹೆಸರು ಎಂಬುದಾಗಿ, ಹಾಗೂ ನೊಳಂಬರ ಒಂದು ಸಂಸ್ಕೃತಿ ಆಗಿರುತ್ತದೆ ಎಂದು ಹೇಳುತ್ತಾ, ಕೆಲ ಕಾಲದ ಬಳಿಕ ನೊಳಂಬರು, ಲಿಂಗ ಧರ್ಮಿಯರಾದರು ಎಂದು ಹೇಳಿದ್ದಾರೆ. ಅದಕ್ಕೆ ಯಾವುದೇ ತೆರನಾದ ಆಧಾರಗಳನ್ನು ಈ ಕೃತಿಯಲ್ಲಿ ನೀಡಲಾಗಿಲ್ಲ. ಹೀಗಾಗಿ ಇಲ್ಲಿ ಮಾಹಿತಿಗಳು ಅಸ್ಪಷ್ಟವಾಗಿವೆ. ಆದರೂ, ಈ ಕೃತಿಯಲ್ಲಿರುವ ಕೆಲವು ವಿಷಯಗಳನ್ನು ಅನುಮಾನಗಳನ್ನಾಗಿ ಪರಿಗಣಿಸಿ ಅಧ್ಯಯನ ಮಾಡಲಾಗಿದೆ.

ಪ್ರಾಕ್‌ಕಲ್ಪನೆಗಳು

ಪ್ರಸ್ತುತ ಸಂಶೋಧನ ಅಧ್ಯಯನವನ್ನು ಮಾಡಲು ಹೊಂದಿರುವ ಉದ್ದೇಶಗಳನ್ನು ಸಾಧಿಸಲು ಸಂಶೋಧನಾ ಕ್ಷೇತ್ರದಲ್ಲಿ ಪೂರ್ವಭಾವಿ ಪರೀಕ್ಷೆ ನಡೆಸಿ ವಿಷಯಕ್ಕೆ ಸಂಬಂಧಿಸಿದ ಸಾಹಿತ್ಯಗಳನ್ನು ಅಧ್ಯಯನ ಮಾಡಿ ವಿಷಯ ಪರಿಣಿತರೊಂದಿಗೆ ಚರ್ಚಿಸಿ ಕೆಲವು ಪ್ರಾಕ್‌ಕಲ್ಪನೆಗಳನ್ನು ರಚಿಸಲಾಗಿದೆ.

೧. 'ನೊಳಂಬ' ರಾಜಸತ್ತೆಯಿಂದ ಒಂದು ಸಮುದಾಯವಾಗಿರುವುದು.

೨. ನೊಳಂಬ ಸಮುದಾಯದ ಆಂತರಿಕ ಒಡನಾಟಗಳಲ್ಲಿ ವೈವಿಧ್ಯತೆಯನ್ನು ಕಾಣವುದು.

೩. ಚಾರಿತ್ರಿಕ ಪಲ್ಲವರೇ ನೊಳಂಬರು ಎಂದು ಶೋಧಿಸುವುದು.

ಅಧ್ಯಯನದ ಉದ್ದೇಶ

ಪ್ರಸ್ತುತ ಅಧ್ಯಯನವು ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಧ್ಯಯನವಾಗಿದ್ದು, ಅತ್ಯಂತ ವಿಸ್ತೃತವಾದ ಉದ್ದೇಶಗಳನ್ನು ಒಳಗೊಂಡಿದೆ. ಈ ಹಿನ್ನೆಲೆಯಲ್ಲಿ ಸಂಶೋಧನ ಅಧ್ಯಯನವನ್ನು ಈ ಕೆಳಗಿನ ಉದ್ದೇಶಗಳೊಂದಿಗೆ ಮಾಡಲಾಗಿದೆ.

೧. ನೊಳಂಬ ಸಮುದಾಯ ಚಲನಶೀಲತೆಯನ್ನು ಸಮಂಜಸವಾಗಿ ಅಧ್ಯಯನ ಮಾಡುವುದು.

೨. ನೊಳಂಬರ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಬೆಳವಣಿಗೆಯಲ್ಲಿ ಶಿಲಾಶಾಸನಗಳ ಪಾತ್ರವನ್ನು ತಿಳಿಯುವುದು.

೩. ನೊಳಂಬ ಸಮುದಾಯದ ಧಾರ್ಮಿಕ ಆಚರಣೆ ವಿಧಿ-ವಿಧಾನಗಳ ವೈವಿಧ್ಯತೆಯನ್ನು ಅಧ್ಯಯನ ಮಾಡಲಾಗಿದೆ.

೪. ನೊಳಂಬ ಸಮುದಾಯದ ಕುಲಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.

ಅಧ್ಯಯನದ ವಿಧಾನ

ಯಾವುದಾದರೂ ಒಂದು ವಿಷಯವನ್ನು ತಿಳಿದುಕೊಳ್ಳುವ ಸಂದರ್ಭದಲ್ಲಿ ಅದರ ಬಗ್ಗೆ ಅನುಸರಿಸುವ ಕ್ರಮವನ್ನು ವಿಧಾನ ಅಥವಾ ಪದ್ಧತಿ ಎಂದು ಕರೆಯುತ್ತಾರೆ. ಪ್ರತಿಯೊಂದು ವಿಜ್ಞಾನವು ತನ್ನದೇ ವಸ್ತು, ವಿಷಯಕ್ಕೆ ಸಂಬಂಧಪಟ್ಟಂತೆ, ಸೂಕ್ತವಾದ ಕ್ರಮವನ್ನು ಅನುಸರಿ ಅಧ್ಯಯನ ನಡೆಸುತ್ತದೆ. ಈ ರೀತಿಯಾಗಿ ಪ್ರಸ್ತುತ ಸಂಶೋಧನ ಅಧ್ಯಯನದಲ್ಲಿ ಮಾಹಿತಿ ಸಂಗ್ರಹಣೆಗಾಗಿ ವೈಜ್ಞಾನಿಕ ತಂತ್ರ, ವಿಧಾನಗಳನ್ನು ಬಳಸಿಕೊಂಡು ಕ್ಷೇತ್ರ ಅಧ್ಯಯನ ಮಾಡಿ, ಗುಣಾತ್ಮಕ ಸ್ವರೂಪದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಮಾಹಿತಿಯನ್ನು ಸಂಗ್ರಹಿಸುವಾಗ ಹಲವು ರೀತಿಯ ಪದ್ಧತಿಗಳನ್ನು ಅನುಸರಿಸಲಾಗಿದೆ. ಅನುಬಂಧದಲ್ಲಿ ಪರಾಮರ್ಶನ ಸಾಹಿತ್ಯ, ಸಾಂಸ್ಕೃತಿಕ ಪದ ಸೂಚಿ, ಸಂಕ್ಷೇಪ ಸೂಚಿ ಹಾಗೂ ನೊಳಂಬರ ಅರಸರ ದೇವಾಲಯಗಳು, ಶಾಸನಗಳ ಪಟ್ಟಿಯನ್ನು ಅ ಕಾರಾದಿಯಾಗಿ ರೂಪಿಸಲಾಗಿದೆ.

ಐತಿಹಾಸಿಕ ವಿಧಾನ

ಭೂತಕಾಲವನ್ನು ಬಲ್ಲವನು ವರ್ತಮಾನವನ್ನು ರೂಪಿಸಬಲ್ಲ. ಸಮಕಾಲೀನ ಸಾಮಾಜಿಕ ಜೀವನ, ಅದರ ರೂಪ, ವೈಶಿಷ್ಟ್ಯತೆ, ಬದಲಾವಣೆಗಳನ್ನು ತಿಳಿಯುವದಕ್ಕೋಸ್ಕರ ಇತಿಹಾಸವನ್ನು ಅರ್ಥಮಾಡಿಕೊಳ್ಳುವುದು ಅಗತ್ಯ. ಪ್ರಾಚೀನ ಸಂಸ್ಕೃತಿ ಮತ್ತು ನಾಗರಿಕತೆಗಳು ಹಾಗೂ ಅವುಗಳಿಗೆ ಸಂಬಂಧಿಸಿದ ದಾಖಲೆಗಳು, ಪ್ರಕ್ರಿಯೆಗಳು, ರೂಢೀ-ಸಂಪ್ರದಾಯ, ಆಚರಣಾ ಪದ್ಧತಿಗಳು, ಜೀವನದ ರೀತಿ-ನೀತಿ ಮಾದರಿಗಳು ಇತಿಹಾಸದಿಂದ ವಿಕಾಸವಾದವಗಳಾಗಿವೆ. ಇದರಿಂದ ಪ್ರಸ್ತುತ ಸಾಮಾಜಿಕ ಜೀವನವನ್ನು ನಿಖರವಾಗಿ ಅರ್ಥ ಮಾಡಿಕೊಳ್ಳಲು ಈ ಐತಿಹಾಸಿಕ ವಿಧಾನವು ಆಧಾರವಾಗಿದೆ.

ನೊಳಂಬರ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಅಧ್ಯಯನ ಎಂಬ ವಿಷಯ ಆಗಿರುವುದರಿಂದ ಇಲ್ಲಿ ಒಟ್ಟಾರೆ ನೊಳಂಬರ ಚಾರಿತ್ರಿಕ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಅಧ್ಯಯನದ ವಿಧಾನವನ್ನು ಸರಿಹೊಂದಿಸಲಾಗಿದೆ. ಕರ್ನಾಟಕ ಚರಿತ್ರೆಯಲ್ಲಿ ಎಂಟನೆಯ ಶತಮಾನದಿಂದ ಹನ್ನೊಂದನೆಯ ಶತಮಾನದ ವರೆಗೆ ಆಳಿದ ನೊಳಂಬರ ಕೊಡುಗೆ ಅಪಾರವಾದುದು. ಇವರ ರಾಜಧಾನಿ ಹೆಂಜೇರು. ಈಗ ಇದರ ಹೆಸರು ಹೇಮಾವತಿ, ಇದು ತುಮಕೂರು ಜಿಲ್ಲೆಯ ಮಡಕಶಿರಾ ತಾಲ್ಲೂಕಿನಲ್ಲಿದೆ. ಪ್ರಾಚ್ಯಸಂಶೋಧನಾ ಆಕರಗಳು ನೊಳಂಬರ ಚಾರಿತ್ರಿಕ ಅಧ್ಯಯನಕ್ಕೆ ಆಕರಗಳಾಗಿದ್ದರೂ, ನೊಳಂಬರ ಚಾರಿತ್ರಿಕವಾದ ಹೆಚ್ಚಿನ ವಿಶ್ಲೇಷಣೆಗೆ ತೊಡಗಬೇಕಾದ ಸಂದರ್ಭದಲ್ಲಿ ನಮಗೆ ಬಹುಮುಖ್ಯವಾದ ಆಕರಗಳೆನಿಸಿದ್ದು ಶಾಸನಗಳು. ಅದರಲ್ಲೂ ಕನ್ನಡ ವಿಶ್ವವಿದ್ಯಾಲಯದ ಶಾಸನ ಸಂಪುಟಗಳು ಮಹತ್ವದ ವಿಷಯಗಳನ್ನು ಒದಗಿಸಿರುವುದು. ಸಂಪುಟ ಒಂದು ಬಳ್ಳಾರಿ ಜಿಲ್ಲೆಯ ಶಾಸನ ಸಂಪುಟ, ಸಂಪುಟ ೨ ಕೊಪ್ಪಳ ಜಿಲ್ಲೆಯ, ೪ ಮತ್ತು ೫ ಕ್ರಮವಾಗಿ ತಮಿಳುನಾಡು ಹಾಗೂ ಆಂಧ್ರಪ್ರದೇಶದ ಈ ಶಾಸನ ಸಂಪುಟಗಳಲ್ಲಿ ನೊಳಂಬರ ಚಾರಿತ್ರಿಕ ಕುರುಹುಗಳನ್ನು ಗುರುತಿಸಲಾಗಿದೆ. ಪಲ್ಲವರಾಮ, ಗುಣದಬೆಡಂಗ, ಮಹೇಂದ್ರ ನೊಳಂಬ, ನೊಳಂಬಾಧಿಯರಸ, ವೀರನೊಳಂಬಾಧಿರಾಜ, ಬೀರನೊಳಂಬ ಅಣ್ಣಯ್ಯದೇವ, ಅಯ್ಯಪದೇವ, ದಿಲೀಪರಸ, ಇರಿವ ನೊಳಂಬ, ನೊಳಂಬಾಧಿರಾಜ, ನೊಳಪಯ್ಯ, ಇರಿವ ನೊಳಂಬಾಧಿರಾಜ, ಇರುಳಚೋರ, ಪೊಳಲ್‌ಚೋರ ಇನ್ನೂ ಮುಂತಾದ ಅರಸು, ಸಾಮಂತರು ಆಳ್ವಿಕೆಯನ್ನು ಮಾಡಿರುವದರ ಬಗೆಗೆ ಹಲವು ಉಲ್ಲೇಖಗಳು ದೊರಕುತ್ತವೆ. ಹೀಗೆ ದೊರಕಿದ ಆಧಾರದ ಮೇಲೆ ಅವರ ಆಳ್ವಿಕೆ ಸಂದರ್ಭದಲ್ಲಿರುವ ಅನೇಕ ಅಂಶಿಕ ವಿಚಾರಗಳನ್ನು ಸರಿಹೊಂದಿಸಿಕೊಂಡು ನೊಳಂಬರ ಚಾರಿತ್ರಿಕ ಮಹತ್ವವನ್ನು ಅರಿಯುವಂತ ಪ್ರಯತ್ನ ಇಲ್ಲಿ ಮಾಡಲಾಗುತ್ತಿದೆ.

ಕ್ರಿಸ್ತಶಕ ಎಂಟರಿಂದ ಹದಿನೈದನೆಯ ಶತಮಾನದಲ್ಲಿ ದೊರೆತ ಶಾಸನಗಳಲ್ಲಿ ನೊಳಂಬರನ್ನು ಪ್ರತಿನಿಧಿಸುವ ಹಾಗೂ ನೊಳಂಬರು ವಿಭಿನ್ನ ಕ್ಷೇತ್ರದಲ್ಲಿ ಭಾಗವಹಿಸಿದ್ದರ ಕುರಿತು ಮಾಹಿತಿ ನೀಡುವ ಶಾಸನಗಳನ್ನು ಅಧ್ಯಯನ ಮಾಡುವುದಾಗಿದೆ. ಶಾಸನಗಳಲ್ಲಿ ನೊಳಂಬರ ಕಾಲದ ಮಹಿಳೆಯರನ್ನು ಕುರಿತು ಇಲ್ಲಿ ಅಧ್ಯಯನ ಮಾಡಿದ್ದೇನೆ. ನೊಳಂಬ ಸಮುದಾಯದ ಅರ್ಥ ಮತ್ತು ಚಲನಶೀಲತೆಯನ್ನು ಕುರಿತು ಅಧ್ಯಯನ ಮಾಡುವುದು, ಮತ್ತು ಅವರ ಚಾರಿತ್ರಿಕ ಹಿನ್ನೆಲೆಯಲ್ಲಿ ಅವರ ಶಿಲಾಶಾಸನದ ಮಹತ್ವವನ್ನು ತಿಳಿಯುವುದು. ಈ ಕಾರಣದಿಂದ ನಾನು ಶಾಸನಗಳನ್ನು ಪ್ರಥಮ ಆಕರಗಳ ಅಧ್ಯಯನ ವಿಧಾನದ ನೆಲೆಯಲ್ಲಿ ಸಂಶೋಧನಾ ವಿಧಾನವನ್ನಾಗಿ ಅಳವಡಿಸಿಕೊಂಡಿದ್ದೇನೆ.

ತೌಲನಿಕ ವಿಧಾನ

ವಿವಿಧ ಸಮಾಜಗಳನ್ನು ಅಥವಾ ಯಾವುದೇ ಸಮಾಜದ ವೈವಿಧ್ಯತೆಯನ್ನು ಒಂದೇ ತೆರನಾಗಿವೆ ಅಥವಾ ಪರಸ್ಪರ ಭಿನ್ನವಾಗಿವೆ ಎಂಬುದನ್ನು ಪರಸ್ಪರ ಹೋಲಿಸಿ ನೋಡುವುದರ ಮುಖಾಂತರ ವಿಶ್ಲೇಷಿಸುವ ವಿಧಾನವನ್ನು ತೌಲನಿಕ ವಿಧಾನ ಎನ್ನುತ್ತಾರೆ.

ಪ್ರಸ್ತುತ ಅಧ್ಯಯನದಲ್ಲಿ ನೊಳಂಬರ ಆಚರಣೆಗೆ ಸಂಬಂಧಿಸಿದಂತೆ, ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ವೈವಾಹಿಕ ಆಚರಣೆಗಳಲ್ಲಿ ಹೇಗೆ ಭಿನ್ನವಾಗಿದೆ, ಕುಲಗಳಿಗೆ ಸಂಬಂಧಿಸಿದಂತೆ ಬೇರೆ ಪ್ರದೇಶಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತಾರೆ ಹಾಗೂ ಇವುಗಳಲ್ಲಿ ಹೇಗೆ ಸಾಮ್ಯತೆಯನ್ನು ಒಳಗೊಂಡಿದೆ ಎಂಬುದನ್ನು ಇಲ್ಲಿ ತೌಲನೀಕರಿಸಿ ಗುರುತಿಸಲಾಗಿದೆ.

ಸಂಶೋಧನೆಗೆ ಅಗತ್ಯವಿರುವ ಮಾಹಿತಿಗಳನ್ನು ಮಾರ್ಗದರ್ಶಕರ, ವಿಷಯ ಪರಿಣಿತರ, ತಜ್ಞರ ಸಹಾಯದಿಂದ ವಿಷಯ ಅಧ್ಯಯನದ ವಿಧಾನದ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಈ ಸಂಶೋಧನ ಅಧ್ಯಯನಕ್ಕೆ ವಿವಿಧ ಮೂಲಗಳಿಂದ ಮಾಹಿತಿಯನ್ನು ಸಂಗ್ರಹಣೆ ಮಾಡಲಾಗಿದೆ. ಬಹಳ ಮುಖ್ಯವಾಗಿ ಮೂಲ ಆಕರ ಮತ್ತು ಆನುಷಂಗಿಕ ಆಕರಗಳ ಮೂಲಕ ಮಾಹಿತಿಗಳನ್ನು ಕ್ರೋಢೀಕರಿಸಿಕೊಳ್ಳಲಾಗಿದೆ.

ಆನುಷಂಗಿಕವಾಗಿ ಕ್ರೋಢೀಕರಿಸಿಕೊಂಡ ಆಕರಗಳ ವಿವರ

೧. ಮೂಲ ಆಕರಗಳು: ಅನುಸೂಚಿಯನ್ನು ಬಳಸಿಕೊಂಡು ಸಭಾಗೀತ್ವದ ಅವಲೋಕನ ಹಾಗೂ ಅಸಹಭಾಗೀತ್ವ ಅವಲೋಕನದ ಮೂಲಕ ಆಧುನಿಕ ಸಲಕರಣೆಗಳನ್ನು ಬಳಸಿಕೊಂಡು ಮಾಹಿತಿಯನ್ನು ಸಂಗ್ರಹಿಸಲಾಗಿದೆ.

೨. ಆನುಷಂಗಿಕ ಆಕರಗಳು: ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಂಶಗಳ ಅಧ್ಯಯನದ ಹಿನ್ನೆಲೆಯಲ್ಲಿ ಶಾಸನಗಳನ್ನು ಆಕರವಾಗಿ ಬಳಸಲಾಗಿದೆ. ಜೊತೆಗೆ ಶಾಸನಗಳ ಸಮಕಾಲೀನ ಸಾಹಿತ್ಯ, ಗ್ಯಾಜೆಟಿಯರಗಳು, ಸಮೀಕ್ಷಾ ವರದಿಗಳು. ವಿಶ್ವಕೋಶಗಳು, ನಿಘಂಟುಗಳು, ಪ್ರಕಟಿತ ಹಾಗೂ ಅಪ್ರಕಟಿತ ಕೃತಿಗಳನ್ನು ಆಕರಗಳನ್ನಾಗಿ ಬಳಸಿಕೊಳ್ಳಲಾಗಿದೆ.

೩. ವಕ್ತೃ ವಿವರ: ನೊಳಂಬ ಸಮುದಾಯದ ಮೂಲ ಆಶಯಗಳಲ್ಲಿರುವ ಆಚರಣೆ, ವಿಧಿ-ವಿಧಾನಗಳು, ಸಂಪ್ರದಾಯ, ಕಾರ್ಯ ಮುಂತಾದ ಕೌಟುಂಬಿಕ ಹಾಗೂ ಸಮುದಾಯಿಕ ಮಾಹಿತಿಯನ್ನು ವಕ್ತೃಗಳ ಮೂಲಕ ಪಡೆದುಕೊಳ್ಳುವ ಪ್ರಯತ್ನವನ್ನು ಮಾಡಲಾಗಿದೆ. ನೊಳಂಬ ಸಮುದಾಯದ ಸಾಂಸ್ಕೃತಿಕ ಅಂಶಗಳನ್ನು ಅಧ್ಯಯನ ಮಾಡಲು ಸಹಭಾಗಿ ಅವಲೋಕನದ ಮೂಲಕ ಮಾಹಿತಿಯನ್ನು ಸಂಗ್ರಹಿಸಿಕೊಳ್ಳಲಾಗಿದೆ.

ಹೀಗೆ ಹಲವು ಹತ್ತು ಕಡೆಗಳಿಂದ ಸಂಗ್ರಹಿತಗೊಂಡ ಮಾಹಿತಿಗಳನ್ನು ಇಟ್ಟುಕೊಂಡು ನೊಳಂಬರ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ವಿಮರ್ಶಾತ್ಮಕವಾಗಿ ಹಾಗೂ ವಿಶ್ಲೇಷಣಾತ್ಮಕವಾಗಿ ನೋಡುವ ಪ್ರಯತ್ನಮಾಡಲಾಗಿದೆ.

ಅಧ್ಯಯನದ ಸೈದ್ಧಾಂತಿಕ ಹಿನ್ನೆಲೆ

ಸಾಮಾಜಿಕ ಬದಲಾವಣೆಗೆ ಸಂಬಂಧಿಸಿದಂತೆ, ಹಲವು ಚಿಂತಕರು ಸಿದ್ಧಾಂತಗಳನ್ನು ಪ್ರತಿಪಾಧಿಸಿದ್ದಾರೆ. ಆದರೆ, ಅನೇಕ ಸಿದ್ಧಾಂತಗಳು ಕಾಲಾನುಗತಿಯಲ್ಲಿ ಹೊಸ ಸಿದ್ಧಾಂತಗಳ ಅನುಗುಣವಾಗಿ ಬದಲಾವಣೆ ಹೊಂದುತ್ತವೆ. ಸಮಾಜದ ಪ್ರಸ್ತುತ ಪರಿಸ್ಥಿತಿಗೆ ಕಾರಣಗಳು ಕೆಲವೊಮ್ಮೆ ಸಿಗುವುದಿಲ್ಲ. ಅಂತಹ ಸಂದರ್ಭದಲ್ಲಿ ಅವುಗಳ ಇತಿಹಾಸಕ್ಕೆ ಹೋಗಬೇಕಾಗುತ್ತದೆ. ವ್ಯಕ್ತಿ, ಸಮಾಜ ಹಾಗೂ ಬೇರೆ ಬೇರೆ ಸಾಮಾಜಿಕ ಆವಸ್ಥೆಗಳು ಹೇಗೆ ನಡೆದುಕೊಂಡು ಬಂದಿವೆ ಎಂಬುದನ್ನು ವಿಕಾಸಾತ್ಮಕ ದೃಷ್ಟಿಕೋನದಲ್ಲಿ ನೋಡಲಾಗಿದೆ. ಈ ಸಿದ್ಧಾಂತದಲ್ಲಿ ಚಾರ್ಲ್ಸ್ ಡಾರ್ವಿನ್, ಇ ಬಿ ಟೇಲರ್, ಎಚ್ ಮಾರ್ಗನ್, ಹರ್ಬರ್ಟ್ ಸ್ಪೆನ್ಸರ್, ಅಗಸ್ಟಾ ಕಾಮ್ಟ್ ಇವರುಗಳು ವಿಕಾಸ ತತ್ವದ ಮೂಲ ಅಂಶಗಳ ಮೂಲಕ ಸಮಾಜವು ಸರಳತೆಯಿಂದ ಸಂಕೀರ್ಣತೆಯ ಕಡೆಗೆ ಕಾಲಾನುಕ್ರಮದಲ್ಲಿ ಬದಾಲವಣೆಯೊಂದಿಗೆ ನಡೆದು ಬಂದಿದೆ ಎಂಬುದನ್ನು ಸಮಾಜಶಾಸ್ತ್ರಜ್ಞರ ಮುಖೇನ ಅರಿಯಬಹುದಾಗಿದೆ. ಇದಕ್ಕೆ ಪೂರಕವಾಗಿ ಸ್ಪೆಂಗ್ಲರ್, ಸೊರೋಕಿನ್, ಆರ್ನಾಲ್ಡ್, ಟಾಯಂಬೀ, ಓಚರ್-ಡಿ-ಲಾಪೊ. ವಿಲ್ಪ್ರೆಡ್ ಪ್ಯಾರೆಟೋ ಮುಂತಾದ ಸಮಾಜಶಾಸ್ತ್ರಜ್ಞರು ಸಾಮಾಜಿಕ ಬದಲಾವಣೆಯು ಯಾವಾಗಲೂ ಚಲಿಸುತ್ತಿರುವ ಸ್ಥಿತಿಯಲ್ಲಿರುವುದರಿಂದ ಇದನ್ನು ಚಕ್ರಗತಿಗೆ ಹೋಲಿಸಿದ್ದಾರೆ. ಸಾಮಾಜಿಕ ಪರಿವರ್ತನೆಯು ಸಾಮೂಹಿಕ ಬದಲಾಗುತ್ತಿರುತ್ತದೆ. ಈ ತತ್ವದ ಮೂಲ ನಂಬಿಕೆ ಎಂದರೆ, ನಾಗರಿಕತೆಯ ಏಳುಬೀಳು ಅವುಗಳ ಬೆಳವಣಿಗೆ, ಮತ್ತು ಅವನತಿಯ ವಿವಿಧ ಮಾದರಿಗಳನ್ನು ತಿಳಿಸುವುದಾಗಿದೆ. ಪ್ರತಿಯೊಂದು ಸಮುದಾಯವು ಆರಂಭಿಕ ಹಂತ, ಅಥವಾ ಮಧ್ಯಮ ಹಂತ, ಸಂಪೂರ್ಣ ಬೆಳವಣಿಗೆಯ

ಹಂತ, ಸಿಥಿಲತೆಯ ಹಂತ ಹಾಗೂ ಅವನತಿಯ ಹಂತಗಳ ಮೂಲಕ ಬದಲಾವಣೆ ಹೊಂದುತ್ತದೆ ಎಂದು ಸಮಾಜಶಾಸ್ತ್ರರ ಅಭಿಪ್ರಾಯವಾಗಿದೆ.

ಜನಾಂಗವು ಸಂಸ್ಕೃತಿಯ ಮುಖ್ಯ ನಿರ್ಧಾರಕ ಎಂದು ವೊಚರ್-ಡಿ-ಲಾಪೊ ನುಡಿದಿದ್ದಾರೆ. ಶ್ರೇಷ್ಠ ಜನಾಂಗಕ್ಕೆ ಸೇರಿದ ಉತ್ಕೃಷ್ಟ ವ್ಯಕ್ತಿಗಳಿಂದ ನಾಗರಿಕತೆ ಬೆಳೆದು ಸಂಪೂರ್ಣವಾಗುತ್ತದೆ. ಆದರೆ ಕನಿಷ್ಠ ಜನಾಂಗದ ಜನರು ಅದರೊಳಗೆ ನುಸುಳಿಕೊಂಡಾಗ, ಇಂತಹ ಸಂಸ್ಕೃತಿ ಅವನತಿ ಹಾದಿ ಹಿಡಿಯುತ್ತದೆ. ಪಾಶ್ಚಾತ್ಯ ನಾಗರಿಕತೆಗಳು ಮುಳುಗಿ ಹೋಗಲು ವಿದೇಶಗಳಿಂದ ಬಂದ ಕನಿಷ್ಠ ದರ್ಜೆಯ ಅಂಶಗಳೇ ಕಾರಣವೆಂದು ವೊಚರ್ ಅಭಿಪ್ರಾಯ ಪಟ್ಟಿದ್ದಾರೆ. ಹೀಗೆ ಹಲವು ಸಮಾಜಶಾಸ್ತ್ರರ ಮೂಲಕ ರೂಪುಗೊಂಡ ಚಕ್ರಗತಿ ಸಿದ್ಧಾಂತದ ಮೂಲಕ ಈ ಅಧ್ಯಯನವನ್ನು ಕಟ್ಟಿಕೊಡುವಂತಹ ಪ್ರಯತ್ನ ಮಾಡಲಾಗಿದೆ. ಹೀಗೆ ರೂಪಿತವಾದ ಸಿದ್ಧಾಂತದ ಮೂಲಕ ನೊಳಂಬ ಸಮುದಾಯವು ಮೊದಲು ಬುಡಕಟ್ಟು ಆಗಿದ್ದು, ಅನಂತರದ ದಿನಗಳಲ್ಲಿ ರಾಜಸತ್ತೆಗೆ ಬಂದು, ನಾಡಗೌಡರಾಗಿ, ಪ್ರಸ್ತುತ ಇದು ಒಂದು ಸಮುದಾಯವಾಗಿ ಕಂಡುಬರುತ್ತದೆ. ಚಕ್ರಗತಿ ಸ್ವರೂಪದ ಹಿನ್ನೆಲೆಯಲ್ಲಿ ಸಂಶೋಧನ ಅಧ್ಯಯನವನ್ನು ರೂಪಿಸಲಾಗಿದೆ.

ಅಧ್ಯಯನದ ಕಾರ್ಯ ಕ್ಷೇತ್ರದ ವ್ಯಾಪ್ತಿ

ಪ್ರಸ್ತುತ ಅಧ್ಯಯನದಲ್ಲಿ ನೊಳಂಬ ಸಮುದಾಯದ ಚರಿತ್ರೆ ಮತ್ತು ಸಂಸ್ಕೃತಿಯನ್ನು ಅಧ್ಯಯನ ಮಾಡಲು ಕರ್ನಾಟಕ, ಆಂಧ್ರಪ್ರದೇಶ ಮತ್ತು ತಮಿಳುನಾಡಿನ ಕೆಲವು ಭಾಗಗಳನ್ನು ಅಧ್ಯಯನ ಕ್ಷೇತ್ರವನ್ನಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ.

ಕರ್ನಾಟಕದಲ್ಲಿ ತುಮಕೂರು ಜಿಲ್ಲೆಯ ಮಧುಗಿರಿ, ಸಿರಾ ಮತ್ತು ಪಾವಗಡ ತಾಲ್ಲೂಕುಗಳಲ್ಲಿ, ಚಿತ್ರದುರ್ಗ ಜಿಲ್ಲೆ, ದಾವಣಗೆರೆ, ಚಳ್ಳಕರೆ, ಹಿರಿಯೂರು, ಮೊಳಕಾಲ್ಮೂರು ಮತ್ತು ಜಗಳೂರು ತಾಲ್ಲೂಕುಗಳಲ್ಲಿ ಕೋಲಾರ ಜಿಲ್ಲೆಯ ಕೋಲಾರ, ಬಾಗೆಪಲ್ಲಿ, ಮುಳುಬಾಗಿಲು, ಬಂಗಾರಪೇಟೆ, ಶಿಡ್ಲಘಟ್ಟ, ಶ್ರೀನಿವಾಸಪುರ, ಚಿಕ್ಕಬಳ್ಳಾಪುರ, ಗೌರಿಬಿದನೂರು, ಚಿಂತಾಮಣಿ ಮತ್ತು ಮಾಲೂರು ತಾಲ್ಲೂಕುಗಳಲ್ಲಿ, ಬೆಂಗಳೂರು ಹೊಸಕೋಟೆ, ದೊಡ್ಡಬಳ್ಳಾಪುರ ಮತ್ತು ದೇವನಹಳ್ಳಿ ತಾಲ್ಲೂಕುಗಳಲ್ಲಿ ಮತ್ತು ಬಳ್ಳಾರಿ ಜಿಲ್ಲೆಯ ಬಳ್ಳಾರಿ, ಅದೋನಿ ಮತ್ತು ಆಲ್ಲೂರು ತಾಲ್ಲೂಕುಗಳು, ಅಲ್ಲದೆ ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಪುಲಮನೇರು ಮತ್ತು ಪುಂಗನೂರು ತಾಲ್ಲೂಕುಗಳಲ್ಲೂ ಹಾಗೂ ತಮಿಳುನಾಡಿನ ಧರ್ಮಪುರಿ ಜಿಲ್ಲೆಗಳನ್ನು

ನೊಳಂಬರ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನವನ್ನು ಮಾಡಲು ವ್ಯಾಪ್ತಿಯನ್ನು ಹೊಂದಲಾಗಿದೆ.

ಅಧ್ಯಯನದ ಪ್ರಾಮುಖ್ಯತೆ

ನೊಳಂಬ ಸಮುದಾಯದ ಕುರಿತ ಅಧ್ಯಯನಗಳು ನಡೆದಿದ್ದರೂ, ಬಹುತೇಕ ಅಧ್ಯಯನಗಳು ಐತಿಹಾಸಿಕ ದೃಷ್ಟಿಕೋನದಲ್ಲಿ ನಡೆದಿರುವುದೇ ಆಗಿವೆ. ಇದುವರೆಗೂ ಸಮಾಜಶಾಸ್ತ್ರೀಯ ದೃಷ್ಟಿಕೋನದಲ್ಲಿ ಅಧ್ಯಯನಗಳು ನಡೆದಿರುವುದು ತೀರ ವಿರಳ. ಈ ನೊಳಂಬ ಸಮುದಾಯವು ಕರ್ನಾಟಕದಲ್ಲಿ ಕ್ರಿಸ್ತಶಕ ೮ನೆಯ ಶತಮಾನದಿಂದ ೧೧ನೆಯ ಶತಮಾನದವರೆಗೆ ಆಳ್ವಿಕೆ ನಡೆಸಿದ್ದು, ಪ್ರಸ್ತುತ ದಿನಗಳಲ್ಲಿ ಒಂದು ಸಮುದಾಯವಾಗಿ ಸಮಾಜದಲ್ಲಿ ಗುರುತಿಸಿಕೊಳ್ಳುತ್ತಿದೆ. ಅಲ್ಲದೇ ವಿಶಿಷ್ಟ ಸಂಸ್ಕೃತಿಯನ್ನು ಹೊಂದಿರುವುದರಿಂದ ನೊಳಂಬರ ಇತಿಹಾಸ ಮತ್ತು ಸಂಸ್ಕೃತಿಯನ್ನು ಅಧ್ಯಯನದ ದೃಷ್ಟಿಯಿಂದ ಗಮನಿಸಲಾಗಿದೆ. ಆದರೆ ನೊಳಂಬರನ್ನು ಕುರಿತು ಸಮುದಾಯಿಕವಾದ ಒಂದು ಸಾಂಸ್ಕೃತಿಕ ನಿರೂಪಣಾ ದೃಷ್ಟಿಯಲ್ಲಿ ಅಧ್ಯಯನಗಳು ಆಗದಿರುವುದನ್ನು ಗಮನಿಸಿ, ಆ ನಿಟ್ಟಿನಲ್ಲಿ ನೊಳಂಬ ಸಮುದಾಯವನ್ನು ಕೇಂದ್ರಿಕರಿಸಿ ಅಧ್ಯಯನವನ್ನು ಮಾಡಲಾಗಿದೆ.

ಬದಲಾವಣೆ ಎನ್ನುವುದು ಪ್ರಕೃತಿಯ ಸಹಜ ನಿಯಮವಾಗಿದೆ. ಸಮಾಜವು ನಿತ್ಯ ಪರಿವರ್ತನಾಶೀಲವಾದುದು. ಇದಕ್ಕೆ ಮಾನವ ಸಮಾಜವು ಕೂಡ ಹೊರತಾಗಿಲ್ಲ. ಇಲ್ಲಿ ಗುಣಾತ್ಮಕ ಬದಲಾವಣೆಯು ಸಮಾಜದ ಬೆಳವಣಿಗೆಯ ಪ್ರಗತಿಯ ದ್ಯೋತಕವಾಗಿರುತ್ತದೆ. ಇದು ಅರೋಗ್ಯವಂತ ಸಮಾಜದ ಲಕ್ಷಣವೂ ಹೌದು. ಅಗತ್ಯಕ್ಕೆ ಅನುಗುಣವಾಗಿ ಬದಲಾಗದ ಸಮಾಜ ಉತ್ತಮವಾದ ಸಮಾಜವಾಗಲಾರದು. ಈ ಹಿನ್ನೆಲೆಯಲ್ಲಿ ನೊಳಂಬ ಸಮಾಜದ ಚಲನಶೀಲತೆಯನ್ನು ಗುರುತಿಸಿದೆ.

ನೊಳಂಬ ಸಮುದಾಯದ ಮೂಲ ವೃತ್ತಿ ಪಶುಪಾಲನೆ ಮತ್ತು ಕೃಷಿ ಪ್ರಸ್ತುತ ದಿನಗಳಲ್ಲಿ ಅವರು ಕೃಷಿಯನ್ನು ಒಂದು ಉಪಸಂಸ್ಕೃತಿಯನ್ನಾಗಿಸಿಕೊಂಡಿರುವುದು ಕಂಡುಬರುತ್ತದೆ. ಈ ಸಮುದಾಯವು ಮೂಲದಲ್ಲಿ ಪಶುಪಾಲನೆಯನ್ನು ಪ್ರಧಾನ ವೃತ್ತಿಯನ್ನಾಗಿಸಿಕೊಂಡಿತ್ತು. ನಂತರದ ಘಟ್ಟದಲ್ಲಿ ಕೃಷಿಯು ಪ್ರಾಮುಖ್ಯತೆಗೆ ಬಂದು ಪಶುಪಾಲನೆಯ ಕಣ್ಮರೆಯಾಗುತ್ತಿರುವುದನ್ನು ಗುರುತಿಸಿ ಈ ಅಧ್ಯಯನದಲ್ಲಿ ಇದನ್ನು ಹೊರತರುವ ಪ್ರಯತ್ನವನ್ನು ಮಾಡಲಾಗಿದೆ. ಪಶುಪಾಲನೆ ಮತ್ತು ಕೃಷಿಗೆ ಹೆಚ್ಚು ಪ್ರಾಮುಖ್ಯತೆ ಹೊಂದಿರುವುದರಿಂದ ಇದು ಸಮುದಾಯದ ಆಚರಣೆಗಳಲ್ಲಿ ಮಹತ್ವವನ್ನು ಪಡೆದಿದೆ.

ಕಾಡು ಮತ್ತು ಗ್ರಾಮದ ಪ್ರಸ್ತಾಪವು ಒಂದು ಸಂಸ್ಕೃತಿಯ ಘಟ್ಟವಾಗಿದೆ. ಈ ಘಟ್ಟವು ಕಾಡನ್ನು ಹೊರತುಪಡಿಸಿ ಇಲ್ಲದಿರುವುದರಿಂದ ಮಾನವನ ಸಂಸ್ಕೃತಿಯು ಕಾಡಿನಿಂದ ಮೂಡಿಬಂದು ನಂತರ ಹಂತಹಂತವಾಗಿ ಸಂಕೀರ್ಣತೆಯ ಕಡೆಗೆ ಹೋಗುತ್ತದೆ. ಈ ಹಿನ್ನೆಲೆಯಲ್ಲಿ ಚಾರಿತ್ರಿಕ ಮತ್ತು ಸಾಂಸ್ಕೃತಿಕ ದೃಷ್ಟಿಕೋನದಲ್ಲಿ ಅಧ್ಯಯನದ ಕ್ರಮವನ್ನು ನಿರೂಪಿಸುವ ಸಂದರ್ಭದಲ್ಲಿ ಶಿಲಾಶಾಸನಗಳ ಪಾತ್ರ ಬಹಳ ಮಹತ್ವದ್ದಾಗಿದೆ. ಆದ್ದರಿಂದ ಶಾಸನಗಳು, ದೇವಾಲಯ ಮತ್ತು ವಾಸ್ತುಶಿಲ್ಪ, ಧಾರ್ಮಿಕ ವಿಧಿವಿಧಾನಗಳ ಮೂಲಕ ಚಾರಿತ್ರಿಕ ಮತ್ತು ಸಾಂಸ್ಕೃತಿಕ ವಾಸ್ತವ ಅಂಶಗಳು, ವೈರುದ್ಯಗಳು ಹಾಗೂ ವಿಭಿನ್ನ ಅನನ್ಯತೆಗಳನ್ನು ನೋಡುವ ಉದ್ದೇಶವನ್ನು ಈ ಅಧ್ಯಯನದಲ್ಲಿ ಉಕ್ತಗೊಳಿಸಲಾಗಿದೆ.

ಅಧ್ಯಯನದ ಸ್ವರೂಪ

ಈ ಸಂಶೋಧನ ಅಧ್ಯಯನವು ಒಟ್ಟು ಐದು ಅಧ್ಯಾಯಗಳಲ್ಲಿ ಹರಡಿಕೊಂಡಿದೆ. ಮೊದಲ ಅಧ್ಯಯನವು ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಸ್ವರೂಪವನ್ನು ಸ್ಪಷ್ಟಪಡಿಸುತ್ತದೆ.

ಎರಡನೆಯ ಅಧ್ಯಾಯವು ನೊಳಂಬರ ಚಾರಿತ್ರಿಕ ಹಿನ್ನೆಲೆಯನ್ನು ನೋಡುವುದಾಗಿದೆ. ಇದರಲ್ಲಿ ಮತ್ತೆ ಐದು ಉಪ ಅಧ್ಯಾಯಗಳನ್ನು ಮಾಡಲಾಗಿದೆ. ಆ ಉಪ ಅಧ್ಯಾಯಗಳು ಇಂತಿವೆ. ಒಂದನೆಯದ್ದು, ಕರ್ನಾಟಕದಲ್ಲಿ ನೊಳಂಬ ಪಲ್ಲವರನ್ನು ಕುರಿತು ಮಾಹಿತಿಯನ್ನು ಕಲೆಹಾಕುವುದರ ಮೂಲಕ, ಕರ್ನಾಟಕದಲ್ಲಿದ್ದ ನೊಳಂಬರೊಂದಿಗೆ ತಮಿಳುನಾಡಿನಲ್ಲಿರುವ ಪಲ್ಲವರೊಂದಿಗೆ ಇವರ ಸಂಬಂಧಗಳನ್ನು ಚಾರತ್ರಿಕವಾದ ನೆಲೆಯಲ್ಲಿ ಗುರುತಿಸುವಂತ ಕೆಲಸವನ್ನು ಇಲ್ಲಿ ಮಾಡಲಾಗಿದೆ. ಎರಡನೆಯ ಉಪ ಅಧ್ಯಾಯದಲ್ಲಿ ನೊಳಂಬ ಪದದ ವ್ಯುತ್ಪತ್ತಿಯನ್ನು ನೋಡುವಂತ ಕ್ರಮವಹಿಸಲಾಗಿದೆ. ಅದರಲ್ಲಿ ನೊಳಂಬ ಪದವು ನೊಣಂಬ, ನೊಣಬ ಇತ್ಯಾದಿ ರೂಪಾಂತರವಾದ ಬಗೆಯನ್ನು ಗುರುತಿಸಲಾಗಿದೆ. ನೊಳಂಬ ಪದದ ಕುರಿತು ಕನ್ನಡ ಶಾಸನಗಳಲ್ಲಿ ಹಲವು ವಿಷಯಗಳು ವ್ಯಕ್ತವಾಗುತ್ತವೆ ಅವುಗಳ ಹಿನ್ನೆಲೆಯಲ್ಲಿ ಈ ಉಪಧ್ಯಾಯವನ್ನು ಕಟ್ಟಿಕೊಡಲಾಗಿದೆ.

ಮೂರನೆಯ ಉಪ ಅಧ್ಯಾಯ ಪೌರಾಣಿಕ ಹಿನ್ನೆಲೆ. ಇದರಲ್ಲಿ ನೊಳಂಬರ ಚರಿತ್ರೆಯನ್ನೇ ಒಂದು ರೀತಿಯಲ್ಲಿ ಗೌಣವಾಗಿಸುವ ಹಾಗೇ ಪೌರಾಣಿಕ ಕತೆಗಳನ್ನು ರೂಪಿಸಿರುವುದನ್ನು ಗಮನಿಸಿ, ಅವುಗಳ ಸಹಜ ಅರ್ಥವನ್ನು ಹೇಗೆ ಸರಿಪಡಿಸುವುದು ಎಂಬುದನ್ನು ಇಲ್ಲಿ ನೋಡಲಾಗಿದೆ. ಇನ್ನೂ ನಾಲ್ಕನೆಯ ಉಪ ಅಧ್ಯಾಯದಲ್ಲಿ ಕರ್ನಾಟಕದಲ್ಲಿ ನೊಳಂಬರ ಬೆಳವಣಿಗೆಯನ್ನು ಗುರುತಿಸಲಾಗಿದೆ. ಇದು ಸಂಪೂರ್ಣವಾಗಿ ಶಾಸನಗಳನ್ನೇ

ಪ್ರಧಾನವಾಗಿಟ್ಟುಕೊಂಡು ಇಲ್ಲಿ ನೋಡುವಂತಹ ಪ್ರಯತ್ನವನ್ನು ಮಾಡಲಾಗಿದೆ. ಇನ್ನೂಳಿದಂತೆ, ಐದನೆಯ ಉಪ ಅಧ್ಯಾಯದಲ್ಲಿ ಚಾರಿತ್ರಿಕ ನೊಳಂಬವಾಡಿ-೩೨೦೦೦ವನ್ನು ಶಾಸನಗಳ ಅಂಶಗಳನ್ನೇ ಬಹು ಗಮನಾರ್ಹವಾಗಿ ಪರಿಗಣಿಸಿ ದೀರ್ಘವಾದ ಅಧ್ಯಾಯವನ್ನು ಕಟ್ಟಿಕೊಡಲಾಗಿದೆ.

ಪ್ರಸ್ತುತ ಸಂಶೋಧನ ಅಧ್ಯಯನದ ಮೂರನೆಯ ಪ್ರಮುಖ ಅಧ್ಯಾಯವೆಂದರೆ, ನೊಳಂಬರ ಚಾರಿತ್ರಿಕ ಸಾಂಸ್ಕೃತಿಕ ಬದುಕು. ಈ ನೊಳಂಬರ ಸಾಂಸ್ಕೃತಿಕ ಜೀವನವನ್ನು ಬಹಳ ಪ್ರಮುಖವಾಗಿ ಶಾಸನಗಳ ಹಿನ್ನೆಲೆಯಲ್ಲಿಯೇ ಗುರುತಿಸಲಾಗಿದೆ. ಪ್ರಧಾನವಾದ ಈ ಅಧ್ಯಾಯದಲ್ಲಿ ಒಟ್ಟು ನಾಲ್ಕು ಉಪ ಅಧ್ಯಾಯಗಳನ್ನು ಜೊತೆಗೆ ನಾಲ್ಕನೆಯ ಉಪ ಅಧ್ಯಾಯಕ್ಕೆ ಎರಡು ಉಪ ಅಧ್ಯಾಯಗಳನ್ನು ಮಾಡಲಾಗಿದೆ. ನೊಳಂಬರ ಸಾಮಾಜಿಕ ಕಾರ್ಯಗಳನ್ನು ಹೇಳಲಾಗಿದೆ. ಎರಡನೆಯ ಉಪ ಅಧ್ಯಾಯದಲ್ಲಿ ನೊಳಂಬರ ಸಾಮಾಜದ ಭಾಗವಾಗಿ ಮಹಿಳೆಯನ್ನು ನೋಡುವಾಗ, ಅಲ್ಲಿ ಮಹಿಳೆಯ ಸ್ಥಿತಿಗತಿ, ಅವಳ ಸ್ಥಾನಮಾನಗಳು, ರಾಜಕೀಯ, ಕೌಟುಂಬಿಕ ಹಾಗೂ ಸಾರ್ವಜನಿಕ ಬದುಕಿನಲ್ಲಿ ಅಧಿಕಾರ ಸಂಬಂಧಿ ಕಾರ್ಯಗಳನ್ನು ಚರ್ಚಿಸಲಾಗಿದೆ. ಮುಂದುವರೆದು ಮೂರನೆಯ ಉಪ ಅಧ್ಯಾಯದಲ್ಲಿ ನೊಳಂಬರ ಕಾಲದ ಘಟಿಕಾಸ್ಥಾನಗಳನ್ನು ಕುರಿತು ನೋಡಲಾಗಿದೆ. ಅಂದಿನ ಶಿಕ್ಷಣ ವ್ಯವಸ್ಥೆಯ ಬಗೆಯನ್ನು ಗುರುತಿಸಲಾಗಿದೆ. ನಾಲ್ಕನೆಯ ಉಪ ಅಧ್ಯಾಯದಲ್ಲಿ ನೊಳಂಬರಸರ ದಾನ-ದತ್ತಿ ಕಾರ್ಯಗಳನ್ನು ನೋಡಲಾಗಿದೆ. ನೊಳಂಬರಸರು ಮೂಲತಃ ಕೃಷಿಕರಾಗಿದ್ದುದರಿಂದ ಕೆರೆಕಟ್ಟೆಗಳನ್ನು ಹೆಚ್ಚು ಹೆಚ್ಚು ಕಟ್ಟಿಸುವುದರ ಮೂಲಕ ಅವುಗಳಿಗೆ ದಾನ-ದತ್ತಿಗಳನ್ನು ನೀಡಿರುವುದು ಕಂಡುಬರುತ್ತದೆ. ಹಾಗೆಯೇ ದೇವಾಲಯ ಮತ್ತು ಬಸದಿಗಳಿಗೆ ದಾನ-ದತ್ತಿಗಳನ್ನು ನೀಡಿರುವುದುಂಟು. ಸರಿಸುಮಾರು ಶೈವದೇವಾಲಯಗಳನ್ನು ನಿರ್ಮಾಣ ಮಾಡಿರುವುದು ಕಲ್ಯಾಣದ ಚಾಲುಕ್ಯರ ನಂತರದಲ್ಲಿ ನೊಳಂಬರೆ ಆಗಿರುವುದು ಈ ಅಧ್ಯಾಯದಲ್ಲಿ ಹೆಚ್ಚು ವಿವರಣೆಗೆ ಒಳಪಟ್ಟಿದೆ.

ನಾಲ್ಕನೆಯ ಅಧ್ಯಾಯವಾದ ನೊಳಂಬರ ಕುಲಗಳು ಮತ್ತು ಸಾಂಪ್ರದಾಯಕ ಆಚರಣೆಗಳು ಎಂಬ ವಿಷಯವನ್ನು ಚರ್ಚೆ ಮತ್ತು ವಿಶ್ಲೇಷಣೆಗೆ ಎತ್ತಿಕೊಳ್ಳಲಾಗಿದೆ. ನೊಳಂಬರಲ್ಲಿ ಅನೇಕ ಸಂಪ್ರದಾಯಗಳು ನಂಬಿಕೆಗಳು, ಆಚರಣೆಗಳು ಕುಟುಂಬದ ನೆಲೆಯಲ್ಲಿ, ಕುಲದ ನೆಲೆಯಲ್ಲಿ, ಉಪಜಾತಿಯ ನೆಲೆಯಲ್ಲಿ, ಜಾತಿಯ ನೆಲೆಯಲ್ಲಿ, ಗ್ರಾಮದ ನೆಲೆಯ ವಿಶಿಷ್ಟ ಪರಿಧಿಯಲ್ಲಿ ನಡೆಯುತ್ತವೆ. ನೊಳಂಬರ ಅನೇಕ ಆಚರಣೆಗಳನ್ನು ನಿತ್ಯ ನಿರ್ವಹಿಸುತ್ತಾರೆ. ಇವರು ತಮ್ಮ ಮನೆ ದೇವರನ್ನು ವಾರಕ್ಕೊಮ್ಮೆ ಬಹು ಕಟ್ಟುನಿಟ್ಟಾಗಿ ಪೂಜಿಸುತ್ತಾರೆ. ಇವರ ಇತರೆ ದೈನಂದಿನ ಆಚರಣೆಯಂದರೆ ಇಷ್ಟಲಿಂಗ ಪೂಜೆ. ಬಳಷ್ಟು ಜನ ದಿನನಿತ್ಯ ಸ್ನಾನ ಮಾಡಿ ಊಟ ಮಾಡುವುದಕ್ಕಿಂತ ಮೊದಲು ಇಷ್ಟಲಿಂಗ ಪೂಜೆಯನ್ನು ನೆರವೇರಿಸುತ್ತಾರೆ.

ಅನೇಕ ನೊಳಂಬರು ತಿರುಪತಿ ತಿಮ್ಮಪ್ಪ, ಆಂಜನೇಯ, ಕಲ್ಲೇಶ್ವರ, ಮಲ್ಲೇಶ್ವರ, ಮಲ್ಲಿಕಾರ್ಜುನ ತಮ್ಮ ಮನೆದೇವರನ್ನಾಗಿ ಪರಂಪರಾಗತವಾಗಿ ವಾರಕ್ಕೊಮ್ಮೆ ಮನೆದೇವರ ದಿವಸ ಪೂಜೆ ಸಲ್ಲಿಸುವುದನ್ನು ಕಾಣಬಹುದು. ಅನೇಕ ಗ್ರಾಮಗಳಲ್ಲಿ ಶಿವನನ್ನು ಪೂಜಿಸುವುದರೊಂದಿಗೆ ವಿಷ್ಣುವನ್ನು ಪೂಜಿಸುವುದು ಕಂಡುಬರುತ್ತದೆ.

ಇನ್ನೂ ಉಳಿದಂತೆ, ಕೊನೆಯದಾಗಿ ಸಮಾರೋಪವಾಗಿದೆ. ಅದರಲ್ಲಿ ಇಡೀ ಅಧ್ಯಯನದ ತುಲನೆಯನ್ನು ಮಾಡಲಾಗಿದೆ. ಮತ್ತು ಫಲಿತಗಳನ್ನು ವಿವರಣಾತ್ಮಕವಾಗಿ ತಿಳಿಸಲಾಗಿದೆ. ಅನುಬಂಧವನ್ನು ನೀಡಲಾಗಿದೆ. ಅದರಲ್ಲಿ ವಕ್ತೃಗಳ ವಿವರ, ನೊಳಂಬ ಅರಸುಮನೆತನದ ಪ್ರಾಚೀನ ವಂಶವೃಕ್ಷ, ನೊಳಂಬರ ಪ್ರಾಚೀನ ಆಡಳಿತದ ಚಾರಿತ್ರಿಕ ನಕಾಶೆಯನ್ನು ಜೋಡಿಸಲಾಗಿದೆ. ಜೊತೆಗೆ ನೊಳಂಬರ ಸಮುದಾಯದ ಛಾಯಾಚಿತ್ರಗಳನ್ನು ಸಂಗ್ರಹಿಸಿ ನೀಡಲಾಗಿದೆ. ಅದರೊಂದಿಗೆ ಇಡೀ ಅಧ್ಯಯನಕ್ಕೆ ಪೂರಕವಾದ ಅಭ್ಯಾಸ ಸೂಚಿಯನ್ನು ನೀಡಲಾಗಿದೆ.

ಅಧ್ಯಾಯ ಎರಡು

ನೊಳಂಬರ ಚಾರಿತ್ರಿಕ ಹಿನ್ನಲೆ

ಅಧ್ಯಾಯ ಎರಡು

ನೊಳಂಬರ ಚಾರಿತ್ರಿಕ ಹಿನ್ನೆಲೆ

ನೊಳಂಬ ಚರಿತ್ರೆಗೆ ಸಂಬಂಧಿಸಿದಂತೆ ಸ್ಪಷ್ಟವಾಗಿ ನಾವು ಕರ್ನಾಟಕದ ಇತಿಹಾಸದಲ್ಲಿ ಕ್ರಿಸ್ತಶಕ ಸುಮಾರು ೮ನೆಯ ಶತಮಾನದಲ್ಲಿ ಗುರುತಿಸುತ್ತೇವೆ. ಕ್ರಿಸ್ತಶಕ ೪ನೆಯ ಶತಮಾನದ ಮಧ್ಯಭಾಗದಲ್ಲಿ ಬನವಾಸಿಯ ಕದಂಬರ ಹಾಗೂ ತಲಕಾಡಿನ ಗಂಗರ ಸಂಸ್ಥಾನಗಳು ಪ್ರಾಬಲ್ಯಕ್ಕೆ ಬಂದಾಗಲೇ, ಮೊದಲಬಾರಿಗೆ ಇಡೀ ಕನ್ನಡ ನಾಡಿನ ಆಡಳಿತವು ಸ್ಥಳೀಯ ಎಂದೆನ್ನಿಸಿಕೊಂಡ ಅರಸು ಮನೆತನಗಳ ವ್ಯಾಪ್ತಿಗೆ ಬರಲಿಲ್ಲವೆಂದು ಮೇಲ್ನೋಟಕ್ಕೆ ಕಂಡುಬಂದರೂ, ಆಳುಪ, ಬಾಣ, ಕೇಕಯ, ಸೇಂದ್ರರ ಇತ್ಯಾದಿ ರಾಜವಂಶಗಳು ಅವರ ಸಂಸ್ಥಾನಗಳು ಕನ್ನಡ ನಾಡಿನ ನೆಲದಲ್ಲಿಯೇ ಹುಟ್ಟಿಬೆಳೆದಿವೆ. ಹಾಗೇಯೇ ದಕ್ಷಿಣ ಭಾರತದಲ್ಲಿ ಮೌರ್ಯರ ಆಳ್ವಿಕೆಯ ನಂತರದಲ್ಲಿ ಶಾತವಾಹನರೂ, ಚುಟು ಕುಲದವರೂ, ಪಲ್ಲವರೂ ಕರ್ನಾಟಕದ ಕೆಲವು ಭಾಗಗಳಲ್ಲಿ ಪ್ರಬಲರಾಗಿ ಮೆರೆದಿದ್ದಾರೆ. ನಂತರದಲ್ಲಿ ಕನ್ನಡಿಗರದ್ದೇ ಆದ ಕದಂಬ, ಗಂಗರ ರಾಜ್ಯಗಳು ಅಸ್ತಿತ್ವಕ್ಕೆ ಬಂದಮೇಲೆ ಕನ್ನಡಿಗರ ರಾಜಕೀಯ, ಸಾಮಾಜಿಕ ಪರಂಪರೆಗಳ ಪ್ರತೀಕವಾಗಿವೆ, ನೆಲೆಬೀಡುಗಳಾಗಿ, ಉಳಿದು ಬೆಳೆಯಲು ಹೆಚ್ಚಿನ ಅವಕಾಶಗಳು ಒದಗಿಬಂದವು ಈ ಕುರಿತಂತೆ ಅಂದಿನ ಸಮಕಾಲೀನ ಶಾಸನಗಳು ಸಾಕಷ್ಟು ಮಾಹಿತಿಯನ್ನು ಹೊರಹಾಕುತ್ತವೆ.

ಕ್ರಿಸ್ತಶಕ ಆರನೆಯ ಶತಮಾನದಲ್ಲಿ ಕದಂಬರನ್ನು ಪದಚ್ಯುತಿಗೊಳಿಸಿ ಆಧಿಪತ್ಯವನ್ನು ಗಳಿಸಿಕೊಂಡ ವಾತಾಪಿ ಅಥವಾ ಬಾದಾಮಿ ಚಾಲುಕ್ಯರು, ಕರ್ನಾಟಕವನ್ನು ಹೊಸದೊಂದು ಚಕ್ರಾಧಿಪತ್ಯಕ್ಕೆ ಕಾರಣವಾದರು. ದೊಡ್ಡ ಸಾಮ್ರಾಜ್ಯಗಳ ಆಡಳಿತದ ಹಿಡಿತವನ್ನು ಬಲಪಡಿಸಿಕೊಳ್ಳಲು ಸಣ್ಣ ಸಣ್ಣ ಸಂಸ್ಥಾನಗಳನ್ನು ಸ್ಥಾಪಿಸಲು ಪ್ರೋತ್ಸಾಹಿಸುವ ಸಂದರ್ಭದಲ್ಲಿ ವಿಕೇಂದ್ರಿಕೃತ ಆಡಳಿತಕ್ಕೆ ಚಾಲನೆಯನ್ನು ನೀಡಿರುವುದು ಕಂಡುಬರುತ್ತದೆ. ಚಾಲುಕ್ಯರು,

ಅವರ ನಂತರ ರಾಜ್ಯವಾಳಿದ ರಾಷ್ಟ್ರಕೂಟರೂ ಮಹತ್ವಾಕಾಂಕ್ಷಿಗಳಾಗಿದ್ದು, ತಮ್ಮ ರಾಜಕೀಯ ಪ್ರಭಾವವನ್ನು ಕರ್ನಾಟಕದ ಹೊರಗೆ ಎಲ್ಲೆಡೆಗಳಲ್ಲೂ ಮೆರೆಸುವ ಪ್ರಯತ್ನಗಳಲ್ಲಿ ಸತತ ನಿರತರಾಗಿದ್ದರಾದ ಕಾರಣ, ಕರ್ನಾಟಕದ ಒಳಾಡಳಿತವನ್ನು ಗಮನಿಸಿಕೊಳ್ಳಲು ಹಾಗೂ ಸಾಮ್ರಾಟರ ಪ್ರಭಾವವು ಕುಂದದಂತೆ ನೋಡಿಕೊಳ್ಳಲು ಮತ್ತು ಅಗತ್ಯಬಿದ್ದಂತೆ ಸಾಮ್ರಾಟರ ದಿಗ್ವಿಜಯಗಳಲ್ಲಿ ನೆರವಾಗಲು ಅನೇಕ ಸಾಮಂತ ಅರಸು ಮನೆತನಗಳನ್ನು ಅಲ್ಲಲ್ಲಿಯ ಸಂಸ್ಥಾನಗಳಲ್ಲಿ ಸಿಂಹಾಸನಸ್ಥರಾಗಿ ಆಡಳಿತ ಸೂತ್ರಗಳನ್ನು ವಹಿಸಕೊಂಡಿದ್ದರು. ರಾಷ್ಟ್ರಕೂಟರ ಕಾಲದಲ್ಲಂತೂ ಕರ್ನಾಟಕದ ಸಾಮ್ರಾಟರು ಒಳನಾಡು ಹೊರನಾಡುಗಳಲ್ಲಿ ತಮ್ಮ ಪ್ರಭಾವವನ್ನು ಹರಡಿಸಿ ಕಾಪಾಡಿಕೊಳ್ಳುವಲ್ಲಿ ತಮ್ಮ ಸಾಮಂತರ ಮೇಲೆ ಹೆಚ್ಚು-ಹೆಚ್ಚಾಗಿ ಅವಲಂಬಿಸಿದ್ದರೆಂಬುದು ಅಂದಿನ ಶಾಸನಗಳ ಅಧ್ಯಯನದಿಂದ ವಿಸ್ತಾರವಾಗಿಯೇ ತಿಳಿದುಬರುತ್ತದೆ. ಹಾಗೆಯೇ ರಾಷ್ಟ್ರಕೂಟರ ಕಾಲದಲ್ಲಿ ಅಸ್ತಿತ್ವಕ್ಕೆ ಬಂದು ಕರ್ನಾಟಕದ ಇತಿಹಾಸವನ್ನು ಬೆಳಗಿದ ಸಾಮಂತ ಮನೆತನಗಳಲ್ಲಿ ನೊಳಂಬ-ಪಲ್ಲವ ವಂಶವೂ ಮುಖ್ಯವಾದದ್ದು.

ಪಲ್ಲವರು ಮೂಲತಃ ತಮಿಳುನಾಡಿನವರು. ಇವರ ಪ್ರಾಚೀನತೆಯ ಬಗೆಗೆ ತಮಿಳು ಸಂಘಂ ಸಾಹಿತ್ಯದಲ್ಲಾಗಲಿ ಅಥವಾ ಕ್ರಿಸ್ತಪೂರ್ವದ ಕೊನೆಯಲ್ಲಾಗಲಿ, ಕ್ರಿಸ್ತಶಕದ ಆರಂಭದಲ್ಲೂ ಕೂಡಾ ಮಾಹಿತಿಯು ಲಭ್ಯವಾಗುವುದಿಲ್ಲ. ಈ 'ಪಲ್ಲವರು ಕ್ರಿಸ್ತಶಕ ೨ ಅಥವಾ ೩ನೆಯ ಶತಮಾನದಲ್ಲಿ ತಮಿಳುನಾಡಿನ ಕಂಚಿಯಲ್ಲಿ ಆಡಳಿತ ಮಾಡಲು ಪ್ರಾರಂಭಿಸಿದಂತೆ' ಕಂಡುಬರುತ್ತದೆ(ನೊಇದ:೧೧). ಆ ಕಾರಣಕ್ಕಾಗಿ ಈ ನೊಳಂಬರು ಕ್ರಿಸ್ತಶಕ ೨ ಅಥವಾ ೩ನೆಯ ಶತಮಾನದಲ್ಲಿ ತಮ್ಮ ರಾಜಕೀಯ ಜೀವನವನ್ನು ಪ್ರಾರಂಭಿಸಿದರೆಂದೇ ಹೇಳಬೇಕಾಗುತ್ತದೆ. ಸಾಮಾನ್ಯವಾಗಿ 'ಪಲ್ಲವರು ದಕ್ಷಿಣ ಭಾರತದಲ್ಲಿ ಶಾತವಾಹನರ ನಂತರ ಪಲ್ಲವರು ದಕ್ಷಿಣಾಪಥದ ಪೂರ್ವ ಭಾಗದಲ್ಲಿ ಶಾತವಾಹನರಿಗೆ ಸೇರಿದ ಪ್ರದೇಶಗಳನ್ನು ಆಕ್ರಮಿಸಿ ಅವರ ಉತ್ತರಾಧಿಕಾರಿಗಳಾಗಿ ಆಳ್ವಿಕೆ ನಡೆಸಿದರು'(ನೊಸಾಅ:೬).

ಹೀಗೆ ಶಾತವಾಹನರ ಉತ್ತರಾಧಿಕಾರಿಗಳಾಗಿ ದಕ್ಷಿಣದ ಭಾಗದಲ್ಲಿದ್ದ ಈ ಪಲ್ಲವರು, ಆರಂಭದ ಕಾಲದಿಂದಲೂ ಉತ್ತರದ ಕಡೆಗೆ ಆಗಾಗ್ಗೆ ಸಾಮ್ರಾಜ್ಯ ಹಾಗೂ ಸಂಪತ್ತಿನ ಸಲುವಾಗಿ ದಾಳಿಗಳನ್ನು ಮಾಡುತ್ತಾ ಬಂದಿದ್ದರು. ಈ ಪಲ್ಲವರು ತೊಡೈಮಂಡಲವನ್ನು ಆರು ಶತಮಾನಗಳಿಗೂ ಹೆಚ್ಚು ಕಾಲ ಆಳಿದರು. ಅವರು ಕನ್ನಾರ್ ನದಿಯ ದಂಡೆಯ ಮೇಲಿನ ಕಾಂಚೀಪಟ್ಟಣವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು. ಇದಕ್ಕೆ ೨ ಮತ್ತು ೩ನೆಯ ಶತಮಾನದಲ್ಲಿ ದೊರಕುವ ಶಾಸನಗಳು ಮತ್ತು ಸಾಹಿತ್ಯಿಕ ಆಧಾರಗಳು ಆಕರಗಳಾಗಿವೆ. ಪಲ್ಲವರ ಬಗೆಗೆ ಏನೇ ಕತೆಗಳಿರಲಿ, ಇತಿಹಾಸವಿರಲಿ ಕರ್ನಾಟಕದಲ್ಲಿ ಇರುವ ನೊಳಂಬರು ಮತ್ತು ಪಲ್ಲವರ ಮಧ್ಯದಲ್ಲಿನ ಸಂಬಂಧಗಳೇನು ಹಾಗೂ ಅವರುಗಳಿಂದ

ನೊಳಂಬರ ಚರಿತ್ರೆಯ ಪುಟಗಳಿಗೆ ಏನಾದರೂ ಸಂಬಂಧಗಳಿವೆ ಆ ಕಾರಣಕ್ಕಾಗಿ ಅವರು ತಮ್ಮ ಕೆಲವು ಶಾಸನಗಳಲ್ಲಿ ತಮ್ಮನ್ನು ಪಲ್ಲವಕುಲದವರೆಂದು ಕರೆದುಕೊಂಡಿರುವುದು ಇದೆ. ಕದಂಬ, ಗಂಗ ಮನೆತನಗಳು ಪ್ರಬಲಗೊಳ್ಳುವ ಮೊದಲು ಇಂದಿನ ಆಂಧ್ರ ಮತ್ತು ಕರ್ನಾಟಕದ ಕೆಲಭಾಗಗಳು ಪಲ್ಲವರ ಆಳ್ವಿಕೆಗೊಳಪಟ್ಟಿದ್ದವು. ಕದಂಬ. ಗಂಗರ ಪ್ರಭಾವ ಹೆಚ್ಚಿದಂತೆ ಭೌಗೋಳಿಕ ಒತ್ತಡಕ್ಕೆ ತುತ್ತಾದ ಪಲ್ಲವರು ಆಂಧ್ರ-ಕರ್ನಾಟಕದ ಪ್ರಾಂತ್ಯದಿಂದ ಕಾಲ್ತೆಗೆದು ತಮಿಳುನಾಡಿನಲ್ಲಿ ತಮ್ಮ ಆಧಿಪತ್ಯವನ್ನು ನೆಲೆಗೊಳಿಸಿಕೊಂಡರು. ಹಾಗೆ 'ಪಲ್ಲವರು ಕರ್ನಾಟಕದಿಂದ ಹೊರಬೀಳಬೇಕಾಗಿ ಬಂದಾಗ, ಅವರ ವಂಶಿಕದ ಕೆಲವರು ಕರ್ನಾಟಕದಲ್ಲಿ ಉಳಿದಿರಬೇಕು. ಅಲ್ಪಕಾಲದಲ್ಲೇ ಅವರು ಹೊಸದೊಂದು ಸಂಸ್ಥಾನದ ದೊರೆಗಳಾದಾಗ ತಮ್ಮನ್ನು ಪಲ್ಲವಕುಲದವರೆಂದು ಕರೆದುಕೊಂಡಿರುವುದು ಸಹಜವೇ' ಆಗಿದೆ(ನೊಇದ:೬೫)

ತಮಿಳುನಾಡಿನ ಮೂಲವನ್ನು ಹೊಂದಿದ ಕರ್ನಾಟಕದ ಈ ಪಲ್ಲವರು ದಕ್ಷಿಣ ಭಾರತದಲ್ಲಿ ಪ್ರಮುಖ ಸಾಮಂತರಾಗಿದ್ದರು. ಇಲ್ಲಿ ಸಾಮಂತರೆಂದರೆ, ಮೂಲದಲ್ಲಿ ಈ ಪಲ್ಲವರು ಅಥವಾ ನೊಳಂಬ ಪಲ್ಲವರು ಉಳಮೆಯ ಮೂಲಕ ಕೃಷಿಕರಾಗಿ ತಮ್ಮ ಅಸ್ತಿತ್ವವನ್ನು ರುಜುವಾತ ಪಡಿಸಿದ್ದಾರೆ. ಕ್ರಿಸ್ತಶಕ ೮ನೆಯ ಶತಮಾನದ ತರುವಾಯ ಕರ್ನಾಟಕದಲ್ಲಿ ಈ ನೊಳಂಬರ ಅಸ್ತಿತ್ವವನ್ನು ಸಾಮಂತರಾಗಿ ಕಾಣಸಿಗುತ್ತದೆ. ಈ ಹಿಂದೆ ಹೇಳಿದಂತೆ ರಾಷ್ಟ್ರಕೂಟರ ವಿಕೇಂದ್ರಿಕೃತ ಆಡಳಿತ ವ್ಯವಸ್ಥೆಯಲ್ಲಿ ನೊಳಂಬರು ಸಾಮಂತರಾಗಿ ತಮ್ಮನ್ನು ತಾವುಗಳ ಅಸ್ತಿತ್ವವನ್ನು ಕಾಯ್ದುಕೊಳ್ಳುತ್ತಾ ಬಂದಿರುವುದು ಚರಿತ್ರೆಯ ಪುಟಗಳಲ್ಲಿ ದಾಖಲಾಗಿದೆ. ಮೂಲದಲ್ಲಿ ಅವರ ನೆಲೆಗಳನ್ನು ನೋಡಿದರೆ ಸ್ಪಷ್ಟವಾಗುವ ಅಂಶಗಳ ಹಿನ್ನೆಲೆಯಲ್ಲಿ ಇವರು ಕೃಷಿಕರೆಂದು, ಜಮೀನುದಾರರೆಂದು ಕಂಡುಬರುತ್ತದೆ. ಹೆಂಜೇರು, ಕಂಪಿಲಿ ಮುಂತಾದ ಅವರ ನೆಲೆಗಳು ನದಿ ತೀರದ ಪ್ರದೇಶಗಳಾಗಿವೆ. ಅವರ ಉದ್ದೇಶ ಒಂದು ರಾಜ್ಯವನ್ನು ಸ್ಥಾಪಿಸಿ ಸಾಮ್ರಾಜ್ಯ ವಿಸ್ತಾರ ಮಾಡುವುದು ಆಗಿರಲಿಕ್ಕಿಲ್ಲ. ಮೂಲದಲ್ಲೇ ಅವರು ಕೃಷಿಕರು ಆ ಕಾರಣಕ್ಕೆ ಅವರಲ್ಲಿ ಭೂ ಸಂಪತ್ತನ್ನು ಹೆಚ್ಚಿನ ಪ್ರಮಾಣದಲ್ಲಿ ಹೊಂದಿದ್ದರು. ಅವರ ಅಸ್ತಿತ್ವವು ಆರ್ಥಿಕತೆಯ ಆಧಾರದ ಮೇಲೆ ಅವರನ್ನು ರಾಜಕೀಯ ಶಕ್ತಿಗಳು ಹುಡುಕಿ ಅವರಿಗೆ ಸಾಮಂತರು ಎಂಬ ಪಟ್ಟವನ್ನು ಕೊಟ್ಟಿರುವ ಸಾಧ್ಯತೆಯಿದೆ ಮತ್ತು ನೊಳಂಬರು ಬೃಹತ್ ಜಮೀನು ಹಾಗೂ ಆರ್ಥಿಕತೆಯ ಕ್ರೋಢೀಕರಣದಲ್ಲಿ ತೊಡಗಿರುವುದರಿಂದ, ಅವರ ಗೌರವಕ್ಕೆ ಸಮಾನವಾಗಿ ೧೦೦೦೦ ಗ್ರಾಮಗಳನ್ನು ನೀಡಲಾಗಿದೆ. ಮುಂದೆ ಅವರು ಇದನ್ನು ಸಂಸ್ಥಾನವನ್ನಾಗಿ ರೂಪಿಸಿ ತಲಕಾಡಿನ ಗಂಗರು ತಮ್ಮ ನೇರ ಆಶ್ರಯದಲ್ಲಿಯೇ, ಕ್ರಿಸ್ತಶಕ ೮ನೆಯ ಶತಮಾನದಲ್ಲಿ ಅನಂತಪುರ ಹಾಗೂ ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಯ ಕೆಲವು ಪ್ರದೇಶಗಳನ್ನು ಅವರ ವ್ಯಾಪ್ತಿಗೆ ವಹಿಸಿರುವುದು ಕಂಡುಬರುತ್ತದೆ.

ತಲಕಾಡಿನ ಗಂಗರಿಂದ ಪಡೆದ ಸಣ್ಣಪ್ರಮಾಣದ ೧೦೦೦ ಗ್ರಾಮಗಳ ಮೇಲ್ವಿಚಾರಣಾ ಅಧಿಕಾರವನ್ನು ತಮ್ಮ ಆತ್ಮ ವಿಶ್ವಾಸ, ನಂಬಿಕೆ, ಸ್ವ-ಶಕ್ತಿಯಿಂದ ಹಾಗೂ ಸ್ವಪ್ರಯತ್ನದ ಫಲವಾಗಿ ತಮ್ಮನ್ನು ಒಂದು ನಾಡಿನ ಅಧಿಪತಿಗಳಾಗಿ ಸ್ಥಿರಗೊಳಿಸಿಕೊಳ್ಳಲು ಪ್ರಯತ್ನಿಸಿರುವುದು. ಆ ಕಾರಣಕ್ಕಾಗಿ ಅವರು ಕ್ರಿಸ್ತಶಕ ೧೦ನೆಯ ಶತಮಾನದ ಆರಂಭದ ಕಾಲದಲ್ಲಿಯೇ ೩೨೦೦೦ ಗ್ರಾಮಗಳನ್ನೊಳಗೊಂಡ ವಿಸ್ತಾರವಾದ ರಾಜ್ಯವನ್ನಾಗಿ ಅಭಿವೃದ್ಧಿಗೊಳಿಸಿಕೊಂಡರು. ಈ ಕಾರಣದಿಂದ ಅವರು ವಿಸ್ತೃತಗೊಳಿಸಿಕೊಂಡ ಸಾಮ್ರಾಜ್ಯವು ತುಮಕೂರು, ಚಿತ್ರದುರ್ಗ, ಬಳ್ಳಾರಿ, ಕೋಲಾರ, ಬೆಂಗಳೂರು ಹಾಗೂ ಆಂಧ್ರಪ್ರದೇಶದ ಅನಂತಪುರ ಮತ್ತು ತಮಿಳುನಾಡಿನ ಉತ್ತರ ಅರ್ಕಾಟುವಿನ ಸೇಲಂ ಜಿಲ್ಲೆಗಳ ಬಹುಭಾಗಗಳನ್ನೊಳಗೊಂಡು ತಮ್ಮ ನೊಳಂಬವಾಡಿಗೆಯನ್ನು ವಿಸ್ತರಿಸಿಕೊಂಡಿದ್ದರೆಂಬುದಾಗಿ ಶಾಸನಗಳಿಂದ ತಿಳಿದುಬರುತ್ತದೆ.

೨.೧. ಕರ್ನಾಟಕದಲ್ಲಿ ನೊಳಂಬ ಪಲ್ಲವರು

ಕರ್ನಾಟಕದ ಮೂಲ ಚರಿತ್ರೆಗೆ ರಾಜಮನೆತನಗಳ ಕೊಡುಗೆ ಅಪಾರ. ಆದರೆ ಇಡೀ ಚರಿತ್ರೆ ಉದ್ದಕ್ಕೂ ಸ್ವತಂತ್ರ ಅರಸು ಮನೆತನಗಳೊಂದಿಗೆ ಅವರ ಸಾಮಂತರ ಕೊಡುಗೆ ಮಹತ್ವದ್ದಾಗಿದೆ. ಹಾಗೇ ಕನ್ನಡ ನಾಡಿಗೆ ಸಾಕಷ್ಟು ಕೊಡುಗೆಯನ್ನು ನೀಡಿದ ಸಾಮಂತರಲ್ಲಿ ನೊಳಂಬರು ಅಥವಾ ನೊಳಂಬ-ಪಲ್ಲವರು ಪ್ರಥಮ ಸ್ಥಾನದಲ್ಲಿ ನಿಲ್ಲುತ್ತಾರೆ. ಅವರು ಕೃಷಿಮೂಲದಿಂದ ರಾಜ್ಯಾಡಳಿತಕ್ಕೆ ಬಂದವರಾಗಿದ್ದಾರೆ. ಈ 'ನೊಳಂಬ ಪಲ್ಲವರು ಕ್ರಿಸ್ತಶಕ ಸುಮಾರು ೩ನೆಯ ಶತಮಾನದಿಂದಲೇ ಕರ್ನಾಟಕದಲ್ಲಿದ್ದರು' ಎಂದು(ಕವಿಶಾಸಂ:೧:ಹಡಗಲಿ :೫೭) ಹಲವು ಶಾಸನಗಳ ಮೂಲಕ ತಿಳಿದುಬರುತ್ತದೆ. ಈ ಶಾಸನದಲ್ಲಿ 'ಶಿವಸ್ಕಂದವರ್ಮಣಃ' ಎಂಬ ಬರಹವಿದೆ. ಇದು ಯಾವ ಕಾಲದ್ದೆಂದು ತಿಳಿದು ಬರುವುದಿಲ್ಲ. ಆದರೆ, ಪ್ರಾಕೃತಭಾಷೆಯಲ್ಲಿದೆ. ಕಂಚಿಯ ಪ್ರಾಚೀನ ಪಲ್ಲವರ ಕಾಲಕ್ಕೆ ಸೇರಿದ ಬಪ್ಪನ ಮಗ ಪಲ್ಲವರ ದೊರೆ ಶಿವಸ್ಕಂದವರ್ಮನು ತನ್ನ ಆಳ್ವಿಕೆಯಲ್ಲಿ ಹಾಕಿಸಿದ ಶಾಸನವಿದಾಗಿದೆ. ಈ ಶಿವಸ್ಕಂದವರ್ಮನು ಭಾರಧ್ವಾಜಗೋತ್ರಕ್ಕೆ ಸೇರಿದವನಾಗಿದ್ದಾನೆ. ಈತ ಚಿಲ್ಲರೆಕೋಡುಂಕ ಗ್ರಾಮದಲ್ಲಿನ ತೋಟವನ್ನು ಈ ಮೊದಲೆ ಬಪ್ಪಸ್ವಾಮಿರಾಜನು ಬ್ರಾಹ್ಮಣರಿಗೆ ದಾನವಾಗಿ ನೀಡಿದ್ದನು. ಪಲ್ಲವರು ತಮ್ಮ ಸಾಮ್ರಾಜ್ಯಕ್ಕೆ ಸೇರಿದ ಪ್ರಾಂತ್ಯಗಳನ್ನು ಗುರುತಿಸುವಾಗ ಶಾಸನ ದಾನದ ಉಲ್ಲೇಖದ ಭಾಗವನ್ನು 'ಶಾತವಾಹನ ರಠ್ಠ'(ಶಾತವಾಹನ ರಾಷ್ಟ್ರ) ಎಂದು ಕರೆದುಕೊಂಡಿದ್ದಾರೆ(ಕವಿವಿಶಾಸಂ:೧:೨). ಈ ಮೇಲೆ ಉಲ್ಲೇಖಿತ ಕಾಲಕ್ಕೆ ಸೇರಿದ ಶಾಸನವೊಂದರಲ್ಲಿ ಮಹಿದವೋಲುವಿನಲ್ಲಿ ಪಲ್ಲವರು ಆಳುತ್ತಿದ್ದ ಉಲ್ಲೇಖವಿದೆ. ಹೀಗಾಗಿ ಕರ್ನಾಟಕದಲ್ಲಿ ಕ್ರಿಸ್ತಶಕ ೩ನೆಯ ಶತಮಾನದಲ್ಲಿಯೇ ಪಲ್ಲವರು ಆಳ್ವಿಕೆ ನಡೆಸುತ್ತಿದ್ದರು ಎಂಬುದಾಗಿ ತಿಳಿದುಬರುತ್ತದೆ.

ಕ್ರಿಸ್ತಶಕ ೪ನೆಯ ಶತಮಾನದಲ್ಲಿ ಕದಂಬರ ಮಯೂರಶರ್ಮನು ಒಂದು ಶಾಸನದಲ್ಲಿ 'ತ್ರೈಕೂಟ, ಅಭೀರ, ಪಲ್ಲವ, ಪಾರಿಯಾತ್ರಿಕ, ಸಕಸ್ಥಾಣ, ಸಯಿನ್ದಕ, ಪುಣ್ಣಾಟ ಮತ್ತು ಮೊಕರಿಣಾಗಳನ್ನು ಸೋಲಿಸಿದನೆಂದು ತಿಳಿಸುತ್ತದೆ'(ಎಮ್ಎಆರ್:೧೯೨೯:೫೦). ಮುಂದುವರೆದು 'ಕಾಕುಸ್ಥವರ್ಮನ ತಾಳಗುಂದ ಶಾಸನದಲ್ಲಿ ಮಯೂರಶರ್ಮನು ಪಲ್ಲವರ ರಾಜಧಾನಿಯಾದ ಕಂಚಿಯ ಘಟಿಕಾಸ್ಥಾನಕ್ಕೆ ಉನ್ನತ ಅಭ್ಯಾಸಕ್ಕೆಂದು ತನ್ನ ಗುರು ಮತ್ತು ತಾತ ವೀರಶರ್ಮನ ಜೊತೆಯಲ್ಲಿ ಹೋಗಿರುವುದನ್ನು' ತಿಳಿಸುತ್ತದೆ(ಎಮ್ಎಆರ್:೧೯೨೯:೫೦). ಈ ಶಾಸನವು ಇನ್ನೊಂದು ಮಹತ್ವದ ಅಂಶದ ಮೇಲೆ ಬೆಳುಕು ಚೆಲ್ಲುತ್ತದೆ. ಅದು ಮಯೂರಶರ್ಮನು ಮತ್ತು ವೀರಶರ್ಮರು ಪಲ್ಲವರ ಕಾಂಚೀಪುರಕ್ಕೆ ಹೋದ ಸಂದರ್ಭದಲ್ಲಿ, ಅಲ್ಲಿ ವಿಶ್ವಸ್ತಮಂಡಳಿಯೊಡನೆ ಆದ ಕಲಹದಲ್ಲಿ ಅವರು ಅವಮಾನಿತರಾಗಿರುವುದನ್ನು ತಿಳಿಸುತ್ತದೆ. ಅಂದರೆ, ಕದಂಬರು ಮೂಲದಲ್ಲಿ ಪಲ್ಲವರ ಆಶ್ರಯದಲ್ಲಿಯೇ ಇರಬೇಕು. ಇಲ್ಲವಾದರೆ, ಕಾಂಚೀಪುರದಲ್ಲಿನ ಆ ವಿಶ್ವಸ್ತಮಂಡಳಿಯ ಅಧಿಕಾರಕ್ಕೆ ಆತನು ಕಣ್ಣಿಟ್ಟಿರುವ ಸಾಧ್ಯತೆಯಿದೆ. ಈ ಕಲಹಗಳು ಮತ್ತೊಂದು ಏನೇ ಇರಲಿ, ಅದು ಪಲ್ಲವರ ಸಾಮರ್ಥ್ಯವನ್ನು ಮತ್ತಷ್ಟು ಹೆಚ್ಚು ಮಾಡಿರಲಿಕ್ಕೆ ಸಾಧ್ಯತೆಯಿದೆ. ಕಾರಣ ಅಲ್ಲಿಯವರೆಗೆ ಕದಂಬರು ಇವರ ಅಧೀನದಲ್ಲಿದ್ದು, ಮೂಲದಲ್ಲಿ ಕರ್ನಾಟಕದ ಬನವಾಸಿ-ವೈಜಯಂತಿಯೂ ಸೇರಿದಂತೆ ಕನ್ನಡ ನಾಡಿನ ಬಹುಭಾಗ ನೊಳಂಬ-ಪಲ್ಲವರ ಅಧೀನದಲ್ಲಿರುವ ಸಾಧ್ಯತೆ ಇದೆ.

ಕದಂಬರು ಈ ಪಲ್ಲವರನ್ನು ದೂರ ಮಾಡಿ ತಮ್ಮದೇ ಆಡಳಿತದ ರಾಜ್ಯವನ್ನು ಸ್ಥಾಪಿಸಿದ ತದನಂತರದಲ್ಲಿ ಕದಂಬರಿಗೂ ನೊಳಂಬಪಲ್ಲವರಿಗೂ ಆಗಾಗ್ಗೆ ಕಾದಾಟಗಳು ಸಹಜ ಎಂಬಂತೆ ನಡೆದು ಬಂದಿವೆ. ಅದಕ್ಕೆ ಉದಾಹರಣೆ ಎಂಬಂತೆ, 'ಕ್ರಿಸ್ತಶಕ ೫ನೆಯ ಶತಮಾನದಲ್ಲಿ ದೊರಕುವ ಪಲ್ಮಿಡಿಯ ಶಾಸನ'ವು ಈ ಮಾತನ್ನು ಗಟ್ಟಿಗೊಳಿಸುತ್ತವೆ(ಎಮ್ಎಆರ್:೧೯೨೯:೫೦). ಅಲ್ಲದೇ ಪಲ್ಲವರ ಮೇಲೆ ಈ ಕದಂಬರ ದ್ವೇಷ ಎಷ್ಟಿತ್ತೆಂದರೆ, ಕಾಲದ ಉಲ್ಲೇಖವಿಲ್ಲದ 'ಹಲಸಿಯ ಸಂಸ್ಕೃತ ಭಾಷೆಯ ಒಂದು ತಾಮ್ರ ಶಾಸನವು ಅರಸ ರವಿವರ್ಮನು ವಿಷ್ಣುವರ್ಮಾದಿ ಅರಸರನ್ನು ಕೊಂದು ಕಾಂಚೀಶ್ವರನಾದ ಚಂಡದಂಡನನ್ನು ನಿರ್ಮೂಲಗೊಳಿಸಿದ'ನೆಂದು ಹೇಳಿದೆ-*ಉತ್ಸಾದ್ಯ ಕಾಞ್ಚೀಶ್ವರ ಚಣ್ಡದಣ್ಡಂ ಪಲಾಶಿಕಾಯಂ ಸಮವಸ್ಥಿತಸ್ಯ*(ನೊಸಾಅ:೭). ಹೀಗೆ ಅನೇಕ ರಾಜಮನೆತನಗಳ ಸರಿಸಮವಾಗಿ ಆಡಳಿತ ನಡೆಸಿದ ಈ ಪಲ್ಲವರು ಗಂಗರಿಗೂ ಈ ಕಾಂಚಿಯ ಪಲ್ಲವರು ಅವರ ಸಾರ್ವಭೌಮವನ್ನು ಒಪ್ಪಿಕೊಂಡ ಆಡಳಿತಾತ್ಮಕ ಸಂಬಂಧಗಳಿದ್ದವು.

ಈ ಸಂದರ್ಭದಲ್ಲಿ 'ಸಿಂಹವರ್ಮನು ಕಾಂಚಿಯ ಪಲ್ಲವರ ಆಡಳಿತವನ್ನು ನೋಡಿಕೊಳ್ಳುತ್ತಿದ್ದನು'. ಈ ಕುರಿತಂತೆ ಕಾರವಾರದ ಕರಾವಳಿಯ ಪ್ರದೇಶದಲ್ಲಿ ಪಲ್ಲವರ ಒಂದು ಮನೆತನ ರಾಜ್ಯವಾಳುತ್ತಿತ್ತೆಂದು 'ಹಳದಿಪುರದ ತಾಮ್ರಶಾಸನ'ವು ಈ ವಿಷಯದ ಮೇಲೆ ಬೆಳಕು ಚೆಲ್ಲುತ್ತದೆ(ಎಇ:೧೧.,ಎಆರ್:೧೬೧). ಅದರಲ್ಲಿ 'ಸ್ವಸ್ತಿ ವಿಕ್ರಮಾದಿತ್ಯ ಸತ್ಯಾಶ್ರಯ ಶ್ರೀಪ್ರಿಥುವಿವಲ್ಲಭ ಪಲ್ಲವ ರಾಜ ಗೋಪಾಲದೇವಸ್ಯ ಕೇಕಯ ವಂಶೋದ್ಭವೋ ಪ್ರಧಾನ ಪುರುಷ್ಯಾಯ ಅನೇಕ ಗುಣಗಣ ಅಲಂಕೃತ ಪ್ರಸೇವ್ಯ ಲಕ್ಷ್ಮೀನಿವಾಸ ವಕ್ಷಸ್ಥಲಸ್ಯ ಅನೇಕ ರಣ ವಿಪುಲ ಶತ್ರುಜನ ಪ್ರಭಂಜನ ಕರಿ ಕರಾಕರ ಬಾಹುದ್ವಯಸ್ಯಯ ಚಂಮಹಾಸೇನ ಪುತ್ರಸ್ಯ ಪಯ್ವೆಗುಂದು ಪುರೇಶ್ವರಸ್ಯ ಪಲ್ಲವರಾಜೇನ ದತ್ತಃ ಮಂತ್ರಿ ಪುರೋಹಿತ ಶ್ರೀಕರಣಮಂ ಸಾಸಿರ್ವರುಂ ಅಯಿನೂರುರ್ವ್ವರುಂ ಸಹಿತ ತಮ್ಮ ಪ್ರಸಾದ ಪರನ ಅಪ್ಪೊಂಗೆ' ಎಂದು ಪಲ್ಲವರು ಅನೇಕ ಯುದ್ಧದಲ್ಲಿ ಶತ್ರುಗಳನ್ನು ಸೋಲಿಸಿದ ಕೇಕಯವಂಶದಲ್ಲಿ ಜನಿಸಿದ ಚಂಡಮಹಾಸೇನನ ಪುತ್ರ, ಪಯ್ವೆಗುಂದ ಪರಮೇಶ್ವರ, ವಿಕ್ರಮಾದಿತ್ಯ ಸತ್ಯಾಶ್ರಯ ಶ್ರೀ ಪೃಥ್ವಿವಲ್ಲಭ ಪಲ್ಲವರಾಜ ಗೋಪಾಲದೇವನು ಮಂತ್ರಿ, ಪುರೋಹಿತ, ಶ್ರೀಕರಣ, ನಗರ, ಮಹಾಜನ ಸಹಿತವಾಗಿ ಹಾರೀತಗೋತ್ರದ ಸಿಂಗಿತಲೆ ಪಣ್ಯಾರಂಗ ಎಂಬುವವನಿಗೆ ಕಾಸಂಪಳ್ಳಿ ಗ್ರಾಮದ ಅರ್ಧ ಭಾಗವನ್ನು, ಕೆಲವು ಭೂಮಿಗಳನ್ನು ದಾನವಾಗಿ ಕೊಟ್ಟು ಸುಂಕಗಳನ್ನು ಬಿಟ್ಟ ಹಲವು ಸಂಗತಿ ಸೇರಿ, ಈ ಶಾಸನದಲ್ಲಿ ಹಲವು ಮಾಹಿತಿಗಳನ್ನು ನೀಡುತ್ತದೆ.

ಪಲ್ಲವ ಸಿಂಹವಿಷ್ಣುವಿಗೆ ತ್ರಿಲೋಚನ ಅಥವಾ ತ್ರಿನಯನ ಪಲ್ಲವನೆನ್ನುವ ಹೆಸರಿತ್ತು. ನಿಷ್ಠಾವಂತ ಶೈವನಾಗಿದ್ದ ಇವನು ಅನೇಕ ಶಿವನ ದೇವಸ್ಥಾನಗಳನ್ನು ಕಟ್ಟಿಸಿ ದಾನ, ಧರ್ಮಗಳನ್ನು ನೀಡಿದ್ದಾನೆ. ಅಲ್ಲದೇ ಸಿಂಹವಿಷ್ಣು ತನ್ನದೇ ರಾಜವಂಶವನ್ನು ಸ್ಥಾಪಿಸಿ ಕಂಚಿಯಲ್ಲಿ ಪ್ರಭಾವ ಪೂರ್ಣವಾಗಿ ಆಳುತ್ತಿದ್ದನು. ಪಲ್ಲವರು ಕರ್ನಾಟಕ ಮತ್ತು ತೊಂಡೈಮಂಡಲವನ್ನು ಒಳಗೊಂಡಂತೆ ದಕ್ಷಿಣ ಭಾರತದ ಸಾರ್ವಭೌಮರಾಗಿ ಮೆರೆಯುವಂತೆ ಮಾಡಿದನು. ತ್ರಿನಯನ ಅಥವಾ ಸಿಂಹವಿಷ್ಣುವಿನ ಕಾಲದಲ್ಲಿ ಪಲ್ಲವ ವಂಶ ಎರಡು ಶಾಖೆಗಳಾಗಿರುವುದು ಗೋಚರವಾಗುತ್ತದೆ. ಈ 'ತ್ರಿನಯನ ಅಥವಾ ಸಿಂಹವಿಷ್ಣುವಿನ ಸೋದರ ತಮ್ಮನಾದ ಭೀಮವರ್ಮ ತನ್ನದೇ ಆದ ಶಾಖೆಯನ್ನು ಆರಂಭಿಸಿದ್ದು, ಸಿಂಹವಿಷ್ಣುವಿನ ವಂಶಜರು ಪಲ್ಲವರ ಮೂಲಶಾಖೆಯನ್ನು ಮುಂದವರೆಸಿಕೊಂಡು ಅದೇ ಹೆಸರಿನಲ್ಲಿ ಆಳುತ್ತಿದ್ದಾಗ ಭೀಮವರ್ಮನ ಶಾಖೆಯು ಮೂಲಶಾಖೆಗೆ ಅಧೀನರಾಗಿದ್ದರು' ಎಂಬುದಾಗಿ(ನೊಇದ:೧೪) ಪರಶಿವಮೂರ್ತಿ ಅವರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಈ ಪಲ್ಲವರ ಶಾಖೆಗಳನ್ನು ಗಮನಿಸಿದಾಗ ನಮಗೆ ಕರ್ನಾಟಕದಲ್ಲಿ ಬರುವ ಪಲ್ಲವ-ನೊಳಂಬರ ಮೊದಲ ಅರಸು ಈ ತ್ರಿನಯನ ಅಥವಾ ಸಿಂಹವಿಷ್ಣು ಮೂಲಪುರುಷನೆಂಬುದಾಗಿ

ಹೇಮಾವತಿಯ ಶಾಸನದಲ್ಲಿ ಕಂಡುಬರುತ್ತದೆ. ಅಂದರೆ, ಕರ್ನಾಟಕದಲ್ಲಿ ಆಡಳಿತ ನಡೆಸಿದ ಪಲ್ಲವ ನೊಳಂಬರು ಮೂಲ ಶಾಖೆಯವರೆ ಆಗಿರುವ ಸಾಧ್ಯತೆ ಇದೆ. ಇದರಿಂದ ನೊಳಂಬರ ಮೂಲಪುರುಷ ಸಿಂಹವಿಷ್ಣು ಅಥವಾ ತ್ರಿನಯನ ಎಂದಾದಲ್ಲಿ ಕರ್ನಾಟಕದಲ್ಲಿರುವ ನೊಳಂಬರು ಮೂಲತಃ ಪಲ್ಲವರೇ ಎಂಬುದಾಗಿ ಹೇಳಬೇಕಾಗುತ್ತದೆ.

ಮುಂದೆ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಈ ನೊಳಂಬರು ಅನೇಕ ರಾಜವಂಶಗಳೊಂದಿಗೆ ತಮ್ಮ ಸಂಬಂಧಗಳನ್ನು ಹೊಂದುತ್ತಾರೆ. ಅದರಲ್ಲಿ ಮುಮ್ಮಡಿ ಮಹೇಂದ್ರವರ್ಮನ ಮಗ ಒಂದನೆಯ ಪರಮೇಶ್ವರವರ್ಮ ಇವನ ಮಗ ಮೂರನೆಯ ನರಸಿಂಹವರ್ಮನ ನಂತರ ಪಟ್ಟಕ್ಕೆ ಬಂದನು. ಇವನನ್ನು ಒಂದನೆಯ ವಿಕ್ರಮಾದಿತ್ಯನ ಮಗ ವಿನಯಾದಿತ್ಯನು 'ವಿಲಿಂದೆ'ಯಲ್ಲಿ ಸೋಲಿಸಿ, ಕೊಂದನು. 'ಇವನ ಇಬ್ಬರು ಮೊಮ್ಮಕ್ಕಳನ್ನು ಗಂಗರಾಜ ಭೂವಿಕ್ರಮನು ಕೊಂಡೊಯ್ದು ಬೆಳಸಿದನು' (ನೊಇದ:೧೮). ಹೀಗೆ ಭೂವಿಕ್ರಮನಿಂದ ರಕ್ಷಿಸಲ್ಪಟ್ಟ 'ಮೂರನೆಯ ನರಸಿಂಹವರ್ಮನ ಮೊಮ್ಮಕ್ಕಳು ಪಲ್ಲವ ನೊಳಂಬ ಶಾಖೆಯನ್ನು ಕರ್ನಾಟಕದಲ್ಲಿ ಪ್ರಾರಂಭಿಸಿ ಗಂಗರಿಗೆ ಅಧೀನರಾಗಿ ತಮ್ಮ ಪ್ರಾಬಲ್ಯವನ್ನು ಸ್ಥಾಪಿಸಿಕೊಳ್ಳುತ್ತಾರೆ' ಎಂದು ಪರಶಿವಮೂರ್ತಿ ಅವರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ(ನೊಇದ:೧೭).

ನೊಳಂಬರು ಮೂಲದಲ್ಲಿ ಪಲ್ಲವರಾಗಿದ್ದು ಅನೇಕ ವರ್ಷಗಳ ಕಾಲ ಭಾರತದ ದಕ್ಷಿಣದ ತುದಿಯಲ್ಲಿ ತಮ್ಮ ಅಸ್ತಿತ್ವವನ್ನು ಹೊಂದಿ ಅನೇಕ ರಾಜಕೀಯ ಹಾಗೂ ಧಾರ್ಮಿಕ ಚಟುವಟಿಕೆಗಳನ್ನು ಮಾಡಿ ತಮ್ಮೊಳಗೆ ಆಂತರಿಕ ಕಲಹದಿಂದಾಗಿ ಎರಡು ಹೋಳಾಗಿ ಮೂಲದ ಪಲ್ಲವರ ಒಂದು ಭಾಗವಾಗಿದ್ದು, ನಂತರ ಉತ್ತರದ ಕಡೆಗೆ ಬಂದ ಶಾಖೆಯೇ ಕರ್ನಾಟಕದ ಪಲ್ಲವ-ನೊಳಂಬರಾಗಿರುವುದು ಈ ಮೇಲಿನ ಶಾಸನಗಳ ಅಂಶಗಳಿಂದ ಸ್ಪಷ್ಟವಾಗುತ್ತದೆ. ಹೀಗೆ ೨೦೦ರಿಂದ ೩೦೦ ವರ್ಷಗಳ ಕಾಲ ರಾಜ್ಯರಾಜಕಾರಣದಲ್ಲಿದ್ದು, ತಲಕಾಡು ಗಂಗರ ಸಾಮಂತರಾಗಿ ಕಾಲಕ್ರಮೇಣ ರಾಷ್ಟ್ರಕೂಟ, ಕಲ್ಯಾಣದ ಚಾಳುಕ್ಯರ ಸಾಮಂತರಾಗಿ ಆಡಳಿತ ಮಾಡಿದ್ದಾರೆ. ಹಾಗೂ ಗಂಗರು ಸೇರಿದಂತೆ ಬನವಾಸಿ ಕದಂಬ, ಕಲ್ಯಾಣದ ಚಾಳುಕ್ಯರ ವಂಶದೊಂದಿಗೆ ವಿವಾಹ ಸಂಬಂಧಗಳನ್ನು ಸಹ ಬೆಳೆಸಿದ್ದರು. ಜೊತೆಗೆ ರಾಜಕೀಯ ಇತಿಹಾಸದಲ್ಲಿ ಹೇಗೆ ನೊಳಂಬರು ಪ್ರಮುಖ ಪಾತ್ರ ವಹಿಸಿದ್ದಾರೋ ಹಾಗೆಯೇ ಕರ್ನಾಟಕದ ಭವ್ಯ ಸಾಂಸ್ಕೃತಿಕ ಪರಂಪರೆಯನ್ನು ಬೆಳಸಿ ನಾಡಿಗೆ ಹಲವು ಕೊಡುಗೆಗಳನ್ನು ನೀಡಿದ್ದಾರೆ.

೨.೨. ನೊಳಂಬ ಪದದ ವ್ಯುತ್ಪತ್ತಿ

ನೊಳಂಬರ ಸಮುದಾಯದ ಈ ಪದವನ್ನು ಕ್ರಿಸ್ತಶಕ ೧೦ನೆಯ ಶತಮಾನಕ್ಕಿಂತಲೂ ಪೂರ್ವದಿಂದಲೂ ನಾವು ಚರಿತ್ರೆಯ ಆಕರಗಳಾದ ಶಾಸನಗಳು, ಸಾಹಿತ್ಯಕೃಗಳಲ್ಲಿ ಕಾಣುತ್ತೇವೆ.

ಹಾಗೆಯೇ, ನೊಳಂಬ ಎಂಬ ಪದದ ವ್ಯುತ್ಪತ್ತಿ ಕುರಿತು ಶಾಸನಗಳು ಮತ್ತು ಸಮಕಾಲೀನ ಸಾಹಿತ್ಯ ಕೃತಿಗಳು ಹೇಗೆ ವಿವರಿಸುತ್ತವೆ ಎಂಬುದನ್ನು ನೋಡುವುದು ಅಧ್ಯಯನದ ದೃಷ್ಟಿಯಿಂದ ತುಂಬಾ ಮಹತ್ವದ್ದಾಗಿದೆ. ಕರ್ನಾಟಕದಲ್ಲಿ ನೊಳಂಬರು ಪಲ್ಲವ ವಂಶಸಂಜಾತರು **ನೊಳಂಬವಾಡಿ ಮೂವತ್ತೆರಡು ಸಾವಿರ** ಪ್ರಾಂತ್ಯವನ್ನು ಕಟ್ಟಿಕೊಂಡು ನಾಡಿನ ಬಹುಭಾಗ ಸೇರಿದಂತೆ ಸುಮಾರು ೩೦೦ ವರ್ಷಗಳ ಕಾಲ ಅನೇಕ ಪ್ರಮುಖ ರಾಜಮನೆತನಗಳ ಸಾಮಂತರಾಗಿ ಆಳ್ವಿಕೆ ಮಾಡಿದ್ದಾರೆ. ಈ ರೀತಿಯಾಗಿ ಪಲ್ಲವರ ಮೂಲದಿಂದ ಬಂದ ಇವರು ಕರ್ನಾಟಕದಲ್ಲಿ ತಮ್ಮ ಅಸ್ತಿತ್ವವನ್ನು ಪಡೆದುಕೊಂಡಿರುವುದು ಒಂದು ಚಾರಿತ್ರಿಕ ಅಂಶವಾಗಿದೆ. ಹಾಗೆಯೇ ಈ ಹಿನ್ನೆಲೆಯಲ್ಲಿ **ನೊಟಂಬ** ಶಬ್ದವನ್ನು ವಿವೇಚಿಸಿ ಅರ್ಥೈಸಿ ಅರಿಯುವುದು ತುಂಬಾ ಅವಶ್ಯಕತೆ ಇರುತ್ತದೆ.

ನೊಳಂಬ ಪದದ ಕುರಿತು ಕನ್ನಡ ಶಾಸನಗಳಲ್ಲಿ ಹಲವು ವಿಷಯಗಳು ವ್ಯಕ್ತವಾಗುತ್ತವೆ. ಕ್ರಿಸ್ತಶಕ ೮೮೫ರ ಒಂದು ಶಾಸನದಲ್ಲಿ ಬಾಣರಸರುಂ ನೋರೆಮಟ್ಟೆ ಕೋಟ್ಟೆಯಿಟ್ಟಲ್ಲಿ **ನೊಟಂಬ**ದಡಿಗ ರಾಚಮಲ್ಲ(ಎಇ:೨೬:೬), ಕ್ರಿಸ್ತಶಕ ೧೧೬೦ರ ಶಾಸನದಲ್ಲಿ **ನೊಟಂಬರಾಜ**(ಎಕ:೨:೨೦), ಶ್ರೀಪಲ್ಲವ**ನೊಟಂಬ**ರಸರು(ಎಮ್‌ಎಆರ್:೧೯೨೯:೩೬:೩) ಎಂದಿದೆ. ಕ್ರಿಸ್ತಶಕ ೯೧೫ರ ನಂಜನಗೂಡಿನ ಶಾಸನವು **ನೊಟಂಮ್ಮ**ನೊಳ್ ಕಾದಿ(ಎಕ :೩:೧೩೯), ಕ್ರಿಸ್ತಶಕ ೧೧೬೦ರ ಶಾಸನದಲ್ಲಿ **ನೊಟಂಬ** ಕುಲಾಂತಕ(ಎಕ:೨:೧೩)ಎಂದಿದೆ. ನನ್ನ ಅಧ್ಯಯನಕ್ಕೆ ಬಹಳ ಮಹತ್ವದ್ದಾಗಿರುವ **ನೊಣಂಬ** ಎಂಬ ಪದವನ್ನು ಚಾವುಂಡರಾಯನ ಪುರಾಣದಲ್ಲಿ 'ಜಗದೇಕವೀರನುಂ ಧರ್ಮಾವತಾರನುಮೆನಿಸಿದ ನೊಣಂಬ ಕುಲ'(ಎಕ :೫:೨೦೮) ಎಂಬುದಾಗಿ ಉಲ್ಲೇಖವಾಗುತ್ತದೆ. ಕ್ರಿಸ್ತಶಕ ೯೪೮ರ ಸಿರಾದ ಒಂದು ಶಾಸನವು ಕೂಡ '**ನೊಣಂಬ**ನಾಳಿಂಮುನ್ನಿಜೆವ'(ಎಕ :೧೨:೩೭), ಕಂಠೀರವ ನರಸರಾಜ ವಿಜಯ ಪುರಾಣದಲ್ಲಿ '**ನೊಣ**ಬನ ಕೆರೆಯೊತ್ತಿನಲಿ ಬೀಡನಿಳಿದರು'(ಎಕ :೧೬:೨೮), ಬಸವಪುರಾಣದಲ್ಲಿ 'ಬಾಣ ಸದಾಶಿವದೇವನುಂ ಕಪಿಲೇಖ ವಿಶ್ವಯದೇವನುಂ **ನೊಣಬೇಸ** ಚಿಕ್ಕಯ್ಯನುಂ(ಎಕ :೧೨:೫೮:೧೧) ಎಂದು ಉಲ್ಲೇಖಗೊಂಡಿದೆ. ಅಲ್ಲದೇ ಕ್ರಿಸ್ತಶಕ ೧೦೮೧ ಚಿಕಿತ ವದ್ವಿಷ್ಟನೆಂಬೀ ವೀರನೊಳಂಬಂ(ಎಂಎಆರ್ :೧೯೨೯:೬೫:೩೫) ಮತ್ತು ಕ್ರಿಸ್ತಶಕ ೧೧೮೦ರ ಶಿವಮೊಗ್ಗದ ಒಂದು ಶಾಸನದಲ್ಲಿ 'ಗಂಗವಾಡಿ ನೊಳಂಬವಾಡಿ'(ಎಕ :೭:೪೦:೫೩) ಎಂದು ಉಲ್ಲೇಖಿಸುತ್ತವೆ. ಅಂದರೆ ಇಲ್ಲಿ **ನೊಣಬ** ಎಂಬ ಪದವು ಇಂದು ನಿನ್ನೆಯದಾಗಿರದೆ ಗಂಗರ ಕಾಲದಲ್ಲಿಯೇ ಈ ಶಬ್ದವು ಬಳಕೆಗೆ ಬಂದಿದೆ. ಅಂದರೆ, ಕರ್ನಾಟಕದ ಶಿಲಾಶಾಸನಗಳು, ಪುರಾಣಗಳು ನೊಟಂಬರಾಜ, ನೊಟಂಬಾಧಿರಾಜ, ನೊಟಂಬಕುಲಾಂತಕ, ನೊಟಂಬಾಂತಕ, ನೊಟಂಬವಾಡಿ, ನೊಟಂಬಕುಲ, ನೊಳಂಬವಾಡಿ, ನೊಣಂಬ, ನೊಣಂಬವಾಡಿ, ನುಳಂಬ

ಮತ್ತು ನೊಣಬ ಎಂದು ಹೇರಳವಾಗಿ ಸಿಗುತ್ತವೆ. ಅಲ್ಲದೇ ನೊೞಂಬರಾಜರೇ ಬರೆಸಿದ ಶಾಸನಗಳು ನೊಣಬ ಅಥವಾ ನೊಣಂಬ ಎಂಬ ಪದವನ್ನು ಹೇಳುತ್ತದೆ. ಈ ರೀತಿಯ ಬದಲಾವಣೆಯನ್ನು ನಾವು ಪ್ರಾಚೀನ ಕಾಲದಿಂದಲ್ಲೇ ಕಾಣಲು ಸಾಧ್ಯವಿದೆ. ಅದು ಗಂಗರ ಕಾಲದಲ್ಲಿ ಎಂಬುದು ವಿಶೇಷ. ಗಂಗರ ಮಂತ್ರಿ ಚಾವುಂಡರಾಯನನ್ನು ಪುರಾಣವು ಈ ಶಬ್ದವನ್ನು 'ನೊಣಂಬ ಕುಲ' ಎಂಬುದಾಗಿ ಉಲ್ಲೇಖಿಸಿದ್ದಾನೆ.

ಇಲ್ಲಿ 'ೞ' ಕಾರಕ್ಕೆ 'ಳ' ಕಾರ ಬಂದು ಮುಂದೆ 'ಣ'ಕಾರವಾಗಿ ಬಂದಿರುವುದನ್ನು ಕಾಣಬಹುದು. ಈ ಬದಲಾದ ಪ್ರಕ್ರಿಯೆಯು ಹೆಚ್ಚು ಕಾಲ ಸಮಯವನ್ನು ತಗೆದುಕೊಳ್ಳದೇ ನಡೆದ ವರ್ಣವ್ಯತ್ಯಾಸವಿದಾಗಿದೆ. ಹಳಗನ್ನಡದ'ೞ'(ಱಳ) ಕಾಲಕ್ರಮೇಣ ತನ್ನ ಅಸ್ತಿತ್ವದ ಬದಲಾವಣೆಯನ್ನು 'ಳ'(ಕುಳ) ಮತ್ತು 'ಣ'ದಲ್ಲಿ ಕಂಡುಕೊಂಡಿದೆ ಎಂದು ಹೇಳಬಹುದು. ಒಂದೇ ರಾಜಮನೆತನದ ಶಾಸನಗಳಲ್ಲಿ ಇಂತಹ ಪ್ರಕ್ರಿಯೆಯನ್ನು ಕಾಣುವ ಸಾಧ್ಯತೆಯಿದೆ(ನೊಇದ:೩).

ಈ ಕುರಿತಂತೆ ಆೞಂಬೆ>ಆಳಂಬೆ>ಅಣಬೆ, ಗಿೞೆ>ಗಿಳಿ>ಗಿಣಿ, ಗೆೞಸು>ಗೆಳಸು>ಗೆಣಸು, ಮೆೞಸು>ಮೆಳಸು>ಮೆಣಸು, ಚೇೞ್>ಚೇಳು>ಚೇಣು ಹೀಗೆ ಅನೇಕ ಶಬ್ದಗಳು ತಮ್ಮ 'ೞ'ಧ್ವನಿಯನ್ನು ಬದಲಾಯಿಸಿಕೊಂಡು ಆಡುಭಾಷೆಯ ಮೂಲಕದ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ. ಈ ಅಕ್ಷರವನ್ನು ಕುರಿತು ರಗಳೆ ಕವಿ ಎಂದೇ ಪ್ರಸಿದ್ಧಿ ಪಡೆದ ಹರಿಹರನು

"ನೋಡುವುಡೊಂಕ್ಕರಮದು

ಮಾಡುವೊಡುಚ್ಚರಣೆಗರಿದು ಮೂಱುತೆಱನಂ।

ಕೂಡೆ ಕವಿ ತತಿ ವಿಚಾರಿಸಬೇಡದಱಿಂ

ರಳಕುಳಕ್ಷಳಂಗಳನಿದಱನೊಳ್॥ (ಗಿರಿಜಾಕಲ್ಯಾಣ ೧:೩೨)

ಎಂದು ಎಚ್ಚರಿಸಿ 'ೞ'ಕಾರದ ಭವಿಷ್ಯವನ್ನು ಕುರಿತು ನುಡಿದಿದ್ದಾನೆ. ಈ ನಿಯಮವನ್ನು ಬಳಸಿ ನೊೞಂಬ>ನೊಳಂಬ>ನೊಣಂಬ>ನೊಣಬ ಆಗಿರುವ ಸಾಧ್ಯತೆಯ ಮೇಲೆ ರೂಪ ಬಿಂದುವನ್ನು ಕಳೆದುಕೊಂಡಿದೆ ಎಂಬುದು ಕಂಡುಬರುತ್ತದೆ(ನೊಇದ:೪).

ಈ ನೊಳಂಬ ಅಥವಾ ನೊಣಬ ಶಬ್ದದ ಕುರಿತು ಅನೇಕ ವಿದ್ವಾಂಸರು ತಮ್ಮದೇ ಆದ ಸಂಶೋಧನ ಆಧಾರಗಳನ್ನು ಅರ್ಥೈಸುವ ರೂಪಗಳನ್ನು ನೋಡಬಹುದಾಗಿದೆ. ಅದರಂತೆ, ಬೇಂದ್ರೆ ದ.ರಾ. ಅವರು ನೊ(ಳ)ಣಬರು ಚಾಲುಕ್ಯರ ಪೂರ್ವ ರಾಜ್ಯ ಮನೆತನದವರು. ಇವರು ಪಲ್ಲವರಿಗೆ ಹೆಚ್ಚು ಅನುಕೂಲರಾಗಿದ್ದರು ಎಂದು ತೋರುತ್ತದೆ. ಗಂಗರಿಗೂ ಗಂಗಡಿಕಾರರಿಗೂ ಸಂಬಂಧವಿರುವಂತೆಯೇ,

ನೊಣಬರಿಗೂ ನೊಳಂಬರಿಗೂ ಸಂಬಂಧ ಇರಲು ಸಾಧ್ಯತೆಯಿದೆ. ಕುರುಬ>ಕುರುಂಬ ಎಂಬ ರೂಪಗಳೂ ಉಂಟು ಸಧ್ಯದ ನೊಣಬರ ಜಾತಿ ಇತಿಹಾಸ ಪರಿಶೀಲನೆ ಮಾಡಿದರೆ ಮಾತುಗಳ ಅರ್ಥ ನಮಗಾದೀತು ಎಂದು ಹೇಳುತ್ತಾರೆ.

"ಸಾಮಾನ್ಯವಾಗಿ ತಿಳಿವಳಿಕೆಯಿಂದ ಹೇಳುವಲ್ಲಿ ಅಣಬೆ>ಅಳಬೆ>ಅಳಂಬೆ ಆಗಿರುವ ಹಾಗೆ ಮಡುಬಿ>ಮಣುಬಿ ಆಗಿದೆ. ಳ>ಣ ವಾಗಿರುವ ಉದಾಹರಣೆಗಳು ಇವೆ. ಹೀಗೆ ಕುಳಿ>ಕುಣಿ, ಅಳಿಲು>ಅಣಿಲು ಆದ್ದರಿಂದ ನೊಳಂಬ>ನೊಣಬ ಆಗಬಾರದೆಂದಿಲ್ಲ ಅನಿಸುತ್ತದೆ ಎಂದು ಶಿವರಾಮಕಾರಂತ ಕೆ. ಅವರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಮುಂದುವರೆದು ಕನ್ನಡ ಹೆಸರಾಂತ ಸಂಶೋಧಕರಾದ ಚಿದಾನಂತಮೂರ್ತಿ ಎಂ. ಅವರು "ನೊಱಂಬ ಎಂಬುದೇ ನೊಣಬ ಎಂದಾಗಿದೆ. ಅದರ ಕ್ರಮ ಹೀಗೆ...

ಮೊದಲು ನೊಱಂಬ>ನೊಳಂಬ, ಮೞೆ>ಮಳೆ ಆದ ಹಾಗೆ

ನೊಳಂಬ>ನೊಳಬ, ಪಡಂಗು>ಪಡಗು>ಹಡಗು ಆದ ಹಾಗೆ

ಕನ್ನಡದಲ್ಲಿ 'ಳ' ಮತ್ತು 'ಣ'ಗಳ ಪರಿವರ್ತನೆ(Interchange) ಬಹಳ ಸಾಮಾನ್ಯ ನೊಱ>ನೊಳ(ನೊಣ) ಹಾಗೆಯೇ ಕೊಳ>ಕೊಣ, ಸೆಳೆ>ನೆಣೆ, ಗಳೆ>ಗಣೆ ಆಗಿರುವುದು. ಆದ್ದರಿಂದ ನೊಳಂಬ>ನೊಣಬ ಎಂದಾಗುತ್ತದೆ"(ನೊಇದ:೭) ಎಂಬುದಾಗಿ ಅಭಿಪ್ರಾಯ ಪಡುತ್ತಾರೆ.

ಮುಂದುವರೆದು ಈ 'ನೊಳ್' ಎಂಬ ಶಬ್ದಕ್ಕೆ ಹಲವು ವಿದ್ವಾಂಸರು ಸೂಚಿಸಿರುವಂತ ಅರ್ಥವು ನುಗ್ಗಿ ಹೋಗು, ದಾರಿ ಮಾಡಿಕೊಂಡು ಹೋಗು, ಮುನ್ನುಗ್ಗು ಎಂಬಂತಹ ಅರ್ಥವನ್ನು ಹೇಳುತ್ತಾರೆ. ನೊಳಂಬರ ಆರಂಭದ ಆಡಳಿತ ಭಾಗವನ್ನು 'ನೊಳಂಬಳಿಗೆ' ಎಂದು ಕರೆಯಲಾಗಿದೆ. ಕರ್ನಾಟಕವನ್ನು ಆಕ್ರಮಣ ಮಾಡಬೇಕಿದ್ದಲ್ಲಿ ನೊಳಂಬವಾಡಿ ಮೂಲಕ ಹೋಗಬೇಕಿತ್ತು. ಹೀಗಾಗಿ ನೊಳಂಬ ಎಂದರೆ ಗಡಿ ಪ್ರದೇಶದಲ್ಲಿ/ನಾಡಿನಲ್ಲಿ ಮುನ್ನುಗ್ಗುವ ವ್ಯಕ್ತಿ ಎಂದು ಕೃಷ್ಣಮೂರ್ತಿ ಅವರು ಅರ್ಥೈಸಿದ್ದಾರೆ. ಹೀಗಾಗಿ 'ನೋಳ್' ಎಂದರೆ 'ನುಗ್ಗು' ಎಂಬ ಅರ್ಥದ ಶಬ್ದದಿಂದ ನೊಳಂಬ ಬಂದಿರಬಹುದು. ತಮಿಳಿನ ಶಬ್ದವಾದ 'ನುಟೈ' ಎಂಬುದಕ್ಕೆ ಮೇಲಿನ ಅರ್ಥವೇ (ಮುನ್ನುಗ್ಗು, ನುಗ್ಗಿಹೋಗು) ಇದ್ದು ಅದು ಕನ್ನಡ ಶಬ್ದದ ಅರ್ಥಕ್ಕೆ ಸಮೀಪವಾಗಿದೆ(ನೊಳಂಬರ ಶಾಸನಗಳ ಸಾಂಸ್ಕೃತಿಕ ಅಧ್ಯಯನ: ಜಯಮ್ಮ ಕರಿಯಣ್ಣ: ೧೨). ಹೀಗಾಗಿ 'ನೊಳ್' ಅಥವಾ 'ನುಟ್ಟೈ' ಎಂಬದುಕ್ಕೆ ಮುನ್ನುಗ್ಗು ಎಂಬ ಅರ್ಥವನ್ನು ಹೊಂದಿಕೆ ಆಗುತ್ತದೆ.

ನೊಳಂಬರು ಮೂಲದಲ್ಲಿ ತಮಿಳುನಾಡಿನ ಪಲ್ಲವರಿಂದ ರಾಜತಾಂತ್ರಿಕವಾಗಿ ಬೇರ್ಪಟ್ಟ ತರುವಾಯ ಉತ್ತರದ ಕಡೆಗೆ ಅಂದರೆ, ಕರ್ನಾಟಕದ ಪ್ರದೇಶಗಳತ್ತ ಮುನ್ನುಗ್ಗಿ ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸಿರುವುದು ಕಂಡುಬರುತ್ತದೆ. ಈ ಮೇಲಿನ ಅಂಶಗಳನ್ನು ಅಧ್ಯಯನದ ಮೂಲವಾಗಿ ಗಮನಿಸಿದ ತರುವಾಯ ನೊಳಂಬರೇ ಇಂದಿನ ನೊಣಬರಾಗಿರುವ ಎಲ್ಲ ಸಾಧ್ಯತೆಗಳು ಸ್ಪಷ್ಟವಾಗಿ ಗೋಚರವಾಗುತ್ತವೆ. ನೊಳಂಬ ಎಂಬ ಪದದ ವ್ಯುತ್ಪತ್ತಿಯು ಮತ್ತು ಅದರ ಅರ್ಥ ವ್ಯಾಪ್ತಿಯು ಇದನ್ನೇ ಪುನರುಚ್ಚರಿಸುತ್ತದೆ.

ಹೀಗೆ 'ನೊಳಂಬ' ಎಂಬ ಪದವು ಅನೇಕ ರೂಪಾಂತರಗಳಿಗೆ ಒಳಗಾಗಿ ಇಂದು ನಮ್ಮ ಮುಂದೆ ನೊಣಬ ಎಂಬುದಾಗಿ ಚಲಾವಣೆಯಲ್ಲಿದೆ ಎಂಬುದಾಗಿ ಕಂಡುಬರುತ್ತದೆ. ಈ ನೊಳಂಬ ಅಥವಾ ನೊಣಬ ಎಂಬ ಪದವನ್ನು ಕೃಷ್ಣಮೂರ್ತಿ ಎಂ ಎಸ್ ಅವರು ಎರಡು ರೀತಿಯಲ್ಲಿ ಇದರ ಉಗಮವನ್ನು ಅರ್ಥೈಸುವಂತ ಪ್ರಯತ್ನವನ್ನು ಮಾಡಿದ್ದಾರೆ. ಒಂದು ಪೌರಾಣಿಕವಾದ ಹಿನ್ನೆಲೆಯಲ್ಲಿ ಹಾಗೂ ಇನ್ನೊಂದು ಸಾಹಿತ್ಯಿಕವಾದ ಹಿನ್ನೆಲೆಯಲ್ಲಿ ನೀಡಿದ್ದಾರೆ.

ಪ್ರಸ್ತುತ ನೊಳಂಬ ಸಮುದಾಯದಲ್ಲಿ ನೊಣಬ ಮತ್ತು ನೊಳಂಬ ಎಂಬ ಎರಡು ಶಬ್ಧಗಳ ಬಳಕೆ ಇದೆ. ಭಾಷಿಕವಾಗಿ ನೋಡುವ ಸಂದರ್ಭದಲ್ಲಿ 'ನೊಣಬ' ಎಂಬ ಶಬ್ಧವು ನೊಳಂಬ ಎಂದಾಗಿರುವ ಸಾಧ್ಯತೆ ಇದೆ. ಭಾಷಾ ತಜ್ಞರ ಪ್ರಕಾರ 'ಣ'ಕಾರ ಮೊದಲು ಉತ್ಪತ್ತಿ ಅನಂತರ 'ಳ'ಕಾರ ಆಗಿದೆ ಎಂದು ಅಭಿಪ್ರಾಯ ಪಡುತ್ತಾರೆ. ಇದಕ್ಕೆ ಪೂರಕವಾಗಿ ನೊಳಂಬರ ಶಾಸನಗಳಲ್ಲಿ ಹೇರಳವಾಗಿ ಸಿಗುವ ನೊಣಬ, ನೊಣಂಬ, ನೊಳಂಬ ಎಂಬ ಪದಗಳನ್ನು ಕಾಣಬಹುದು. 'ನೊಣ' ಎಂದರೆ, ಸಾಮಾನ್ಯವಾಗಿ ಇದು ಜೇನು ನೊಣವಾಗಿದೆ. 'ಬ' ಎಂಬುದು ಒಂದು ವರ್ಗವನ್ನು ಸೂಚಿಸುತ್ತದೆ. ಉದಾಹರಣೆಗೆ, ನೊಣಬ, ಕರುಬ, ಕುರುಂಬ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನದಲ್ಲಿ ನೊಳಂಬ ಮತ್ತು ನೊಣಬ ಎಂಬ ಎರಡು ಪದಗಳನ್ನು ಬಳಸಿಕೊಳ್ಳಾಗಿದೆ.

೨.೩. ಪೌರಾಣಿಕ ಹಿನ್ನೆಲೆ

ಸಾಹಿತ್ಯಿಕವಾದ ವಂಶಗಳನ್ನು ಇದೇ ಅಧ್ಯಾಯದ ಹಿಂದಿನ ಭಾಗದಲ್ಲಿ ಚರ್ಚಿಸಲಾಗಿದೆ. ಇಲ್ಲಿ ಕೇವಲ ಪೌರಾಣಿಕವಾದ ಕೆಲವು ಅಂಶಗಳ ಮೂಲಕ ನೋಡುವ ಪ್ರಯತ್ನವನ್ನು ಮಾಡಲಾಗಿದೆ. ಈ ಪೌರಾಣಿಕ ಹಿನ್ನೆಲೆಯನ್ನು ನಾವು ಕೆಲವು ಶಾಸನಗಳಲ್ಲಿ ಉಕ್ತವಾದ ಮಾಹಿತಿಯ ಮೂಲಕವೇ ಪಡೆದುಕೊಳ್ಳಬೇಕಾಗುತ್ತದೆ. ಆದರೆ ತಮ್ಮನ್ನು ತಾವು ಅಸುರ

ವಂಶಸ್ಥರೆಂದು ಹೇಳಿಕೊಳ್ಳುವ ಈ ನೊಳಂಬರ ಶಾಸನಗಳಲ್ಲಿನ ಮಾಹಿತಿ ಆಶ್ಚರ್ಯವನ್ನುಂಟುಮಾಡುತ್ತವೆ. ಕ್ರಿಸ್ತಶಕ ೧೧೧೫ರ ಶಿಲಹರ ಗಂಡರಾದಿತ್ಯಾರ್ ಅವರ ಕೊಲ್ಲಾಪುರದ ತಾಮ್ರಪತ್ರಗಳಲ್ಲಿ ನೊಳಂಬರ ವಂಶಾವಳಿಯ ಮೂಲಪುರುಷ 'ನಿಗುಂಬ'ನೆಂದು ಹೇಳಲಾಗಿದೆ. ನಿಗುಂಬ ಎಂಬುದು ನಿಕುಂಬನಾಗಿರುವುದಿದೆ. ಅಂದರೆ ನಿಕುಂಬ ಅಥವಾ ನಿಗುಂಬ ಎಂಬವನು ಕುಂಭಕರ್ಣನ ಮಗನೆಂದು ಭಾವಿಸಲಾಗಿದೆ(ನೊಳಂಬರು ಒಂದು ಸಮಾಜಶಾಸ್ತ್ರಿ ಅಧ್ಯಯನ:೮೬). ಈ ಕಾರಣಕ್ಕಾಗಿ ನೊಳಂಬರು ಅಸುರ ವಂಶಸ್ಥರೆಂದು ಅರಿಯುಬೇಕಾಗುತ್ತದೆ. ಈ ರೀತಿಯಾಗಿ ತಮ್ಮನ್ನು ಅಸುರ ವಂಶಸ್ಥರೆಂದು ಗುರುತಿಸಿಕೊಂಡಿರುವುದು ಕುತೂಹಲಕರವಾಗಿದೆ. ಆದರೆ, ಕೆಲವು ಅರಸು ಮನೆತನಗಳು ತಮ್ಮನ್ನು ಉಚ್ಚಕುಲದಲ್ಲಿರಿಸಿಕೊಂಡು ತಮ್ಮ ವಂಶಾವಳಿಯನ್ನು ರೂಪಿಸಿಕೊಳ್ಳುವುದುಂಟು. ಉದಾಹರಣೆಗೆ ಕದಂಬರ ಮೂಲವನ್ನು ಪುರೋಹಿತಶಾಹಿಯಿಂದ ಹಾಗೂ ಕದಂಬ ವೃಕ್ಷದಿಂದ ರೂಪಗೊಂಡ ವಂಶವೆಂದೆಲ್ಲ ಗುರುತಿಸಿಕೊಂಡಿದ್ದಾರೆ. ಕದಂಬರಷ್ಟೇ ಅಲ್ಲದೇ ಅನೇಕ ರಾಜ ಮನೆತನಗಳು ತಮ್ಮನ್ನು ಉಚ್ಚಕುಲದಲ್ಲಿ ಅಥವಾ ರೋಚಕವಾಗಿ ಗುರುತಿಸಿಕೊಂಡಿದ್ದಾರೆ. ಆದರೆ ಈ ನೊಳಂಬರು ಯಾಕೆ ತಮ್ಮನ್ನು ಈ ರೀತಿ ಗುರುತಿಸಿಕೊಂಡಿರುವುದು ಎಂಬುದು ಚೋದ್ಯವಾಗಿ ಕಂಡುಬರುತ್ತದೆ.

ಆದರೆ, ಮುಂಬರುವ ಈ ನೊಳಂಬರ ಶಾಸನಗಳನ್ನು ಗಮನಿಸಿದಾಗ ಅವರು ತಮ್ಮನ್ನು ಹಾಗೂ ತಮ್ಮ ಮೂಲವನ್ನು ರಕ್ಕಸ ನೊಳಂಬ ಪಲ್ಲವಾಭರಣ ಎಂಬುದಾಗಿ ಗುರುತಿಸಿಕೊಳ್ಳುವಂತ ಪ್ರಯತ್ನವನ್ನು ಮಾಡಿದ್ದಾರೆ. ೧೮ನೆಯ ಶತಮಾನದಲ್ಲಿ ಮಿಡಿಗೇಶಿಯ ನಾಡಪ್ರಭುಗಳ ಕೈಬರಹದ ವಿವರಣೆಯಲ್ಲಿ 'ನೊಳಂಬಾಸುರನೆನ್ನುವ ಶೈವಗುರುವನ್ನು ಏಳುಜನ ಸಹೋದರರು ವಧೆ ಮಾಡಿದರೆಂಬ ಅಭಿಪ್ರಾಯವನ್ನು ಕಾಣಬಹುದು'. ಮುಂದುವರೆದು ಈ ಸಂಗತಿಗೆ ಪೂರಕವಾಗಿ ಪಲ್ಲವರಾಜ ಅಪರಾಜಿತವರ್ಮನ ಶಾಸನದಲ್ಲಿ ಕುಂಬಿಕರ್ಣೇಶ್ವರ ದೇವಸ್ಥಾನದ ಕುರುಹು ಇದೆ. ಕೊಲ್ಲಾಪುರದ ತಾಮ್ರಪತ್ರಗಳಲ್ಲಿನ ಆಧಾರದಂತೆ ನೊಳಂಬರ ಮೂಲ ಪುರುಷ ಕುಂಭಕರ್ಣನ ಮಗ ನಿಕುಂಬರಾಕ್ಷಸ. ಇದರ ನಂತರ ಕೈಬರಹದ ಆಧಾರದಿಂದ ನೊಣಬಾಸುರ ನೊಣಬರ ಮೂಲ ಪುರುಷನೆಂದೂ ಗುರುತಿಸಿದ್ದಾರೆ. ಅಂದರೆ ರಾಕ್ಷಸರು ಶೈವ ಪಂಥದವರೆಂತಲೂ ಆರ್ಯರ ಪುರಾಣಗಳು ಹೇಳುವುದನ್ನೇ, ದಕ್ಷಿಣ ಭಾರತದ ದ್ರಾವಿಡ ಮೂಲದ ಅರಸು ಮನೆತನಗಳು ತಮ್ಮ ಮೂಲವೆನ್ನುವುದನ್ನು ಸ್ವೀಕರಿಸಿದಂತೆ ತೋರುತ್ತದೆ.

ದಕ್ಷಿಣಮೂಲದ ಎಲ್ಲ ಅರಸರ ವಂಶಾವಳಿಗಳು ಬಹುಶಃ ಈ ಹಿನ್ನೆಲೆಯಿಂದಲೇ ಗುರುತಿಸಿ, ಮತ್ತು ಅದನ್ನೇ ಪ್ರಚಾರ ಮಾಡಿಕೊಂಡು ಬಂದಿರುವ ಸಾಧ್ಯತೆಯಿದೆ.

ಹಾಗಾಗಿ ನೊಳಂಬರ ಮೂಲವನ್ನೇನು ಬದಲಿಸಿ ನೋಡುವ ಹಾಗೂ ಆ ಲಕ್ಷಣವನ್ನೇನು ನಾವು ಕಾಣುವ ಅವಶ್ಯಕತೆ ಇಲ್ಲ ಎಂದು ತೋರುತ್ತದೆ. ಅಂದರೆ ರಾಕ್ಷಸರು ಸಾಮಾನ್ಯವಾಗಿ ಶೈವ ಮೂಲದವರು. ಇಂದ್ರ ಅಥವಾ ವಿಷ್ಣು ಮೂಲದವರು ದೇವತೆಗಳೆಂಬಂತೆ ಚಿತ್ರಿಸಿರುವದರ ಹಿನ್ನೆಲೆ ಬಲಾಢ್ಯರಾಗಿದ್ದ ಶೈವ ಅಥವಾ ದ್ರಾವಿಡರನ್ನು ಮಾನಸಿಕವಾಗಿ ಕುಗ್ಗಿಸಿ ಅವರನ್ನು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳುವ ಪ್ರಕ್ರಿಯೆಯ ಭಾಗವಾಗಿ ಇದು ಕಂಡುಬರುತ್ತದೆ. ಈ ಎಲ್ಲ ಕಾರಣಗಳಿಂದಾಗಿ ವೈದಿಕರ ಅಭಿಪ್ರಾಯ ನಮಗೆ ಸರಿ ಅನ್ನಿಸದಿದ್ದರೂ ಈ ನೊಳಂಬರ ಮೂಲ ಪುರುಷನನ್ನು ರಾಕ್ಷಸ ವಂಶದಿಂದ ಉಗಮಗೊಂಡ ಪೌರಾಣಿಕ ನೊಳಂಬ ರಾಕ್ಷಸನೆಂದು ಕರೆದಿದ್ದಾರೆ. ಇಲ್ಲಿ ರಾಕ್ಷಸ ಅನ್ನುವ ಪದವು 'ರಕ್ಷಕ' ಎನ್ನುವುದಾಗಿದೆ. ಅಂದರೆ, ತಮ್ಮ ವ್ಯವಸ್ಥೆಯೊಳಗಿನ ಎಲ್ಲ ಜನಸಮುದಾಯ, ಪ್ರಾಣಿಸಂಕುಲ ಸೇರಿದಂತೆ ಒಟ್ಟಾರೆ ನಾಡನ್ನು ವೈರಿಗಳಿಂದ ಅಥವಾ ವೈದಿಕರ ದಾಳಿ, ಪ್ರಭಾವಗಳಿಂದ ರಕ್ಷಿಸುವಂತವರಿಗೆ ಅವರು ರಾಕ್ಷಸ ಎಂದು ಚರಿತ್ರೆಯಲ್ಲಿ ವೈದಿಕ ಮನಸ್ಸಿನ ಚರಿತ್ರೆಕಾರರು ದಾಖಲಿಸಿದ್ದಾರೆ.

೨.೪. ಕರ್ನಾಟಕದಲ್ಲಿ ನೊಳಂಬರ ಬೆಳವಣಿಗೆ

ಕರ್ನಾಟದಲ್ಲಿ ನೊಳಂಬರ ಉಗಮವನ್ನು ಮೂಲ ಪಲ್ಲವ ನೊಳಂಬರ ಮುಂದುವರಿಕೆಯಾಗಿಯೇ ಕಂಡುಬರುತ್ತಾರೆ. ಅಂದರೆ ಕ್ರಿಸ್ತಶಕ ೮ನೆಯ ಶತಮಾನದಿಂದಲೇ ಇವರ ಅಸ್ತಿತ್ವವನ್ನು ಕರ್ನಾಟಕದಲ್ಲಿ ನಾವು ಕಾಣಬಹುದಾಗಿದೆ(ಕರ್ನಾಟಕದಲ್ಲಿ ನೊಳಂಬರ ಚಾರಿತ್ರಿಕ ಆಡಳಿತ ವಿಭಾಗಗಳಿಗೆ ಸಂಬಂಧಿಸಿದಂತೆ ಚನ್ನಬಸವಯ್ಯ ಹಿರೇಮಠ ಅವರ *ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು* ಎಂಬ ಕೃತಿಯು ನನ್ನ ಸಂಶೋಧನೆಗೆ ಅಗತ್ಯವಿದ್ದುದರಿಂದ, ಅವರ ಕೃತಿಯನ್ನು ಸೌಜನ್ಯದಿಂದ ಅಧ್ಯಯನಕ್ಕೆ ಬಳಸಿಕೊಂಡಿದ್ದೇನೆ). ಕ್ರಿಸ್ತಶಕ ೮ರಿಂದ ೧೧ನೆಯ ಶತಮಾನದವರೆಗೆ ಇವರ ಆಳ್ವಿಕೆಯನ್ನು ಕನ್ನಡನಾಡಿನಲ್ಲಿ ಗುರುತಿಸಿದರೂ, ಅವರು ನಂತರದ ಕಾಲಘಟ್ಟದಲ್ಲಿ ನಾಡಗೌಡರಾಗಿ ಆಳ್ವಿಕೆಯನ್ನು ಮಾಡಿರುವುದು ತಿಳಿದುಬರುತ್ತದೆ. ಕರ್ನಾಟಕದಲ್ಲಿಯೂ ಕೂಡ ನೊಳಂಬ ಪಲ್ಲವರೆಂದೇ ಗುರುತಿಸಿಕೊಂಡು, ದಕ್ಷಿಣದ ಪಲ್ಲವರ ಸಾಮಂತರಾಗಿ ತಮ್ಮ ಆಡಳಿತವನ್ನು ವಿಸ್ತರಿಸಿಕೊಂಡಂತೆ ಕಾಣುತ್ತದೆ. ನಾಡಿನಲ್ಲಿ ನೊಳಂಬರು ಗಂಗರ ಸಾಮಂತರಾಗಿ ಈಗಿನ ಆಂಧ್ರಪ್ರದೇಶದ ಮಡಕಶಿರಾ ತಾಲ್ಲೂಕಿನಲ್ಲಿರುವ ಹೆಂಜೇರು ಅಥವಾ ಹೇಮಾವತಿ ಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಆರಂಭಿಸಿದರು.

ಕ್ರಿಸ್ತಶಕ ೧೦-೧೧ನೆಯ ಶತಮಾನದ ಹೊತ್ತಿಗೆ ತಮ್ಮ ರಾಜಧಾನಿಯನ್ನು ಅಥವಾ ತಮ್ಮ ಆಡಳಿತ ಕೇಂದ್ರವನ್ನು ತುಂಗಭದ್ರಾ ತೀರದಲ್ಲಿರುವ ಕಂಪಲಿಗೆ ಬದಲಾಯಿಸಿಕೊಂಡಂತೆ

ಕಂಡುಬರುತ್ತದೆ. ಮೂಲದಲ್ಲಿ ತಮ್ಮ ಅಸ್ತಿತ್ವವನ್ನು ಇವರು ಸಾಸಿರವೆಂಬ ಸಣ್ಣ ಪ್ರಾಂತ್ಯದ ಮೇಲೆ ಹೊಂದಿರುವಂತಿದೆ. ಅದು ಚಿತ್ರದುರ್ಗ ಜಿಲ್ಲೆ ಮತ್ತು ಇದರ ಸುತ್ತಮುತ್ತಲ ಪ್ರದೇಶಗಳನ್ನೊಳಗೊಂಡಿತ್ತು. ಕಾಲಕ್ರಮೇಣ ಇವರ ಪ್ರಾಬಲ್ಯ ವರ್ಧಿಸಿ ಕ್ರಿಸ್ತಶಕ ೯-೧೦ನೆಯ ಶತಮಾನದ ಸಂದರ್ಭದಲ್ಲಿ ನೊಳಂಬವಾಡಿ-೩೨೦೦೦ ಎಂಬ ಬಹುವಿಸ್ತೃತಗೊಂಡ ಪ್ರಾಂತ್ಯವಾಗಿ ರೂಪಗೊಂಡಿತು. ಈಗಿನ ಚಿತ್ರದುರ್ಗ, ಕೋಲಾರ, ಬೆಂಗಳೂರು ಹಾಗೂ ತುಮಕೂರು ಜಿಲ್ಲೆಗಳ ಹಲವು ಪ್ರದೇಶಗಳು ನೊಳಂಬವಾಡಿ-೩೨೦೦೦ ಪ್ರಾಂತ್ಯದಲ್ಲಿದ್ದವು.

೩೦೦ ವರ್ಷಗಳ ಕಾಲ ಕರ್ನಾಟಕದಲ್ಲಿ ಆಳ್ವಿಕೆ ನಡೆಸಿದ ಈ ನೊಳಂಬಪಲ್ಲವರು ನಾಡಿನ ಉತ್ತರದ ಬಹುಭಾಗ ಕದಂಬಳಿಗೆ ೧೦೦೦ದಲ್ಲಿ ಸೇರಿತ್ತು. ನೊಂಬಳಿಗೆ ೧೦೦೦ವನ್ನು ಆಳ್ವಿಕೆ ಮಾಡಲಾರಂಭಿಸಿದ ಬಹುಮುಖ್ಯ ರಾಜಮನೆತನ ಇದಾಗಿದೆ. ಮೂಲತಃ ಪಲ್ಲವರಾದ ನೊಳಂಬರು ಕರ್ನಾಟಕಕ್ಕೆ ಏಕೆ ಮತ್ತು ಹೇಗೆ ಬಂದು ನೆಲಸಿದರೆಂಬುದಕ್ಕೆ ಸಾಕಷ್ಟು ಪುರಾವೆಗಳು ಲಭ್ಯವಿಲ್ಲ. ಆದರೆ ಬಾದಾಮಿ ಚಾಲುಕ್ಯರಿಗೂ ಕಂಚಿಯ ಪಲ್ಲವರಿಗೂ ಆಗಾಗ್ಗೆ ರಾಜಕೀಯ ಉದ್ದೇಶದಿಂದ ಕದನಗಳಾಗುತ್ತಿದ್ದವು. ಇಂತಹ ಸಂದರ್ಭದಲ್ಲಿ ಸೋಲು ಗೆಲುವುಗಳು ಮತ್ತು ರಾಜ್ಯದ ಗಡಿಗಳು ಹೆಚ್ಚು-ಕಡಿಮೆಯಾಗುತ್ತಿದ್ದವು. ಇಂತಹ ಸಮಯ ಸಂದರ್ಭಗಳನ್ನು ಸದುಪಯೋಗಪಡಿಸಿಕೊಂಡ ಪಲ್ಲವರ ಕೆಲವು ಅಧಿಕಾರಿಗಳು ಪ್ರಾಯಶಃ ಕರ್ನಾಟಕದೊಳಗೆ ಪ್ರವೇಶಿಸಿ ಚಾಲುಕ್ಯರ ರಾಜ್ಯದ ವಿಸ್ತಾರವನ್ನು ಹಾಗೂ ತಮ್ಮ ಪ್ರಾಬಲ್ಯವನ್ನು ಹೆಚ್ಚಿಸಿಕೊಳ್ಳುವುದರ ಸಲುವಾಗಿ ಈ ನೊಳಂಬರಂತಹ ವೀರರನ್ನು ಬಳಸಿಕೊಂಡು ತಮ್ಮ ಗಡಿಯನ್ನು ರಕ್ಷಿಸಿಕೊಂಡಿರುವ ಸಾಧ್ಯತೆ ಇದೆ. ಈ ನೊಳಂಬರು ಜಮೀನ್ದಾರರಾಗಿರುವ ಸಾಧ್ಯತೆಯ ಮೇಲೆ ಅವರಿಗೆ ಕೆಲವು ಮರ್ಯಾದೆಗಳ ದ್ಯೋತಕವಾಗಿ ಹಲವು ಪ್ರದೇಶಗಳನ್ನು ಬಿಟ್ಟುಕೊಟ್ಟಿರುವ ಅಂಶವನ್ನು ಬಹುಜಾಗರೂಕತೆಯಿಂದ ನೋಡುವುದು ಅವಶ್ಯಕವಾಗಿದೆ. ಏಕೆಂದರೆ, ಒಂದು ಸಮುದಾಯದ ಬೆಳವಣಿಗೆಯು ಅಷ್ಟು ಸುಲಭವಾಗಿ ಒಂದು ರಾಜಮನೆತನದ ಹೆಸರಿನಲ್ಲಿ ನೆಲೆ ನಿಲ್ಲಬೇಕಾದರೆ, ಅದು ಒಂದು ಕೌಟುಂಬಿಕ ಮನೆತನದಿಂದ ಹೋಗಿರುವ ಸಾಧ್ಯತೆಯನ್ನು ನಾವು ಅರಿತಿರಬೇಕಾಗುತ್ತದೆ. ಹಾಗೂ ಅದು ಪಶುಪಾಲನೆ ಮತ್ತು ಕೃಷಿ ಮೂಲದಿಂದಲೇ ಬಂದಿರಬಹುದಾದ ಸಾಧ್ಯತೆಯಿದೆ.

ಕ್ರಿಸ್ತಶಕ ಹನ್ನೊಂದನೆಯ ಶತಮಾನದ ತರುವಾಯ ಅನೇಕ ಶಾಸನಗಳಲ್ಲಿ ನೊಳಂಬರ ಮನೆತನದ ಹೆಸರುಗಳುಳ್ಳ ಅಧಿಕಾರಿಗಳು ಕಲ್ಯಾಣದ ಚಾಲುಕ್ಯರು, ಹೊಯ್ಸಳರು, ಚೋಳರು ಸೇರಿದಂತೆ ವಿಜಯನಗರದ ಅರಸರ ಕೈಕೆಳಗೆ ವಿವಿಧ

ಇಲಾಖೆಗಳಲ್ಲಿ ಹಾಗೂ ಯುದ್ಧದ ಸಂದರ್ಭಗಳಲ್ಲಿ ಸೇವೆ ಸಲ್ಲಿಸುತ್ತಿದ್ದನ್ನು ಕಾಣಬಹುದು. ಆದರೆ ಇವರೆಲ್ಲರ ಮೂಲಗಳನ್ನು ಹುಡುಕಿ ಅವರಿಗೂ ಮೂಲ ನೊಳಂಬ ವಂಶದೊಂದಿಗೆ ಇದ್ದ ಸಂಬಂಧವನ್ನು ಹೊಂದಿರುವದನ್ನು ನೊಳಂಬರ ಆಡಳಿತವು ಕೊನೆಗೊಂಡ ನಂತರದಲ್ಲಿ ಅಲ್ಲಲ್ಲಿ ಚದುರಿ ಹೋಗಿ ಇತರ ರಾಜರ ಆಶ್ರಯದಲ್ಲಿ ಭಿನ್ನ ವೃತ್ತಿಗಳಲ್ಲಿ ಹಾಗೂ ಜವಾಬ್ಧಾರಿಯುತ ಹುದ್ದೆಗಳಲ್ಲಿ ತೊಡಗಿಕೊಂಡಿರುವ ಸಾಧ್ಯತೆ ಇದೆ. ಆದರೆ ಇವರ ಸಮಕಾಲೀನ ಪ್ರಮುಖ ರಾಜ ವಂಶಗಳೆಂದರೆ ವಾತಾಪಿ ಅಥವಾ ಬಾದಾಮಿ ಚಾಲುಕ್ಯರು, ಮಾನ್ಯಖೇಡದ ರಾಷ್ಟ್ರಕೂಟರು, ಕಂಚಿಪುರದ ಪಲ್ಲವರು, ಕಲ್ಯಾಣದ ಚಾಲುಕ್ಯರು, ತಂಜಾವೂರಿನ ಚೋಳರು, ತಲಕಾಡಿನ ಗಂಗರು ಮುಂತಾದ ಅರಸು ಮನೆತನಗಳಾಗಿವೆ.

ಆರಂಭದಲ್ಲಿ ಹೆಂಜೇರನ್ನು ರಾಜಧಾನಿಯನ್ನಾಗಿಸಿಕೊಂಡು ಗಂಗರ ಸಾಮಂತರಾಗಿ ಆಳ್ವಿಕೆ ಮಾಡುತ್ತಿದ್ದವರು, ಮುಂದೆ ತಮ್ಮ ರಾಜಧಾನಿಯನ್ನು ತುಂಗಭದ್ರಾ ದಂಡೆಯ ಕಂಪಿಲಿಗೆ ಸ್ಥಳಾಂತರಿಸಿದರು. ಆದರೆ, ಕ್ರಿಸ್ತಶಕ ೯೨೦ರ ಹೇಮಾವತಿಯ ಶಾಸನದಲ್ಲಿ ಉಲ್ಲೇಖಿಸಿರುವ ವಂಶಾವಳಿಯು ಅತ್ಯಂತ ಪ್ರಾಚೀನ ಎಂದು ತಿಳಿದಿರುವ ಸಂದರ್ಭದಲ್ಲಿ ಚಿತ್ರದುರ್ಗ ಜಿಲ್ಲೆಯ 'ಮಹದೇವಪುರ'ದ ಗ್ರಾಮದ ಈಶ್ವರ ದೇವಾಲಯದ ಜೀರ್ಣೋದ್ಧಾರದ ಸಮಯದಲ್ಲಿ ದೊರೆತ ಒಂದು ತಾಮ್ರಪಟವು ಇವರ ಮೂಲ ಪ್ರಾಚೀನತೆಯ ಬಗ್ಗೆ ಹಲವು ಮಾಹಿತಿಗಳನ್ನು ಹೊರಹಾಕುತ್ತದೆ. ಈ ತಾಮ್ರಪಟವು ನೊಳಂಬರ ಪಾರಂಪರಿಕ ಬಿರುದುಗಳ ಜೊತೆ 'ಲಲಾಟ ನಯನ ವಂಶೋದ್ಭವ, ಕಟ್ವಾಂಗಧ್ವಜ, ಕಡುವಪರೆ ಘೋಷಣ, ಕಾಂಚೀಪುರ ಪರಮೇಶ್ವರ' ಇತ್ಯಾದಿ ಬಿರುದಾಂಕಿತ ಮುತ್ತರೇಯುನ ಮಗ ಪೇ(ಪೋ)ರ್ಮುಖರಾಮ; ಇವನ ಮಗ ಶ್ರೀಮುಖರಾಮ; ಇವನ ಮಗ ಸಿಂಗಪೋತತ್ತಿಯರಸ; ಇವನ ಮಗ ಪೊನ್ನೇರ ನೊಳಂಬಾಧಿ ರಾಜನು ಧರ್ಮವೊಳಲಲ್ಲಿ ರಾಜ್ಯವಾಳುತ್ತಿದ್ದನು. ಆಗ 'ಪೊಳಲ್ಚೋರನ ಜಾತಕರ್ಮ ನೆರವೇರಿಸುವ ಸಲುವಾಗಿ ಧರ್ಮವೊಳಲಿಗೆ ಬಂದು ದಕ್ಷಿಣೆಗಾಗಿಯೂ, ಆದಿತ್ಯದೇವರ ಪ್ರತಿಷ್ಠೆಗಾಗಿ ನೀರ್ಗುಂದ ವಿಷಯದ ಗೊರವೊರನ್ನು ಪ್ರಭುರಾಮಮಂಗಲವೆಂದು ಹೆಸರನ್ನಿಟ್ಟು ಅಂಗಿರಸ ಬಾರ್ಹಸ್ಪತ್ಯ(ಬೃಹಸ್ಪತಿ) ಭಾರದ್ವಾಜ ಗೋತ್ರದ ಋಗ್ವೇದ ನಾರಾಯಣ ಸೋಮಯಾಜಿಯ ಕಾಲನ್ನು ತೊಳೆದು ರೇವಕ ನಿರ್ಮಡಿಯ ಧಾರೆಯೆರೆದು ಬ್ರಹ್ಮದೇಯವಾಗಿ ೯೬೦೦೦ ಗ್ರಾಮಗಳ ಪ್ರಜೆಗಳ ಸಾಕ್ಷಿಯಾಗಿ ದಾನ' ಮಾಡಿದ್ದನ್ನು ತಿಳಿಸುತ್ತದೆ(ಪ್ರಬುದ್ಧ ಕರ್ನಾಟಕ:ಸಂಚಿಕೆ:೩೪:೨).

ಇದು ಈ ಮೊದಲಿದ್ದ ಹೇಮಾವತಿಯ ಸ್ತಂಭ ಶಾಸನದಲ್ಲಿನ ಮಾಹಿತಿಗಿಂತ ಸ್ವಲ್ಪ ಭಿನ್ನವಾಗಿ ಕಂಡುಬರುತ್ತದೆ. ಅಷ್ಟೇ ಅಲ್ಲದೇ ಆ ಅರಸರ ಬಗ್ಗೆ ವಿಶೇಷ ಬೆಳಕು ಚೆಲ್ಲುತ್ತದೆ.

ಹೇಮಾವತಿಯ ಸ್ತಂಭ ಶಾಸನವು ಸಿಂಹಪೋತನ ತಂದೆಯನ್ನು ನೊಳಂಬಾಧಿರಾಜ ಮಂಗಳನೆಂದು ಹೆಸರಿಸಿದೆ. ತಾಮ್ರ ಶಾಸನವು ಶ್ರೀಮುಖರಾಮನೆಂದೂ ಹಾಗೂ ಇವನ ಹಿಂದಿನ ಎರಡು ತಲೆಮಾರಿನ ಅಂದರೆ ಶ್ರೀಮುಖರಾಮನ ತಂದೆಯನ್ನು ಪೇರ್ಮುಖ ರಾಮನೆಂದೂ ಜೊತೆಗೆ ಈತನ ತಂದೆಯನ್ನು ಮುತ್ತರೇಯನೆಂದು ಹೇಳಿದೆ. ಅಂದರೆ ಈ ಶಾಸನದ ಪ್ರಕಾರ ನೊಳಂಬ ಪಲ್ಲವರಲ್ಲಿ ಬರುವ ಹಿರಿಯ ಅಥವಾ ಮೊದಲು ಬರುವ ಅರಸು ಮುತ್ತರೇಯ ಎಂದು ತಿಳಿದುಬರುತ್ತದೆ.

ಈ ಶಾಸನೋಕ್ತವಾದ ಅಂಶಗಳೇನೇ ಇರಲಿ, ನಾಡಿನಲ್ಲಿ ಹಲವು ಕಾಲ ಆಳ್ವಿಕೆ ನಡೆಸುವ ಸಂದರ್ಭದಲ್ಲಿ ಅನೇಕ ರಾಜಮನೆತನಗಳೊಂದಿಗೆ ವೈವಾಹಿಕ, ರಾಜತಾಂತ್ರಿಕ ಹಾಗೂ ರಾಜಕೀಯ ಸಂಬಂಧಗಳನ್ನು ಹೊಂದಿ ಸಾಮಾನ್ಯವಾಗಿ ಸಾಮಂತರಾಗಿಯೇ ತಮ್ಮ ರಾಜಕೀಯ ಬದುಕನ್ನು ಕಟ್ಟಿಕೊಂಡವರಾಗಿದ್ದಾರೆ. ಇದು ಮೊದಲ ಸಹಸ್ರಮಾನದ ಚಾರಿತ್ರಿಕ ಅಂಶಗಳಾದರೆ, ಎರಡನೆಯ ಸಹಸ್ರಮಾನದ ಆರಂಭದಲ್ಲಿ ಅವರ ಕಾಲವನ್ನು ಕ್ರಿಸ್ತಶಕ ೧೩ನೆಯ ಶತಮಾನದಿಂದ ಆರಂಬಿಸಬಹುದಾಗಿದೆ.

ಎರಡನೆಯ ಹಂತದಲ್ಲಿ ನೊಳಂಬರು ಸಾಮಾನ್ಯವಾಗಿ ನಾಡಗೌಡರಾಗಿ ಹಾಗೂ ಮಹಾನಾಡು ಪ್ರಭುಗಳಾಗಿ ಕರ್ನಾಟಕದ ಮಧುಗಿರಿಯನ್ನು ತಮ್ಮ ಆಡಳಿತ ಕೇಂದ್ರವನ್ನಾಗಿ ಮಾಡಿಕೊಂಡು, ಅದರ ಸುತ್ತಮುತ್ತಲಿನ ಅನೇಕ ಪ್ರದೇಶಗಳನ್ನು ತಮ್ಮ ಸುಪರ್ದಿಗೆ ಸೇರಿಸಿಕೊಂಡು ಆಡಳಿತವನ್ನು ಮಾಡುತ್ತಿದ್ದರು. ಈ ಸಂದರ್ಭದಲ್ಲಿ ಹೊಯ್ಸಳ ಮತ್ತು ವಿಜಯನಗರದ ಅರಸರ ಆಳ್ವಿಕೆಯಲ್ಲಿ, ಅವರ ಅಡಿಯಲ್ಲಿ ತಮ್ಮ ಸಾಮಂತಿಕೆಯನ್ನು ಸ್ಥಾಪಿಸಿಕೊಂಡಿದ್ದರು. ಹೀಗೆ ತಮ್ಮ ಆಡಳಿತದ ಪ್ರಕ್ರಮವನ್ನು ವಿಸ್ತರಿಸಿಕೊಳ್ಳುವತ್ತ ಗಮನವನ್ನು ಸ್ಥಿರಿಕರಿಸಿದ ನೊಳಂಬರ ಪ್ರಭಾವ ಹಾಗೂ ತಮ್ಮ ರಾಜಕೀಯ ಕ್ಷೇತ್ರವನ್ನು ನೊಳಂಬವಾಡಿ-೩೨೦೦೦ ಎಂಬ ವಿಸ್ತಾರ ಪ್ರದೇಶದ ಒಡೆಯರಾಗಿ ಆಳ್ವಿಕೆ ಮಾಡಿದರು. ಇದರಿಂದ ಅವರ ರಾಜಕೀಯ ಕ್ಷೇತ್ರವು ಈಗೀನ ಕರ್ನಾಟಕದ ಚಿತ್ರದುರ್ಗ, ತುಮಕೂರು, ಕೋಲಾರ, ಬೆಂಗಳೂರು, ಹಾಸನ, ಬಳ್ಳಾರಿ ಸೇರಿದಂತೆ, ಪ್ರಸ್ತುತ ಆಂಧ್ರಪ್ರದೇಶದ ಚಿತ್ತೂರು, ಅನಂತಪುರ ಹಾಗೂ ತಮಿಳುನಾಡಿನ ಉತ್ತರ ಅರ್ಕಾಟು, ಧರ್ಮಪುರಿ ಜಿಲ್ಲೆಗಳನ್ನೊಳಗೊಂಡ ಪ್ರದೇಶಗಳ ಮೇಲೆ ತಮ್ಮ ಅಧಿಪತ್ಯವನ್ನು ವಿಸ್ತರಿಸಿಕೊಂಡು ಆಡಳಿತವನ್ನು ಮಾಡಿದ್ದಾರೆ.

ಆ ಕಾರಣಕ್ಕಾಗಿ ತಮ್ಮ ರಾಜಧಾನಿಯನ್ನು ಇಂದಿನ ಆಂಧ್ರಪ್ರದೇಶದ ಮಡಕಶಿರಾ ತಾಲ್ಲೂಕಿನ ಪೆಂಜೇರು/ಹೆಂಜೇರು ಅಥವಾ ಈಗಿನ ಹೇಮಾವತಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು. ಈ ನೊಳಂಬ ವಂಶದ ಮಹತ್ವಾಕಾಂಕ್ಷಿ ದೊರೆಯಾದ ಒಂದನೆಯ ಮಹೇಂದ್ರನು ಗಂಗವಾಡಿಯ ಕೆಲವು ಪ್ರದೇಶಗಳಿಗೂ ತಮ್ಮ ಆಡಳಿತವನ್ನು ನಡೆಸುತ್ತಿದ್ದರು. ಹೀಗಾಗಿ ಈ ಮಹೇಂದ್ರನನ್ನು ಕೆಲವು ಶಾಸನಗಳು 'ಷಣ್ಣವತಿ ಸಹಸ್ರ ಪ್ರಮುಖ ಗಂಗ ಮಂಡಳ ವಿಳಾಸಿನೈಕವಲ್ಲಭೋ ಮಹೇಂದ್ರ'(ಕವಿವಿಶಾಸಂ: ೪:೮೩ ಮತ್ತು ೧೦೪)ನೆಂಬ ಬಿರುದುಗಳನ್ನು ಉಲ್ಲೇಖಿಸುತ್ತವೆ. ತಮ್ಮ ಆಡಳಿತದ ಅವಧಿಯಲ್ಲಿ 'ನೊಳಂಬವಾಡಿ-೩೨೦೦೦'ವನ್ನು ಹಲವು ಗ್ರಾಮಗಳಿಂದ ನಿರ್ಮಿಸಿಕೊಂಡು ಅವುಗಳನ್ನು ಸಾಂಸ್ಕೃತಿಕವಾಗಿ ನಿರ್ಮಿಸಿದ್ದರು. ಅವುಗಳೆಂದರೆ, ಅರ್ಮಳೆ-೧೨'(ಕವಿಶಾಸಂ: ೧: ಹಗರಿ ೨೪-೨೭), ಅವನ್ಯ ಅಥವಾ ಅವನಿ-೩೦, ಉಚ್ಚಂಗಿ-೩೦, ಎಡದೊರೆ-೨೦೦೦, ಕಣೆಯಕಲ್ಲು-೩೦೦, ಕದಂಬಳಿಗೆ-೧೦೦೦, ಕರಿವಿಡಿ-೩೦, ಕಿಸುಕಾಡು-೭೦, ಕುಕ್ಕನೂರು-೩೦, ಕುದಿಯಪರವಿ-೭೦, ಕುಂದೂರು-೩೦, ಕೋಗಳಿ-೫೦೦, ಕೋಳೂರು-೧೨, ಗಂಗ(ಗಂಗ ಆಱುಸಾಸಿರ)-೬೦೦೦, ಗಂಗವಾಡಿ-೯೬೦೦೦, ಗಂಗವೂರು-೩೦, ಗಲ್ವಾಡಿ-೩೦೦, ಚಿರಪಿ-೧೨, ತರ್ದವಾಡಿ-೧೦೦೦, ನೀರ್ಗುಂದ ನಾಡು-೩೦೦, ನೆಲ್ಲುಗುಂಡಿ-೧೨, ನೊಳಂಬಳಿಗೆ-೧೦೦೦, ನೊಳಂಬವಾಡಿ-೩೨೦೦೦, ಪುಲಿನಾಡು, ಪುಲಿಗೆರೆ-೩೦೦, ಬಲ್ಲಕುಂದೆ-೩೦೦, ಬನವಾಸಿ-೧೨೦೦೦, ಬಾನವೂರ-೧೨, ಬಿಕ್ಕಿಗ-೭೦, ಬೆಳ್ವೊಲ, ಭ್ರಾಂತಿಕಡ-೩೦;(ನೊಶಾಸಾಅ: ಜಯಮ್ಮ ಕರಿಯಣ್ಣ ಎಚ್:೧೦೫) ಹೀಗೆ ಮುಂತಾದ ಹಲವು ನಾಡುಗಳು ಅವರ ಶಾಸನಗಳಲ್ಲಿಯೇ ಉಲ್ಲೇಖವಾಗುತ್ತವೆ. ಇವುಗಳೆಲ್ಲವೂ ಅವರ ಚಾರಿತ್ರಿಕ ಹಿನ್ನೆಲೆಯನ್ನೊಳಗೊಂಡಂತೆ ಅವರ ಅಸ್ತಿತ್ವವನ್ನು ಕರ್ನಾಟಕದಲ್ಲಿ ಗುರುತಿಸುವಂತ ಕಾರ್ಯ ಇದಾಗಿದೆ.

ನೊಳಂಬರ ಆಡಳಿತಾತ್ಮಕವಾದ ಕೇಂದ್ರಗಳನ್ನು ಈ ಕೆಳಗಿನಂತೆ ಪ್ರಾಚೀನ ಕರ್ನಾಟಕದಲ್ಲಿ ಗುರುತಿಸಬಹುದಾಗಿದೆ. ಅವರ ನೊಳಂಬವಾಡಿ-೩೨೦೦೦ವನ್ನು ಸಮಗ್ರವಾಗಿ ನೋಡಿದಾಗ ಅದು ಸುದೀರ್ಘವಾದ ಅಧ್ಯಾಯವಾಗುವ ಭೀತಿಯಿದೆ ಆ ಕಾರಣಕ್ಕೆ ಅವರ ಆಡಳಿತದ ಸಂದರ್ಭದ ನಾಡನ್ನು ಸಂಕ್ಷಿಪ್ತಗೊಳಿಸುವಂತ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

೨.೫. ನೊಳಂಬವಾಡಿ–೩೨೦೦೦



೨.೫. ನೊಳಂಬವಾಡಿ-೩೨೦೦೦

ಶಾಸನಗಳಲ್ಲಿ ನೊಣಂಬವಾಡಿ, ನೊಳಂಬವಾಡಿ ಎಂದು ಕಾಣಿಸಿಕೊಂಡ ಈ ವಿಭಾಗವನ್ನು ಪಲ್ಲವ ವಂಶದ ನೊಣಂಬರು ಆಳುತ್ತಿದ್ದರು. ತಮಿಳಿನಲ್ಲಿ 'ನೊಳಂಬವಾಡಿ' ಪದಕ್ಕೆ ದೊಡ್ಡಭಾಗ ಎಂಬ ಅರ್ಥವಿದೆ. ರಾಷ್ಟ್ರಕೂಟರ ಆಳ್ವಿಕೆಯಲ್ಲಿ ಇದು ಸಾವಿರ ಹಳ್ಳಿಗಳ ಆಡಳಿತ ವಿಭಾಗವಾಗಿತ್ತು. ಚಿಕ್ಕಮಧುರೆ ಶಾಸನ 'ನೊಳಂಬಳ್ಗೆ ಸಾಸಿರಮಂ' ಎಂದು ಸ್ಪಷ್ಟವಾಗಿ ಹೇಳಿದೆ. ಇದನ್ನು ಪಲ್ಲವಾದಿರಾಜನು ಆಳುತ್ತಿದ್ದನು(ಎಕ :೧೧(ರೈ):೩೩, ಕ್ರಿ.ಶ. ೮೧೫, ಚಿಕ್ಕಮಧುರೆ, ಚಳ್ಳಕೆರೆ). ಆಗ ಇದು ಯಾವ ವಿಭಾಗದಲ್ಲಿ ಸೇರಿತ್ತೆಂಬುದು ಶಾಸನಗಳಿಂದ ತಿಳಿಯುವುದಿಲ್ಲ. ಕಲ್ಯಾಣ ಚಾಲುಕ್ಯರ ಆಳ್ವಿಕೆಯ ವೇಳೆಗೆ ಮೂವತ್ತೆರಡು ಸಾವಿರ ಹಳ್ಳಿಗಳವರೆಗೆ ಬೆಳೆಯಿತು. ಆಗ ಇದರ ರಾಜಧಾನಿ 'ಪೆಂಜೆರು' ಅಥವಾ 'ಹೆಂಜೆರು' ಆಗಿತ್ತು. ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಮಡಕಶಿರ ತಾಲೂಕಿನ ಹೇಮಾವತಿಯ ಪ್ರಾಚೀನ ಹೆಸರು ಪೆಂಜೆರು ಆಗಿದೆ(ನಾಗಯ್ಯ, ಜೆ ಎಂ., ಆರನೆಯ ವಿಕ್ರಮಾದಿತ್ಯನ ಶಾಸನಗಳು :೧೧೮).

ಎಮ್ಮೆದೆಲೆ-೬೦೦೦ ಆರು ಸಾವಿರ ಹಳ್ಳಿಗಳ ಈ ವಿಭಾಗದ ಉಲ್ಲೇಖ ತ್ರಿಪುರಾಂತಕ ಶಾಸನದಲ್ಲಿದೆ. ದಂಡನಾಯಕ ಅನಂತಪಾಳಯ್ಯನು 'ಬೇಂಗಿ ಪನ್ನಿರ್ಚ್ಛಾಸಿರಮುಮಮನೆಮ್ಮೆದಲೆಯಱು ಸಾಸಿರಮುಮಂ' ಆಳುತ್ತಿದ್ದನು(ಎಕ :೧೧(ರೈ): ೩೫೮, ೧೧೨೬ ಜೂನ್ ೨೨, ತ್ರಿಪುರಾಂತಕ, ಕರ್ನೂಲು). ಎಮ್ಮೆದೆಲೆಯು ಬೇಂಗಿ-೧೨೦೦೦ದಿಂದ ಭಿನ್ನವೆಂಬುದು ಸ್ಪಷ್ಟ. ಬಹುಶಃ ಅದು ನೊಳಂಬವಾಡಿಗೆ ಸೇರಿರಬೇಕು. ಆರನೆಯ ವಿಕ್ರಮಾದಿತ್ಯನ ಕಾಲದ ಬುರುಗಗಡ್ಡ ಶಾಸನದಲ್ಲಿಯೂ ಈ ವಿಭಾಗಗಳು ಜೊತೆ ಜೊತೆಯಾಗಿ ಕಾಣಿಸಿಕೊಂಡಿವೆ(ಎಕ :೧೧(ರೈ): ೫೩೧, ಬುರುಗಗಡ್ಡ, ನಲ್ಗೊಂಡ). ಆಹವಮಲ್ಲನ ಸಾಮಂತನು ಗುಂಟೂರು ಜಿಲ್ಲೆ ಬಾಪಟ್ಲಾ ತಾಲೂಕಿನ ಚೇಬ್ರೋಲು ಗ್ರಾಮದಲ್ಲಿ ಬರೆಸಿದ ಶಾಸನದಲ್ಲಿ 'ದನ್ನಡ' ಮತ್ತು 'ಯೆನ್ಮಂದಲ' ಎಂಬ ಎರಡು ಕೋಟೆಗಳನ್ನು ಸುಟ್ಟು ಚಿಬ್ರೋಲಿಯ ಕುಮಾರಸ್ವಾಮಿ ದೇವರಿಗೆ ದತ್ತಿ ನೀಡಿದನು. ಇವು ಕ್ರಮವಾಗಿ ಈಗಿನ ಧರಣಿಕೋಟ ಮತ್ತು ಎಮ್ಮಿದಲೆ ಗ್ರಾಮಗಳಾಗಿವೆ(ಕಂದೂರಿ ಈಶ್ವರದತ್ತ, ಉಲ್ಲೇಖ: ನಾಗಯ್ಯ ಜೆ ಎಂ., ಆರನೆಯ ವಿಕ್ರಮಾದಿತ್ಯನ ಶಾಸನಗಳು:೧೩೦). ಈ ವಿಭಾಗವು ಕರ್ನೂಲು, ಪ್ರಕಾಶಂ ಮತ್ತು ಗುಂಟೂರು ಜಿಲ್ಲೆಯ ವ್ಯಾಪ್ತಿಯನ್ನು ಒಳಗೊಂಡಿರಬೇಕು. ಇದರ ಉಪವಿಭಾಗಗಳು ಹೀಗಿವೆ.

ಕೊಂಡಪಳ್ಳಿ-೩೦೦ ಇದು ಎಮ್ಮೆದೆಲೆಯ ಉಪವಿಭಾಗವಾಗಿದೆ. ಅನಂತಪಾಳಯ್ಯನು ಬೇಂಗಿ ಮತ್ತು ಎಮ್ಮೆದೆಲೆಗಳನ್ನು ದಂಡನಾಯಕನಾಗಿ ಆಳುತ್ತಿದ್ದಾಗ ಈತನ ಅಳಿಯ

ಗೋವಿಂದ ದಂಡನಾಯಕನು 'ಕೊಂಡುಪಳ್ಳಿ-೩೦೦'ರನ್ನು ಆಳುತ್ತಿದ್ದನು(ಆಕಶಾಸ:೧:೧೩೫೮:೧೧೨೬ ಜೂನ್ ೨೨, ತ್ರಿಪುರಾಂತಕ). ಇವನು ಅಪಾರ ಸೈನ್ಯದೊಂದಿಗೆ ಚೋಳದೇಶವನ್ನು ಆಕ್ರಮಿಸಿ ಗೆದ್ದು, ಭಂಡಾರ ಸಹಿತ ಮರಳಿದಾಗ ಈ ದತ್ತಿ ನೀಡಲಾಗಿದೆ. ಶಾಸನವು ಕೊಂಡಪಳ್ಳಿಯನ್ನು ಎಮ್ಮೆದೆಲೆಯ ಉಪವಿಭಾಗ ವೆಂದು ನೇರವಾಗಿ ಹೇಳಿಲ್ಲ. ಆದರೆ ಎಮ್ಮೆದೆಲೆಯ ನಂತರ ಈ ವಿಭಾಗ ಕಾಣಿಸಿ ಕೊಂಡಿರುವುದು ನಮ್ಮ ಊಹೆಯನ್ನು ಸಮರ್ಥಿಸುತ್ತದೆ.

ಮೊಟ್ಟವಾಡಿನಾಡು ತ್ರಿಪುರಾಂತಕ ಶಾಸನ "ಮೊಟ್ಟವಾಡಿನಾಡೊಳಗಣ ಚಾಪಲಮಡುಗೆ"ಯನ್ನು ಹೇಳಿದೆ(ಆಕಶಾಸಂ:೧: ೩೯೫: ೧೧೨೬ ತ್ರಿಪುರಾಂತಕ). ಇಲ್ಲಿಯ ಮತ್ತೊಂದು ಶಾಸನ "...ಳಗಣ ಪಿಟ್ಟಮಪೂಳಿ ಆ ಬಳಿಯ ಮೆಳಿ x x x ಗಣ ಪಾತಡಿ ಚಾಪಲಮಡುಗೆ"ಯನ್ನು ಹೇಳಿದೆ(ಆಕಶಾಸ :೩೬೦:೧೧೨೨ ತ್ರಿಪುರಾಂತಕ). ಚಾಪಲಮಡುಗೆಯು ಮೊಟ್ಟವಾಡಿಗೆಯಲ್ಲಿದ್ದುದು ಎರಡೂ ಶಾಸನಗಳಿಂದ ತಿಳಿಯುತ್ತದೆ. ಆದ್ದರಿಂದ ಎರಡನೇ ಶಾಸನದ ಆರಂಭದ ತ್ರುಟಿತ ಭಾಗವನ್ನು 'ಮೊಟ್ಟವಾಡಿಯೊ' ಎಂದು ಕಟ್ಟಿಕೊಡಬಹುದು. ಇಲ್ಲಿಯ ಮತ್ತೊಂದು ಶಾಸನ "ಮೊಟ್ಟವಾಡಿನಾಡೊಳಗಣ ಪುಲ್ತಲಪಟು ಕವ಼ಲಕುಂಟ ರಾಚಗೊಂಡ ಶತಕೋಟಿ ಚಿನ್ನಾನಿಪಲ್ಲಿಗಳನ್ನು ಹೇಳಿದೆ(ಆಕಶಾಸಂ:೧:೩೬೦:೧೧೨೨ ತ್ರಿಪುರಾಂತಕ). ಇಲ್ಲಿಯ ತ್ರಿಪುರಾಂತಕ ದೇವಾಲಯದ ತಪೋಧನರಿಗೆ, ಅಧ್ಯಯನನಿರತ ಬ್ರಾಹ್ಮಣರಿಗೆ ೪೪ ಹಳ್ಳಿಗಳ ಆದಾಯವನ್ನು ಆರನೇ ವಿಕ್ರಮಾದಿತ್ಯನು ಬಿಟ್ಟುಕೊಟ್ಟನು.

ಕನ್ನೆ-೩೦೦ ಮೂರುನೂರು ಹಳ್ಳಿಗಳ ಈ ವಿಭಾಗಕ್ಕೆ ನಂದಿಕೊಟ್ಕೂರು ತಾಲೂಕಿನ 'ಕಾನ್ನಿ' ಗ್ರಾಮ ಮುಖ್ಯಸ್ಥಳವಾಗಿದೆ. ಕೊತ್ತಪಲ್ಲಿ ಶಾಸನ "ಕನ್ನೆ ಮೂನೂಱಱ ಬಳಿಯ ದುದ್ದಿಯಾಲು, ಸಿರಿವುರ, ಕುಱುಕುನ್ದೆ"ಗಳನ್ನು ಹೇಳಿದೆ. ಅಲ್ಲದೆ ಆತಕೂರು, ಸುರಲೂರು, ಕೊಕ್ಕರವೆಂಟೆ, ಹೊನ್ನಲೂರು, ಕೊಳ್ಳ ಮೊದಲಾದ ಊರುಗಳ ಉಲ್ಲೇಖ ಇಲ್ಲಿದೆ(ಆಕಶಾಸಂ ೧:೩೩೮: ೧೦೫೭ ಏಪ್ರಿಲ್ ೨೧, ಕೊತ್ತಪಲ್ಲಿ, ನಂದಿಕೊಟ್ಕೂರು). ಇದನ್ನು 'ಕನ್ನೆನಾಡು' ಎಂದೂ ಶಾಸನಗಳು ಕರೆದಿವೆ(ಆಕಶಾಸ:೨: ೪೬೯, ೧೦೨೮-೨೯, ಅಲಂಪುರ).

ಶಿವಪುರ ಶಾಸನ "ಕನ್ನೆನಾಡೊಳಗಣ ಶಿವಪುರಂ ಅದರ ಪ್ರವಿಷ್ಟ ಬಾಡಂ ಜಾವುಟೂರು ಆ ಬಳಿಯ ಕಲ್ಲೋಟು"ಗಳನ್ನು ಹೇಳಿದೆ(ಆಕಶಾಸಂ:೧:೩೪೧: ೧೦೫೭ ಏಪ್ರಿಲ್ ೨೧, ಶಿವಪುರ, ನಂದಿಕೊಟ್ಕೂರು). ಶಿವಪುರವು ಕನ್ನೆ ವಿಭಾಗ ದಲ್ಲಿದ್ದುದು ಮೇಲಿನ ವಿವರಗಳಿಂದ ತಿಳಿಯುತ್ತದೆ. ಸಂಗಮೇಶ್ವರ ಶಾಸನದಲ್ಲಿಯೂ ಇದರ ಉಲ್ಲೇಖವಿದೆ. ಪಂಚಲಿಂಗಾಲ ಶಾಸನ "ಕನ್ನೆನ್ರ್ನಾಡೊಳಗಣ ಕ್ರಿಷ್ಣವೆನ್ನಾ ನದಿಯ ಬಡಗದಡಿಯ ಬೆರ್ಕ್ಕೆ"ಯನ್ನು

ಹೇಳಿದೆ(ಆಕಶಾಸಂ:೧:೩೬೧: ೧೦೬೮ ಡಿಸೆಂಬರ ೨೪, ಪಂಚಲಿಂಗಾಲ, ನಂದ್ಯಾಲ). ಚಿದ್ದಣ ಚೋಳಮಹಾರಾಜನು "ಕನ್ನೆ ಮುನೂಱುಂ ಪೆಡೆಕಲ್ಲೆಂಟುನೂಱುಂ ನಱಿವಾಡಿಯಯ್ನೂಱುಮಿನ್ತು ನಾಲ್ಕುನಾಡುಮಂ" ಆಳುತ್ತಿದ್ದನೆಂದು ಅಲಂಪುರ ಶಾಸನ ಹೇಳಿದೆ(ಆಕಶಾಸಂ:೨:೪೫೫: ೧೦೭೩ ಎಪ್ರಿಲ್ ೨೪, ಅಲಂಪುರ). ಇತರ ಶಾಸನಗಳು ಈ ಮೂರೂ ವಿಭಾಗಗಳನ್ನು ಜೊತೆ ಜೊತೆಯಾಗಿ ಹೇಳಿವೆ. ಇಲ್ಲಿಯ ಮತ್ತೊಂದು ಶಾಸನದಲ್ಲಿ ಬರುವ 'ನಾಲ್ಕುನಾಡು'ಗಳು ಬಹುಶಃ ಇವುಗಳನ್ನೇ ಸೂಚಿಸುತ್ತಿರಬೇಕು(ಆಕಶಾಸಂ:೨:೪೫೧: ೧೦೫೭ ಜನವರಿ ೪, ಅಲಂಪುರ). ಇವು ಅಕ್ಕಪಕ್ಕದ ವಿಭಾಗಗಳಾಗಿವೆ. ಕ್ರಿ.ಶ. ೧೧೯೬ರ ಅಲಂಪುರ ಶಾಸನ "ಕನ್ನೆ ಮುನೂಱಱ ಬಳಿಯ ತುಂಗಭದ್ರೆಯ ತಟಿಯ ಪೂಲಿನೂರ"ನ್ನು ಹೇಳಿದ(ಆಕಶಾಸಂ:೨:೪೬೦, ೧೧೯೬, ಅಲಂಪುರ; ೪೬೧, ೧೧೯೭ ಜನವರಿ ೧೬, ಅಲಂಪುರ). ಅಲ್ಲಿಯ ಮತ್ತೊಂದು ಶಾಸನ "ಕನ್ನೆ ೩೦೦... ತುಂಗಭದ್ರೆಯ ತಟಿಯ ಬೆಲ್ಗೆಱೆ"ಯನ್ನು ಹೇಳಿದೆ(ಆಕಶಾಸಂ:೨:೪೬೨: ೧೧೦೩, ಅಲಂಪುರ). ಅಲ್ಲದೆ ಕ್ರಿ.ಶ. ೧೧೦೭ರ ಶಾಸನವು "ಕನ್ನೆ ಮುನ್ನೂಱಱ ಬಳಿಯ ವಡ್ಡಮಾನಿ" ಯನ್ನು, ಕ್ರಿ.ಶ. ೧೧೦೭ ಮತ್ತು ೧೧೦೮ ಅಲಂಪುರದ ಶಾಸನ "ಕನ್ನೆ....... ಬಳಿಯ ದಾಮುಗಟ್ಟಳಿ" ಗ್ರಾಮುಗಳನ್ನೂ ಉಲ್ಲೇಖಿಸಿವೆ(ಆಕಶಾಸಂ:೨:೪೬೩:೪೬೪). ಒಟ್ಟಿನಲ್ಲಿ ಈ ವಿಭಾಗವು ಆಂಧ್ರಪ್ರದೇಶದ ಅಲಂಪುರ, ನಂದ್ಯಾಲ, ನಂದಿಕೊಟ್ಕೂರು ತಾಲೂಕಿನ ವ್ಯಾಪ್ತಿ ಹೊಂದಿತ್ತು. ಇದರ ಒಂದು ಉಪವಿಭಾಗ ಸಿಕ್ಕಿದೆ.

ಅಳಂಪುರ ೩೦ ಇದು ಕನ್ನೆ ೩೦೦ ನಾಡಿನ ಉಪವಿಭಾಗವಾಗಿದೆ. ಅಲಂಪುರವು ಕನ್ನೆನಾಡಿನಲ್ಲಿದ್ದುದು ಶಾಸನಗಳಿಂದ ತಿಳಿಯುತ್ತದೆ. ರಾಷ್ಟ್ರಕೂಟ ದ್ರುವನ ಆಳ್ವಿಕೆಯ ಶಾಸನ "ಅಲಂಪುರಾ ಮೂವತ್ತಱಾ ಗಾಮುನ್ಡ"ನನ್ನು ಉಲ್ಲೇಖಿಸಿದೆ(ಆಕಶಾಸಂ:೨:೪೮೫: ಕ್ರಿ.ಶ. ೭೮೦:ಅಲಂಪುರ). ಈ ವಿಭಾಗದ ವಿವರಗಳು ತಿಳಿಯುವುದಿಲ್ಲ.

ನಱಿವಾಡಿ/ನಳವಾಡಿ-೫೦೦ ಐದು ನೂರು ಹಳ್ಳಿಗಳ ಈ ವಿಭಾಗವು ಬದಾಮಿ ಚಾಲುಕ್ಯ ೨ನೇ ಪುಲಕೇಶಿ ಮತ್ತು ೧ನೇ ವಿಕ್ರಮಾದಿತ್ಯರ ಶಾಸನಗಳಲ್ಲಿ ಕಾಣಿಸಿಕೊಂಡಿದೆಯೆಂದು ಕಂದೂರಿ ಈಶ್ವರದತ್ತರು ಹೇಳಿದ್ದಾರೆ(ಆರನೆಯ ವಿಕ್ರಮಾದಿತ್ಯನ ಶಾಸನಗಳು, ನಾಗಯ್ಯ ಜೆ.ಎಂ.:೧೨೯). ಸಂಗಮೇಶ್ವರ ಮತ್ತು ಅಲಂಪುರ ಶಾಸನಗಳು ಕನ್ನೆ, ಪೆಡಕಲ್ಲುಗಳ ಜೊತೆಗೆ 'ನಱಿವಾಡಿ ಅಯ್ನೂಱು' ವಿಭಾಗವನ್ನೂ ಹೇಳಿದೆ(ಆಕಶಾಸಂ:೧: ೩೪೬:೧೦೭೯:ಸಂಗಮೇಶ್ವರ, ನಂದಿಕೊಟ್ಕೂರು). ಇವುಗಳನ್ನು ಒಬ್ಬ ವ್ಯಕ್ತಿಯೇ ಆಳುತ್ತಿರಬೇಕು. ಇಲ್ಲಿಯ ಮತ್ತೊಂದು ಶಾಸನ "ನೆಱಿವಾಡಿಯಯ್ನೂಱುಂ ಬಾಡದ ಬಳಿಯ ತುಂಗಭದ್ರೆಯ ತಡಿಯ ಕನ್ದನವೊಳಲ ಸಾರ್ದ ಬಣ್ಣಿಗಿ ಕಿಱುಗೆಯೊಳ

ಮೋಪುಪೊಂಗೆ"ಯನ್ನು ಹೇಳಿದೆ. ಇಲ್ಲಿಯ 'ಕನ್ದನ ಪೊಳಲು' ಗ್ರಾಮವು ಈಗಿನ ಜಿಲ್ಲಾ ಕೇಂದ್ರವಾದ ಕರ್ನೂಲು ಆಗಿದೆ(ಆಕಶಾಸಂ:೧: ೪೫೩:೧೧೦೭ ಡಿಸೆಂಬರ ೨೫, ಅಲಂಪುರ).

ಶಾಸನಗಳಲ್ಲಿ ಬರುವ ನಳಿವಾಡಿ ಮತ್ತು ನಳವಾಡಿಗಳು ಬಹುಶಃ ಒಂದೇ ಆಗಿರಬೇಕು. ಇದು ನಿಜವಾದರೆ ನಳವಾಡಿಯು ಆಂಧ್ರಪ್ರದೇಶಕ್ಕೆ ಸೇರಿದ "ತುಂಗಭದ್ರಾ ನದಿಯ ತೆಂಕದಡಿಯ" ಮೇಲೆ ಹರಡಿಕೊಂಡಿತ್ತೆಂದು ಹೇಳಬೇಕಾಗುತ್ತದೆ. ಈ "ನಳವಾಡಿ ನಾಡೊಳಗಣಾಱುಂ ಬಾಡದೊಳಂ ಬಡಗದಡಿಯ ಯೆಡೆನಾಡೊಳಗಣಾಱುಂ ಬಾಡದೊಳವನ್ತು ಪನ್ನೆರಡು (ಬಾಡದ) ಮೊದಲ ಪಂಚಲಿಂಗ ಗ್ರಾಮದ ತಳವೃತ್ತಿ"ಯನ್ನು ದಾನವಾಗಿ ನೀಡಿದರೆಂದು ಅಲ್ಲಿಯ ಶಾಸನ ಹೇಳಿದೆ(ಆಕಶಾಸಂ:೧:೩೬೧: ೧೦೬೮ ಪಂಚಲಿಂಗಾಲ, ನಂದ್ಯಾಲ). ಅಂದರೆ ತುಂಗಭದ್ರಾ ನದಿಯ ಉತ್ತರಕ್ಕೆ ಎಡೆನಾಡು(ಎಡೆದೊರೆನಾಡು) ಇದ್ದಿತು. ಇದಕ್ಕೆ ಹೊಂದಿಕೊಂಡು ಆ ನದಿಯ ದಕ್ಷಿಣಕ್ಕೆ ನಳವಾಡಿ ವಿಭಾಗವಿತ್ತು. ಈ ಎರಡೂ ವಿಭಾಗಗಳ ತಲಾ ಆರು ಗ್ರಾಮಗಳ ಆದಾಯವನ್ನು ಪಂಚಲಿಂಗಾಲ ಗ್ರಾಮದ ದೇವಾಲಯಕ್ಕೆ ನೀಡಿದರು.

ಕದಂಬಳಿಗೆ-೧೦೦೦ ನೊಳಂಬರು ಆಳಿದ ಪ್ರದೇಶ ನೊಳಂಬವಾಡಿಯಾದಂತೆ ಕದಂಬರು ಆಳಿದ್ದು ಕದಂಬಳಿಗೆಯಾಗಿದೆ. ಆದಿಕದಂಬರ ಕಾಲಕ್ಕೆ ಈ ವಿಭಾಗ ಅಸ್ತಿತ್ವದಲ್ಲಿದ್ದ ಬಗ್ಗೆ ಯಾವ ಆಧಾರಗಳೂ ಸಿಗುವುದಿಲ್ಲ. ಅಧಿಕಾರ ಕಳೆದುಕೊಂಡ ಕದಂಬರು ವಿವಿಧ ಶಾಖೆಗಳಾಗಿ ಕವಲೊಡೆದರು. ಹೀಗೆ 'ಅವರು ನೆಲೆನಿಂತ ಒಂದು ಪ್ರದೇಶವೆ ಕದಂಬಳಿಗೆ. ರಾಷ್ಟ್ರಕೂಟ ಕನ್ನರನ ಕ್ರಿ.ಶ. ೯೩೦ರ ನಂದಗುಡಿ ಶಾಸನ' ಇದರ ಪ್ರಾಚೀನ ಉಲ್ಲೇಖವಾಗಿದೆ(ಎಕ:೧೧(ರೈ): ದಾವಣಗೆರೆ ೧೧೯, ನಂದಗುಡಿ). ಕನ್ನಡ ಶಾಸನಗಳಲ್ಲಿ ಇದು ಕದಂಬಳಿಗೆನಾಡು, ಕದಂಬಳಿಗೆ ಸಾಯಿರ, ಕಡಂಬಳಿಗೆ ಸಾಯಿರ ಮುಂತಾಗಿ ಕಾಣಿಸಿಕೊಂಡಿದೆ. ರಾಷ್ಟ್ರಕೂಟರ ಕಾಲದಲ್ಲಿ ಇದು ಯಾವ ವಿಭಾಗಕ್ಕೆ ಸೇರಿತ್ತೆಂಬುದು ತಿಳಿಯುವುದಿಲ್ಲ. ಕಲ್ಯಾಣ ಚಾಲುಕ್ಯರ ಕಾಲಕ್ಕೆ ನೊಳಂಬ ವಾಡಿಯ ಉಪವಿಭಾಗವಾಗಿತ್ತು.ಸಾವಿರ ಹಳ್ಳಿಗಳ ಈ ಆಡಳಿತ ವಿಭಾಗದ ಮುಖ್ಯಪಟ್ಟಣ ಹರಪನಹಳ್ಳಿ ತಾಲೂಕಿನ 'ಕಡಬಗೆರೆ' ಗ್ರಾಮವಾಗಿದೆ. ಕ್ರಿ.ಶ. ೧೧೩೦ರ ನಂತರ ಪಾಂಡ್ಯರು ಉಚ್ಚಂಗಿಗೆ ರಾಜಧಾನಿ ಯನ್ನು ಬದಲಿಸಿಕೊಂಡರು. ಅಂದಿನಿಂದ ಕದಂಬಳಿಗೆನಾಡಿನ ಉಲ್ಲೇಖ ಮತ್ತು ಮಹತ್ವ ಕಡಿಮೆಯಾಯಿತು.

ಕ್ರಿಸ್ತಶಕ ೧೦೬೪ರ ಉಚ್ಚಂಗಿ ಶಾಸನ ಅಲ್ಲಿಯ 'ಪರ್ವತವು ಕದಂಬಳಿಗೆನಾಡ ಮಧ್ಯದ ಮೇರು'ವಿನಂತಿದ್ದಿತೆಂದು, ಆ ಪರ್ವತಕ್ಕೆ ಒಂದೊಂದು ಯುಗದಲ್ಲಿ ಒಂದೊಂದು

ಹೆಸರಿದ್ದಿತೆಂದು ಹೇಳಿದೆ(ಸೌಇಇ: ೯(೧):೧೨೬: ಉಚ್ಚಂಗಿ, ಹರಪನಹಳ್ಳಿ). ಕ್ರಿಸ್ತಶಕ ೧೧೯೯ರ ಬೇತೂರು ಶಾಸನ "ಕೋಗಳಿನಾಡೊಳಗ್ಗದ ಕದಂಬಳಿಗೆ ಸಾಯಿರ"ವೆಂದು ಹೇಳಿದೆ(ಎಕ: ೧೧(ರೈ): ದಾವಣಗೆರೆ: ೬, ಕ್ರಿಸ್ತಶಕ ೧೧೯೯, ಬೇತೂರು). ಅಂದರೆ ಈ ವೇಳೆಗೆ ಕದಂಬಳಿಗೆ ತನ್ನ ಮಹತ್ವವನ್ನು ಕಳೆದುಕೊಂಡು ಕೋಗಳಿಯಲ್ಲಿ ಸೇರಿಕೊಂಡಿತು. ಬನವಾಸಿ ಕದಂಬ ಮನೆತನ ಪತನಗೊಂಡ ಮೇಲೆ ಆ ವಂಶದವರು ಕನ್ನಡ ನಾಡಿನ ಇತರ ಭಾಗದಲ್ಲಿ ರಾಷ್ಟ್ರಕೂಟ, ಚಾಲುಕ್ಯರ ಸಾಮಂತರಾಗಿ ಆಳಿದರು. ಬಹುಶಃ ಇಂಥ ಒಂದು ಮನೆತನ ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳ ಪರಿಸರದಲ್ಲಿ ತಲೆಯೆತ್ತಿರಬೇಕು. ಇಲ್ಲವೆ ಅಲ್ಲಿ ಕೆರೆಯೊಂದನ್ನು ನಿರ್ಮಿಸಿ ದತ್ತಿ ನೀಡಿರಬೇಕು. 'ಕಡಬಗೆರೆ' ಹೆಸರಿನ ಮೂಲದಲ್ಲಿ(ಕಡಂಬ+ರ+ಕೆರೆ>ಕಡಬಗೆರೆ) ಇದ್ದುದು ಎದ್ದು ಕಾಣುತ್ತದೆ. ಒಟ್ಟಾರೆ ಇದು ಕದಂಬ ಅರಸರ ಆಳ್ವಿಕೆಯನ್ನು ನೆನಪಿಸುವ ಆಡಳಿತ ವಿಭಾಗವಾಗಿದೆ. ಅಸಗೋಡ(ಎಕ :೧೧(ರೈ):೧೨:೧೦: ೧೦೫೪, ಅಸಗೋಡ, ಜಗಳೂರು), ಬಾಡ(ಎಕ:೧೧(ರೈ):೧೪೦: ೧೦೬೦, ಬಾಡ, ದಾವಣಗೆರೆ), ಕೊಟಗನೂರು(ಎಕ :೧೧(ರೈ):೧೫೬: ೧೧೧೪ ಅಕ್ಟೋಬರ ೨, ಕಬ್ಬೂರು, ದಾವಣಗೆರೆ), ಕಂದಗಲ್ಲು(ಎಕ: ೧೧(ರೈ):೧೪೩: ೧೦೬೨ ಮಾರ್ಚ ೧೩, ಕಂದಗಲ್ಲು, ದಾವಣಗೆರೆ) ಗ್ರಾಮಗಳು ಕದಂಬಳಿಗೆ ಸಾಸಿರದಲ್ಲಿದ್ದವು. ಕದಂಬಳಿಗೆ ನಾಡಿನ ಪೂರ್ವಕ್ಕೆ ಹಡುವಗೆರೆ-೫೦೦, ದಕ್ಷಿಣಕ್ಕೆ ಆಸಂಧಿನಾಡು, ಪಶ್ಚಿಮಕ್ಕೆ ಬನವಾಸಿನಾಡಿನ ನೂರುಂಬಾಡ, ವಾಯುವ್ಯದಲ್ಲಿ ಮಾಸವಾಡಿ-೧೪೦(ಪುಲಿಗೆರೆ-೩೦೦) ಮತ್ತು ಈಶಾನ್ಯದಲ್ಲಿ ಬಲ್ಲಕುಂದೆ-೩೦೦ ಇದರ ಮೇರೆಗಳಾಗಿವೆ. ಇದರ ಉಪವಿಭಾಗಗಳು ಹೀಗಿವೆ.

ಕೊರವಾಡಿ-೩೦೦ ಇದು ಕದಂಬಳಿಗೆಯ ಉಪವಿಭಾಗ. ಕ್ರಿಸ್ತಶಕ ೯೬೮ರ ಗುಂಡೇರಿ ಶಾಸನದಲ್ಲಿ ಇದರ ಉಲ್ಲೇಖವಿದೆ(ಎಕ :೧೧(ರೈ): ೨೩: ಕ್ರಿ.ಶ. ೯೬೮, ಗುಂಡೇರಿ, ಹೊಳಲ್ಕೆರೆ). ಜಗಳೂರು, ಹೊಳಲ್ಕೆರೆ, ದಾವಣಗೆರೆ ತಾಲೂಕಿನ ಹಳ್ಳಿಗಳು ಇದರಲ್ಲಿ ಸೇರಿರಬೇಕು. ಇಲ್ಲಿಯ ಶಾಸನಗಳಲ್ಲಿ ಸಿಗುವ ವಿಭಾಗಗಳು ಇದರಲ್ಲಿ ಸೇರಿರಬೇಕು. ಅವು ಹೀಗಿವೆ.

ಬೆಳ್ತೂರು-೧೨ ದಾವಣಗೆರೆ ಶಾಸನ "ಕಡಂಬದೇಶ ಸಹಸ್ರಾಂತರ್ಗತ ಬೆಳ್ತೂರು ದ್ವಾದಶ" ಎಂದು ಹೇಳಿದೆ(ಎಕ:೧೧(ರೈ):೧, ೧೧೨೩, ದಾವಣಗೆರೆ). ದಾವಣಗೆರೆ ತಾಲೂಕಿನ ಬೇತೂರು ಗ್ರಾಮದ ಪ್ರಾಚೀನ ಹೆಸರು ಬೆಳ್ತೂರು ಆಗಿದೆ. ಆನೆಕೊಂಡ ಶಾಸನ "ನೊಣಂಬವಾಡಿಯೊಳಗ್ಗದ ಸಾವಿರ ನಾಡಿನೊಳು ಕರಂ ನಾಡೆಯುಮೊಳ್ಪುವೆತ್ತೆಸೆವ ಬೆಳ್ತುಱು" ಎಂದಿದೆ(ಎಕ: ೧೧(ರೈ): ೩: ೧೧೨೧ ಆನೆಕೊಂಡ, ದಾವಣಗೆರೆ). ಬೆಳ್ವೂರು, ತಾರಣವಳ್ಳಿ ಗ್ರಾಮಗಳು ಈ ವಿಭಾಗದಲ್ಲಿದ್ದವು(ಎಕ: ೧೧(ರೈ):೨:

೧೧೨೪, ದಾವಣಗೆರೆ, "ಬೆಲ್ತುಱು ಪನ್ನೆರಡರೊಳಗಣ ಬೆಳ್ವೂರ ತಾರಣವಳ್ಳಿ"). ಇದರೊಂದಿಗೆ ಬೆಳ್ತುರು ಗ್ರಾಮವು ಸೇರಿ ೩ ಹಳ್ಳಿಗಳ ಲೆಕ್ಕ ಸಿಗುತ್ತದೆ. ಉಳಿದ ೯ ಹಳ್ಳಿಗಳ ಬಗೆಗೆ ಇನ್ನೂವರೆಗೂ ಯಾವ ಮಾಹಿತಿಯೂ ಲಭ್ಯವಾಗಿಲ್ಲ. ಇದು ನೊಳಂಬರ ಚರಿತ್ರೆಯನ್ನು ಹೊಸ ಶೋಧಗಳೊಂದಿಗೆ ಮರುಕಟ್ಟುವ ಅವಶ್ಯಕತೆ ಇದೆ.

ಅರಹಟ-೧೨ ಕ್ರಿಸ್ತಶಕ ೧೧೨೩ರ ಗಾರೇಹಟ್ಟಿ ಶಾಸನದಲ್ಲಿ ಇದರ ಉಲ್ಲೇಖವಿದೆ(ಎಕ :೧೧(ರೈ): ೩೪, ೧೧೨೩ ಗಾರೇಹಟ್ಟಿ, ದಾವಣಗೆರೆ). ಗಾರೇಹಟ್ಟಿಯ ಪ್ರಾಚೀನ ಹೆಸರು 'ಅರಹಟ'ವಾಗಿದೆ. ಇದರಲ್ಲಿ ಹನ್ನೆರಡು ಹಳ್ಳಿಗಳಿದ್ದವು. ಅವುಗಳ ವಿವರ ಸಿಗುವುದಿಲ್ಲ.

ಜಗಳವುರ-೭೦ ದಾವಣಗೆರೆ ಜಿಲ್ಲೆಯ ತಾಲೂಕು ಕೇಂದ್ರವಾದ ಜಗಳೂರು ಎಪ್ಪತ್ತು ಹಳ್ಳಿಗಳ ಆಡಳಿತ ವಿಭಾಗವಾಗಿತ್ತು. ಗಾರೇಹಟ್ಟಿ ಶಾಸನದಲ್ಲಿ ಇದರ ವಿವರವಿದೆ(ಎಕ :೧೧(ರೈ): ೩೪, ೧೧೨೩ ಗಾರೇಹಟ್ಟಿ, ದಾವಣಗೆರೆ).

ಅತ್ತಿಗೇರಿ-೧೨ ಇದರ ಉಲ್ಲೇಖ ದಾವಣಗೆರೆ ತಾಲೂಕಿನ ಹಿರೆತೊಗಲೇರಿ ಶಾಸನ ದಲ್ಲಿದೆ. ಅದು "ಅತ್ತಿಗೇರಿ ಪನ್ನೆರಡಱ ಬಳಿಯ ಬಾಡಂ ತೊಗಲೇಱ" ಎಂದಿದೆ(ಎಕ:೧೧(ರೈ): ೧೩೫, ೧೧೦೯ ನವಂಬರ ೨೪, ಹಿರೆತೊಗಲೇರಿ, ದಾವಣಗೆರೆ). ಇದು ಕೊರವಾಡಿಯ ಉಪವಿಭಾಗವಾಗಿರಬೇಕು.

ಕಂಪಣ ಅಯ್ವತ್ತು ಇದು ಕದಂಬಳಿಗೆಯ ಉಪವಿಭಾಗ. ಮಳಲಕೆರೆ ಶಾಸನ 'ಕದಂಬಳಿಗೆ ಸಾಸಿರದ ಕಂಪಣವಯ್ವತ್ತು' ಎಂದು ಹೇಳಿದೆ(ಎಕ:೧೧(ರೈ): ೧೩೩, ಮಳಲಕೆರೆ, ದಾವಣಗೆರೆ). 'ಮಣಲಕೆರೆ' ಗ್ರಾಮವು ಇದರಲ್ಲಿ ಸೇರಿತ್ತು.

ಅರಕೆರೆ-೧೨: ಮೇದೂರು ಶಾಸನ "..ರೆಡೆವಟ್ಟ ೭೦ ಮನರಕೆಱೆ ಪನ್ನೆರಡುಂ" ಎಂದು ಹೇಳಿದೆ(ಕಇ:೪: ೩೯: ೧೧೧೧, ಮೇದೂರು, ಹಿರೇಕೆರೂರು). ಅಲ್ಲಿಯ ಮತ್ತೊಂದು ಶಾಸನ "x x x x x x x x ಸಿರದೊಳಗೆ [ಅ]ರಕೆಱೆ ಪನ್ನೆರಡ"ನ್ನು ಹೇಳಿದೆ(ಕಇ:೪: ೪೧: ೧೧-೧೨ನೆಯ ಶತಮಾನ, ಮೇದೂರು, ಹಿರೇಕೆರೂರು). ಹಳೆನಿಡನೇಗಿಲ ಶಾಸನ ಅರಕೆರೆ-೧೨ ನೊಳಂಬವಾಡಿಯ ಉಪವಿಭಾಗವೆಂದು ಸ್ಪಷ್ಟವಾಗಿ ಹೇಳಿದೆ(ಕಇ:೪:೧೩:೧೧೬೫ ಹಳೆನಿಡನೇಗಿಲ, ಹಿರೇಕೆರೂರು). ಆದ್ದರಿಂದ ಇಲ್ಲಿಯ ತ್ರುಟಿತ ಭಾಗವನ್ನು 'ನೊಳಂಬವಾಡಿ ಪನ್ನಿರ್ಚ್ಛಾಸಿರದೊಳಗೆ' ಎಂದು ಕಟ್ಟಿಕೊಡಬಹುದು. ದಾವಣಗೆರೆ ಜಿಲ್ಲೆ ಹೊನ್ನಾಳಿ ತಾಲೂಕಿನ ಅರಕೆರೆ ಗ್ರಾಮವು ಇದರ ಮುಖ್ಯ ಸ್ಥಳವಾಗಿದೆ. ಹೊನ್ನಾಳಿ ತಾಲೂಕಿನ ಹಳ್ಳಿಗಳು ಇದರಲ್ಲಿ ಸೇರಿರಬೇಕು.

ಭ್ರಾಂತಿ-೩೦ ಹಳೆನಿಡನೇಗಿಲ ಶಾಸನದಲ್ಲಿ ಇದರ ಉಲ್ಲೇಖವಿದೆ. ಇದು ಯಾವುದರ ಉಪವಿಭಾಗವೆಂಬುದು ತಿಳಿಯುವುದಿಲ್ಲ. ಹರಿಹರ ತಾಲೂಕಿನ ಭಾನುವಳ್ಳಿ ಇದರ ಮುಖ್ಯಪಟ್ಟಣವಾಗಿರುವ ಸಾಧ್ಯತೆಯಿದೆ.

ಕುಂದೂರು-೭೦ ಹಳೆನಿಡನೇಗಿಲ ಶಾಸನ ಮತ್ತು ಮೇಡೂರು ಶಾಸನಗಳಲ್ಲಿ ಇದರ ಉಲ್ಲೇಖವಿದೆ(ಕಇ:೪:೪೧, ೧೧-೧೨ನೆಯ ಶತಮಾನ, ಮೇಡೂರು, ಹಿರೇಕೆರೂರು). ದಾವಣಗೆರೆ ತಾಲೂಕಿನ ಕುಂದವಾಡ ಗ್ರಾಮವೇ ಇದರ ಮುಖ್ಯಸ್ಥಳವಾಗಿರಬೇಕು? ದಾವಣಗೆರೆ ತಾಲೂಕಿನ ವಾಯವ್ಯ ಭಾಗ ಮತ್ತು ಹರಿಹರ ತಾಲೂಕಿನ ವ್ಯಾಪ್ತಿಯನ್ನು ಹೊಂದಿರಬೇಕು.

ಇದುವರೆಗೆ ಕೊರವಾಡಿ-೩೦೦ರಲ್ಲಿ ಬೆಳ್ತೂರು-೧೨, ಅರಹಟ-೧೨, ಜಗಳವುರ-೭೦, ಅತ್ತಿಗೇರಿ-೧೨, ಕಂಪಣ ಅಯ್ವತ್ತು, ಅರಕೆರೆ-೧೨, ಭ್ರಾಂತಿ-೩೦, ಕುಂದೂರು-೭೦ ಸೇರಿ ೨೬೮ ಹಳ್ಳಿಗಳ ಲೆಕ್ಕ ಸಿಗುತ್ತದೆ(ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು(ಸಂ): ಕಲಬುರ್ಗಿ, ಎಂ.ಎಂ.: ೧೭೭-೧೮೦)

ಕೋಗಳಿ-೫೦೦ ಅಣಜಿಗೆರೆ ಶಾಸನ "ಸಾವಿರನಾಡದಲ್ಲಿ ಉಚ್ಚಂಗಿ ಮೂವತ್ತಱೊಳು ಕೂಚಿಗೊಳ"ವನ್ನು ಹೇಳಿದೆ. ಐದುನೂರು ಗ್ರಾಮಗಳ ಆಡಳಿತ ವಿಭಾಗವಾದ ಇದರ ಮುಖ್ಯಪಟ್ಟಣ ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ಕೋಗಳಿಯಾಗಿದೆ. ಈ ವಿಭಾಗದ ಉತ್ತರ ಮತ್ತು ಪಶ್ಚಿಮಕ್ಕೆ ತುಂಗಭದ್ರ ನದಿ, ಪೂರ್ವಕ್ಕೆ ಬಲ್ಲಕುಂದೆ-೩೦೦, ದಕ್ಷಿಣದಲ್ಲಿ ಆಗ್ನೇಯಕ್ಕೆ ಜಗಳೂರು-೭೦, ದಕ್ಷಿಣಕ್ಕೆ ಬೆಳ್ತೂರು-೧೨ ಬಾಹ್ಯ ಮೇರೆಗಳಾಗಿವೆ. ಹಿರೆಹಡಗಲಿ(ಎಸ್‌ಐಐ: ೧೦(೧): ೧೧೮: ೧೦೫೭ ಹಿರೇಹಡಗಲಿ), ನೀಲಗುಂದ(ಎಸ್‌ಐಐ :೧೦(೧): ೧೪೧: ೧೦೭೯ ಜನವರಿ ೨೦, ನೀಲ್ಗುಂದ), ಹನಸಿ(ಎಸ್‌ಐಐ: ೧೦(೧): ೧೮೪: ೧೧೧೧ ಜುಲೈ ೧೨, ಹನಸಿ), ಚಿಕ್ಕಮುಣಿಸೆ, ಪೊಳಲ್ಗುಂದ(ಎಸ್‌ಐಐ: ೧೦(೧): ೧೬೩: ೧೦೯೩ ಸಪ್ಪಂಬರ ೨೩, ಹೊಳಗುಂದಿ, ಹೂವಿನಹಡಗಲಿ), ಮೋರಿಂಗೆರೆ, ಮುತ್ತಲಿಗಿ, ಅಂಬಳಿ ಗ್ರಾಮಗಳು ಈ ವಿಭಾಗದಲ್ಲಿದ್ದುದು ಅಲ್ಲಿಯ ಶಾಸನಗಳಿಂದ ತಿಳಿಯುತ್ತದೆ. ಅಂಬಳಿ ಶಾಸನದಲ್ಲಿ ಈ ವಿಭಾಗದ ವರ್ಣನೆ ಹೀಗಿದೆ(ಎಸ್‌ಐಐ: ೧೦(೧):೧೫೩: ಕ್ರಿಸ್ತಶಕ ೧೦೮೩ ಅಂಬಳಿ, ಕೂಡ್ಲಿಗಿ).

ಜಲನಿಧಿವೇಷ್ಟಿತಾವನಿಗೆ ರಂಜಿಪ ಕುಂತಳದೇಶದೊಳ್ಮನಂ
ಗೊಳಿಪ ಮುಖಕ್ಕೆನಾಸಿಕಮೆನಿಪ್ಪವೊಲಿರ್ಪ್ಪ ನೊಣಂಬವಾಡಿ ನಾ
ಡೊಳಗಿದು ದ್ರಿ(ದೃ)ಷ್ಟಿ ತಾನೆನಿಪ ಕೋಗಳಿನಾಳ್ಕತಿರಮ್ಯಮಾಗಿ ರ
ಮ್ಮಳೆ ತಿಲಕಂಬೊಲಪ್ಪುದಮರಾವತಿಯಂತೆಸೆದನ್ತುನ್ಹೋರ್ಪ್ಪಡಂ

ಹೀಗೆ ಶಾಸನಗಳಲ್ಲಿ ತಿಳಿದುಬರುವ ಇದರ ಉಪವಿಭಾಗಗಳು ಮುಂದಿನಂತಿವೆ.

ಉಚ್ಚಂಗಿ-೩೦ ಎಂಬುದು ಹರಪನಹಳ್ಳಿ ತಾಲೂಕಿನ ಉಚ್ಚಂಗಿಯು ಪಾಂಡ್ಯರ

ಆಳ್ವಿಕೆಯಲ್ಲಿ ನೊಳಂಬವಾಡಿಯ ರಾಜಧಾನಿಯಾಗಿತ್ತು. ಜಗಳೂರು ತಾಲೂಕಿನ ಅಸಗೋಡು ಶಾಸನಗಳಲ್ಲಿ ಇದರ ಉಲ್ಲೇಖವಿದೆ(ಎಕ:೧೨(ರೈ): ೧೦: ಕ್ರಿಸ್ತಶಕ ೧೦೫೪, ಅಸಗೋಡ, ಜಗಳೂರು). ಉಚ್ಚಂಗಿಯ ಸುತ್ತಮುತ್ತಲಿನ ಮೂವತ್ತು ಹಳ್ಳಿಗಳು ಇದರಲ್ಲಿ ಸೇರಿದ್ದವು.

ಕೊಟ್ಟೂರು-೧೨ ಎಂಬುದು ಹಲ್ಯಂ ಶಾಸನ "ನಚಿದೇವರಸನು ಕೋಗಳಿಯಯ್ನೂಱುಮಂ ಕೊಟೂರ್ಪನ್ನೆರಡುಮಂ" ಅಳುತ್ತಿದ್ದನೆಂದು ಹೇಳಿದೆ. ಮುಂದುವರೆದು 'ಕುಂತಳ ದೇಶದೊಳು ಮುಖಾಂಭೋರುಹದಲ್ಲಿ ನಾಸಿಕಮೆನಿಪ್ಪವೊಲಿಪ್ಪ ನೊಣಂಬವಾಡಿಯೊಳು ಸಾರಮೆನಿಪ್ಪ ದ್ರಿಷ್ಟಿಯೆನೆ ಕೋಗಳಿ ಪಂಚಶತಂ ತಾನೆ ಕೋಟೂರೆಸೆದಿರ್ಪ್ಪ ದಿಂದ್ರನಮರಾವತಿ ಯುನ್ತೆವೊಲೆ ನ್ತುನೋರ್ಪ್ಪಡಂ' ಎಂದಿದೆ(ಕವಿವಿಶಾಸಂ:೧(ಬಳ್ಳಾರಿ ಜಿಲ್ಲೆ) ೨೬೪: ಕ್ರಿಸ್ತಶಕ ೧೧೫೪ ಹಲ್ಯಂ, ಕೂಡ್ಲಿಗಿ).

ಬಿಕ್ಕಿಗ-೭೦ ಎಂಬ ಎಪ್ಪತ್ತು ಗ್ರಾಮಗಳ ಈ ವಿಭಾಗದ ಉಲ್ಲೇಖ ನೀಲ್ಗುಂದ ಶಾಸನದಲ್ಲಿದೆ. "ಕೋಗಳಿಯಯ್ನೂಱರ ಕಂಪಣಂ ಬಿಕ್ಕಿಗನೆಪ್ಪತ್ತಱ ಮೊದಲ ಕಂಪಣ ಶ್ರೀಮದಗ್ರಹಾರಂ ನೀರ್ಗುಂದ" ಎಂದಿದೆ(ಎಸ್‌ಐಐ: ೯(೧): ೧೮೧: ಕ್ರಿಸ್ತಶಕ ೧೧೧೦, ನೀಲ್ಗುಂದ, ಹರಪನಹಳ್ಳಿ). ಇಲ್ಲಿಯ ಮತ್ತೊಂದು ಶಾಸನ "ವಿಕ್ಕಿಗ ಸಪ್ತಾತ್ಯನ್ತವ್ವತ್ತೀ ನೀರಗುಂದ ನಾಮಾಗ್ರಾಮಃ" ಎಂದು ಹೇಳಿದೆ(ಎಇಂ: ೧೨: ನಂ ೧೯: ಕ್ರಿಸ್ತಶಕ ೧೦೮೭, ನೀಲ್ಗುಂದ, ಹರಪನಹಳ್ಳಿ). ದಾವಣಗೆರೆ ಜಿಲ್ಲೆ ಹರಪನಹಳ್ಳಿ ತಾಲೂಕಿನ ದುಗ್ಗವತಿ(ಎಸ್‌ಐಐ: ೯(೧): ೧೪೫: ಕ್ರಿಸ್ತಶಕ ೧೦೭೯, ಬಾಗಳಿ), ಅರಸಿಕೆರೆ(ಎಇಂ: ೧೨: ೧೯: ಕ್ರಿಸ್ತಶಕ ೧೦೮೭, ನೀಲ್ಗುಂದ, ಹರಪನಹಳ್ಳಿ), ಈ ಶಾಸನದಲ್ಲಿ ಉಲ್ಲೇಖದ ಗ್ರಾಮಗಳು ಬಿಕ್ಕಿಗ-೭೦ರಲ್ಲಿದ್ದುದು ಶಾಸನಗಳಿಂದ ತಿಳಿಯುತ್ತದೆ. ಮುತ್ತಗೆ-೩೦ ಇದರ ಉಪವಿಭಾಗವಾಗಿರಬೇಕು.

ಮುತ್ತಗೆ-೩೦ ಎಂಬುದು ಗುಡಿಹಳ್ಳಿ ಶಾಸನ "ಕೋಗಳಿ ಐನೂಱಱ ಕಂಪಣ ಮುತ್ತಗೆ ಮೂವತ್ತಱ ಬಳಿಯ ಬಾಡಂ ಶ್ರೀಮದರಸಿಯಕೆಱೆಯ"ನ್ನು ಹೇಳಿದೆ. ಬೆಣ್ಣೆಹಳ್ಳಿ ಶಾಸನ "ಕೋಗಳಿಯೈನೂಱರ ಕಂಪಣ ಮುತ್ತಗೆ ಮೂವತ್ತಱೊಳಗಣ ಬೆಣ್ಣೆಗನೂರ"ನ್ನು ಹೇಳಿದೆ(ಎಇಂ: ೧೨: ೧೮೮: ಕ್ರಿಸ್ತಶಕ ೧೧೧೨ ಗುಡಿಹಳ್ಳಿ, ಹರಪನಹಳ್ಳಿ). ಹರಪನಹಳ್ಳಿ ತಾಲೂಕಿನ ಮುತ್ತಗಿ ಇದರ ಮುಖ್ಯಪಟ್ಟಣವಾಗಿದೆ. ಈ ತಾಲೂಕಿನ ಅರಸಿಕೆರೆ, ಬೆಣ್ಣೆಹಳ್ಳಿಗಳು ಇದರಲ್ಲಿ ಸೇರಿದ್ದವು.

ಬೆಣ್ಣೆಕಲ್ಲು-೧೨ ಎಂಬ ಹೆಸರಿನ ಚಿಕ್ಕನಾಡನ್ನು ಬೆಣ್ಣೆಕಲ್ಲು ಶಾಸನ "ಕೋಗಳಿಯಯಿನೂಱಱ ಬೆಂಣೆಕಲ್ಲು ಹಂನೆರಡ" ವಿಭಾಗವನ್ನು ಹೇಳಿದೆ. ಇದು ಹಗರಿಬೊಮ್ಮನಹಳ್ಳಿ ತಾಲೂಕಿನ ಬೆಣ್ಣೆಕಲ್ಲು ಗ್ರಾಮವಾಗಿದೆ(ಎಇಂ:೧೨:೨:ಕ್ರಿಸ್ತಶಕ:೧೨೨೬

ಬೆಣ್ಣೆಕಲ್ಲು, ಹಗರಿಬೊಮ್ಮನಹಳ್ಳಿ).

ಬೆಣ್ಣೆವೂರು-೧೨ ಎಂಬುದನ್ನು ಕುರುವತ್ತಿ ಶಾಸನ "ಬೆಣ್ಣೆವೂರ್ಪ್ಪನ್ನೆರಡುಮಂ ಸುಖದಿನಾಳುತ್ತಮಿರೆ ಆ ನಾಡೊಳಗ್ರಹಾರಂ... ಕುಱುವರ್ತ್ತಿ" ಎಂದು ಹೇಳಿದೆ(ಕವಿವಿಶಾಸಂ: ೧: ೧: ಕ್ರಿಸ್ತಶಕ ೧೦೯೯, ಕುರುವತ್ತಿ, ಹಡಗಲಿ). ಇಲ್ಲಿಯ ಮತ್ತೊಂದು ಶಾಸನ "ಬೆಂಣೆಯೂರ ೧೨"ನ್ನು ಹೇಳಿದೆ(ಕವಿವಿಶಾಸಂ: ೧: ೮: ಕ್ರಿಸ್ತಶಕ ೧೨೦೮, ಕುರುವತ್ತಿ). ಅಲ್ಲದೆ "ಬೆಂಣೆವೂರು ಹಂನೆರಡ..... ಹೆರಡ"ದ ಉಲ್ಲೇಖ ಅಲ್ಲಿಯ ಶಾಸನದಲ್ಲಿದೆ(ಕವಿವಿಶಾಸಂ:೧:೪೨:೧೨೬೩ ಹ್ಯಾರಡ, ಹಡಗಲಿ). ಮಾವನಗಂಧವಾರಣ ಬಿರುದಿನ "ಮಧುವರ್ಮದೇವರು ಬೆಣ್ಣೆವುರ ಪನ್ನೆ[ರಡು]" ವಿಭಾಗವನ್ನು ಆಳುತ್ತಿದ್ದನು(ಕವಿವಿಶಾಸಂ:೧:೪೭:ಕ್ರಿಸ್ತಶಕ:೧೦೨೫, ಕತ್ತೆಬೆನ್ನೂರು, ಹಡಗಲಿ). ಹಡಗಲಿ ತಾಲೂಕಿನ ಕತ್ತೆಬೆನ್ನೂರು ಇದರ ಮುಖ್ಯಪಟ್ಟಣವಾಗಿದೆ. ಈ ತಾಲೂಕಿನ ಕುರುವತ್ತಿಯು ಇದರಲ್ಲಿ ಸೇರಿತ್ತು.

ಮೊಸಳೆಮಡು-೧೨ ತಳಕಲ್ಲು ಶಾಸನ ಕೋಗಳಿ-೫೦೦ರಲ್ಲಿಯ ಕಂಪಣ "ಮೊಸ . ವದು ಪನ್ನೆರಡಱ ಬಟಿಯ ಬಸಿಕೋಡ" ಗ್ರಾಮವನ್ನು ಹೇಳಿದೆ(ಕವಿವಿಶಾಸಂ:೧:೪೧: ೧೦೫೨-೫೩:ತಳಕಲ್ಲು, ಹಗರಿಬೊಮ್ಮನಹಳ್ಳಿ). ಇದರ ಮುಖ್ಯಸ್ಥಳ ಹಡಗಲಿ ತಾಲೂಕಿನ ಮಸಲವಾಡ ಗ್ರಾಮವಾಗಿದೆ.

ಸೋಗೆ-೧೨ ತಳಕಲ್ಲು ಶಾಸನವು ಸಿಂದವಂಶದ ಮಹಾಸಾಮಂತ ಬರ್ಮದೇವರಸನು "ಕೋಗಳಿ ಅಯ್ನೂಱರ ಕಂಪಣ ಸೋಗೆ ಪನ್ನೆರಡರ ಬಟಿಯಗ್ರಹಾರಂ ತೊಣಕಲಿಯುಮಂ" ಆಳುತ್ತಿದ್ದನೆಂದು ಹೇಳಿದೆ(ಕವಿವಿಶಾಸಂ:೧:೪೧:೧೦೫೨-೫೩, ತಳಕಲ್ಲು, ಹಗರಿಬೊಮ್ಮನಹಳ್ಳಿ). ಹಡಗಲಿ ತಾಲೂಕಿನ ಸೋಗಿ ಇದರ ಮುಖ್ಯಸ್ಥಳವಾಗಿದ್ದರೆ ಹಗರಿಬೊಮ್ಮನಹಳ್ಳಿ ತಾಲೂಕಿನ ತಳಕಲ್ಲು ಪ್ರಾಚೀನ ತೊಣಕಲಿ ಗ್ರಾಮವಾಗಿದೆ.

ಹಾಲ್ವೊಳ-೧೨ ಹನ್ನೆರಡು ಗ್ರಾಮಗಳನ್ನೊಳಗೊಂಡ ಈ ವಿಭಾಗದ ಉಲ್ಲೇಖ ಹೂವಿನಹಡಗಲಿ ಶಾಸನದಲ್ಲಿದೆ(ಕವಿವಿಶಾಸಂ:೧:೧೩೫:ಕ್ರಿಸ್ತಶಕ:೧೦೭೧ ಹೂವಿನಹಡಗಲಿ). ಅಲ್ಲಿ "ಕೋಗಳಿ ಅಯ್ನೂಱರ ಬಳಿಯ ಕಂಪಣಂ ಹಾಲ್ವೊಳಂ ಪನ್ನೆರಡಱೊಳಗಣ ಕೊಟಿಗನೂರಂ" ಎಂದಿದೆ. ಇದು ಹಡಗಲಿ ತಾಲೂಕಿನ ಹಾರ್ವಾಳ(ಅರವಾಳ) ಗ್ರಾಮವಾಗಿದೆ. ಅಲ್ಲಿಯ ಮತ್ತೊಂದು ಶಾಸನ "ಕೋಗಳಿ ಐನೂಱಱ ಕಂಪಣಂಮಾಲ್ವೊಳ ಪನ್ನಿ(ನ್ನೆ)ರದ(ಡ)ಱ ಬಳಿಂಯ ಬಾಡವುಗ್ರಹಾರಂ ಪುಲಿ.ಱುಯ"ವನ್ನು ಹೇಳಿದೆ. ಇದು ಪುಲಿಚೆರು ಗ್ರಾಮವಾಗಿರಬೇಕು(ಇದಸಂ:೧೧:೯೬:೧೨೦).

ಹುಲುಮಯಿ-೧೨ ಎಂಬುದು ತಳಕಲ್ಲು ಶಾಸನ ಕೋಗಳಿ-೫೦೦ರ ಕಂಪಣ "ಹುಲುಮಯಿ ಪಂನೆರಡಱ ಬಳಿಯ ನಿಟ್ಟೂರಮುಮಂ" ಸಿಂದರಸ ಬರ್ಮದೇವನು

ಆಳುತ್ತಿದ್ದನೆಂದು ಹೇಳಿದೆ(ಕವಿವಿಶಾಸಂ:೧:೪೧:ಕ್ರಿಸ್ತಶಕ:೧೦೫೨-೫೩:ತಳಕಲ್ಲು, ಹಗರಿಬೊಮ್ಮನಹಳ್ಳಿ). ಹರಪನಹಳ್ಳಿ ತಾಲೂಕಿನ ಹಲುವಾಗಿಲು ಇದರ ಮುಖ್ಯಸ್ಥಳವಾಗಿದೆ. ಅಲ್ಲದೆ ಈ ತಾಲೂಕಿನ ನಿಟ್ಟೂರು ಇದರಲ್ಲಿ ಸೇರಿತ್ತು.

ಹಲಸಿ-೧೨ ಕೂಡ್ಲಿಗಿ ತಾಲೂಕಿನ ಹನಸಿ ಇದರ ಮುಖ್ಯಸ್ಥಳವಾಗಿದೆ. ಇದುವರೆಗೆ ಕೋಗಳಿ-೫೦೦ ವಿಭಾಗದಲ್ಲಿ ಉಚ್ಚಂಗಿ-೩೦, ಕೊಟ್ಟೂರು-೧೨, ಬಿಕ್ಕಿಗ-೭೦(ಮುತ್ತಗೆ ೩೦), ಬೆಣ್ಣೆಕಲ್ಲು-೧೨, ಬೆಣ್ಣೆವೂರು-೧೨, ಮೊಸಳೆಮಡು-೧೨, ಸೋಗೆ-೧೨, ಹಾಲ್ವೊಳ-೧೨, ಹುಲುಮಯಿ-೧೨ ಮತ್ತು ಹಲಸಿ-೧೨ ಸೇರಿ ೧೯೬ ಹಳ್ಳಿಗಳಿದ್ದದು ದಾಖಲಾಗಿದೆ. ಅದರಂತೆ ಕದಂಬಳಿಗೆ-೧೦೦೦ದಲ್ಲಿ ಕೊರವಾಡಿ-೩೦೦, ಕೋಗಳಿ-೫೦೦ ಸೇರಿ ೮೦೦ ಹಳ್ಳಿಗಳ ಲೆಕ್ಕ ಸಿಗುತ್ತದೆ. ಉಳಿದ ೨೦೦ ಹಳ್ಳಿಗಳ ವಿಭಾಗವನ್ನು ಶೋಧಿಸಬೇಕಾಗಿದೆ.

ಕಣಿಯಕಲ್ಲು-೩೦೦ ಎಂಬುದನ್ನು ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿ ಚೋಳವಂಶದ ಘಟೆಯಂಕಕಾರನು ಈ ವಿಭಾಗವನ್ನು ಆಳುತ್ತಿದ್ದನು(ಆಕಶಾಸಂ:೧:೧೧೧:ಕ್ರಿಸ್ತಶಕ:೧೧೧೯ ಉರುವಕೊಂಡ, ಗುತ್ತಿ, ಅನಂತಪುರ). ಮಹಾಮಂಡಳೇಶ್ವರ ಮಂಗರಸನು ರೊದ್ದ-೩೦೦ ಮತ್ತು ಕಣಿಯಕಲ್ಲು-೩೦೦ಗಳನ್ನು ಆಳುತ್ತಿದ್ದನು. ಶಾಸನವು ಇವುಗಳನ್ನು 'ಎರಡಱುನೂರು' ವಿಭಾಗಗಳೆಂದು ಕರೆದಿದೆ(ಪೂರ್ವೋಕ್ತ ೧೬೬ ಗುತ್ತಿ). ಬೆಳ್ವೊಳ ಮತ್ತು ಪುಲಿಗೆರೆಗಳಂತೆ ಇವು ಅಕ್ಕಪಕ್ಕದ ವಿಭಾಗಗಳಾಗಿದ್ದು, ನೊಳಂಬವಾಡಿ ವಿಭಾಗಕ್ಕೆ ಸೇರಿರಬೇಕು. ೧ನೆಯ ಸೋಮೇಶ್ವರನ ಸಾಮಂತ ಚೋಳ ಬಚ್ಚರಸ, ಗೋನರಸ ಮತ್ತು ಭೀಮರಸರು "ಅಯಣ್ಯವಾಡಿ ಮೂನೂಱುಮಂ ಕಣಿಯಲ್ಮೂನೂಱು" ವಿಭಾಗಗಳನ್ನು ಆಳುತ್ತಿದ್ದರು. ಈ ವಿಭಾಗವು ರಾಯದುರ್ಗ, ಕಲ್ಯಾಣದುರ್ಗ, ಮಡಕಸಿರ ಮತ್ತು ಕರ್ನಾಟಕದ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕಿನ ವ್ಯಾಪ್ತಿ ಹೊಂದಿರಬೇಕು. ಈ ತಾಲೂಕಿನ ಶಾಸನಗಳಲ್ಲಿ ಕಾಣಸಿಗುವ ವಿಭಾಗಗಳು ಇದರಲ್ಲಿ ಸೇರಿರಬೇಕು. ಇದನ್ನು ನೊಳಂಬಪಲ್ಲವರು ಆಳುತ್ತಿದ್ದರು. ಇದರ ಉಪವಿಭಾಗಗಳು ಕೆಳಗಿನಂತಿವೆ. ಗೋವಿಂದವಾಡಿ ಕೊರ್ರೆವು ಶಾಸನ ಚಾಲುಕ್ಯ ಜಗದೇಕಮಲ್ಲನ ಸಾಮಂತ ವೀರನೊಳಂಬ ಬಮ್ಮದೇವ ಚೋಳಮಹಾರಾಜ ಈ ವಿಭಾಗ ಆಳುತ್ತಿದ್ದನೆಂದು ಹೇಳಿದೆ(ಆಕಶಾಸ ೧: ೭೦: ಕಾಲ ನಿರ್ದೇಶನವಿಲ್ಲ: ಕೊರ್ರೆವು, ಮಡಕಸಿರ). ನರಸಾಪುರೆ(ಆಕಶಾಸ ೧: ೧೭೮: ಕ್ರಿಸ್ತಶಕ ೧೧೨೫, ನರಸಾಪುರ, ಕಲ್ಯಾಣದುರ್ಗ)ಮತ್ತು ಎರಡು ಕೆರೆ ಶಾಸನಗಳಲ್ಲಿ ಇದರ ಉಲ್ಲೇಖವಿದೆ. ರಾಯದುರ್ಗ ತಾಲೂಕಿನ ಗೋವಿಂದ ವಾಡ ಗ್ರಾಮವೇ ಇದರ ಮುಖ್ಯಸ್ಥಳವಾಗಿದೆ. ಗೋವಿಂದವಾಡಿಯ ಸಂಗಮೇಶ್ವರ ದೇವರಿಗೆ ಆರನೆಯ ವಿಕ್ರಮಾದಿತ್ಯನು ದತ್ತಿ ನೀಡಿದ್ದಾನೆ(ಆಕಶಾಸ ೧: ೨೦೬: ಕ್ರಿಸ್ತಶಕ ೧೦೭೩, ಸಂಗಮೇಶ್ವರ, ರಾಯದುರ್ಗ). ಶಾಸನವು ಆರಂಭದಲ್ಲಿ ಚಕ್ರವರ್ತಿಯನ್ನು ಪ್ರಸ್ತಾಪಿಸದೆ ನೇರವಾಗಿ ಆರನೆಯ ವಿಕ್ರಮಾದಿತ್ಯನನ್ನು ಹೇಳಿದೆ. ಇದು ಅವನ ಸ್ವತಂತ್ರ ನಡವಳಿಕೆಯನ್ನು

ಸೂಚಿಸುತ್ತದೆ.

ಚಿರಪಿ-೧೨ ಎಂಬುದು ಇರಿವನೊಳಂಬನ ಸಾಮಂತ ಮಲ್ಲಣಸಿವರಿ ಎಂಬುವನು ಚಿರಪಿ ೧೨ನ್ನು ಆಳುತ್ತಿದ್ದನು(ಆಕಶಾಸ ೧: ೮೧: ೯೫೦-೫೧:ಮಡಕಸಿರ). ಇದರಲ್ಲಿ ಚಿರುಪಿ, ಚಿನ್ತಕುಂಟೆ, ಚಿಜಿಯವೊಟಲು ಮತ್ತು ವಳುವಟ್ಟು ಗ್ರಾಮಗಳು ಸೇರಿದ್ದವೆಂದು ಶಾಸನಗಳು ಹೇಳಿವೆ. ಉಳಿದ ೮ ಹಳ್ಳಿಗಳನ್ನು ಗುರುತಿಸ ಬೇಕಾಗಿದೆ.

ಚೋರಮವಾಡಿನಾಡು ಎಂಬುದು ಮಡಕಸಿರ ತಾಲೂಕಿನ ಅಗಳಿ ಶಾಸನದಲ್ಲಿ ಇದರ ಉಲ್ಲೇಖವಿದೆ. ನೊಳಂಬಾಧಿ ರಾಜನು ಇದನ್ನು ಆಳುತ್ತಿದ್ದನು(ಆಕಶಾಸ ೧: ೫೩: ಕಾಲ ನಿರ್ದೇಶನವಿಲ್ಲ: ಅಗಳಿ, ಮಡಕಸಿರ). ಇದರಲ್ಲಿ ಸೇರಿದ್ದ ಹಳ್ಳಿಗಳ ವಿವರ ತಿಳಿಯುವುದಿಲ್ಲ.ಪೊಳಲಿನಾಡು ಕಾಲ ನಿರ್ದೇಶನವಿಲ್ಲದ ಹೇಮಾವತಿ ಶಾಸನ 'ಪೊ[ಳ]ಲಿನಾಡುಳ್ಕೊಲೆಯೂರ ಬರಗೂರಂ ಬಿಜ ಅಮಾದೇವಿ' ಆಳುತ್ತಿದ್ದಳೆಂದು ಹೇಳಿದೆ(ಆಕಶಾಸ ೧: ೧೦೪: ಕಾಲ ನಿರ್ದೇಶನವಿಲ್ಲ, ಹೇಮಾವತಿ). ಇದರಲ್ಲಿ ಸೇರಿದ್ದ ಹಳ್ಳಿಗಳ ಮಾಹಿತಿ ಸಿಗುವುದಿಲ್ಲ.

ಬಂಗಿಚೆರು-೩೦ ಎಂಬುದು ಇದು ಗೋವಿಂದವಾಡಿಯ ಉಪವಿಭಾಗ. ನರಸಾಪುರ ಶಾಸನ "ಕಣಿಯಕಲ್ಲು ದಕ್ಷಿಣ ದಿಸಾಭಾಗದ ಬಂಗಿಚೆರು ಮೂವತ್ತರ" ಮನ್ನೆಯವನ್ನು ದತ್ತಿ ನೀಡಿದ್ದನ್ನು ಹೇಳಿದೆ(ಆಕಶಾಸ ೧: ೧೭೮: ೧೧೨೫ ಜನವರಿ ೪, ನರಸಾಪುರ, ಕಲ್ಯಾಣದುರ್ಗ). ಕಲ್ಯಾಣದುರ್ಗ ತಾಲೂಕಿನ ಬೆಳ್ದುಗುನ್ದೆ, ಕುಂದುರುಪೆ ಗ್ರಾಮಗಳು ಇದರಲ್ಲಿ ಸೇರಿರಬೇಕು. ಸೀರೆನಾಡು ಹೇಮಾವತಿ ಶಾಸನ 'ಸೀರುನಾಡೊಳಗಣ ಹೆಂಜೆಱ ಪಟ್ಟಣದ ಮಹಾಘಟಿಕಾಸ್ಥಾನ ಶ್ರೀನೊಳಂಬೇಶ್ವರ ದೇವ'ರಿಗೆ ಕೊರೆಹ ಗ್ರಾಮವನ್ನು ದತ್ತಿಯಾಗಿ ನೀಡಿದರೆಂದು ಹೇಳಿದೆ(ಆಕಶಾಸ ೧: ೧೦೨: ಕ್ರಿಸ್ತಶಕ ೧೨೦೬: ಹೇಮಾವತಿ, ಮಡಕಸಿರ). ಅದು ಮಡಕಸಿರ ತಾಲೂಕಿನ 'ಕೊರ್ರೆವು' ಗ್ರಾಮವಾಗಿದೆ. ಇಲ್ಲಿಯ ಮತ್ತೊಂದು ಶಾಸನ ಇದೇ ವಿಷಯವನ್ನು ಉಲ್ಲೇಖಿಸಿ ನೊಳಂಬೇಶ್ವರ ದೇವರಿಗೆ 'ವೆಡುಲಚಿನ್ತೆ' ಗ್ರಾಮ ನೀಡಿದರೆಂದು ಹೇಳಿದೆ(ಆಕಶಾಸ ೧: ೧೦೩: ೧೧೬೭: ಹೇಮಾವತಿ). ಮಡಕಸಿರ ಗ್ರಾಮದ ಪ್ರಾಚೀನ ಹೆಸರು ಸೀರೆನಾಡು ಆಗಿದೆ. ಇದರ ರಾಜಧಾನಿ ಹೆಂಜೇರಪಟ್ಟಣ. ಅಲ್ಲಿಯ ಶಾಸನ 'ಸೀರೆನಾಡ ಶ್ರೀಮದ್ರಾಜಧಾನಿ ಹೆಂಜೆಱ' ಎಂದು ಸ್ಪಷ್ಟವಾಗಿ ಹೇಳಿದೆ(ಆಕಶಾಸ ೧: ೧೦೬: ಕ್ರಿಸ್ತಶಕ ೧೧೬೨: ಹೇಮಾವತಿ). ಹೆಂಜೇರ ಪಟ್ಟಣವು ಏಕಕಾಲದಲ್ಲಿ ನೊಳಂಬವಾಡಿ ಮತ್ತು ಸೀರೆನಾಡುಗಳ ರಾಜಧಾನಿಯಾಗಿತ್ತು.

ಸುಳಿಯನೂರು-೭೦ ಇದು ಸೀರೆನಾಡಿನ ಉಪವಿಭಾಗವೆಂಬುದು "ಸೀರೆನಾಡೊಳಗಣ ಸುಳಿಯನೂರೆಪ್ಪತ್ತಱ ಬಳಿಯೆರಡುಕೆರೆ"(ಆಕಶಾಸ ೧: ೧೬೭, ಕ್ರಿಸ್ತಶಕ ೧೧೫೯,

ಎರಡುಕೆರೆ, ಕಲ್ಯಾಣದುರ್ಗ) ಬೆಳಕು ಚೆಲ್ಲುತ್ತದೆ. ಪ್ರಸ್ತುತ ಶಾಸನವಿರುವ ಎರಡುಕೆರೆ ಗ್ರಾಮವು ಸುಳಿಯನೂರು ವಿಭಾಗದಲ್ಲಿತ್ತು. ಇದುವರೆಗೆ ಸೀರೆನಾಡಿನಲ್ಲಿ ಪೊಳಲಿನಾಡು ಮತ್ತು ಸುಳಿಯನೂರು-೭೦ ಮಾತ್ರ ತಿಳಿದಿವೆ. ಇದುವರೆಗೆ ಕಣಿಯಕಲ್ಲು ೩೦೦ರಲ್ಲಿ ಗೋವಿಂದವಾಡಿ, ಚಿರಪಿ-೧೨, ಚೋರಮ ವಾಡಿನಾಡು, ಪೊಳಲಿನಾಡು, ಬಂಗಿಚೆರು-೩೦, ಸೀರೆನಾಡು(ಸುಳಿಯನೂರು-೭೦) ಸೇರಿ ೧೧೨ ಹಳ್ಳಿಗಳಿವೆ.

ಕುಕ್ಕವಾಡಿ-೩೦೦ ಎಂಬುದು ಗುಂಜನೂರು ಗ್ರಾಮದ ಕ್ರಿಸ್ತಶಕ ೧೧೨೬ರ ಶಾಸನ ಈ ವಿಭಾಗವನ್ನು ಹೇಳಿದೆ(ಎಕ:೧೧: (ರೈ): ಹೊಳಲಕೆರೆ ೬೮: ಕ್ರಿಸ್ತಶಕ ೧೧೨೬: ಚಿತ್ರದುರ್ಗ). ಇದು ಕೂಡ ನೊಳಂಬವಾಡಿಯ ಉಪವಿಭಾಗವಾಗಿರಬೇಕು.

ಬಲ್ಲಕುಂದೆ-೩೦೦ ಎಂಬುದು ಬಳ್ಳಾರಿ ಜಿಲ್ಲೆ ಸಿರಗುಪ್ಪ ತಾಲೂಕಿನ ಬಲಕುಂದಿ ಗ್ರಾಮವು ಈ ವಿಭಾಗದ ಮುಖ್ಯಪಟ್ಟಣವಾಗಿದೆ. ಮೂರುನೂರು ಹಳ್ಳಿಗಳ ಆಡಳಿತ ವಿಭಾಗವಾಗಿ ರೂಪುಗೊಂಡ ಬಲ್ಲಕುಂದೆನಾಡು ಶಾಸನಗಳಲ್ಲಿ ಬಲ್ಲಕುನ್ದ ವಿಷಯ, ಬಲ್ಲಕುಂದೆ ಮೂನೂಱು ಮತ್ತು ಬಲ್ಲಕುಂದೆನಾಡು ಎಂದು ಕಾಣಿಸಿಕೊಂಡಿದೆ. ಬಾದಾಮಿ ಚಾಲುಕ್ಯ ಕೀರ್ತಿವರ್ಮ, ಕ್ರಿ.ಶ. ೯೪೭ರ ಕುಡುತಿನಿ ಶಾಸನ ರಾಷ್ಟ್ರಕೂಟರ ೩ನೇ ಕೃಷ್ಣನ ಆಳ್ವಿಕೆಯ ಶಾಸನಗಳಲ್ಲಿ ಈ ವಿಭಾಗದ ಉಲ್ಲೇಖವಿಲ್ಲ. ಮುಂದೆ ಕ್ರಿಸ್ತಶಕ ೧೦೧೭ರ ವೇಳೆಗೆ ಅದು ಮೂರುನೂರು ಹಳ್ಳಿಗಳ ವಿಭಾಗವಾಗಿ ಮಾರ್ಪಟ್ಟಿತು(ಎಸ್‌ಐಐ: ೯(೧): ೨೬೪: ಕ್ರಿಸ್ತಶಕ ೧೧೫೪: ಹಲ್ಯಂ, ಕೂಡ್ಲಿಗಿ). ಆರಂಭದಲ್ಲಿ 'ಬಲ್ಲಕುನ್ದ ವಿಷಯ'ವೆನಿಸಿದ್ದ ಈ ನಾಡು ಮುಂದಿನ ೬೦ ವರ್ಷಗಳ ಅವಧಿಯಲ್ಲಿ ಮೂರುನೂರು ಹಳ್ಳಿಗಳ ವಿಭಾಗವಾಗಿ ರೂಪುಗೊಂಡಿತು. ರಾಷ್ಟ್ರಕೂಟರ ಕಾಲದಲ್ಲಿ ಚಿಕ್ಕವಿಭಾಗವಾಗಿದ್ದ ನೊಳಂಬವಾಡಿ ಮುಂದೆ ೩೨೦೦೦ ಗ್ರಾಮಗಳ ದೊಡ್ಡ ವಿಭಾಗವಾಗಿ ಬೆಳೆದಾಗ ಕೋಗಳಿ-೫೦೦, ಕದಂಬಳಿಗೆ-೧೦೦೦, ಸಿಂದವಾಡಿ-೧೦೦೦ಗಳ ಜೊತೆಗೆ ಬಲ್ಲಕುಂದೆಯೂ ಇದರ ಉಪವಿಭಾಗವಾಯಿತು. ರಾಷ್ಟ್ರಕೂಟ ಮತ್ತು ಚಾಲುಕ್ಯರ ಕಾಲದಲ್ಲಿ ಇದನ್ನು ಸಿಂಧ್ ವಂಶದ ಅರಸರು ಆಳ್ವಿಕೆ ಮಾಡಿದ್ದರು.

ಅಂದಿನ ಆಡಳಿತ ವಿಭಾಗಗಳ ಹಿನ್ನೆಲೆಯಲ್ಲಿ ಬಲ್ಲಕುಂದೆನಾಡಿನ ಮೇರೆಗಳನ್ನು ಗುರುತಿಸುವುದು ಸುಲಭ ಸಾಧ್ಯ. ಪಶ್ಚಿಮದಲ್ಲಿ ಕೋಗಳಿನಾಡಿನ ಉಪವಿಭಾಗವಾದ ಕೊಟ್ಟೂರು-೧೨, ಹಲಸಿ-೧೨, ದಕ್ಷಿಣದಲ್ಲಿ ಬೆಣ್ಣೆಕಲ್ಲು-೧೨, ಪೂರ್ವದಲ್ಲಿ ಆದವಾನಿ-೫೦೦ ಮತ್ತು ಉತ್ತರದಲ್ಲಿ ಪಶ್ಚಿಮಕ್ಕೆ ಎಡೆದೊರೆ-೨೦೦೦ ನಾಡಿನ ಕೆಳವಾಡಿ-೩೦೦, ಉತ್ತರದ ತುದಿಯಲ್ಲಿ ಆದವಾನಿ-೫೦೦ ಬಲ್ಲಕುಂದೆನಾಡಿನ ಬಾಹ್ಯ ಮೇರೆಗಳಾಗಿವೆ. ಇದರ ಉಪವಿಭಾಗಗಳು ಕೆಳಗಿನಂತಿವೆ.

ದೊರವಡಿ–೭೦ ಇದು ಬಲ್ಲಕುಂದೆನಾಡಿನ ದೊಡ್ಡ ಉಪವಿಭಾಗಗಳಲ್ಲಿ ಒಂದು. ಸೊಂಡೂರು ತಾಲೂಕಿನ ಚಿಕ್ಕ ಹಳ್ಳಿಯಾದ ದರೋಜಿಯು ಇದರ ಮುಖ್ಯ ಪಟ್ಟಣವಾಗಿದೆ. ಓರುವಾಯಿ ಮತ್ತು ಹಂಪೆ ಶಾಸನಗಳು ಈ ಉಪವಿಭಾಗಗಳನ್ನು ಉಲ್ಲೇಖಿಸಿವೆ. ಅದು "ಫಳಿತಸುರಕುಜದ ಚಲ್ವಂ ತಳೆದಿರ್ದ ಬಲ್ಲಕುಂದೆ ನಾಡೊಳ್ತಳ್ತೊಂದೊಳ್ಗೊಂ ಬಂತೆ" ರಂಜಿಸುತ್ತಿತ್ತೆಂದು ಹಂಪೆ ಶಾಸನ ಬಣ್ಣಿಸಿದೆ.

ಸ್ವಾಮಿ ಆರುಂಬಾಡ ಎಂಬುದು ಕುರಿಕುಪ್ಪೆ ಶಾಸನ ಮಂಡಳೇಶ್ವರ ಪೆರ್ಮಾಡಿ ಕಲಿದೇವರಸನ ಅಧಿಕಾರಿ ಲಕ್ಕಯ್ಯನು ಬಲಕುಂದೆ, ದೊರವಡಿ ಮತ್ತು ಸ್ವಾಮಿ ಆರುಂಬಾಡಗಳನ್ನು ಕುರುಗೋಡಿನಿಂದ ಆಳುತ್ತಿದ್ದನೆಂದು ಹೇಳಿದೆ. ಕುರಿಕುಪ್ಪೆ ಅದರಲ್ಲಿ ಒಂದು ಅಗ್ರಹಾರವಾಗಿತ್ತು(ಕವಿವಿಶಾ: ೧: ೨೦: ೧೫೨೩: ಕುರಿಕುಪ್ಪೆ, ಸೊಂಡೂರು). ಈ ವಿಭಾಗದಲ್ಲಿ ಹಂಪಿ, ಹೊಸವೂರು(ಇಂದಿನ ಹೊಸಪೇಟೆ), ದರೋಜಿ, ತಾಳೂರು(ಕವಿವಿಶಾ: ೧: ೧೯: ಕ್ರಿಸ್ತಶಕ ೧೨೧೮: ತಾಳೂರು, ಸೊಂಡೂರು), ಕುರಿಕುಪ್ಪೆ ಸೇರಿ ಐದು ಹಳ್ಳಿಗಳು ಸೇರಿಕೊಂಡಿವೆ.

ಸಬಾಲ ...ಎಪ್ಪತ್ತು ಇದು ಬಲ್ಲಕುಂದೆನಾಡಿನ ಮತ್ತೊಂದು ಉಪವಿಭಾಗ. ಕುಡತಿನಿ ಶಾಸನ "'ಕೊಟ್ಟೆ[ತ್ತೊಣೆಯ] ಸ್ಥಾನದಯ್ದು ವರ್ಗದ ಸಬಾಲ x x x ಳ್ಪತ್ತರ ಗಾ x x ಸನ್ನಿಧಾನದೊಳ್" ದಾನ ಬಿಟ್ಟುದನ್ನು ಹೇಳಿದೆ(ಕವಿವಿಶಾ: ೧: ೬: ೯೯೬: ಕುಡತಿನಿ: ಬಳ್ಳಾರಿ) ಕುಡತಿನಿಯ ಇತರ ಶಾಸನಗಳಲ್ಲಿ ಇದರ ಉಲ್ಲೇಖವಿಲ್ಲ.

ನಲ್ವಿಡಿ–೧೨ ಬಳ್ಳಾರಿ ತಾಲೂಕಿನ ನೆಲ್ಲುಡಿ ಗ್ರಾಮ ಇದರ ಮುಖ್ಯಪಟ್ಟಣವಾಗಿದೆ. ಓರುವಾಯಿ ಶಾಸನದಲ್ಲಿ ''ನಲ್ವಡಿ–೧೨ಱ ಕಂಪಣಂ ಒರ್ವಾಯು''ವನ್ನು ಹೇಳಿದೆ(ಕವಿವಿಶಾ: ೧: ೪೪: ೧೦೩೬: ಔರುವಾಯಿ). ವಿಪ್ರ ಶಾಸನ "ಬಲ್ಲಕುಂದೆ ಮುನೂಱಱ ಕಂಪಣಂ ನಿಲ್ವಿಡಿ ಪನ್ನೆರಡಱ ಬಳಿಯ ಬಾಡ ಇಕುಪಱಯ" ಗ್ರಾಮವನ್ನು ಕಂಪಿಲೆಯ ಗವರೇಶ್ವರದ ಸಿದ್ಧೇಶ್ವರದೇವರಿಗೆ ನೀಡಿದರೆಂದು ಹೇಳಿದೆ(ಕವಿವಿಶಾ: ೨: ೧: ಕ್ರಿಸ್ತಶಕ ೧೦೮೭: ವಿಪ್ರ, ಗಂಗಾವತಿ). ಇಲ್ಲಿಯ ಇಕುಪಳಯ ಗ್ರಾಮವು ಈಗಿನ ವಿಪ್ರವೇ ಆಗಿರಬೇಕು. ತುಂಗಭದ್ರಾ ನದಿಯ ಉತ್ತರದ ದಂಡೆಯ ಮೇಲಿರುವ ಗಂಗಾವತಿ ತಾಲೂಕಿನ ವಿಪ್ರ ಗ್ರಾಮವು ನಲ್ವಿಡಿ–೧೨ಕ್ಕೆ ಸೇರಿದೆ. ಓರುವಾಯಿಯ ಶಾಸನಗಳಲ್ಲಿ ಕೆಲವು ಹಳ್ಳಿಗಳು ಕಾಣಿಸಿಕೊಳ್ಳುತ್ತವೆ.

ಬಳ್ಳಾರೆ–೩೦ ಎಂಬುದು ಕೋಳೂರು ಶಾಸನದಲ್ಲಿ ಈ ವಿಭಾಗದ ಉಲ್ಲೇಖವಿದೆ(ಕವಿವಿಶಾ: ೧: ೪: ಕ್ರಿಸ್ತಶಕ ೧೦ನೆಯ ಶತಮಾನ, ಕೋಳೂರು ಬಳ್ಳಾರಿ). ನೊಳಂಬಪಲ್ಲವ "ಮಂಗಪರಸನು ಬಳ್ಳಾರೆ ಮುವತ್ತಱ ಪೊಲೆಯು"ರಿಗೆ ದಾನ

ಬಿಟ್ಟಿದ್ದಾನೆ. ಬಳ್ಳಾರಿ ಯನ್ನೊಳಗೊಂಡು ಅದರ ಸುತ್ತ ಮುತ್ತಲಿರುವ ಸಿರಿವಾರ, ಕಪ್ಪಗಲ್ಲು, ಕೋಳೂರು, ಕೊಳಗಲ್ಲುಗಳು ಇದರಲ್ಲಿ ಸೇರಿರಬೇಕು.

ತೆಕ್ಕೆಕಲ್ಲು-೧೨ ಎಂಬುದು ಸಿರುಗುಪ್ಪ ತಾಲೂಕಿನ ತೆಕ್ಕಲಕೋಟೆ ಇದರ ಮುಖ್ಯಪಟ್ಟಣವಾಗಿದೆ. ಸಿರುಗುಪ್ಪ(ಕವಿವಿಶಾ: ೧: ಕ್ರಿಸ್ತಶಕ ೧೯೯೨: ಸಿರುಗುಪ್ಪ) ಮತ್ತು ಸಾಲಗುಂದೆ(ಕವಿವಿಶಾ: ೭ ಮತ್ತು ೪: ಕ್ರಿಸ್ತಶಕ ೧೦೬೩: ಸಾಲಗುಂದಿ, ಸಿಂಧನೂರು) ಶಾಸನಗಳಲ್ಲಿ ಈ ವಿಭಾಗದ ಉಲ್ಲೇಖವಿದೆ.

ಸಾವಿಮಲೆ(ಮೀಳ್ಮಲೆ) ಎಂಬುದು ಸೊಂಡೂರು ತಾಲೂಕಿನ ಕುಮಾರಸ್ವಾಮಿಬೆಟ್ಟವನ್ನು ಒಳಗೊಂಡ ಪ್ರದೇಶವನ್ನು ಸಾವಿಮಲೆ ಎಂದು ಕರೆಯುತ್ತಿದ್ದರು. ಸೊಂಡೂರು ಶಾಸನದಲ್ಲಿ ಮೀಳ್ಮಲೆಯು ಉಲ್ಲೇಖವಿದೆ. ಈ ತಾಲೂಕಿನ ಸ್ವಾಮಿಹಳ್ಳಿಯೆ ಸಾವಿಮಲೆ ಮುಖ್ಯಪಟ್ಟಣವಾಗಿರಬೇಕು. ಇದರಲ್ಲಿ ಎಷ್ಟು ಹಳ್ಳಿಗಳಿದ್ದವೆಂಬುದು ಶಾಸನಗಳಿಂದ ತಿಳಿಯುವುದಿಲ್ಲ. ಹಿಂದೆಯೇ ನೋಡಿದಂತೆ ಕುಮಾರಸ್ವಾಮಿಬೆಟ್ಟ, ಕುಡತಿನಿ ಮತ್ತು ಕೊಳಗಲ್ಲುಗಳು ಕಾರ್ತಿಕೇಯ ಸ್ವಾಮಿಯ ತಪೋವನಗಳಾಗಿವೆ. ಇವುಗಳಿಗೆ ಒಬ್ಬರೆ ತಪೋವನಾಧಿಪತಿಗಳು ಇರುತ್ತಿದ್ದರು. ಅವರ ಪರಂಪರೆ ಮುಂದುವರೆದುಕೊಂಡು ಬಂದುದಕ್ಕೆ ಆಧಾರಗಳಿವೆ. ಆದ್ದರಿಂದ ಸಾವಿಮಲೆಯು ಬಲ್ಲಕುಂದೆನಾಡಿನ ಉಪವಿಭಾಗವಾಗಿರಬೇಕು. ಸೊಂಡೂರು ಮತ್ತು ಅದರ ದಕ್ಷಿಣಕ್ಕಿರುವ ಈ ತಾಲೂಕಿನ ಹಳ್ಳಿಗಳು ಇದರಲ್ಲಿ ಸಮಾವೇಶಗೊಂಡಿವೆ. ಸೊಂಡೂರು ಶಾಸನದಲ್ಲಿ ಕಾಣಸಿಗುವ ಮೀಳ್ಮಲೆ, ಕಗಿನ್ಯಪುರ(ಕಾಳಿಂಗೇರಿ), ಕೆಱಿಯುಪಳ್ಳಿ (ಕೆರಿಯಾಗಿನಹಳ್ಳಿ), ಹೊಂನ್ನೊಱೆಯಪಳ್ಳಿ, ಬೆಳ್ಗುಪ್ಪೆ, ಲಖ್ಖೆಯಕಟ್ಟೆ(ಲಕ್ಕಲಹಳ್ಳಿ?), ಸೊಂಡೂರು, ಒಱವಿನಕುಪ್ಪೆ, ಕಡುವಿನಬೆಂಚೆ ಮತ್ತು ದೇವರಿ ಗ್ರಾಮಗಳು ಇದರಲ್ಲಿ ಸೇರಿರಬೇಕು.

ಮಹಾರಾಜವಾಡಿ-೭೦೦೦

ಇದು ನೊಳಂಬವಾಡಿ-೩೨೦೦೦ನಾಡಿನ ಉಪವಿಭಾಗವಾಗಿರಬೇಕು. ಕೋಲಾರ ಜಿಲ್ಲೆ ಶ್ರೀನಿವಾಸಪುರ ತಾಲೂಕಿನ ಚಾಕನಪಲ್ಲಿ ಶಾಸನದಲ್ಲಿ ಇದರ ಉಲ್ಲೇಖವಿದೆ(ಎಂಎಆರ್: ೧೯೨೮: ಶಾ.ಸಂ. ೩೧: ಕ್ರಿಸ್ತಶಕ ೧೦೫೬). "ಮಹರಾಜಾಡಿಯ ಮಹಾದೇವನು" ದತ್ತಿ ನೀಡಿದ ವಿವರ ೧೪ನೆಯ ಶತಮಾನದ ಹಸುಗೂಲಿ ಶಾಸನದಲ್ಲಿದೆ(ಎಕ: ೩: ೩೨: ಕ್ರಿಸ್ತಶಕ ೧೪ನೆಯ ಶತ: ಹಸುಗೂಲಿ, ಗುಂಡ್ಲುಪೇಟೆ). ಕಾಲ ನಿರ್ದೇಶನವಿಲ್ಲದ ಅಬ್ಬಾವರಂ ಶಾಸನ "ಮಾರುಜವಾಡಿಯೊಳಗಣ ವಂಗಿಮಡುವಿನ ಸ್ತಳದಲು ವ್ರಾತ ಅಬ್ಬವುರ" ಗ್ರಾಮವನ್ನು ತ್ರಿಯಂಬಕದೇವರ ಸೇವೆಗೆ ನೀಡಿದರೆಂದು ಹೇಳಿದೆ(ಆಕಶಾಸ :೨: ೩೬೩: ಅಬ್ಬಾವರಂ, ರಾಯಚೋಟಿ).

ರೇನಾಡು-೭೦೦೦

ಎಂಬುದು ಶಂಗಂ ಕಾಲದ ಎರುಮೆನಾಡಿನ ಭಾಗವಾದ ಇದು ನೊಳಂಬವಾಡಿ ವಿಭಾಗಕ್ಕೆ ಸೇರಿರಬೇಕು. ಎರುಮೆ ಜನಾಂಗ ವಾಸವಾಗಿದ್ದ ಈ ಪ್ರದೇಶವನ್ನು ಶಾಸನಗಳು 'ಎರುಮೆನಾಡು', 'ಎರುಮರ್ರೈನಾಡು' ಎಂದು ಕರೆದಿವೆ. ಇದು ಎರುಮೆ+ಅರ+ ನಾಡು>[ಎರುಮೆ]ರೇನಾಡು ಎಂದು ಬದಲಾಗಿರಬೇಕು. ಅಲ್ಲದೆ ಎರುಮೆ>ಎಮ್ಮೆ/ ಎರುಮೆ+ ಊರವರ್>ಎಮ್ಮೆಯೂರವರ ಆಗಿರಬೇಕು. ಮುಂದೆ ಇದು ಸಂಸುತಿರುಗಿ 'ಮಹಿಷ' ಆಗಿರಬೇಕು. ವೈದುಂಬ ದೊರೆ ಗಂಡ ತ್ರಿಣೇತ್ರ ಈ ವಿಭಾಗವನ್ನು ಆಳುತ್ತಿದ್ದನು. ಆಗ ವೆಳುಂಗಗುಂಟ(ಇಂದಿನ ವೆಲಿಗಲ್ಲು) ಗ್ರಾಮದಲ್ಲಿ ದತ್ತಿ ನೀಡಿದ್ದಾರೆ(ಆಕಶಾಸ: ೧: ೨೪೪, ಕಾಲ ನಿರ್ದೇಶನವಿಲ್ಲ, ವಲಿಗಲ್ಲು, ಮದನಪಲ್ಲಿ) ಎಂಬುದಾಗಿ ತಿಳಿದು ಬರುತ್ತದೆ.

ಮಡಂಬ-೫೦೦

ಎಂಬುದಕ್ಕೆ ವಡ್ಡಾರಾಧನೆಯ ಕತೆಗಳಲ್ಲಿ ದ್ರೋಣ, ಪತ್ತನ ಎಂದು ಕರೆಯಲಾಗಿದೆ. ಈ ವಡ್ಡಾರಾಧನೆಯಲ್ಲಿ ಮಡಂಬ ಮೊದಲಾದ ಊರುಗಳ ಉಲ್ಲೇಖ ಬರುತ್ತದೆ. 'ಮಡಂಬ' ಎಂಬ ಪದಕ್ಕೆ ಐದು ನೂರು ಹಳ್ಳಿಗಳಿಗೆ ಮುಖ್ಯವಾದ ನಗರ ಎಂಬ ಅರ್ಥವಿದೆ. ಆದ್ದರಿಂದ ಶಾಸನಗಳಲ್ಲಿ ಕಾಣಸಿಗುವ ಮಡಂಬೂರು ಮೂಲತಃ ಐದು ನೂರು ಹಳ್ಳಿಗಳ ಅಡಳಿತ ವಿಭಾಗವಾಗಿರಬೇಕು. ಮುಂದೆ ಇದರಲ್ಲಿ ಹಲವು ಉಪವಿಭಾಗಗಗಳು ಕಾಣಿಸಿಕೊಂಡಿದ್ದು, ಅವುಗಳಲ್ಲಿ ಮಡಂಬೂರು-೧೨ ಕೂಡ ಒಂದಾಗಿರಬೇಕು. ಆದರೆ ಇದುವರೆಗೆ ಲಭ್ಯವಾದ ಶಾಸನಗಳಲ್ಲಿ ಮಡಂಬೂರು-೫೦೦ರ ಪ್ರಸ್ತಾಪವಿಲ್ಲ. ಹೀಗೆ ಹಲವು ಉಪನಾಡುಗಳು ಇದರಲ್ಲಿ ಸೇರಿವೆ.

ರೇನಾಡು-೭೦

ಎಂಬುದು ಮಹಾಮಂಡಳೇಶ್ವರ ಚಿದ್ದಣಚೋಳನು ಅತ್ಯಣಚೋಳ ಮಹಾರಾಜನ ಸಾಮಂತನಾಗಿ ಹೆಡಕಲ್ಲು, ಅವುಕುಮಂ ವಿಭಾಗಗಳ ಜೊತೆಗೆ 'ರೇನಾ ಡೆರ್ಪ್ಪತ್ತುಮಂ' ಆಳುತ್ತಿದ್ದನು(ಆಕಶಾಸಂ: ೨: ೩೮೧: ಕ್ರಿಸ್ತಶಕ ೧೧೨೪: ಪೆದ್ದಮುಡಿಯಂ, ಜಮ್ಮಲಮಡುಗು, ಕಡಪ). ಇವರಿಬ್ಬರೂ ೬ನೇ ವಿಕ್ರಮಾದಿತ್ಯನ ಸಾಮಂತರಾಗಿದ್ದರು. ಇನ್ನೂ ಮುಂದೆ ಕ್ರಿ.ಶ. ೧೧೩೪ರಲ್ಲಿ "ಹಂಡಕಲ್ಲು ಕನ್ನೆನಾಡು ರೇನಾಡು" ಮೊದಲಾದ ವಿಭಾಗಗಳನ್ನು ನಂದ್ಯಾಲೆಯ ಬೀಡಿನಿಂದ ಮಹಾಮಂಡಳೇಶ್ವರ ವಂಕಣ ಚೋಳ ಮಹಾರಾಜನು ಆಳುತ್ತಿದ್ದನು(ಆಕಶಾಸಂ: ೧: ಶಾ.ಸಂ. ೩೬೨: ಕ್ರಿಸ್ತಶಕ ೧೧೩೪: ಕೊಲಿಮಿಗುಂಡ್ಲ, ಕೋಯಿಲಕುಂಟ್ಲ, ಕರ್ನೂಲ). ಮಹಾಮಂಡಳೇಶ್ವರ ನಲ್ಲಸಿದ್ದಣ್ಣದೇವ ಚೋಳನು ಮೂಲಿಕಿ,

ಹೆಡಕಲ್ಲು, ಕನ್ನೆ ೩೦೦ಗಳ ಜೊತೆಗೆ 'ರೇನಾಡೆಳ್ಪತ್ತುಮಂ' ಅಳುತ್ತಿದ್ದನು(ಆಕಶಾಸಂ: ೧೨:ಶಾ.ಸಂ. ೩೬೬: ಕ್ರಿಸ್ತಶಕ ೧೧೯೨, ಚೌದೂರು, ಪ್ರೊದ್ದಟ್ಟೂರು, ಕಡಪ). ಇಲ್ಲಿ ಬರುವ 'ಕೊಲ್ಮಗುಡಿಯು' ಈಗಿನ ಕೊಲಿಮಿಗುಂಡ್ಲ ಗ್ರಾಮವಾಗಿದೆ.

ರೊದ್ದ–೩೦೦

ಇದು ನೊಳಂಬವಾಡಿಯ ಉಪವಿಭಾಗವಾಗಿರುವ ಸಾಧ್ಯತೆ ಇದೆ. ಹಾವಲಗಿ ಶಾಸನದಲ್ಲಿ ಈ ವಿಭಾಗದ ಉಲ್ಲೇಖವಿದೆ(ಆಕಶಾಸಂ: ೨: ಶಾ.ಸಂ.೧೬೬, ಕ್ರಿಸ್ತಶಕ ೧೦೭೯: ಹಾವಲಗಿ, ಗುತ್ತಿ). ಇದು ಅನಂತಪುರ ಜಿಲ್ಲೆ ಪೆನುಕೊಂಡ ತಾಲೂಕಿನ 'ಪಿನಾಕಿನಿ' ನದಿ ತೀರದ ಪ್ರದೇಶವನ್ನೊಳಗೊಂಡಿದೆ(ಕಂದೂರಿ ಈಶ್ವರದತ್ತ, ಉಲ್ಲೇಖ: ನಾಗಯ್ಯ ಜೆ. ಎಂ., ಆರನೆಯ ವಿಕ್ರಮಾದಿತ್ಯನ ಶಾಸನಗಳು:೧೨೫). ಹೊಯ್ಸಳ ೩ನೆಯ ಬಲ್ಲಾಳನ ಅಧಿಕಾರಿ ಮಾಚಿಯ ದಣ್ಣಾಯಕನು ಪೆನುಗೊಂಡೆಯ ನೆಲೆವೀಡಿನಿಂದ ಆಳುತ್ತಿದ್ದಾಗ 'ಹಡುಹೆ..'ಯ(ಕೊಡುಗೆಪಲ್ಲಿ) ಗವುಂಡರಿಗೆ ಬೆಣಗೂರನ್ನು ಕೊಡುಗೆಯಾಗಿ ನೀಡಿದನು(ಆಕಶಾಸಂ: ೧ ಮತ್ತು ೫: ಕ್ರಿಸ್ತಶಕ ೧೩೨೮: ಕೊಡಿಗೆಪಲ್ಲಿ, ಹಿಂದುಪುರ). ಅಮರಾಪುರ ಶಾಸನ ಮಹಾಮಂಡಳೇಶ್ವರ 'ರೊದ್ದದ ಗೋವ' ಬಿರುದಿನ 'ಯಿರುಂಗೋಳದೇವಚೋಳ' ರಾಜನು ನಿಡುಗಲ್ಲ ನೆಲೆವೀಡಿನಿಂದ ಆಳುತ್ತಿದ್ದ ನೆಂದು ಹೇಳಿದೆ(ಆಕಶಾಸಂ: ೧: ೫೬, ಕ್ರಿಸ್ತಶಕ ೧೨೭೭, ಅಮರಾಪುರ, ಮಡಕಸಿರ). ಅವನು ತೈಲಂಗೆಱೆಯ ಜೋಗವಟ್ಟಿಗೆಯ ಬಸದಿಗೆ ದತ್ತಿ ನೀಡಿದನು. ಈ ಶಾಸನ ಅಲ್ಲಿಯ ಜೈನ ಬಸದಿಯಲ್ಲಿದೆ. ಆದ್ದರಿಂದ ಈಗಿನ ಅಮರಾಪುರದ ಪ್ರಾಚೀನ ಹೆಸರು ತೈಲಂಗೆಱೆಯಾಗಿರುವ ಸಾಧ್ಯತೆಯಿದೆ.

ಪೆನ್ನಪರಿನಾಡು

ತಾಡಪತ್ರಿ ಎಂಬಲ್ಲಿ ದೊರೆತ ಒಂದು ಶಾಸನದಲ್ಲಿ ಈ ವಿಭಾಗದ ಉಲ್ಲೇಖವಿದೆ. ಪ್ರಾಚೀನ ಆಂಧ್ರಪ್ರದೇಶದ "ತೆಂಕಣಾಧಾರಿಣಿಯಲ್ಲಿ ಪೆನ್ನಪರಿನಾಡು ನಿರಂತರ ಒಪ್ಪಿ ತೋಱುಗುಂ" ಎಂದು ಹೇಳಿದೆ. ಇದು ಪ್ರಾಚೀನ ಕರ್ನಾಟಕದ ಪೂರ್ವದ ಗಡಿಯಾಗಿತ್ತೆಂದು ಶಾಸನ ಸ್ಪಷ್ಟವಾಗಿ ಹೇಳಿದೆ. ಪೆನ್ನೇರು ನದಿಯಿಂದ ಈ ವಿಭಾಗಕ್ಕೆ 'ಪೆನ್ನಪರಿನಾಡು' ಎಂಬ ಹೆಸರು ಬಂದಿದೆ.

ತಾಡಪತ್ರಿಯು ಈ ವಿಭಾಗದ ರಾಜಧಾನಿಯಾಗಿತ್ತು. ಉದಯಾದಿತ್ಯನು "ಶ್ರೀಮದ್ರಾಜಧಾನಿ ತಾಟಿಪಾಟಿಪುರದ ನೆಲೆವೀಡಿನಿಂದ" ಆಳುತ್ತಿದ್ದನು. ಮೋಪುರ, ವಂಗನೂರು, ಗೋನಹಾಳ ಗ್ರಾಮಗಳು ಇದರಲ್ಲಿ ಸೇರಿದ್ದವು. ತಾಡಪತ್ರಿ, ಅನಂತಪುರ

ತಾಲೂಕಿನ ಹಳ್ಳಿಗಳು ಇದರಲ್ಲಿ ಸೇರಿರಬೇಕು. ಸೇವುಣ ಸಿಂಘಣನ ಆಳ್ವಿಕೆಯಲ್ಲಿ ಮೇಡಿಕುರ್ತಿ ಶಾಸನ ಮಲ್ಲೆಯ ಸಾಹಣಿಯು "ರಾಜಧಾನಿ ಪಟ್ಟಣಂ ವೆಲ್ಲನೂರ ಮಧ್ಯದಲು ಚಿತ್ರವೊಳಿ ಶ್ರೀಜಸಮೇಶ್ವರ ಪ್ರತಿಷ್ಠೆ ಮಾಡಿ" ಮೇಡಿಕುಱುಡು(ಈಗಿನ ಮೇಡಿಕುರ್ತಿ) ಗ್ರಾಮದ ಆದಾಯವನ್ನು ನೀಡಿದರು(ಆಕಶಾಸಂ: ೧: ೨೦೯, ೧೨೨೦, ಮೇಡಿಕುರ್ತಿ, ತಾಡಪತ್ರಿ). ಇಲ್ಲಿ ಉಲ್ಲೇಖಗೊಂಡ 'ಚಿತ್ರವೊಳಿ' ಎಂಬುದು ಈಗಿರುವ ಚಿತ್ರಾವತಿ ನದಿಯಾಗಿದೆ. ಅದು ಜಮ್ಮಲಮಡುಗು ತಾಲೂಕಿನಲ್ಲಿ ಪೆನ್ನೇರು ನದಿಯೊಂದಿಗೆ ಕೂಡಿಕೊಳ್ಳುತ್ತದೆ.

ಹೊಯ್ಸಳ ೨ನೆಯ ಬಲ್ಲಾಳನು ತಳಕಾಡು, ಗಂಗವಾಡಿ, ನೊಳಂಬವಾಡಿಗಳನ್ನು ಆಳುತ್ತಿದ್ದಾಗ "ಹಱುಹನಾಡ ಹಱುವೆಯ ಕೆಱಿಗೆ ಗುರುಗುಂಜಿ ಕೋಲಿ"ನಲ್ಲಿ ಭೂಮಿ ನೀಡಿದನು. ಹಿಂದುಪುರ ತಾಲೂಕಿನ ಪರಗಿ ಗ್ರಾಮದ ಪ್ರಾಚೀನ ಹೆಸರು ಹಱುಹವಾಗಿದ್ದು, ಅದು ವಿಭಾಗವೊಂದರ ಮುಖ್ಯಸ್ಥಳವಾಗಿದೆ(ಆಕಶಾಸಂ: ೧: ೨೬, ೧೧೭೮, ಪೆರಿಗಿ, ಹಿಂದುಪುರ). ಇದರಲ್ಲಿ ಎಷ್ಟು ಹಳ್ಳಿಗಳು ಸಮಾವೇಶಗೊಂಡಿದ್ದವೆಂಬುದು ಶಾಸನದಿಂದ ತಿಳಿಯುವುದಿಲ್ಲ.

ಸಿಂದವಾಡಿ-೧೦೦೦

ಇದು ನೊಳಂಬವಾಡಿಯ ಪ್ರಮುಖ ಆಡಳಿತ ವಿಭಾಗ. ಸಿಂದವಂಶದ ಅರಸರು ಈ ಪ್ರದೇಶವನ್ನು ಆಳುತ್ತಿದ್ದರು. ತೆಲುಗು ಶಾಸನಗಳು ಇವರನ್ನು 'ಚಿನ್ದ'ರೆಂದು ಕರೆದಿವೆ. ದ್ರಾವಿಡ ಭಾಷೆಯಲ್ಲಿ ಚಿನ್ದ>ಸಿನ್ದ(ಚ>ಸ) ಬದಲಾವಣೆ ಸಹಜವಾಗಿದೆ. ಅಲ್ಲದೆ ಚಿನ್ದವಾಡಿ ಹೆಸರಿನ ಆಡಳಿತ ವಿಭಾಗವೂ ಇಲ್ಲಿ ಕಾಣಸಿಗುತ್ತದೆ. ಬಳ್ಳಾರಿ ತಾಲೂಕಿನ ಹಗರಿನದಿ ದಂಡೆಯ ಮೇಲೆ ಸಿಂದವಾಳ ಹೆಸರಿನ ಗ್ರಾಮವಿದೆ. ಅದು ಸಿಂದವಾಡಿಗೆ ಸೇರಿತ್ತೆಂದು ಶಾಸನಗಳು ಸ್ಪಷ್ಟವಾಗಿ ಹೇಳಿವೆ(ಎಸ್‌ಐಐ: ೯(೧):೨೨೪:೧೧೩೦ ಸಿಂದವಾಳ). ಆದ್ದರಿಂದ ಪೆದ್ದಹೊಟೂರು ಶಾಸನದಲ್ಲಿ ಬರುವ 'ಚಿನ್ದವಾಡಿ' ಮತ್ತು ಸಿಂದವಾಳಗಳು(ವಾಳ<ವಾಡ) ಒಂದೇ ಆಗಿರಬೇಕು. ಇದು ನಿಜವಾದರೆ ಸಿಂದವಾಳವು ಈ ವಿಭಾಗದ ಆರಂಭದ ರಾಜಧಾನಿಯಾಗಿರಬೇಕು. ಕಲ್ಯಾಣ ಚಾಲುಕ್ಯರ ಕಾಲಕ್ಕೆ ಅದು ತುಂಬುಳ ಗ್ರಾಮಕ್ಕೆ ಸ್ಥಳಾಂತರವಾಯಿತು(ಆಕಶಾಸಂ:೧:೩೦೮:೧೧೮೪ ಮಲಕಾಪುರ).

ಆಂಧ್ರಪ್ರದೇಶದ ಕರ್ನೂಲು ಜಿಲ್ಲೆಯ ಆದೋನಿ, ಆಲೂರು; ಅನಂತಪುರ ತಾಲೂಕಿನ ಗುತ್ತಿ; ಬಳ್ಳಾರಿ ತಾಲೂಕಿನ ಪೂರ್ವಭಾಗ ಮತ್ತು ಸಿರುಗುಪ್ಪ ತಾಲೂಕಿನ ಪೂರ್ವ-ಈಶಾನ್ಯ ಭಾಗದ(ವೇದಾವತಿ ಮತ್ತು ಪೆನ್ನಾರ ನದಿಗಳ ನಡುವಿನ ಪ್ರದೇಶ)

ಹಳ್ಳಿಗಳು ಇದರಲ್ಲಿ ಸೇರಿದ್ದವು. ಅಂದಿನ ಆಡಳಿತ ವಿಭಾಗಗಳ ಹಿನ್ನೆಲೆಯಲ್ಲಿ ಹೇಳುವುದಾದರೆ ಉತ್ತರದಲ್ಲಿ ಈಶಾನ್ಯಕ್ಕೆ ಅಯಜೆ–೩೦೦ ವಾಯುವ್ಯಕ್ಕೆ ಅಯ್ಯಣವಾಡಿ–೩೦೦, ಮಧ್ಯದಲ್ಲಿ ಮುದಗುಂದೂರು–೩೦೦; ಪೂರ್ವಕ್ಕೆ ಪೆಡಕಲ್ಲು–೮೦೦, ದಕ್ಷಿಣಕ್ಕೆ ನಳವಾಡಿ–೫೦೦; ಪಶ್ಚಿಮಕ್ಕೆ ಬಲ್ಲಕುಂದೆ–೩೦೦ ಇದರ ಬಾಹ್ಯ ಮೇರೆಗಳಾಗಿವೆ. ತುರುಮರ ವಿಷಯ : ಬಾದಾಮಿ ಚಾಲುಕ್ಯ ವಿನಯಾದಿತ್ಯನ ಸಾಮಂತ ಬಾಣರಾಜ ವಿಕ್ರಮಾದಿತ್ಯನು ಈ ವಿಭಾಗ ಆಳುತ್ತಿದ್ದನೆಂದು ಬೇತಪಲ್ಲಿ ಶಾಸನ ಹೇಳಿದೆ(ಆಕಶಾಸಂ:೧:೧೫೯: ಕಾಲ ನಿರ್ದೇಶನವಿಲ್ಲ: ಬೇತಪಲ್ಲಿ, ಗುತ್ತಿ). ಈ ಶಾಸನಗಳ ಹಿನ್ನೆಲೆಯಲ್ಲಿ ಅವರ ಪ್ರಾದೇಶಿಕ ಆಡಳಿತದ ಬಾಹ್ಯ ಮೇರೆಗಳನ್ನು ಗುರುತಿಸಲು ಸಾಧ್ಯವಾಗುತ್ತದೆ.

ಇದುವರೆಗೆ ಆದವಾನಿ–೫೦೦ ವಿಭಾಗದಲ್ಲಿ ಇನ್ನಪಲ್ಲಿ–೧೨, ಕಂದಕೂರು–೨೪, ಕವತಾಳ–೧೨, ಕುಡಿಯಪೆ–೪೦, ಗರುಜೆ–೭೦, ಗುಡಿಕಲ್ಲು–೨೪, ಚಿನ್ನವಾಡಿ–೮೬, ತುಂಬುಳ–೩೦, ಪೊಂಬುಳಿಗೆ–೭೩, ಭಾಗಿ–೧೨, ಬೆಣ್ಣೆವೂರು–೧೨, ಮಂಚಲು–೩೬ ಮತ್ತು ರಜ್ಜೆವರಿ–೧೨, ತುರುಮರ ವಿಷಯ ಸೇರಿಸಲಾಗಿದೆ. ಉಳಿದ ೫೭ ಹಳ್ಳಿಗಳ ವಿಭಾಗವೆಂಬುದನ್ನು ತಿಳಿಸಲಾಗಿದೆ(ಆಕಶಾಸಂ:೧:೧೫೯: ಕಾಲ ನಿರ್ದೇಶನವಿಲ್ಲ: ಬೇತಪಲ್ಲಿ, ಗುತ್ತಿ).

ಹಡುವಗೆರೆ–೫೦೦

ಇದು ನೊಳಂಬವಾಡಿಯ ಉಪವಿಭಾಗ. ಚಿತ್ರದುರ್ಗ ತಾಲೂಕಿನ ಹಳುವದರ ಗ್ರಾಮದ ಪ್ರಾಚೀನ ಹೆಸರು ಹಡುವಗೆರೆಯಾಗಿದೆ. ದಾವಣಗೆರೆ ತಾಲೂಕಿನ ಮಳಲಕೆರೆ, ಜಗಳೂರು ತಾಲೂಕಿನ ಅಸಗೋಡು ಗ್ರಾಮಗಳು ಕದಂಬಳಿಗೆ ಸಾಸಿರ ವಿಭಾಗಕ್ಕೆ ಸೇರಿದ್ದವು. ಆದ್ದರಿಂದ ಚಿತ್ರದುರ್ಗ, ಚಳ್ಳಕೆರೆ, ಹಿರಿಯೂರು, ಜಗಳೂರು ತಾಲೂಕಿನ(ಚಿನ್ನ ಹಗರಿಯ ದಕ್ಷಿಣ ಭಾಗ) ಹಳ್ಳಿಗಳು ಇದರಲ್ಲಿ ಸಮಾವೇಶಗೊಂಡಿರಬೇಕು. ಸೂಳುಂಗಲೆರ್ಪ್ಪತ್ತು/ ಚೋಳುಂಗಲ್–೭೦ ಇದು ಹಡುವಗೆರೆಯ ಉಪವಿಭಾಗವೆಂಬುದು "ಹಡುವಗೆರೆ ಅಯ್ನೂಱಱೊಳಗಣ ಕಂಪಣಂ ಚೋಳುಂಗಲ್ಲು ಎಪ್ಪತ್ತರ ಬಳಿಯ ಬಾಡಂ ನಿಡುಗುಱುತೆ" ಎಂಬ ಉಲ್ಲೇಖದಿಂದ ತಿಳಿಯುತ್ತದೆ(ಎಕ:೧೧(ರೈ):೩೪:ಕ್ರಿಸ್ತಶಕ ೧೧೨೩: ಗಾರೆಹಟ್ಟಿ, ಚಿತ್ರದುರ್ಗ). ಇಲ್ಲಿಯ ಚೋಳುಂಗಲ್ಲು ಮತ್ತು ನಿಡುಗುರ್ತಿ ಗ್ರಾಮಗಳನ್ನು ಗುರುತಿಸಲು ಸಾಧ್ಯವಾಗಿಲ್ಲ. ಚಿತ್ರದುರ್ಗ ತಾಲೂಕಿನ ಹಳೆಗೊಂದಿ ಶಾಸನ "ಶ್ರೀಮನ್ಮಹಾಸಾಮನ್ತಂ ಕೆರೆಯೂರ ಮಂಗಿಯೇಚಯ್ಯಂ ಸೂಳ್ಗಲ್ಲೆಳ್ಪತುಮಂ ನಾಳುತ್ತಮಿಱ್ದು" ಎಂದಿದೆ(ಎಕ:೧೧(ರೈ):೮೨: ೧೦೭೪ ಹಳೆಗುಂದಿ, ಚಿತ್ರದುರ್ಗ). ದ್ರಾವಿಡ ಭಾಷೆಯಲ್ಲಿ ಚ>ಸ ವ್ಯತ್ಯಾಸ ಸಹಜ. ಆದ್ದರಿಂದ ಚೋಳುಂಗಲ್>ಸೂಳುಂಗಲ್‌ಗಳು ಒಂದೇ ವಿಭಾಗವನ್ನು ಸೂಚಿಸುತ್ತಿರಬೇಕು.

ಬೆಂಮ್ಮತ್ತನೂರು(ಇದು ಇಂದಿನ ಚಿತ್ರದುರ್ಗವಾಗಿದೆ) ಇದರಲ್ಲಿ ಒಂದು ಗ್ರಾಮವಾಗಿದೆ. ೧೨-೧೩ನೇ ಶತಮಾನದ ವೇಳೆಗೆ ಇಲ್ಲಿ ಕೋಟೆಯೊಂದು(ದುರ್ಗ) ರಚನೆಯಾಗಿ ಅದು ಬೆಂಮತ್ತನೂರದುರ್ಗವೆನಿಸಿತು(ಎಕ:೧೧(ರೈ):೩೩:ಕ್ರಿಸ್ತಶಕ ೧೨೩೫ ಜಗಳೂರು) ಉಡಿವೊಳಲು-೧೨ ಹಳೆನಿಡನೇಗಿಲ ಶಾಸನ "ನೊಳಂವಾಡಿನಾಡೊಳಗೆ ಮನು[ಡಿ]ವೊಳಲು ೧೨"ನ್ನು ಹೇಳಿದೆ(ಕಇ: ೪, ೧೩, ೧೧೬೫ ಹಳೆನಿಡನೇಗಿಲ, ಹಿರೆಕೆರೂರು). ಇದನ್ನು ಬಳ್ಳಾರಿ ಜಿಲ್ಲೆ ಹೂವಿನಹಡಗಲಿ ತಾಲೂಕಿನ ಹೊಳಲು ಗ್ರಾಮ ವೆಂದು ಭಾವಿಸಿ ಕೋಗಳಿ-೫೦೦ರ ಉಪವಿಭಾಗವೆಂದು ತಪ್ಪಾಗಿ ಊಹಿಸಲಾಗಿದೆ. ಈ ಶಾಸನದ ಮುಂದಿನ ಭಾಗದಲ್ಲಿ ಕೊಳ್ಳಿಗ, ಅರಕೆರೆ, ಭ್ರಾಂತಿ, ಪಡುಗಲು ಮೊದಲಾದ ವಿಭಾಗಗಳು ಕಾಣಿಸಿಕೊಂಡಿವೆ. ಅವು ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗೆ ಸೇರಿವೆ. ಆದ್ದರಿಂದ ಇಲ್ಲಿಯ ವೊಳಲು-೧೨ ಚಿತ್ರದುರ್ಗ ಜಿಲ್ಲೆಯ ತಾಲೂಕು ಕೇಂದ್ರವಾದ ಹೊಳಲ್ಕೆರೆಯಾಗಿರಬೇಕು. ಇದು ನಿಜವಾದರೆ ಈ ವೊಳಲುನಾಡು ಹಡುವಗೆರೆಯ ಉಪವಿಭಾಗವೆನಿಸುತ್ತದೆ. ಪಡುವಲು-೧೨ ಹಾಗೂ ಕೊಳ್ಳಿಗನೂರ-೭೦ ಇದು ನೊಳಂಬವಾಡಿಯ ಉಪವಿಭಾಗವೆಂದು ಹಳೆನಿಡನೇಗಿಲ ಶಾಸನ ಹೇಳಿದೆ. ಮೇಡೂರು ಶಾಸನ ಇದನ್ನು '[ಕ]ಳ್ಳಿಗನೂರೆಪ್ಪತ್ತು' ಎಂದು ಹೇಳಿದೆ.

ಈ ಮೇಲೆ ವಿವರಿಸಿದ ನಾಡುಗಳಲ್ಲದೇ ಅವರ ಇನ್ನು ಅನೇಕ ಶಾಸನಗಳಲ್ಲಿ ಹೆಸರಿಸಿದ ಮತ್ತು ಹೆಸರಿಸದೇ ಹೋದ ಹಲವು ಹತ್ತು ನಾಡುಗಳು ಇವೆ. ಅವುಗಳಲ್ಲಿ ಸುನ್ದವತ್ತಿ -೧೨, ಕೋಗಳಿ ಶಾಸನವು ಕದಂಬ ವಂಶದ ಆದಿತ್ಯದೇವನು "ಕೋಗಳಿಯಯ್ನೂಱುವಂ ಸುನ್ದವತ್ತಿ ಪನ್ನೆರಡುವನ್ನಾಳು"ತಿದ್ದನೆಂದು ಹೇಳಿದೆ. ಇಲ್ಲಿಯ ಸುನ್ದವತ್ತಿಯು ಯಾವ ವಿಭಾಗಕ್ಕೆ ಸೇರಿದೆ ಎಂಬುದು ತಿಳಿಯುವುದಿಲ್ಲ. ಅವು ನಿರ್ದಿಷ್ಟವಾಗಿ ಯಾವ ವಿಭಾಗಕ್ಕೆ ಸೇರಿವೆ ಎಂಬುದು ತಿಳಿಯುವುದಿಲ್ಲ.

ಅಯ್ವತ್ತಾಱುಬಾಡ

ಕ್ರಿಸ್ತಶಕ ೧೨ನೆಯ ಶತಮಾನದ ಮೇದೂರು ಶಾಸನ "ಕ[ಳ್ಳಿ]ಗನೂರೆಪ್ಪತ್ತು ಅಯ್ವತ್ತಾಱುಂ ಬಾಡಗಳ" ವಿಭಾಗವನ್ನು ಹೇಳಿದೆ(ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು(ಸಂ) ಕಲಬುರ್ಗಿ,ಎಂ.ಎಂ.:೧೭೭-೧೮೦). ಇಲ್ಲಿ ಕಳ್ಳಿಗನೂರು-೭೦ ಮತ್ತು ಅಯ್ವತ್ತಾರುಬಾಡ ಎಂಬ ಎರಡು ವಿಭಾಗಗಳಿವೆ. ಇವೆರಡನ್ನು ಒಬ್ಬ ವ್ಯಕ್ತಿಯೇ ಆಳುತ್ತಿರಬೇಕು. ಹಳೆನಿಡ ನೇಗಿಲ ಶಾಸನ ಇದು ನೊಳಂಬವಾಡಿಯು ಉಪವಿಭಾಗವೆಂದು ಸ್ಪಷ್ಟವಾಗಿ ಹೇಳಿದೆ(ಕಇ:೪:೧೩:೧೧೬೫ :ಹಳೆನಿಡನೇಗಿಲ, ಹಿರೆಕೆರೂರು).

ಅಮ್ಮವಳ್ಳಿ–೧೨ ನೊಳಂಬರ ಆರಂಭದ ಪ್ರಾಂತಗಳಲ್ಲಿ ಇದರ ಉಲ್ಲೇಖವಿದೆ. ಇತರ ವಿವರಗಳು ಸಿಗುವುದಿಲ್ಲ. ಇದು ಚಿತ್ರದುರ್ಗ ಜಿಲ್ಲೆಯ ಹಳ್ಳಿಗಳನ್ನು ಒಳಗೊಂಡಿರಬೇಕು.

ಇರಿಗಲ್‌ವಾಡಿ–೩೦೦ ತುಮಕೂರು ಜಿಲ್ಲೆ ಪಾವಗಡ ತಾಲೂಕಿನ ಎರಕಲ್ ಇದರ ಮುಖ್ಯಸ್ಥಳವಾಗಿರಬೇಕು. ಪಾವಗಡ, ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ಮತ್ತು ಕಲ್ಯಾಣದುರ್ಗ ತಾಲೂಕಿನ ಕೆಲವು ಹಳ್ಳಿಗಳು ಇದರಲ್ಲಿ ಸೇರಿರಬೇಕು. ನೆಲ್ಲಿಗುಂದಿ–೧೨: ತುಮಕೂರು ಜಿಲ್ಲೆ ಸಿರಾ ತಾಲೂಕಿನ ನೆಲ್ಲಿಕಟ್ಟೆ ಇದರ ಕೇಂದ್ರ ಸ್ಥಾನವಾಗಿದೆ.

ಮುಂಗುಳದ ಮೂನೂಱು

ರಾಷ್ಟ್ರಕೂಟ ೩ನೇ ಗೋವಿಂದನ ಆಳ್ವಿಕೆಯ ಅಲಂಪುರ ಶಾಸನದಲ್ಲಿ ಈ ವಿಭಾಗದ ಉಲ್ಲೇಖವಿದೆ. ಮುಂಗುಳದ–೩೦೦ ಒಕ್ಕಲುಗಳ ಸಂಘದ ಶ್ರೀವಮಾರ ಎಂಬುವನು ದತ್ತಿ ನೀಡಿದ್ದಾನೆ(ಆಕಶಾಸಂ:೨:೪೪೯:ಅಲಂಪುರ, ಮಹಬೂಬನಗರ)

ಇದುವರೆಗೆ ನೊಳಂಬವಾಡಿ ೩೨೦೦೦ದಲ್ಲಿ ಎಮ್ಮೆದೆಲೆ–೬೦೦೦, ಕದಂಬಳಿಗೆ–೧೦೦೦, ಕಣಿಯಕಲ್ಲು–೩೦೦, ಕುಕ್ಕವಾಡಿ–೩೦೦, ಬಲ್ಲಕುಂದೆ–೩೦೦, ಮಹಾರಾಜವಾಡಿ–೭೦೦೦, ರೇನಾಡು–೭೦೦೦(ಪೆಡಕಲ್ಲು–೮೦೦, ಮೂಲ್ಕಿ–೫೦೦), ರೊದ್ದ–೩೦೦, ಸಿಂದವಾಡಿ–೧೦೦೦, ಹಡುವಗೆರೆ–೫೦೦ ಮತ್ತು ಅಸ್ಪಷ್ಟ ವಿವರದ ನಾಡುಗಳು(೭೭೪) ಸೇರಿ ೨೪೪೭೪ ಹಳ್ಳಿಗಳ ಲೆಕ್ಕ ಸಿಕ್ಕಿದೆ. ಉಳಿದ ೭೫೨೬ ಹಳ್ಳಿಗಳ ವಿಭಾಗವನ್ನು ಶೋಧಿಸಬೇಕಾಗಿದೆ.

ಹೀಗೆ ನೊಳಂಬವಾಡಿಯು ಉತ್ತರದಲ್ಲಿ ತುಂಗಭದ್ರಾ ನದಿಯನ್ನು ಬಳಸಿಕೊಂಡು(ಕರ್ನೂಲ ನಿಂದ) ದಕ್ಷಿಣದಲ್ಲಿ ಪಾಪಾಗ್ನಿ–ವೇದಾವತಿ ನದಿಯವರೆಗಿನ ಭೂಪ್ರದೇಶವನ್ನು ಒಳಗೊಂಡಿತ್ತು. ಅಂದರೆ ಆಂಧಪ್ರದೇಶದ ಕರ್ನೂಲು, ಅನಂತಪುರ, ಕಡಪ ಜಿಲ್ಲೆಗಳು; ಕರ್ನಾಟಕದ ತುಮಕೂರು ಜಿಲ್ಲೆಯ ಪಾವಗಡ, ಮಧುಗಿರಿ, ಸಿರಾ ತಾಲೂಕು; ಚಿತ್ರದುರ್ಗ, ದಾವಣಗೆರೆ, ಬಳ್ಳಾರಿ ಜಿಲ್ಲೆಗಳ ವ್ಯಾಪ್ತಿಯನ್ನು ಹೊಂದಿದ ವಿಶಾಲವಾದ ಸಾಮ್ರಾಜ್ಯದ ವ್ಯಾಪ್ತಿಯನ್ನು ಹೊಂದಿತ್ತು.

ಪರಾಮರ್ಶನ ಸಾಹಿತ್ಯ

ಆಂಧ್ರಪ್ರದೇಶ ಕನ್ನಡ ಶಾಸನ ಸಂಪುಟ ಭಾಗ–೧(ಹಂಪಿ: ಕನ್ನಡ ವಿಶ್ವವಿದ್ಯಾಲಯ)

ಇತಿಹಾಸ ದರ್ಶನ ಸಂಪುಟ ೧೧ (ಬೆಂಗಳೂರು: ಕರ್ನಾಟಕ ಇತಿಹಾಸ ಅಕಾಡೆಮಿ, ೧೯೯೬)

ಕರ್ನಾಟಕ ಇನ್‌ಸ್ಕ್ರಿಪ್ಷನ್ಸ್ ಸಂಪುಟ ೪(ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ)

ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟಗಳು ೧, ೪, ೫ ಮತ್ತು ೭(ಹಂಪಿ: ಕನ್ನಡ ವಿಶ್ವವಿದ್ಯಾಲಯ)

ಜಯಣ್ಣ, ಕರಿಯಣ್ಣ, ಎಚ್., *ನೊಳಂಬರ ಶಾಸನಗಳ ಸಾಂಸ್ಕೃತಿಕ ಅಧ್ಯಯನ* (ಧಾರವಾಡ: ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ೨೦೦೮)

,,,,., *ಶಾಸನಗಳಲ್ಲಿ ದಾನದತ್ತಿಗಳು* (ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು, ೨೦೧೦)

ಬಸವರಾಜು ಕೆ ಆರ್.,(ಸಂ): *ನೊಳಂಬರ ಇತಿಹಾಸ ದರ್ಶನ* (ಬೆಂಗಳೂರು: ನೊಳಂಬ ವೀರಶೈವ ಸಂಘ, ೨೦೦೫)

ಮೈಸೂರ್ ಆರ್ಕಿಯೋಲೋಜಿಕಲ್ ರಿಪೋರ್ಟ್ಸ್–೧೯೩೯

ನಾಗಯ್ಯ, ಜೆ ಎಂ., *ಆರನೆಯ ವಿಕ್ರಮಾದಿತ್ಯನ ಶಾಸನಗಳು* (ಬೆಳಗಾವಿ: ವೀರಶೈವ ಅಧ್ಯಯನ ಅಕಾಡೆಮಿ, ಶ್ರೀ ನಾಗನೂರು ರುದ್ರಾಕ್ಷಿ ಮಠ, ೧೯೯೨)

ಹೀರೆಮಠ, ಚನ್ನಬಸಯ್ಯ., *ಪ್ರಾಚೀನ ಕರ್ನಾಟಕದ ವಿಭಾಗಗಳು* (ಹಂಪಿ: ಕನ್ನಡ ವಿಶ್ವವಿದ್ಯಾಲಯ, ೨೦೧೫)

ಶಂಕರಪ್ಪ, ಎಂ ಪಿ., ನೊಳಂಬರು (ಬೆಂಗಳೂರು: ಅನ್ನಪೂರ್ಣ ಪ್ರಕಾಶನ, ೨೦೦೭)

Rice, B L., *Epigraphy Carnatica Vol, 12* (Retrieved , 2008)

South Indian Inscriptions Vol. IX Pt. I (New Delhi: A S I: Miscellaneous Inscriptions in Kannada, 1968)

South Indian Inscriptions Vol. XI (New Delhi: A S I: Bombay-Karnataka Inscriptions, 1968)

Sten, Konow., *Epigraphia Indica, Vol, XI* (New Delhi: Archaeological Survey of India,1911–12)

,,,,., *Epigraphia Indica, Vol, XII* (New Delhi: Archaeological Survey of India,1913–14)

ಅಧ್ಯಾಯ ಮೂರು

ನೊಳಂಬರ ಚಾರಿತ್ರಿಕ ಸಾಂಸ್ಕೃತಿಕ ಬದುಕು

ಅಧ್ಯಾಯ ಮೂರು

ನೊಳಂಬರ ಚಾರಿತ್ರಿಕ ಸಾಂಸ್ಕೃತಿಕ ಬದುಕು

ಕರ್ನಾಟಕದ ಅರಸು ಮನೆತನಗಳಲ್ಲಿ ಕದಂಬ, ವೈಡುಂಬ, ನೊಳಂಬ, ಗಂಗ, ಚಾಳುಕ್ಯ, ಹೊಯ್ಸಳ, ರಟ್ಟ ವಿಜಯನಗರದ ಮತ್ತು ಮೈಸೂರು ರಾಜಮನೆತನಗಳೂ ಮುಖ್ಯವಾದವುಗಳು. ನೊಳಂಬ ಪಲ್ಲವ ವಂಶಸಂಜಾತರು 'ನೊಳಂಬವಾಡಿ ಮೂವತ್ತೆರಡು ಸಾವಿರದ ಪ್ರಾಂತ್ಯವನ್ನು ಕಟ್ಟಿಕೊಂಡು ಕರ್ನಾಟಕದ ಬಹುಭಾಗವನ್ನು ಆಳಿದ ಅರಸು ಮನೆತನದವರು ಹನ್ನೊಂದನೆಯ ಶತಮಾನದ ಮಧ್ಯದವರೆಗೂ ಪ್ರಕಾಶಮಾನವಾಗಿದ್ದು ಆ ಮೇಲೆ ಅಪ್ರಕಾಶರಾಗಿದ್ದಾರೆ. ಈ ಹಿಂದಿನ ಅಧ್ಯಾಯದಲ್ಲಿ ಚರ್ಚಿಸಿದಂತೆ ಇವರು ಕದಂಬ, ಗಂಗ ಮತ್ತು ಚಾಳುಕ್ಯರೊಡನೆ ಸಂಬಂಧವನ್ನು ಪಡೆದಿದ್ದರು. ಇಂತಹ ಕರ್ನಾಟಕದ ಒಂದು ಅರಸು ಮನೆತನದ ವಂಶಸ್ಥರೇ ಮುಂದೇ ಕರ್ನಾಟಕದಲ್ಲಿ ಚದುರಿದ ನೊಳಂಬರು ಸಾಮಂತರಾಗಿ ತಮ್ಮ ಅಸ್ತಿತ್ವವನ್ನು ಚರಿತ್ರೆಯ ಭಾಗವಾಗಿ ಕಾಯ್ದುಕೊಂಡು ಬಂದಿರುವುದಲ್ಲದೇ, ತಮ್ಮ ಆಳ್ವಿಕೆಯ ಮೂಲದಿಂದಲೂ ನಾಡಿನ ಸಾಂಸ್ಕೃತಿಕ ಜಗತ್ತಿಗೆ ಅಪಾರ ಕೊಡುಗೆಯನ್ನು ನೀಡಿದ್ದಾರೆ. ಅದರಲ್ಲಿ ಬಹುಮುಖ್ಯವಾದದ್ದೆಂದರೆ, ಶೈಕ್ಷಣಿಕ ಕೊಡುಗೆಯನ್ನು ನೆನೆಯಬೇಕು. ಅಪಾರ ಶಾಸನಸಾಹಿತ್ಯ ಸಂಪತ್ತನ್ನು ಉಳಿಸಿದ್ದಾರೆ. ಕರ್ನಾಟಕ ವಾಸ್ತುಶಿಲ್ಪಕ್ಕೆ ಅಪಾರ ಮಹತ್ವದ ಕೊಡುಗೆಯನ್ನು ನೀಡಿದ್ದಾರೆ. ಅವರ ಧಾರ್ಮಿಕ ಪರಂಪರೆಯು ಕೂಡ ಮಹತ್ವದ ಕೊಡುಗೆಗಳಲ್ಲಿ ಒಂದಾಗಿದೆ.

ನೊಳಂಬ ಮತ್ತು ಪಲ್ಲವರೆಂಬ ವಂಶಗಳು ಒಂದು ಜಿಜ್ಞಾಂಸೆಯ ಸೆಳೆತಕ್ಕೆ ಸಿಲುಕಿಕೊಂಡಿರುವುದು ಮೇಲ್ನೋಟಕ್ಕೆ ಕಂಡು ಬಂದರು, ಸಹ ಅವರ ಇತಿಹಾಸ ಕುತೂಹಲಕರವಾಗಿದೆ. ಇಲ್ಲಿ ಅನೇಕ ವಿಷಯಗಳನ್ನು ನಾವು ಚರ್ಚೆಯ ವಿಷಯವಾಗಿ

ಅಧ್ಯಯನ ಮಾಡಿದಾಗ ಅದರ ಮೂಲ ಬೇರೆ ದಿಕ್ಕನ್ನು ತೋರಿಸುತ್ತದೆ. ನೊಳಂಬ ಪಲ್ಲವರು ಕ್ರಿಸ್ತಶಕ ೩ನೆಯ ಶತಮಾನಕ್ಕಿಂತ ಮೊದಲೇ ಪ್ರಭುಗಳೆನಿಸಿಕೊಂಡವರು, ಕಾಲಚಕ್ರ ಉರುಳಿದಂತೆ ಜನಾಂಗೀಯ, ವೃತ್ತಿ ಆಚಾರ–ವಿಚಾರಗಳು ಬದಲಾವಣೆ ಆಗುತ್ತಾ ಬಂದಿರುವುದಕ್ಕೆ ಅನೇಕ ನಿದರ್ಶನಗಳನ್ನು ಕಾಣಬಹುದು. ನೊಳಂಬರು ತಮ್ಮ ಆಳ್ವಿಕೆಯ ಕಾಲದಲ್ಲಿ ತಮ್ಮ ಸುತ್ತಮುತ್ತ ಇದ್ದ ಪ್ರಬಲರೊಡನೆ ಬೇರೆ ಬೇರೆ ಕಾಲದಲ್ಲಿ ಅನ್ಯಕಾರಣಗಳಿಗೆ ಹೋರಾಡುತ್ತಲೇ ಬರಬೇಕಾಯಿತು. ಕಾಲಾನಂತರದ ಶಾಸನಗಳಿಂದ ತಿಳಿದುಬರುವಂತೆ ವಿಷಯದನ್ವಯ ನೊಳಂಬರು ಮಾಂಡಳೀಕರಾಗಿ, ಸಾಮಂತರಾಗಿ, ಅಧಿಕಾರಿಗಳಾಗಿ ಕಲ್ಯಾಣ ಚಾಳುಕ್ಯರ, ಚೋಳ, ಹೊಯ್ಸಳ ಹಾಗೂ ವಿಜಯನಗರದವರ ಆಡಳಿತದಲ್ಲಿ ಕಾರ್ಯ ನಿರ್ವಹಿಸಿರುವುದನ್ನು ಕಾಣಬಹುದು. ಈ ಮೇಲೆ ಹೆಸರಿಸಿದ ರಾಜಮನೆತನಗಳೆಲ್ಲರೂ ಒಂದಲ್ಲಾ ಒಂದು ರೀತಿಯಲ್ಲಿ ನೊಳಂಬ ರಾಜವಂಶಕ್ಕೆ ಸಂಬಂಧ ಹೊಂದಿದ್ದರು. ನೊಳಂಬರು ಆಡಳಿತಾತ್ಮಕವಾಗಿ ಕ್ಷೀಣಿಸಿದ ತರುವಾಯ ಅಲ್ಲಲ್ಲಿಯಾಗಿ ಚದುರಿ ಹೋದ ಇವರು, ನಂತರ ಈ ಮೇಲಿನ ರಾಜರ ಆಡಳಿತದಲ್ಲಿ ವಿವಿಧ ಹುದ್ದೆಗಳನ್ನು ಅಲಂಕರಿಸಿರುವುದನ್ನು ಕಾಣಬಹುದು.

ನೊಳಂಬರು ಅಂದು ಸಾಮಾನ್ಯವಾಗಿ ಬದುಕಿದ ರಾಜಮನೆತನಗಳಿಗಿಂತ ವಿಭಿನ್ನವಾಗಿ ಬದುಕಿರುವುದು ಕಂಡುಬರುತ್ತದೆ. ಅವರ ಸಾಂಸ್ಕೃತಿಕ ಬದುಕನ್ನು ಶಾಸನಗಳು, ದೇವಾಲಯಗಳು ಮತ್ತೀತರ ಸಾಹಿತ್ಯಿಕ ಆಕರಗಳನ್ನು ಕೆದಕಿನೋಡಿದಾಗ ಅವರ ಸ್ವಾರಸ್ಯಕರ ಬದುಕಿನ ಚಿತ್ರಣ ನಮ್ಮ ಕಣ್ಣೆದುರು ತೆರೆದುಕೊಳ್ಳುತ್ತದೆ. ನೊಳಂಬರು ಅಂದು ಗಂಗರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು ಮುಂದುವರೆದು ಕಲ್ಯಾಣದ ಚಾಲುಕ್ಯರು ಹಾಗೂ ಹೊಯ್ಸಳರ ಕಾಲಾವಾಧಿಯ ಸಂದರ್ಭದಲ್ಲಿ ಕೃಷಿಮೂಲದಿಂದಲೇ ತಮ್ಮ ಅಸ್ತಿತ್ವವನ್ನು ಕಟ್ಟಿಕೊಂಡವರಾಗಿದ್ದರು. ಈ ಕೃಷಿಮೂಲವೇ ಅವರಿಂದ ಸಾಮಾಜಿಕ, ಸಾಂಸ್ಕೃತಿಕ ಬದುಕಿಗೆ ಉತ್ತಮ ಕೊಡುಗೆಯನ್ನು ಕೊಡಲು ಪ್ರೇರಕ ಶಕ್ತಿಯಾಗಿರಲಿಕ್ಕೆ ಸಾಧ್ಯತೆಯಿದೆ. ಕಾರಣ ಅವರು ನಿರ್ಮಿಸಿದ ದೇವಾಲಯಗಳ ರಚನೆಯು ಹಲವು ರಾಜಮನೆತನಗಳವರ ಕೊಡುಗೆಗಳಿಗಿಂತ ಭಿನ್ನವಾಗಿ ಏನೂ ಇಲ್ಲವೆಂದು ಮೆಲ್ನೋಟಕ್ಕೆ ಕಂಡುಬಂದರು, ಈ ಮೇಲೆ ಹೇಳಿದ ಹಾಗೆ ಅವರು ಕೃಷಿ ಅಥವಾ ವ್ಯವಸಾಯದ ನಿರತರಾಗಿರುವದರ ಫಲವಾಗಿ ಅವರ ಶೈವದೇವಾಲಯಗಳಲ್ಲಿ ನಂದಿಯ ವಿಗ್ರಹವು ಕಲ್ಯಾಣದ ಚಾಲುಕ್ಯರ ಶೈವದೇವಾಲಯಗಳಲ್ಲಿನ ನಂದಿ ವಿಗ್ರಹಗಳಿಗಿಂತ

ಭಿನ್ನವವಾಗಿವೆ. ಶೈವದೇವಾಲಯಗಳಲ್ಲಿ ನಿರ್ಮಿಸಿದ ನಂದಿ ವಿಗ್ರಹಗಳು ಶಿವನಿಗಿಂತ ಎತ್ತರವಾಗಿ ಪ್ರತಿಷ್ಠಾಪಿಸಿರುವುದು ಅವರು ನಿರ್ಮಿಸಿದ ಶೈವದೇವಾಲಯಗಳನ್ನು ಸಂದರ್ಶಿಸಿದಾಗ ಇಂತಹ ಅಭಿಪ್ರಾಯಕ್ಕೆ ಬರಲು ಸಾಧ್ಯತೆ ಇದೆ. ಕೃಷಿಕರಾಗಿರುವ ಇವರು ಮಧ್ಯಕಾಲೀನ ಕರ್ನಾಟಕದ ಚರಿತ್ರೆಗೆ ನೊಳಂಬರು ನೀಡಿದ ಕೊಡುಗೆ ಅಪಾರವಾದುದಾಗಿದೆ.

೩.೧. ನೊಳಂಬರ ರಾಜಲಾಂಛನ



೩.೧. ನೊಳಂಬರ ರಾಜಲಾಂಛನ

ನೊಳಂಬರ ರಾಜ ಲಾಂಛನವು ಕಮಲ, ವೃಷಭ, ಶ್ವೇತಚಕ್ರ, ಚಾಮರ ಮತ್ತು ಸಿಂಹಗಳನ್ನು ಒಳಗೊಂಡಿದ್ದ ಲಾಂಛನವು ಒಂದು ಸುಂದರವಾದ ಸಂಕೇತ. ಕಮಲವು ನಮ್ಮ ಸಂಸ್ಕೃತಿಯಲ್ಲಿ ತನ್ನದೇ ಆದ ವಿಶಿಷ್ಟತೆಯನ್ನು ಹೊಂದಿದ ಪುಷ್ಪ. ಸುಂದರ ಕೋಮಲತೆ, ಪರಿಶುದ್ಧತೆ ಮತ್ತು ವಿಶೇಷ ಮನಮೋಹಕ ಪುಷ್ಪ. ಕಮಲವು ಅರಣೋದಯದಲ್ಲಿ ಅರಳಿ, ಸೂರ್ಯೋದಯದ ಜೊತೆ ಜೊತೆಯಲ್ಲಿ ನಗುತ್ತಾ ನಮ್ಮೆಲ್ಲರ ಮನಸ್ಸು ಜ್ಞಾನೋದಯ ಜಾಗೃತಿಯಲ್ಲಿ ವಿಕಾಸವಾಗುವುದನ್ನು ಸೂಚಿಸುತ್ತದೆ.

ಪ್ರಾಚೀನ ಕಾಲದಲ್ಲಿ ಧಾನ್ಯ ಮತ್ತು ಪಶುಗಳನ್ನು ಸಂಪತ್ತೆಂದು ಭಾವಿಸಲಾಗಿತ್ತು. ಪುಷ್ಕರಣಿ ಎಂದರೆ, ಕಮಲ. ಪುಷ್ಪಗಳು ತುಂಬಿದ ಸರೋವರ ಮತ್ತು ಸಮೃದ್ಧಿಯ ಸಂಕೇತವೆಂದು ಗುರುತಿಸಲಾಗಿದೆ. ನೊಳಂಬರ ಲಾಂಛನವು ನಂದಿ. ಕಾಳ ಬೈರವ ಆರಾಧಕರಾದ ಇವರು ಖಡ್ಗ(ರುಂಡ ಮತ್ತು ಖಡ್ಗ ಚಿನ್ಹೆ)ಯನ್ನು ಯುದ್ಧದ ಚಿನ್ಹೆಯಾಗಿದ್ದು(ನೋಇದ:೧೨೨), ಶಾಂತಿ ಕಾಲದಲ್ಲಿ ನಂದಿಯನ್ನು ಲಾಂಛನವಾಗಿ ಬಳಸಿದಂತೆ ಕಂಡುಬರುತ್ತದೆ. ಈ ರೀತಿಯ ಲಾಂಛನವನ್ನು ಪಲ್ಲವರ ಪೂರ್ವ ಕಾಲ ಮತ್ತು ನಂತರದ ಪಲ್ಲವರು ಬಳಸಿರುವುದು ಕಂಡುಬರುತ್ತದೆ. ನಂದಿಗೆ ಚಕ್ರ ಚಾಮರಗಳನ್ನು ಹಿಡಿದಿರುವಂತೆ

ಮತ್ತು ನಂದಿ ವಿಗ್ರಹದ ಹಿಂದೆ ಮುಂದೆ ಸಿಂಹಗಳನ್ನು ಕೆತ್ತಿರುವುದು ಕಂಡುಬರುತ್ತದೆ. ವಿಶೇಷ ಅಲಂಕೃತವಾದ ಪ್ರಭಾವಳಿಯನ್ನು ಹೊಂದಿರುವ ಕೆತ್ತನೆಯ ವಿವರದಲ್ಲಿ ನಂದಿ ವಿಗ್ರಹದ ಕೆಳಭಾಗದಲ್ಲಿ ವಿಘ್ನೇಶ್ವರ ಮತ್ತು ದೇವಿ ವಿಗ್ರಹಗಳನ್ನು ಈ ಲಾಂಛನದಲ್ಲಿ ಕಾಣುತ್ತೇವೆ. ಒಟ್ಟಾರೆ ಈ ಲಾಂಛನ ಶಿಲ್ಪದಲ್ಲಿ ನಂದಿ ವಿಗ್ರಹಕ್ಕೆ ಪ್ರಾಧ್ಯಾನತೆಯನ್ನು ನೀಡಲಾಗಿದೆ. ನೊಳಂಬ-ಪಲ್ಲವರು ಮೂಲದಲ್ಲಿ ಪಶುಪಾಲನೆ ಮತ್ತು ಕೃಷಿಕರಾಗಿರುವುದರಿಂದ ನಂದಿಗೆ ಹೆಚ್ಚು ಪ್ರಾಧಾನ್ಯತೆ ನೀಡಿರುವುದು ಕಂಡುಬರುತ್ತದೆ(ನೊಳಂಬವಾಣಿ:ಸಂಚಿಕೆ,೪: ಸಂಪುಟ ೩:೨೦೧೪). ಹಾಗೇ ಭಾರತದ ಉತ್ತರದ ದಿಕ್ಕಿನಿಂದ ದಕ್ಷಿಣಕ್ಕೆ ಸರಿದು ಬಂದವರಾಗಿರುವುದರಿಂದ ಇವರ ಲಾಂಛನದಲ್ಲಿ ಸಿಂಹಗಳಿಗೂ ಸ್ಥಾನವನ್ನು ಕಲ್ಪಿಸಿರುವುದು ಕಂಡುಬರುತ್ತದೆ.

೩.೨. ಸಾಮಾಜಿಕ ಕಾರ್ಯಗಳು

ನೊಳಂಬರ ಹಲವು ಸಾಂಸ್ಕೃತಿಕ ಕೊಡುಗೆಗಳಲ್ಲಿ ಸಾಮಾಜಿಕ ಕೊಡುಗೆಯು ತುಂಬಾ ಮಹತ್ವದ್ದಾಗಿದೆ. ಅಷ್ಟೇ ಪ್ರಮುಖವಾಗಿ ಅವರ ಸಾಮಾಜಿಕ ಕೆಲಸಗಳು ಕೃಷಿಯಿಂದಲೇ ಪ್ರಾರಂಭವಾಗಿರುವುದು ಅವರನ್ನು ಪದೇ ಪದೇ ವ್ಯವಸಾಯದ ಮೂಲದವರೆಂದು ಗುರುತಿಸಲು ಸಾಧ್ಯವಾಗುತ್ತದೆ. ಹಾಗೂ ಇವರು ಮೂಲ ಜಮೀನ್ದಾರರಾಗಿದ್ದುದಕ್ಕೆ ಈ ಮುಂದಿನ ಕೃಷಿ ಸಂಬಂಧಿ ಚಟುವಟಿಕೆಗಳನ್ನು ಬಿಂಬಿಸುವ ಶಾಸನ ಪಠ್ಯಗಳು ಆಕರಗಳಾಗುತ್ತವೆ. ನೊಳಂಬರ ಕಡಲಗೆರೆಯ ಒಂದು ಶಾಸನವು ಕೆರೆ ಮತ್ತು ಭೂಮಿಯ ಮಹತ್ವವನ್ನು ಕಾವ್ಯಮಯವಾಗಿ ದಾಖಲಿಸಿದೆ. ಆ ಶಾಸನದ ಪಠ್ಯವು...

ಅತಿಮಧುರಂ ಪ್ರಸನ್ನ ಕವಿ ನಿರ್ಮ್ಮಿಸಿದುನ್ನತ
ಕಾವ್ಯದನ್ತ ಸನ್ತಮತಿ ನಿರ್ಮ್ಮಳಂ ಪೆಱನೆ
ನ್ದುಮಪೇಕ್ಷಿಸುತಿರ್ಪ್ಪನನ್ತ ತಾನತಿ ಲಘವೆನ್ನ
ದೀ ಚಣಕದುದ್ಗ ತಟಾಕಮನಾರೊ ಬಣ್ಣಿಸರ್॥
ಬಾಟಿಸಮೂರ್ತಿ ಸಓಮ ಕಳೆಯನ್ದದೆ ಸೋಭಿಸುತಿರ್ಪ್ಪುದೀ ಜಗ
ತ್ಪಾವನಮಂಬುಜೋದರ ಪಯೋನಿಧಿಯನ್ತೆ ತೀವಿಸೇ
ವ್ಯಾವಹಮಾಗಿ ರಂಜಿಪುದು ಜೀವನುಂ ನರಜಝೀವರಾಸಿಗಳ್ದೀ
ವಪುವೆಂದತುನ್ನತಿಯ ನಾಪ್ಪೊ೯ಗಳರ್ದ್ಧರಣೀತಳಾಗ್ರದೊಳ್ ॥
ಪೊಡವಿಪತಿ ಕಾವೇರಿಯ

ತಡಿಯೊಳ್ಬಿಟ್ಟಿರ್ದ್ದ ತನ್ನದೀ ಜಳಮುಮನೀ

ಕಲಗೇಱೆಯಮೃತ ಜಲಮುಮ

ನೋಡಮೊಯ್ಯಕನೆ ತೂಗಿ ನೋರ್ಪ್ಪನಭಿವರ್ಣ್ಣಿಸಿದ ॥

ರಂಗತ್ತರಂಗಮಾಳಾ

ಭಂಗರದಿನ್ದೆಸೆವ ಕಡಲಗೇಱೆನೋರ್ಪ್ಪ ಜನ

ಕ್ಕಿಂಗಡಲಂ ದಿಕ್ಕರಿಪುದ

ದಂ ಗಡ ಪೊಗಳಲ್ಕೆ ಕಮಳ ಭವನಂ ನೆಱೆಯ ॥(ಎಸ್‌ಐಐ:೧೧(೨):೧೨೭) ಈ ಶಾಸನವು ಕೆರೆಯ ಮಹತ್ವವನ್ನು ಸಾರುತ್ತದೆ. ಸಾಮಾನ್ಯವಾಗಿ ದ್ರವ್ಯದಾನ, ಭೂದಾನ ಮಾಡುವವರನ್ನು ಈ ತಟಾಕವೇ ರಕ್ಷಿಸುವುದು ಎಂಬುದಾಗಿ ಸಾಮಾಜಿಕ ಕಾರ್ಯದ ಭಾಗವಾಗಿ ಅವರನ್ನು ಹುರಿದುಂಬಿಸುವುದು ಈ ಶಾಸನದ ಉದ್ದೇಶವಾಗಿರುವ ಸಾಧ್ಯತೆಯಿದೆ. ಇಲ್ಲಿ ಅನೇಕರಿಗೆ ಜೀವದಾನವಾಗಿರುವ ಕೆರೆಯನ್ನು ರಕ್ಷಿಸುವುದರಿಂದ ಅನೇಕ ಪುಣ್ಯಗಳು ನಿಮಗೆ ಲಭಿಸಿವುದು ಎಂಬುದಾಗಿದೆ. ಜೊತೆಗೆ ಇದನ್ನು ಹಾಳು ಮಾಡುವವರಿಗೆ ನರಕ ಪ್ರಾಪ್ತಿಯಾಗುವುದು ಎಂದು ಈ ಶಾಸನವು ಉದ್ಧರಿಸುತ್ತದೆ.

ಸಾಮಾನ್ಯವಾಗಿ ಕಡಿಮೆ ಮಳೆ ಬೀಳುವ ಪರಿಸರದಲ್ಲಿ ಈ ನೊಳಂಬವಾಡಿ–೩೨೦೦೦ ಆಡಳಿತದ ಪ್ರದೇಶವಾಗಿರುವುದು. ಹಾಗಾಗಿ ಅದು ಮಳೆಯನ್ನು ಆಧರಿಸಿ ವ್ಯವಸಾಯ ಮಾಡುವುದು ತುಂಬಾ ಕಷ್ಟಸಾಧ್ಯವೇ ಆಗಿರುವುದು. ಈ ಸಮಸ್ಯೆಯನ್ನು ಸರಿಪಡಿಸುವ ಉದ್ದೇಶದಿಂದ ಕೆರೆಗಳ ನಿರ್ಮಾಣ ಕಾರ್ಯವನ್ನು ಸಮರೋಪಾದಿಯಲ್ಲಿ ಕೈಗೊಂಡಿರುವುದು. ಈ ಕೆರೆಗಳ ನಿರ್ಮಾಣ ಕಾರ್ಯವನ್ನು ಕಲ್ಯಾಣ ಚಾಲುಕ್ಯರನ್ನು ಬಿಟ್ಟರೆ ಈ ನೊಳಂಬರು ಎನ್ನುವಷ್ಟರ ಮಟ್ಟಿಗೆ ಅವರ ಸಮಕಾಲೀನ ಶಾಸನಗಳು ದಾಖಲೆಗಳನ್ನು ಒದಗಿಸುತ್ತದೆ.

ನೊಳಂಬರ ಆಡಳಿತ ಅವಧಿಯಲ್ಲಿ ಕೃಷಿ ಚಟುವಟಿಕೆಗಳು ಭರದಿಂದ ನಡೆದಿರುವುದಕ್ಕೆ ಕೆರೆಗಳು ಪೂರಕ ಮಾಹಿತಿಯನ್ನು ಒದಗಿಸುತ್ತವೆ. ಕ್ರಿಸ್ತಶಕ ೧೦೧೮ರ ಬಾಗುಳಿಯ ಶಾಸನವು ನಾರಣೋರ್ಝುರ ಕೆರೆ ಮತ್ತು ಶಂಕರರ್ಝೋರ ಕೆರೆಯು ಉಲ್ಲೇಖಗಳನ್ನು ತಿಳಿಸುತ್ತದೆ(ಕವಿವಿಶಾಸಂ:೧:ಹರಪನಹಳ್ಳಿ:೯೭:೧೩೬). ನಾರಣೋರ್ಝುರ ಮತ್ತು ಶಂಕರರ್ಝೋರ ಎಂಬ ಎರಡು ಕೆರೆಗಳ ನಾಮವು ಈ ಇಬ್ಬರು ವ್ಯಕ್ತಿಗಳಿಗೆ ಸಂಬಂಧಿಸಿದವುಗಳಾಗಿವೆ. ಅಂದರೆ ಕೆರೆಗಳನ್ನು ಜನಸಾಮಾನ್ಯರು ಕಟ್ಟಿಸಲು ಆಗುತ್ತಿರಲಿಲ್ಲ. ಅವುಗಳನ್ನು ಆರ್ಥಿಕವಾಗಿಯೇ ಸಬಲರಾದವರು ಕಟ್ಟಿಸಿ ಸಾಮಾಜಿಕ ಕಾರ್ಯಗಳಿಗೆ ನೀಡುತ್ತಿದ್ದರು. ಜೊತೆಗೆ ಹೆಚ್ಚಿನದಾಗಿ ತಮ್ಮ ಕೃಷಿ ಚಟುವಟಿಕೆಗಳಿಗೆ ಬಳಸುತ್ತಿದ್ದರು.

ನೊಳಂಬರ ಕಾಲದಲ್ಲಿ ನಿರ್ಮಾಣಗೊಂಡ ಕೆರೆಗಳು ಎಂದರೆ, ಕ್ರಿಸ್ತಶಕ ೧೦೪೬ರ ಶಾಸನೋಕ್ತ ಮೊರಿಗೇರಿಯ ದೇವರಕೆರೆ(ಕವಿವಿಶಾಸಂ:೧:ಹಗರಿಬಮ್ಮನಹಳ್ಳಿ:೨೭). ಹಾಗೆ ಕ್ರಿಸ್ತಶಕ ೧೦೭೩ರ ದೊಡ್ಡಬಾಣಗೆರೆಯ ಶಾಸನವು ಉಲ್ಲೇಖಿಸುವ ಹಾಗೆ, ಕೆರೆಯನ್ನು ನಿರ್ಮಿಸಿದಾತನಿಗೆ, ಹಾಗೂ ಕೆರೆಯನ್ನು ಕಟ್ಟಿದ ಚಿಲ್ಲುಕ ಬೋವನಿಗೆ ಬಿತ್ತುವಾಟದಲ್ಲಿ ಕೆಲವು ಪಾಲನ್ನು ಬಿಟ್ಟುಕೊಡುವುದರ ಬಗೆಗೆ ಬೆಳಕು ಚೆಲ್ಲುತ್ತದೆ(ಎಕ:೧೨:ಸಿರಾ:೯). ಜೊತೆಗೆ ಕೆರೆಗಳನ್ನು ಕಟ್ಟಿಸಿ ಹಾಗೆ ಬಿಟ್ಟುಬಿಡುವ ಪರಿಪಾಠವಿರಲಿಲ್ಲ. ಅವುಗಳನ್ನು ಸರಿಯಾಗಿ ನಿರ್ವಹಣೆ ಮಾಡಲು ತಕ್ಕ ಏರ್ಪಾಟುಗಳನ್ನು ಮಾಡುತ್ತಿದ್ದರು. ಅದಕ್ಕೆ ಸಂಬಂಧಿಸಿದಂತೆ ಇದೆ ದೊಡ್ಡ ಬಾಣಗೆರೆಯ ಶಾಸನವು ಮಾಹಿತಿಯನ್ನು ಹೊರಹಾಕುತ್ತದೆ. ಸಾಮಾನ್ಯವಾಗಿ ಕೆರೆಗಳನ್ನು ಕಟ್ಟಿಸಿ ಜೊತೆಗೆ ಅವುಗಳ ಪೂರ್ವ ನಿರ್ವಹಣೆಯನ್ನು ಮಾಡುವುದು ಅದರೊಂದಿಗೆ ಕೆರೆಗಳನ್ನು ಅನ್ಯರಿಂದ ಅಂದರೆ, ನಾಡಿನ ಶ್ರೀಮಂತ ಜನರಿಂದ ನಿರ್ಮಾಣ ಮಾಡುವಂತ ಬಹುದೊಡ್ಡ ಕಾರ್ಯವನ್ನು ಈ ನೊಳಂಬರಾಜರು ಮಾಡಿರುವುದಿದೆ. ಕ್ರಿಸ್ತಶಕ ಸು. ೧೨ನೆಯ ಶತಮಾನದ ಮುಳಬಾಗಿಲ ತಾಲ್ಲೂಕಿನ ಹೆಬ್ಬಣಿಗ್ರಾಮದ ಒಂದು ಶಾಸನದಲ್ಲಿ, ತನ್ನ ೧೬ನೆಯ ವಯಸ್ಸಿನಲ್ಲಿಯೇ ಪಟ್ಟಕ್ಕೇರಿದ ಮುಮ್ಮಡಿ ಚೋಳನು ಈ ಮೊದಲಿದ್ದು ಹಾಳಾಗಿ ಹೋಗಿದ್ದ ಪಿರಿಯಕೆರೆಯನ್ನು ಜೀರ್ಣೋದ್ಧಾರ ಮಾಡಿದ ಹಾಗೂ ಮಣ್ಣೆಯ ಗಾವುಂಡನ ಮಗ ಪೃಥುವೀರಾವ ಸೆಟ್ಟಿಗೆ ಪೂರ್ವ ಸಿದ್ಧಾಯದಂತೆ ಹತ್ತು ಗದ್ಯಾಣ ಪೊನ್ನು ಮೂರು ಖಂಡುಗ ಭತ್ತದ ಗದ್ದೆಯನ್ನು ಘಂಟೆಯಂಕಕಾರ ನೊಳಂಬಾದಿರಾಜನು ದಾನ ಮಾಡಿ ಎಲ್ಲಾ ಕಾಲಕ್ಕೂ ಬಿತ್ತುಕಟ್ಟು ನಡೆಯುವುದು ಎಂದು ಘೋಷಿಸಿದ ಅಂಶವನ್ನು ಈ ಶಾಸನವು ತಿಳಿಸುತ್ತದೆ.

ಕ್ರಿಸ್ತಶಕ ೮೭೮ರ ಧರ್ಮಪುರಿಗ್ರಾಮದ ಶಾಸನದಲ್ಲಿ ಉಲ್ಲೇಖಗೊಂಡ ಮಾಹಿತಿಯ ಪ್ರಕಾರ ಮರುದನೇರಿಯಮ್ಮಹೇನ್ದ್ರನೊಳಮ್ರನಲ್ಲಿ ಪೊನ್ನೇಱ ಗೊರವರ್ಪ್ಪಡೆದಾರ್ಕ್ಕೆರೆಯಂ ಕಟ್ಟಿಸಿ' ಹೀಗೆ ಮಹೇಂದ್ರನೊಳಂಬನಲ್ಲಿ ಪೊನ್ನೇರ ಗೊರವನು ಆರು ಕೆರೆಗಳನ್ನು ಕಟ್ಟಿಸಿ ಸಾಮಾಜಿಕ ಅಭಿವೃದ್ಧಿಗೆ ಧಾರೆಯರದು ಬಿಟ್ಟುಕೊಟ್ಟನು.

ಅರಸರು ಅಥವಾ ರಾಜರು ತಮ್ಮ ಸಾಮಾಜಿಕ ಕಾರ್ಯಗಳನ್ನು ವಿಶೇಷವಾಗಿ ತಮ್ಮವರ ಪ್ರೀತಿಪಾತ್ರರಿಗೆ ಸಾಮಾನ್ಯವಾಗಿ ಮಾಡುವುದು ಹೆಚ್ಚಿನ ಸಂಖ್ಯೆಯಲ್ಲಿ ತಿಳಿದು ಬರುತ್ತದೆ. ಹಾಗೆಯೇ ಕ್ರಿಸ್ತಶಕ ಸುಮಾರು ೯೮೨ರ ಅವನಿಯ ಒಂದು ಶಾಸನದಲ್ಲಿ ನೊಳಂಬರ ಅರಸು ಇಮ್ಮಡಿ ಪೊಳಲ್ಚೋರನ ಪತ್ನಿ ದೀವಬ್ಬರಸಿ ಕಟ್ಟಿಸಿದ ಕೆರೆಯ ವರ್ಣನೆಯನ್ನು ಮಾಡುತ್ತದೆ.

ವಿದಿತಂ ಲೋಕಕ್ಕೆ ಮುನ್ನಂ ರಘಕುಳದ ಹನೋಗ್ರಷುವಿಂಕಾಯ್ದು ತಿಣ್ಣಂ
ಕುದಿಗೊಣ್ಡಬ್ಬುತ್ತಗಸ್ತ್ಯಂ ಕುಡಿಯತುಗಟ್ದಿನಿಂ ಕಟ್ಟು ಪಟ್ಟೆಬ್ದುದಿನ್ತ

ಪ್ಪದು ಪೆಂಪನ್ತಾಳ್ದಿತೆನ್ದನ್ದಲುಯರೆಲವಣಾಂಭೋಧಿಯಂ ಪೋಲಿಸಲ್ವೇ

ಡಿದುವೆತ್ತಾನೆತ್ತಳೆಂಬನ್ತತಿ ಬಹಳ ಜಳನ್ದೀವಳಬ್ಬಾ ಸಮುದ್ರಂ ॥

ಪದೆದಾಯಾಸಕ್ಕೆ ಪಕ್ಕಾಗಿರೆ ಗಡಪಿರಿದು ಭಾನ್ತಿನಿಂಪೋ ದೊನ್ದ

ಬ್ಬದೊಳಿನ್ತೆನ್ತಾಮೆಯ್ದುತ್ತಿರದಮರನದೀ ಕಾನ್ತೆಯಂ ಕಾಣ್ಬರೀ..

ದೇಸರ್ಸಿಯ್ವಿದೇಂ ಸಂಭವಿಸಿತೋ ನಮಗಪ್ಪುಕ್ಕಿಲುಂಗಂಗೆ ತೆಂಕ

ಣ್ಗಿದಿರಂಬನ್ದಿಟ್ಟುದೆಂಬನ್ತತಿಬ ಬಹಳ ಜಳನ್ತೀವಳಬ್ಬಾ ಸಮುದ್ರಂ ॥(ಎಕ:೧೦ :ಮುಬಾ:೩೮). ಸಾಮಾನ್ಯವಾಗಿ ದೀವಳಬ್ಬರಸಿ ಎಂಬುದಾಗಿಯೇ ಹೆಸರಿಸುವ ಈ ಕೆರೆಯು ಸಹಜವಾದ ಹಲವು ಆಶಯಗಳನ್ನು ಇಲ್ಲಿ ವ್ಯಕ್ತಪಡಿಸುತ್ತದೆ. ಸಾಮಾಜಿಕವಾದ ಕಾರ್ಯಗಳನ್ನು ಕೇವಲ ಪುರುಷರಷ್ಟೇ ಮಾಡುವುದಲ್ಲ. ಪುರುಷನ ಸರಿಸಮವಾಗಿ ಮಹಿಳೆಯರು ಸಮಾಜಮುಖಿಯಾದ ಕಾರ್ಯಗಳನ್ನು ಮಾಡುಬಹುದಾಗಿತ್ತು. ಹಾಗಾಗಿ ಪೊಳಲ್ಚೋರನ ಪತ್ನಿಯಾದ ದೀವಬ್ಬರಸಿಯು ತನ್ನ ಹೆಸರಿನಲ್ಲಿಯೇ **ದೀವಳಬ್ಬಾಸಮುದ್ರಂ** ಎಂಬ ತಟಾಕವನ್ನು ನಿರ್ಮಿಸಿರುವುದಲ್ಲದೆ. ತನ್ನ ಹಿರಿಯ ಮಗನಾದ ಇಮ್ಮಡಿ ಮಹೇಂದ್ರನ ಹೆಸರಿನಲ್ಲಿಯು ಕೊಳವೊಂದನ್ನು ಮಾಡಿಸಿರುವುದು ಈ ಶಾಸನದಲ್ಲಿ ಉಕ್ತವಾಗುತ್ತದೆ.

ಸಾಮಾಜಿಕ ಅಂಶಗಳ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ನೊಳಂಬರ ಕಾಲದ ಹಲವು ಶಾಸನಗಳು ಮಾಡುತ್ತವೆ. ಅಲ್ಲದೇ ಈ ಕೆರೆಗಳನ್ನು ಕಟ್ಟಿಸಿ ಅಥವಾ ನಿರ್ಮಿಸಿ ಅಷ್ಟಕ್ಕೆ ಬಿಟ್ಟುಬಿಡುವುದಲ್ಲ ಅದರ ಸ್ವಚ್ಛತೆಯನ್ನು ನೋಡಿಕೊಳ್ಳುವುದಕ್ಕೆ ಅನೇಕ ಚಟುವಟಿಕೆಗಳನ್ನು ಮಾಡುವುದು ಕಂಡುಬರುತ್ತದೆ. ಅವುಗಳಲ್ಲಿ ಕ್ರಿಸ್ತಶಕ ೯೩೬ರ ಗುಣಿಮೊರುಬಾಗಲಿನ ಒಂದು ಶಾಸನವು ಊರ ಮಹಾಜನರು ವರುಣಶಿವಬಟಾರರು ಸೇರಿ 'ಕೆಱೆಗೆ ಬಿತ್ತುವಟವ'(ಎಸ್‌ಐಐ: ೯:೧:ಶಾಸಂ:೨೪) ಕೊಟ್ಟಿರುವುದನ್ನು ಹೇಳುತ್ತದೆ. ಅದೇ ರೀತಿ ಕ್ರಿಸ್ತಶಕ ೯೫೦ರ ಮಡಕಸಿರಾದ ಶಾಸನವು 'ಮಲ್ಲಣ ಸಿವರಿಯೊಳೆ ಒಳಗೆಱೆಯ ಕಟ್ಟಡಕ್ಕೆ ನಾಲ್ಕೂರು ಮಿಟ್ಟು ಕಾಡಿಯಣ್ಣ, ಪಳ್ಳಿಕಾರ ತುವಣ್ಣ ಗಾವುಂಡರು ಚಿರಪಿಯ ಚಿನ್ತಕುಂಟೆಯನ್ನು(ಎಸ್‌ಐಐ:೯: ೧:ಶಾಸಂ:೨೬) ಪಡೆಯುತ್ತಾರೆ ಎಂದು ಹೇಳುತ್ತದೆ. ಒಂದು ಕಾಲದ ಕಲ್ಲೂರಿನ ಶಾಸನದಲ್ಲಿ 'ಕಲ್ಲಳೊರ ಕೆಱೆಯ ಕೆಱಗಟ್ಟಿ ಬಿತ್ತಲಣ್ದೆಯಮ ಕೆಱೆಗೆ ಇಕ್ಕದನ್ದು(ಎಸ್‌ಐಐ: ೯:೧:ಶಾ.ಸಂ:೩೪) ಎಂದು ವಿವರಿಸುತ್ತದೆ. ಗಾಂಡ್ಲಹಳ್ಳಿಯ ಶಾಸನವು ಬಜ್ಜವಾಡಿಯ ಕೆರೆಗೆ ಬಿತ್ತುಕಟ್ಟು ಬಿಟ್ಟದ್ದನ್ನು ಉಲ್ಲೇಖಿಸುತ್ತದೆ. ಹೆಬಗ್ರಾಮದ ಒಬ್ಬ ಸಾಮಾನ್ಯ ಮಹಿಳೆಯು ಕೆರೆಯನ್ನು ನಿರ್ಮಿಸಿರುವುದನ್ನು ಹೇಳುತ್ತದೆ(ಎಕ:೧೦:೨:೩೮). ಸಾಮಾನ್ಯವಾಗಿ ಮಹಿಳೆಯರು ಸಾಮಾಜಿಕ ಬದುಕಿನಲ್ಲಿ ತಮ್ಮನ್ನು ನಿಸ್ಸಂಕೋಚದಿಂದ ತೊಡಗಿಸಿಕೊಂಡು ನಾಡಿನ ಅಭಿವೃದ್ಧಿಗೆ ಕೊಡುಗೆ ನೀಡಿರುವುದನ್ನು ಇದು ಪ್ರಚುರಪಡಿಸುತ್ತದೆ.

ಕ್ರಿಸ್ತಶಕ ೯೭೧ರ ಉತ್ತನೂರಿನ ಶಾಸನ(ಎಕ:೧೦ :ಮುಬಾ :೧೨೬)ವು ಸಾಂಬಯ್ಯನುಬ ಬಿದಿರೂರ ಕೆರೆಗೆ ಬಿತ್ತುಕಟ್ಟಬಿಟ್ಟ ಎಂಬುದನ್ನು ತಿಳಿಸುತ್ತದೆ. ಹಾಗೆಯೇ ತನ್ನ ಕೀರ್ತಿಗಾಮುಂಡನ

ಮಗನಿಗೆ ಪಟ್ಟವನ್ನು ಕಟ್ಟಿ ಪುಲಿನಾಟ್ಟಿ ಕೆರೆಯ ಬೆಳಗಟೂರನ್ನು ದಾನವಾಗಿ ನೀಡಿದ್ದನ್ನು ಕರ್ಷನಪಲ್ಲೆ ಶಾಸನ(ಎಸ್‌ಐಐ:೯:೧:ಶಾ.ಸಂ:೯)ವು ತಿಳಿಸುತ್ತದೆ. ಈ ರೀತಿಯ ಕೆರೆಗಳನ್ನು ಕಟ್ಟಿಸಿರುವುದು ನೊಳಂಬರ ಸಮಕಾಲೀನ ಸಂದರ್ಭದಲ್ಲಿ ಇರುವ ಅವುಗಳ ಅವಶ್ಯಕತೆಗಳನ್ನು ನಾವು ಅರ್ಥೈಸಿಕೊಳ್ಳಬಹುದಾಗಿದೆ. ಜಮೀನುಗಳ ಉಪಯೋಗದ ಉದ್ದೇಶದಿಂದಲೇ ಅವುಗಳ ನಿರ್ಮಾಣ ಮತ್ತು ನಿರ್ವಹಣಾ ಕಾರ್ಯ ನಡೆಯುತ್ತಿರುವುದು ಕಂಡುಬರುತ್ತದೆ.

ಅವರ ಕಾಲದಲ್ಲಿ ಹಾಕಿಸಿದ ಎಲ್ಲ ಶಾಸನಗಳೇ ಅವರ ಮೂಲ ವೃತ್ತಿ ವ್ಯವಸಾಯ ಎಂಬುದನ್ನು ಒತ್ತಿ ಹೇಳುವ ರೀತಿಯಲ್ಲಿ ಆಕರಗಳನ್ನು ಒದಗಿಸುತ್ತವೆ. ಜೊತೆಗೆ ಅವರು ಕಟ್ಟಿಸಿದ, ತೋಡಿಸಿದ ಕೆರೆ–ಕಟ್ಟೆಗಳು ಎಲ್ಲವೂ ಅವರನ್ನು ಕೃಷಿಕರು ಎಂಬುದಾಗಿ ಬಿಂಭಿಸುತ್ತವೆ. ಕೆರೆ–ಕಟ್ಟೆಗಳನ್ನು ನಿರ್ಮಾಣ ಮಾಡುವದರೊಂದಿಗೆ ತಮ್ಮ ನಾಡಿನೊಳಗೆ ಕೃಷಿ ಚಟುವಟಿಕೆಗೆ ಪ್ರೋತ್ಸಾಹವನ್ನು ನೀಡಿರುವುದರ ಮೇಲೆ ಬೆಳಕು ಚೆಲ್ಲುತ್ತವೆ.

೩.೩. ನೊಳಂಬ ಸಾಮಾಜದ ಭಾಗವಾಗಿ ಮಹಿಳೆ

ಶಾಸನಗಳು ಸ್ತ್ರೀಯರ ಬಗ್ಗೆ ಉಲ್ಲೇಖಿಸುವಾಗ ಅವಳು ಇತಿಹಾಸದಲ್ಲಿ ಪ್ರಧಾನ್ಯತೆಯನ್ನು ಹೊಂದಿದ್ದಳೆಂದೇ ವರದಿ ನೀಡುತ್ತವೆ. ಆ ಶ್ರೀಮಂತ ರಾಣಿವಾಸದ ಹೆಣ್ಣುಮಗಳ ಕುರಿತು ಅಲ್ಪ ಪ್ರಮಾಣದ ಮಾಹಿತಿಯ ಮೂಲಕ ಪ್ರಾಚೀನ ಕಾಲದಲ್ಲಿ ಸ್ತ್ರೀಯರಿಗೆ ಎಲ್ಲ ಕ್ಷೇತ್ರಗಳಲ್ಲಿ ಪ್ರಾತಿನಿಧ್ಯ ಇತ್ತೆಂದು ನಿರ್ಣಯಕ್ಕೆ ಬರಲಾಗುತ್ತದೆ. ಆದರೆ ಅವುಗಳು ಇಡೀ ಸ್ತ್ರೀಕುಲದ ಚರಿತ್ರೆಯಾಗಿರಲು ಸಾಧ್ಯವಾಗಲಾರದು. ಆ ಕಾರಣಕ್ಕೆ ಶಾಸನಗಳಲ್ಲಿ ಸ್ತ್ರೀಯು ಪೂರ್ಣ ಪ್ರಮಾಣದಲ್ಲಿ ಅನಾವರಣಗೊಂಡಿಲ್ಲ ಎಂಬುದನ್ನು ಒತ್ತಿ ಹೇಳಬೇಕಾಗುತ್ತದೆ. ಸ್ತ್ರೀಯರನ್ನು ಕುರಿತು ಶಾಸನಗಳ ಮಾಹಿತಿಯನ್ನು ಉಲ್ಲೇಖಿಸುವಾಗಲೂ ಪರುಷನದೇ ಆದ ಪಾರುಪತ್ಯದ ನೆಲೆಯಲ್ಲಿ ಮಾಹಿತಿ ಒದಗಿಸಿರುವುದು, ಆದರೆ ಆ ಕುರಿತು ಉಲ್ಲೇಖಿಸುವಾಗ ಎಲ್ಲೂ ಆಭಾಸವಾಗಿಲ್ಲ ಮತ್ತು ವಿರೋಧಿಭಾವ ಸ್ತ್ರೀಯರ ಮನಸ್ಸಿನಲ್ಲಿ ತಲೆ ಎತ್ತದಂತೆ ದಾಖಲಾಗಿದೆ. ಇಲ್ಲಿ ರಾಚನಿಕರೆಲ್ಲರೂ ಪುರುಷರೆ, ಏನು ಹೇಳಬೇಕಾದರೂ, ಮತ್ತು ತಾವು ಮಾಡುವ ಕಾನೂನು ಮುಂದಿನ ತಲೆಮಾರಿಗೆ ವರ್ಗಾಯಿಸಬೇಕಾದುದರಿಂದ ಎಲ್ಲೂ ತಮ್ಮ ಹಿತಾಸಕ್ತಿಗೆ ದಕ್ಕೆ ಬಾರದಂತೆ ನೋಡಿಕೊಳ್ಳುತ್ತಾ ಬಂದಿದ್ದಾರೆ.

ಈ ಕಾರಣಕ್ಕೆ ಹೆಣ್ಣಿನ ಅಸ್ತಿತ್ವ ಹಾಗೂ ಅವಳ ಇರುವಿಕೆಯ ನೆಲೆಯಲ್ಲೆ ಕೆಲವು ಅಂಶಗಳನ್ನು ಗುರುತಿಸುವುದು ಮುಖ್ಯವಾಗುತ್ತದೆ. ಇತಿಹಾಸದಲ್ಲಿ ಆರ್ಥಿಕ, ಸಾಮಾಜಿಕ. ರಾಜಕೀಯ, ಧಾರ್ಮಿಕ ಯಾವುದೇ ಕ್ಷೇತ್ರವನ್ನು ತೆಗೆದುಕೊಂಡರು ಆ ಯಾವ ಕ್ಷೇತ್ರದಲ್ಲಿ ಅವಳು ಅಸಮರ್ಥಳಲ್ಲ. ಹಾಗಾದರೆ ಆ ಕ್ಷೇತ್ರಗಳಾದರೂ ಅವಳಿಗೆ ಅನಾನುಭವ ಅಥವಾ

ಹೊಸಕ್ಷೇತ್ರಗಳಲ್ಲ, ಅವಳಿಗೆ ಕೊಟ್ಟ ಸಣ್ಣ ಪುಟ್ಟ ಅವಕಾಶವನ್ನೇ ಅವಳು ಸಮರ್ಥವಾಗಿ ನಿರ್ವಹಿಸಿರುವಂತಹ ಅದೇಷ್ಟೋ ಉದಾಹರಣೆಗಳು ನಮಗೆ ಆಕರ ಸಮೇತ ಲಭ್ಯವಾಗುತ್ತವೆ.

ಕರ್ನಾಟಕ ಇತಿಹಾಸವು ವಿಭಿನ್ನ ಸಂಸ್ಕೃತಿಯ ನಾಡು. ಅನೇಕ ಧರ್ಮಗಳು ಇಲ್ಲಿ ತಮ್ಮ ಪ್ರಾಭಲ್ಯವನ್ನು ಆಚರಣೆಗಳ ಮೂಲಕ ಸಾಧಿಸಿವೆ. ಈ ನಾಡಿನ ನಾಗರಿಕತೆಯ ಸಂವರ್ಧನೆ, ವಿನಯ ಶೀಲ ಔದಾರ್ಯ, ಪರಾಕ್ರಮದಂತಹ ಸಂದರ್ಭಗಳಲ್ಲಿ ಪ್ರಮುಖವಾಗಿ ಪಾತ್ರವಾಡಿದವಳು ಮಹಿಳೆ. ಧರ್ಮ, ಅರ್ಥ, ಕಾಮ, ಮೋಕ್ಷಗಳಲ್ಲಿ ಪುರುಷನ ಹೆಗಲಿಗೆ ಹೆಗಲು ಕೊಟ್ಟು ದುಡಿದು, ಹೆಣ್ಣಾಗಿ ಹುಟ್ಟಿದ್ದಕ್ಕೆ ಜೀವನವನ್ನು ಸಾರ್ಥಕಪಡಿಸಿಕೊಂಡಿರುವಳು. 'ತೊಟ್ಟಿಲ ತೂಗಿದ ಕೈ ದೇಶವನ್ನಾಳಿತು' ಎಂಬ ಗಾದೆಗೆ ಅರ್ಥ ತುಂಬಿರುವಳು. ಕರ್ನಾಟಕದ ಚರಿತ್ರೆಯ ಪುಟ ಪುಟಗಳಲ್ಲಿ ಇಂಥ ಮಹಿಳೆಯರಿಗೇನು ಕೊರತೆ ಇಲ್ಲ. ಅಂತಹದರಲ್ಲಿ ನೊಳಂಬರ ಅರಸು ಮನೆತನದ ಮಹಿಳೆಯರು ಕೂಡ ಚರಿತ್ರೆಯ ಪುಟಗಳಲ್ಲಿ ರಾರಾಜಿಸುತ್ತಿದ್ದಾರೆ.

ಹೆಂಜೇರುವನ್ನು ರಾಜಧಾನಿಯನ್ನಾಗಿ ಮಾಡಿಕೊಂಡ ಪ್ರಾಚೀನ ಕರ್ನಾಟದಲ್ಲಿ ಆಳ್ವಿಕೆಯನ್ನು ಮಾಡುತ್ತಿದ್ದ ನೊಳಂಬರು, ತಲಕಾಡಿನ ಗಂಗರ ದಾಳಿಯಿಂದ ತತ್ತರಿಸಿ ದಕ್ಷಿಣದ ಕಡೆಯಿಂದ ಕರ್ನಾಟಕದ ಉತ್ತರದ ದಿಕ್ಕಿಗೆ ಸರಿದು ಹೋದರು. ಆ ನೊಳಂಬರು ಈಗಿನ ಬಳ್ಳಾರಿಯ ಕಂಪಿಲಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಡಳಿತವನ್ನು ನಡೆಸುತ್ತಿದ್ದರು. ಅವರ ಈ ಆಡಳಿತ ಕೇಂದ್ರಕ್ಕೆ 'ನೊಳಂಬವಾಡಿ-೩೨೦೦೦'. ಈ ನೊಳಂಬವಾಡಿಯು ನೊಳಂಬರ ಆರಂಭದ ಆಳ್ವಿಕೆಯ ಪ್ರದೇಶವಾಗಿದ್ದು, ಚಳ್ಳಕೇರಿ ತಾಲ್ಲೂಕಿನ ಶಾಸನವೊಂದು ಉಲ್ಲೇಖಿಸಿದೆ(ಎಕ:೧೧:ಚಳ್ಳಕೆರೆ:೩೩). ಚಳ್ಳಕೆರೆ, ಪಾವಗಡ, ಹಿರಿಯೂರು, ಶಿರಾ ತಾಲ್ಲೂಕುಗಳ ಭಾಗಗಳೊಂದಿಗೆ ಆಂಧ್ರ ಪ್ರದೇಶದ ಹೆಂಜೇರು ಸಾಮಾನ್ಯ ಹಾಗೂ ಜನಸಾಮನ್ಯ ಮಹಿಳೆಯರ ಬಗೆಗೆ ದೊರೆಯುವ ಮಾಹಿತಿ ಕಡಿಮೆ ಎಂದೇ ಹೇಳಬೇಕಾಗುತ್ತದೆ.

ನಾವು ನೊಳಂಬರ ಶಾಸನಗಳಲ್ಲಿ ಮಹಿಳೆಯರನ್ನು ಗುರುತಿಸುವಾಗ ಅನ್ಯ ರಾಜಮನೆತನಗಳ ಶಾಸನಗಳಲ್ಲಿ ಹಾಗೂ ಆ ಮನೆತನದ ಅರಸು ಮಹಿಳೆಯರ ಬಗೆಗೆ ವ್ಯಕ್ತವಾದ ಅಭಿಪ್ರಾಯಗಳಿಗೂ ಮತ್ತು ಇವರಿಗೂ ಅನೇಕ ರೀತಿಯಲ್ಲಿ ವ್ಯತ್ಯಾಸವನ್ನು ಗಮನಿಸಬಹುದು. ಹಾಗಾಗಿ ಅವರನ್ನು ಸಂಪೂರ್ಣವಾಗಿ ಅರಿಯಲು ಆ ಕಾಲಘಟ್ಟದ ಶಾಸನಗಳನ್ನು ನೋಡದೇ ಹೋದರೆ ಪರಿಪೂರ್ಣವಾದ ಮಾಹಿತಿಯನ್ನು ಕಲೆಹಾಕಲು ಅಸಾಧ್ಯವಾಗುತ್ತದೆ. ಪ್ರಾಚೀನ ಕರ್ನಾಟಕದ ಸ್ತ್ರೀಯರು ಅದರಲ್ಲೂ ರಾಜ ಮಾಂಡಲಿಕ, ಸಾಮಂತ ಮನೆತನದ ಸ್ತ್ರೀಯರು ಶೈವ ಧರ್ಮಕ್ಕೆ ಸಂಬಂಧಪಟ್ಟ ಲಿಂಗ ಪ್ರತಿಷ್ಠೆ, ದೇವಸ್ಥಾನ ನಿರ್ಮಾಣದ ಜೊತೆಗೆ ಕೆರೆ, ಬಾವಿ, ಸತ್ರ, ಅರವಟ್ಟಿಗೆಗಳ ನಿರ್ಮಾಣ ಇತ್ಯಾದಿ ಸಾಮಾಜಿಕ

ಕಾರ್ಯಗಳಲ್ಲಿ ತೊಡಗಿರುವುದು ವಿಶೇಷವಾಗಿ ಕಂಡುಬರುತ್ತದೆ. ಇವುಗಳನ್ನು ಆಧ್ಯಯನದ ಅನುಕೂಲತೆಯ ದೃಷ್ಟಿಯಿಂದ ವೈಯಕ್ತಿಕ, ಕೌಟುಂಬಿಕ, ಸಾಮೂಹಿಕ ದಾನವೆಂದು ನೋಡಬಹುದು. ಈ ಹಿನ್ನೆಲೆಯಲ್ಲಿ ಪ್ರಾಚೀನ ಕರ್ನಾಟಕದಲ್ಲಿ ಶೈವ ಧರ್ಮಕ್ಕೆ ತುಂಬು ಸೇವೆ ಸಲ್ಲಿಸಿದವರು ಸಮಕಾಲೀನವರಾದ ಕಲ್ಯಾಣದ ಚಾಲುಕ್ಯರನ್ನು ಹೊರತುಪಡಿಸಿದರೆ ಅದು ನೊಳಂಬರು. ನೊಳಂಬರ ಆಳ್ವಿಕೆಯಲ್ಲಿ ದೊರೆತ ಶಾಸನಗಳಲ್ಲಿ ಸಾಮಾನ್ಯವಾಗಿ ಶೈವದೇವಾಲಯಗಳಿಗೆ ದಾನ-ದತ್ತಿ ನೀಡಿರುವುದು, ದೇವಾಲಯಗಳನ್ನು ಕಟ್ಟಿಸಿರುವುದರ ಬಗ್ಗೆ ಮಾಹಿತಿ ದೊರೆಯುತ್ತವೆ. ಬಹುಮುಖ್ಯವಾಗಿ ಸಾಮಾಜಿಕ ಕಾರ್ಯಗಳಲ್ಲಿ ಕೆರೆ-ಕಟ್ಟೆಗಳನ್ನು ಕಟ್ಟಿಸಿದ ಕೆಲವು ಶಾಸನಗಳು ನಮಗೆ ದೊರೆಯುತ್ತವೆ. ಸಹಜವಾಗಿ ಈ ಎಲ್ಲ ಶಾಸನಗಳನ್ನು ಗಮನಿಸಿದರೆ, ಧಾರ್ಮಿಕ ಚಟುವಟಿಕೆಯೊಂದಿಗೆ ಸಾಮಾಜಿಕ ಕಾರ್ಯಗಳಲ್ಲಿ ಅಂದಿನ ಅರಸು ಮನೆತನದ ಮಹಿಳೆಯರು ಭಾಗವಹಿಸುತ್ತಿದ್ದರು ಎಂಬುದು ವೇದ್ಯವಾಗುತ್ತದೆ.

ಈವರೆಗೆ ದೊರೆತ ನೊಳಂಬರ ಅನೇಕ ಶಾಸನಗಳಲ್ಲೆವು ರಾಣಿಯರ ಕುರಿತು ಮಾಹಿತಿಯನ್ನು ನೀಡುತ್ತವೆ. ಅವರ ಕಾಲದ ಒಂದು ಶಾಸನವು ಸಿಂಗಮತ್ತರಸನ(ಸಿಂಗಪೋತರ) ಕಾಲದಲ್ಲಿ 'ಮಾದವ್ವೆಯಂಬುವವಳು ಆಳ್ವಿಕೆಯನ್ನು ಮಾಡುತ್ತಿದ್ದುರ' ಬಗೆಗೆ ಮಾಹಿತಿಯನ್ನು ನೀಡುತ್ತದೆ. ಕ್ಯಾಲನೂರಿನ ಶಾಸನ(ಕ್ರಿಸ್ತಶಕ:೯೨೫:ಎಕ:೧೦(೨); ಕಇ:೫೭) ಒಂದರಲ್ಲಿ ಹಾಗೂ 'ಅಯ್ಯಪ್ಪದೇವನ ಕಾಲದ ಶಾಸನದಲ್ಲಿ ಕೆರೆನೂರ ೫೨ ಮಹಾಜನರು ಇಪ್ಪತ್ತು ಗದ್ಯಾಣ ಪೊನ್ನೊಗ್ಗಟ್ಟಿ ಪಡೆದರ್ ನಿಚ್ಚಲೊಂನ್ದುಪರಿವಡಿಯಂ ನವರ್ಗ್ಗೆ ಅಯ್ವದಿಂಬರಲ್ಲಿಯೆಟ್ಟಿಂ ನಡಯಿಸಲಸಲ್ತೊರ್ ಈ ಧರ್ಮ೦ ಇರುಗಮ್ಮಯ್ಯಗೊನ್ದು ಮದುಕಮಯ್ಯಂಗಂ ಅವ್ವಟ್ಟಿ ಒನ್ದು ಭಾಗಂ ಸಲ್ವುದು' ಎಂದಿದೆ. ಕೆರೆಕಟ್ಟೆ ನಿರ್ಮಾಣದಂತಹ ಹಲವು ಸಾಮಾಜಿಕ ಕಾರ್ಯಗಳಲ್ಲಿ ಒಬ್ಬ ಸ್ತ್ರೀಯನ್ನು ಹೆಸರಿಸಿದುವುದನ್ನು ಈ ಶಾಸನದಲ್ಲಿ ಗಮನಿಸಿದರೆ, ಅವರ ಕಾಲದಲ್ಲಿ ಪುರುಷರಷ್ಟೇ ಪ್ರಧಾನ ಗೌರವ ಸ್ತ್ರೀಯರಿಗೂ ಇತ್ತೆಂದು ತಿಳಿದು ಬರುತ್ತದೆ.

ನೊಳಂಬರ ಪ್ರಖ್ಯಾತ ಅರಸ ಇಮ್ಮಡಿ ಪೊಳಲ್ಚೋರನ ಅಗ್ರಮಹಿಷಿಯಾದ ದೀವಳಬ್ಬರಿಸಿಯ ಗುಣಗಾನವನ್ನು ಒಂದು ಶಾಸನವು ಅತ್ಯದ್ಭುತವಾಗಿ ಮಾಡಿರುವುದು ಕಂಡುಬರುತ್ತದೆ. ಅಂದರೆ, ನೊಳಂಬ ಅರಸ ಪೊಳಲ್ಚೋರನ ಪತ್ನಿ ಮತ್ತು ಕದಂಬ ವಂಶದ ರಾಜಕುಮಾರಿಯಾದ ದೀವಳಬ್ಬರಸಿಯು ರಾಜ್ಯಸೂತ್ರಗಳನ್ನು ತನ್ನ ಕಿರಿಯ ಮಗನ ಪರವಾಗಿ ತಾನೆ ನೋಡಿಕೊಳ್ಳುವ ಸಂದರ್ಭದಲ್ಲಿ ಪಾರಂಪರಿಕ ಅರಸರಾದ ತಲಕಾಡಿನ ಗಂಗರನ್ನು ಚೋಳರು ಸೋಲಿಸಿದ್ದರು. ಹಾಗೆಯೇ ದಕ್ಷಿಣ ಭಾರತದ ಪ್ರಬಲ ರಾಜ ಮನೆತನವಾಗಿದ್ದ ರಾಷ್ಟ್ರಕೂಟರನ್ನು ಮೂಲೆಗೆ ತಳ್ಳಿ ಕಲ್ಯಾಣದ ಚಾಲುಕ್ಯರು ಪಟ್ಟಕ್ಕೆ ಬಂದಿದ್ದರು. ಈ ಹಂತದಲ್ಲಿ ಕಲ್ಯಾಣದ ಚಾಲುಕ್ಯರ ಸಾಮಂತರಾಗಿ ನೊಳಂಬರ ಪಾರಂಪರಿಕ ಹಾಗೂ ಸಾಂಸ್ಕೃತಿಕ ರಾಜದಾನಿಯಾಗಿದ್ದ, ಹೆಂಜೇರುವಿನಿಂದ ರಾಜ್ಯಭಾರ ಮಾಡುತ್ತಿದ್ದ ಪೊಳಲ್ಚೋರನ

ಪತ್ನಿಯೇ ದೀವಳಬ್ಬರಸಿ. ಈಕೆಯ ಬಗ್ಗೆ ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ಅವನಿ ಗ್ರಾಮದ ಒಂದೆರಡು ಶಾಸನಗಳು ಸ್ವಲ್ಪಮಟ್ಟಿಗೆ ಮಾಹಿತಿಯನ್ನು ಕೊಡುತ್ತವೆ. ಈಕೆಯನ್ನು ಕದಂಬ ವಂಶದ ರಾಜಕುಮಾರಿಯೆಂದು ಹಾಗೂ ಇಮ್ಮಡಿ ಪೊಳಲ್ಚೋರನ ಪತ್ನಿಯಂದೂ ಈ ಶಾಸನಗಳಿಂದ ತಿಳಿದುಬರುತ್ತದೆ. ಇದರಲ್ಲಿ ಕ್ರಿಸ್ತಶಕ ೯೮೨ರ ಅವನಿಯ ಒಂದು ಶಾಸನವು ದೀವಳಬ್ಬರಸಿಯನ್ನು ಕುರಿತು ಹೀಗೆ ವಿಶದವಾಗಿ ವಿವರಿಸುತ್ತದೆ...

ಶ್ರೀವಧುಧರೆ ಪೊಳಲ್ಚೋ

ರಾವನಿಪಂಗಗ್ರಮಹಿಷಿ ಭುವನಾಂಬಿಕೆ ವಾಕ್

ದೇವಿಯರ ದೊರೆಯರೆನಿಸಿದ

ದೀವಬ್ಬರಸಿಯರ ದೊರೆಗೆಟ್ಟಿರ್ ಪೆಜಿರೊಳರೇ

ಅತಿಶಯಮಾಗೆ ತಮ್ಮ ಹೆಸರೊಳ್ನೆಜಿ ತತ್ಪತಿ ನಾಮದಿಂ ಯಶೋ

ರ್ಜಿತಮೆನಿಪಗ್ರಹಾರಮ ವಿನಾಶಿ ನಮಸ್ಸಮೆ ಮಾಡಿ ರಾಜ್ಯದೊ

ಳ್ಸುತ ನನುಕೂಳನಾಗಿ ಬೆಸಕೆಯ್ಯೆ ಗುಣೋನ್ನತಿಯೊಪ್ಪಿನಿಂದರು

ನ್ಧತಿ ದೊರೆ ದೀವಳಬ್ಬರಸಿಯರ್ಜ್ಜಗತೀ ತಳಕೇಂ ಪವಿತ್ರೋ

ಈ ಶಾಸನದ ಮೊದಲ ಪದ್ಯಗಳಲ್ಲಿ ದೀವಳಬ್ಬರಸಿಯನ್ನು ಲಕ್ಷ್ಮೀದೇವಿ, ಭೂದೇವಿ, ಪಾರ್ವತಿ ಹಾಗೂ ವಾಗ್ದೇವತೆಯಾದ ಸರಸ್ವತಿ ಇವರಿಗೆಲ್ಲ ಸಮಾನಳಾದವಳು ಎಂದು ಹೇಳುತ್ತದೆ. ಈ ದೀವಬ್ಬರಸಿಯು ತನ್ನ ಹೆಸರಿನಲ್ಲಿ ಹಾಗೂ ತನ್ನ ಪ್ರೀತಿ ಪಾತ್ರನಾದ ಪತಿಯ ಹೆಸರಿನಲ್ಲಿ, ಅವನ ಕೀರ್ತಿಯು ಜಗತ್ತಿಗೆ ಪಸರಿಸುವಂತ ಮತ್ತು ಶಾಶ್ವತವಾಗಿ ಉಳಿಯುವಂತಹ ಅತಿಶಯವಾದ ಅಗ್ರಹಾರವನ್ನು ಮಾಡಿದವಳು ಎಂದು ಹೊಗಳುತ್ತದೆ. ಬಹುಶಃ ಅಗ್ರಹಾರದ ರೂಪದಲ್ಲಿ ಗ್ರಾಮಗಳನ್ನು ಪುರೋಹಿತರಿಗೆ ದಾನವಾಗಿ ಮತ್ತು ಅವರ ಜೀವನದ ನಿರ್ವಹಣೆಗಾಗಿ ನೀಡುವುದು ಪುಣ್ಯಕಾರ್ಯವೆಂದು ತಿಳಿದು ಪುರೋಹಿತರಿಗೆ ಅಗ್ರಹಾರಗಳನ್ನು ಬಿಟ್ಟುಕೊಟ್ಟ ಬಗೆಗೆ ಬೆಳಕುಚೆಲ್ಲುತ್ತದೆ. ಇದು ಅವಳು ತನ್ನ ಮಗ ಮಹೇಂದ್ರವರ್ಮನಿಗೆ ಹೇಳಿ ಮಾಡಿಸುತ್ತಿದ್ದಳು ಎಂಬುದಾಗಿ ತಿಳಿಸುತ್ತದೆ. ನಾಡಿನಲ್ಲಿ ತಾಯಿ ಹೇಳಿದ ಕೆಲಸವನ್ನು ಮಾಡಿಸುವಂತಹ ಪೂರಕವಾಗಿರುವ ಮಗನನ್ನು ಪಡೆದಿರುವ ಅತಿಶಯವಾದ ಉತ್ತಮ ಗುಣಗಳನ್ನು ಹೊಂದಿರುವ ಅರುಂಧತಿದೇವಿಗೆ ಸಮಾನಳಾದ ದೀವಳಬ್ಬರಸಿಯಂತೆ ಈ ನಾಡಿನಲ್ಲಿ ಅದೆಷ್ಟು ಮಹಿಳೆಯರು ದೊರುಕುತ್ತಾರೆ ಎಂದು ಈ ಶಾಸನದಲ್ಲಿ ಸೂಚ್ಯವಾಗಿ ಕೇಳಲಾಗಿದೆ.

ಮುಂದುವರೆದು ದೀವಳಬ್ಬರಸಿ ಕಟ್ಟಿಸಿದ ಕೆರೆಯ ಬಗ್ಗೆ ಶಾಸನಕವಿಯು ವರ್ಣನೆಯು ಔಚಿತ್ಯಪೂರ್ಣವಾಗಿದೆ. ಅದು..

ವಿದಿತಂ ಲೋಕಕ್ಕೆ ಮುನ್ನಂ ರಘುಕುಳದ ಹನೋಗ್ರಷುವಿಂಕಾಯ್ದು ತಿಣ್ಣಂ
ಕುದಿಗೊಣ್ಡುಟ್ಟುತ್ತಗಸ್ತ್ಯಂ ಕುಡಿಯತುಗಟ್ದಿನಿಂ ಕಟ್ಟು ಪಟ್ಟಿಟ್ಟುದಿನ್ತ
ಪ್ಪದು ಪೆಂಪನ್ತಾಳ್ದಿತೆನ್ದನ್ದಉಯರೆಲವಣಾಂಭೋಧಿಯಂ ಪೋಲಿಸಲ್ವೇ
ಡಿದುವೆತ್ತಾನೆತ್ತಳೆಂಬನ್ತತಿ ಬಹಳ ಜಳನ್ದೀವಳಬ್ಬಾ ಸಮುದ್ರಂ ॥
ಪದೆದಾಯಾಸಕ್ಕೆ ಪಕ್ಕಾಗಿರೆ ಗಡಪಿರಿದು ಭಾನ್ತಿನಿಂಪೋ ದೊನ್ದ
ಬ್ಬದೊಳಿನ್ತೆನ್ತಾಮೆಯ್ದುತ್ತಿರದಮರನದೀ ಕಾನ್ತೆಯಂ ಕಾಣ್ಬರೀ..
ದೇಸರ್ಸಿಯ್ವಿದೇಂ ಸಂಭವಿಸಿತೋ ನಮಗಪ್ಪಟ್ಕಿಉಂಗಂಗೆ ತೆಂಕ
ಣ್ಗಿದಿರಂಬನ್ದಿಟ್ಟುದೆಂಬನ್ತತಿಬ ಬಹಳ ಜಳನ್ತೀವಳಬ್ಬಾ ಸಮುದ್ರಂ

ಮುಂದುವರೆದು ಈ ಪದ್ಯದಲ್ಲಿ ದಿವಳಬ್ಬರಸಿಯು ಕಟ್ಟಿಸಿದ ಕೆರೆಯು ಉಪ್ಪುನೀರಿನ ಸಮುದ್ರದ ನೀರೆ? ಎಂದು ಕವಿ ಪ್ರಶ್ನಿಸುತ್ತಾನೆ. ಅಂದರೆ, ಪುರಾಣದ ರಘು ಕುಲದ ರಾಮನು ಬೆಂಕಿಯಂತಹ ಬಾಣಗಳ ತೀಕ್ಷ್ಣತೆಯಿಂದ ದಶಕಂಠನ ಶಿರವನ್ನು ಕತ್ತರಿಸಿದಾಗ ಕೋಪಾಗ್ನಿಯಂತೆ ಅಗಸ್ತ್ಯರು ಸಮುದ್ರವನ್ನು ಕೋಪದಿಂದ ಅಪೋಶನಮಾಡಿ ಜೀರ್ಣಿಸಿಕೊಂಡಾಗ ಜನರ ಬೇಡಿಕೆಯನ್ನು ಮನ್ನಿಸಿ ನೀರನ್ನು ಮತ್ತೆ ಉಗುಳಿದನು. ಆ ಉಗುಳಿದ ನೀರು ಸಮುದ್ರವನ್ನು ತುಂಬಿದಂತೆ ದೀವಳಬ್ಬರಸಿ ಕಟ್ಟಿಸಿದ ಕೆರೆಯನ್ನು ಇದಕ್ಕೆ ಹೋಲಿಸುವುದುಂಟೆ ? ಹಾಗೂ ಅದು ಅಪ್ರಯೋಜನಕರವಾಗಿದೆಯೆ ? ಎಂದು ಕೇಳುವಲ್ಲಿ ದೀವಳಬ್ಬರಸಿಯ ವ್ಯಕ್ತಿತ್ವ ಹಾಗೂ ಹೆಚ್ಚುಗಾರಿಕೆಯನ್ನು ಶಾಸನ ಕವಿಯು ಎತ್ತಿ ತೋರಿಸಿದ್ದಾನೆ. ಅಲ್ಲದೇ ಇದು ಅಪಾರವಾದ ಜಲರಾಶಿಯಿಂದ ತುಂಬಿ ಸಮುದ್ರದಂತೆ ಶೋಭಿಸುತ್ತಿತ್ತು ಎಂದೆಲ್ಲಾ ವರ್ಣಿಸುತ್ತಾನೆ.

ಜೊತೆಗೆ ವರ್ಷಕ್ಕೊಮ್ಮೆ ಉತ್ತರದ ಗಂಗಾನದಿಯೆಂಬ ಪವಿತ್ರ ಕಾಂತೆಯನ್ನು ದೊಡ್ಡದಾದ ಭ್ರಾಂತಿಯನ್ನಿರಿಸಿಕೊಂಡು ಆಯಾಸವಾದರೂ, ಉತ್ಸಾಹದಿಂದ ಹೋಗುವ ಜನರ ಮೇಲಿನ ಅಪಾರವಾದ ಪ್ರೀತಿಯಿಂದ, ಅವರ ಆಯಾಸವನ್ನು ತಣಿಸುವ ಕಾರಣದಿಂದ ದಕ್ಷಿಣಕ್ಕೆ ಬಂದು ನಮ್ಮೆದುರಿನಲ್ಲಿ ತುಂಬಿ ನಿಂತಿರುವ ಜಲರಾಶಿಯಲ್ಲಿ ಆ ಗಂಗಾನದಿಯ ಆನಂದವನ್ನು ಮತ್ತು ಅದರ ಸರಿಸಮಾನವಾಗಿ ಆಗುವಂತ ಅನುಭವನ್ನು

ಪಡೆಯುವಂತಹ ಅವಕಾಶವನ್ನು ಸ್ಥಳೀಯವಾಗಿಯೇ ಮಾಡಿಕೊಟ್ಟಿದ್ದಾಳೆ ಎಂದೆಲ್ಲ ಈ ಶಾಸನವು ವಿವರಿಸುತ್ತದೆ.

ಮನುಚರಿತಂ ಮಹೇಂದ್ರ ನೃಪನಿಂದೆ ಪರೋಕ್ಷದೊಳಾಮಾಹತ್ಮ್ಯನಾ
ಜನನಿ ಮಹೇಂದ್ರ ನಾಮದೆ ಕೊಳಂ ನಿಜ ನಾಮದೊಳಿನ್ತಟಾಕಮೀ
ಶನ ಭವನಮ್ಮುಕುನ್ದಭವನಂಗಳ ನಿಂಬಿನಿ ಮಾಡಿ ಧರ್ಮವ
ರ್ಧನದೆ ಕನೀಯ ನನ್ದನನ ರಾಜ್ಯಮನೀಕ್ಷಿಸುಗಾವ ಕಾಲಮಂ

ಮೇಲಿನ ಪದ್ಯದಲ್ಲಿ ಶಾಸನಕವಿಯು ದೀವಳಬ್ಬರಸಿಯನ್ನು ಮನುಚರಿತಂಗೆ ಹೋಲಿಸುವುದು, ಹಾಗೂ ತನ್ನ ಮಗ ಮಹೇಂದ್ರನ ಸಾವಿನ ನಂತರ ಅವನ ಹೆಸರಿನಲ್ಲಿ ಒಂದು ಕೊಳವನ್ನು, ಜೊತೆಗೆ ತನ್ನ ಹೆಸರಿನಲ್ಲಿ ಒಂದು ಕೆರೆಯನ್ನು ಮತ್ತು ಶಿವಾಲಯವನ್ನು, ಮುಕುಂದನ ಆಲಯವನ್ನು ಕಟ್ಟಿಸಿ ಧರ್ಮ ಕಾರ್ಯಗಳು ಸಾಮಾಜಿಕವಾಗಿ ಅಭಿವೃದ್ಧಿಯಾಗುವಂತೆ ಸುಂದರವಾದ ಪರಿಸರವನ್ನು ನಿರ್ಮಿಸಬೇಕೆಂಬುದು ಅವಳ ಹಂಬಲವಾದಂತಿದೆ. ಹಾಗೂ ತನ್ನ ಮರಣಾನಂತರ ಇಡೀ ನಾಡನ್ನು ನೊಳಂಬವಾಡಿ-೩೨೦೦೦ದ ಆಡಳಿತದ ಚುಕ್ಕಾಣಿಯನ್ನು ತನ್ನ ಕಿರಿಮಗ ವಹಿಸಿಕೊಳ್ಳಬೇಕು ಹಾಗೂ ಎಂದೆಂದಿಗೂ ತನ್ನ ಕಿರಿಯ ಮಗನ ರಾಜ್ಯವೈಭವನ್ನು ಕುಂದಂತೆ ನೋಡಿಕೊಳ್ಳುತ್ತಿದ್ದಳು.

ಹೇಮಾವತಿಯ ಶಾಸನದಲ್ಲಿನ ಕೊನೆಯ ಸಾಲುಗಳು ಅವಳ ಮೂಲ ವಂಶವನ್ನು ಕೇಂದ್ರಿಕರಿಸಿ ಹಾಗೂ ಅವಳ ತವರನ್ನು ಉಚ್ಚರೀತಿಯಲ್ಲಿ ವರ್ಣಿಸುವದರ ಮೂಲಕ ಅವಳ ವ್ಯಕ್ತಿತ್ವವನ್ನು ಎತ್ತಿಹಿಡಿಯುತ್ತವೆ.

ನೆಟ್ಟನೆ ಕದಂಬ ವಂಶಂ
ಪುಟ್ಟಿದೆ ಮನೆ ಪಲ್ಲವೇನ್ದ್ರನಿಜುವ ನೊಟಂಬಂ
ಪುಟ್ಟದ ಮಗನಿಗೆ ಮುಗಿಲಂ
ಪುಟ್ಟಿಪುದಂ ಪೆಂಪು ದೀವಳಬ್ಬರಿಸಿಯರಾ
ಭೂಲೋಕಾಗ್ರ್ಯ ಕದಂಬ ವಂಶ ತಿಲಕಾಸದ್ಭಿಸ್ಸದಾವನ್ದಿತಾ
ಶ್ರೀಮದ್ರಾಜ ಮನೋಜ ಭೂಪಮಹಿಷೀ ದಿವಾಂಬಿಕಾ ವಿಶ್ರುತಾ
ಪೂತಾನೂತ ಪತಿವರತಾಸ್ತುತ ಗುಣದೇದೀಪ್ಯಮಾನಾಜನಿ

ಕೃತ್ವಾದೇವಾಯತ ನಮ್ಮೇಹೇಶ್ವರಾರ್ಪ್ಪಣ ಮನನ್ತಪಾಪ

ವಿನಾಶಘಂಟಾ ದೀವಾಂಬಕಾಯಾ ನೊಳಂಬ ನಾರಾಯಣೇಶ್ವರಾಯ ಸುದತ್ತಾ॥

ಹೀಗೆ ದೀವಳಬ್ಬರಿಸಿಯು ಕದಂಬ ವಂಶದಲ್ಲಿ ಹುಟ್ಟಿದರು, ತನ್ನ ಒಡಲಲ್ಲಿ ಜನಿಸಿದ ನೊಳಂಬಪಲ್ಲವರ ವಂಶದ ಕುಡಿಯಾದ ಇರಿವ ನೊಳಂಬನ ಕೀರ್ತಿ ಆಕಾಶದೆತ್ತರಕ್ಕೇರಲಿ, ವಿಶ್ವವಿಖ್ಯಾತಿ ಪಡೆಯಲಿ ಎಂದು ನೊಳಂಬನಾರಾಯಣೇಶ್ವರನಿಗೆ, ಮಹೇಶ್ವರಾರ್ಪಣವೆಂದು ಪಾಪವಿನಾಶ ಘಂಟೆಯನ್ನು ಅರ್ಪಿಸಿದ ದೀವಳಬ್ಬರಸಿಯನ್ನು ಶಾಸನ ಕವಿಯು ಸಂಸ್ಕೃತ ಭಾಷೆಯಲ್ಲಿ ವರ್ಣಿಸಿದ್ದಾನೆ. ಜೊತೆಗೆ ಶ್ರೀರಾಜಮನೋಜ ದೊರೆಯ ರಾಣಿ ಶ್ರೇಷ್ಠವಾದ ಕದಂಬವಂಶಕ್ಕೆ ತಿಲಕದಂತಿರುವ ಪತಿವ್ರತೆಯರು ಆರಾಧಿಸುವ ಮಂಗಳಕರವಾದ ಗುಣವುಳ್ಳ ದೀವಳಬ್ಬರಸಿಯ ಸಾಂಸ್ಕೃತಿಕ ಚೆಲುವಿನ ಮಿಡಿತಗಳನ್ನು ಜಗತ್ತಿಗೆ ನೀಡಿದ್ದಾಳೆ(ಶಾಸನಗಳಲ್ಲಿ ದಾನ ದತ್ತಿಗಳು: ಜಯಮ್ಮ ಕರಿಯಣ್ಣ ಎಚ್.:೧೧೩) ಎಂಬುದಾಗಿ ಶಾಸನವು ತಿಳಿಸುತ್ತದೆ. ಹೀಗೆ ನೊಳಂಬರ ಕಾಲದಲ್ಲಿ ಸಾಮಾನ್ಯವಾಗಿ ಸ್ತ್ರೀಯರು ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವುದರ ಬಗೆಗೆ ದೀವಳಬ್ಬರಸಿ ಅವಳು ಅಷ್ಟೇ ಅಲ್ಲದೇ, ಹಲವು ಆಧಾರಗಳು ದೊರೆಯುತ್ತವೆ.

ಬರಗೂರಿನ ಮೂಲಸ್ಥಾನದ ಎರಡೂ ದೇವಾಲಯದ ಪೆಂಜೇರುವಿನ ಪಂಚಮಠಕ್ಕೆ ಮತ್ತು ಬರಗೂರಿನ ಮಹೇಂದ್ರೇಶ್ವರ ದೇವಸ್ಥಾನಕ್ಕೆ ದಾನ ಮಾಡಿದಂತೆಯೂ ಮತ್ತು ನಾಗಿಯಬ್ಬೆಯ ಅಬ್ಬೆ ನಾರಣಬ್ಬೆಯು ಕೆರೆಯನ್ನು ಕಟ್ಟಿಸಿದ್ದನ್ನು ಕ್ರಿಸ್ತಶಕ ೯೯೯ರ ಅಯ್ಯಪದೇವನ ಶಾಸನ ತಿಳಿಸುತ್ತದೆ(ಎಕ:೧೦:೨; ಕಇ:೫೭). ಕ್ರಿಸ್ತಶಕ ೧೦೩೬ ಓರುವಾಯಿ ಗ್ರಾಮದ ಎರಡು ಶಾಸನಗಳಲ್ಲಿ ನೊಳಂಬ ಜಗದೇಕಮಲ್ಲದೇವನ ಮಡದಿಯಾದ ದೇವಳದೇವಿ ಕಾಲವಶವಾದ ಅವಳ ಅಸ್ಥಿಯನ್ನು ಗಂಗೆಯಲ್ಲಿ ಬಿಟ್ಟು ಬಂದ ಬ್ರಾಹ್ಮಣರಿಗೆ ದಾನ ನೀಡಿದ ಉಲ್ಲೇಖವಿದೆ. ಇದರಿಂದ ಧಾರ್ಮಿಕ ವಿಧಿವಿಧಾನಗಳು ನಡೆಯುವ ಚಟುವಟಿಕೆಯಲ್ಲಿ ಮಹಿಳೆಯರಿಗೂ ಸಮಾನ ಅವಕಾಶಗಳನ್ನು ನೀಡಿರುವುದನ್ನು ಅನೇಕ ಶಾಸನಗಳು ಉಲ್ಲೇಖಿಸುತ್ತವೆ. ನನ್ನಿನೊಳಂಬನ ಆಳ್ವಿಕೆಯಲ್ಲಿನ ಕೋಗಳಿಯ ಕ್ರಿಸ್ತಶಕ ೧೦೪೫ರ ಶಾಸನದಲ್ಲಿ ಪರೋಕ್ಷ ವಿನಯಕ್ಕೆ ಬಿಟ್ಟ ಛತ್ರದ ದಾನ ನೀಡುವಾಗ ಪದ್ಮಾವತಿಯಬ್ಬೆಯ ಉಲ್ಲೇಖ ಬಂದಿರುವುದನ್ನು ಗಮನಿಸಬಹುದು. ಈ ಪದ್ಮಾವತಿಯಬ್ಬೆಯು ನೊಳಂಬರ ಅಧಿಕಾರಿಯಾಗಿದ್ದ ನೊಳಂಬ ಸೆಟ್ಟಿಯ ಪತ್ನಿಯಾಗಿದ್ದಳು ಎಂಬುದನ್ನು ವಿವರಿಸುತ್ತದೆ. ಹಾಗೇ ನಾರಸಿಂಘದೇವನ ಕಾಲದಲ್ಲಿ ಅವನ ಪತ್ನಿ ನೊಳಂಬ ಮಹಾದೇವಿಯು ಹೊಸಗೆರೆಯ ಮಹಾದೇವ ದೇವರಿಗೆ ದಾನ ನೀಡಿದ ಉಲ್ಲೇಖ(ಎಕ:೯:೧: ಕಇ:೧೧೦) ಈ ಶಾಸನದಲ್ಲಿ ಬರುತ್ತದೆ. ಅಸಗೋಡುವಿನ ಕ್ರಿಸ್ತಶಕ ೧೦೫೪ರ ಶಾಸನದಲ್ಲಿ ಅದೇ ನಾರಸಿಂಘದೇವನ ಕಾಲದಲ್ಲಿ ಕಂಚಿಯಬ್ಬೆಯು

ದಾನದ ಉಲ್ಲೇಖ ಬರುತ್ತದೆ. ಕಲ್ಕೇರಿಯ ಶಾಸನವೊಂದರಲ್ಲಿ(ಎಸ್‌ಐಐ:೨೦;೧೦:೪೯) ವೀರನೊಳಂಬನ ಪತ್ನಿ ಮಾಳಲದೇವಿಯನ್ನು ದಾನಪ್ರಿಯೇ, ಯಶೋಪ್ರಿಯೆ ಎಂದು ಶಾಸನವು ಅವಳನ್ನು ಹಾಡಿಹೊಗಳಿರುವುದು ಕಂಡುಬರುತ್ತದೆ.

ನೊಳಂಬರ ಕಾಲದಲ್ಲಿ ಹೀಗೆ ಧಾರ್ಮಿಕ ಚಟುವಟಿಕೆಗಳಲ್ಲಿ ಸ್ವತಂತ್ರವಾಗಿದ್ದ ಸ್ಥಾನಮಾನಗಳನ್ನು ಮಹಿಳೆಯರಿಗೆ ನೀಡಲಾಗಿತ್ತು. ಇದರೊಂದಿಗೆ ತಾವು ಆರಾಧಿಸುವ ದೇವರು–ದೇವಳಗಳಿಗೆ ದಾನ–ಧರ್ಮವನ್ನು ಮಾಡುವಂತಹ ಸ್ವಾತಂತ್ರ್ಯವನ್ನು ಅಂದಿನ ಮಹಿಳೆ ಪಡೆದಿರುವುದನ್ನು ಅವರ ಕಾಲದ ಶಾಸನಗಳು ಉಲ್ಲೇಖಿಸಿರುವುದನ್ನು ಅರಿಯಬಹುದು. ಇನ್ನೂ ಹಿರೇಮ್ಯಾಗಳಗೇರಿಯ ಕ್ರಿಸ್ತಶಕ ೧೦೫೪ರ ಶಾಸನವೊಂದರಲ್ಲಿ ನಾಲ್ವರು ಪಾತ್ರದವರಿಗೆ ದಾನ ನೀಡಿದ ವಿವರಣೆ ಬರುತ್ತದೆ. ಇಲ್ಲಿ ಗಮನಿಸಬಹುದಾಂತಹ ಅಂಶವೆಂದರೆ, ಅಲ್ಲಿ ತಾರತಮ್ಯದ ವಾದವಾಗಲಿ, ಬೇದಗಳಾಗಲಿ ಕಂಡುಬರುವುದಿಲ್ಲ. ಸಮಾಜದ ಕಟ್ಟಕಡೆಯ ವ್ಯಕ್ತಿಕೂಡ ತನ್ನ ಇಷ್ಟದಂತೆ ಬದುಕುವಂತ ವಾತಾವರಣವನ್ನು ನೊಳಂಬರ ಕಾಲದಲ್ಲಿರುವುದನ್ನು ಈ ಶಾಸನಗಳ ಮೂಲಕ ಕಾಣಬಹುದಾಗಿದೆ.

ಸ್ತೀಯರಿಗೆ ಕ್ರಮವಾಗಿ ಕೌಟುಂಬಿಕ ಧಾರ್ಮಿಕ ಮತ್ತು ಸಾಮಾಜಿಕ ಕ್ಷೇತ್ರಗಳಷ್ಟು ಸುರಕ್ಷಿತವಾದ ಕ್ಷೇತ್ರಗಳು ರಾಜಕೀಯ ಕ್ಷೇತ್ರವಾಗಿರಲಿಲ್ಲ. ಶಿಷ್ಟ ಪರಿಪಾಲನೆ, ದುಷ್ಟ ಮರ್ದನದಂಥ ಉಭಯ ಜವಾಬ್ದಾರಿಯ ಕಾರ್ಯವಲಯವಾಗಿರುವ ರಾಜಕೀಯ ವಲಯವು, ಅಂದು ಮಹಿಳೆಗೆ ನಿಲುಕಿಸಿಕೊಳ್ಳಲಾರದ ಕ್ಷೇತ್ರವಾಗಿದ್ದಿತು. ಪ್ರಜಾಹಿತಕ್ಕೋಸ್ಕರ ವೈರಿಗಳ ಜೊತೆ ಸೆಣಸುವ, ಅಪಾಯಕಾರಿ ಜೀವನ ವ್ಯಾಪಾರವಾಗಿದ್ದಿತು. ಅಂದು ದೇಹ ಸಾಮರ್ಥ್ಯ, ಶೀಲ ಸಂರಕ್ಷಣೆಯ ದೃಷ್ಟಿಗಳಿಂದ ಮಹಿಳೆ, ಇದನ್ನು ನಿಲುಕಿಸಿಕೊಳ್ಳುವುದು ಕಷ್ಟಸಾಧ್ಯವಾಗಿತ್ತು. ಹೀಗಿದ್ದರೂ ನೊಳಂಬ ಮಹಿಳೆಯರು ರಾಜಕೀಯೇತರ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದು ತಿಳಿದುಬರುತ್ತದೆ. ಇವುಗಳೆಲ್ಲದರ ಜೊತೆಗೆ ಕೆರೆಗಳ ನಿರ್ಮಾಣ, ಅವುಗಳ ನಿರ್ವಹಣೆ ಮತ್ತು ಪೋಷಣೆಗಳಂತ ಚಟುವಟಿಕೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವುದನ್ನು ಬಹಳ ವಿಶೇಷವಾಗಿ ಶಾಸನಾಧರಗಳಿಂದ ಕಾಣಬಹುದಾಗಿದೆ.

ಒಂದು ಮಹತ್ವದ ಅಂಶದ ಮೇಲೆ ಕ್ರಿಸ್ತಶಕ ೯೮೨(ಎಕ:೧೦:ಮುಬಾ:ಸಂ:೩೮)ರ ಶಾಸನವೊಂದು ಬೆಳಕು ಚೆಲ್ಲುತ್ತದೆ. ಅದು ಇಮ್ಮಡಿ ಪೊಳಲ್ಚೋರನ ಪತ್ನಿ ದೀವಬ್ಬರಸಿಯು ಗತಿಸಿದ ತನ್ನ ಪತಿಯ ಹೆಸರಿನಲ್ಲಿ ಒಂದು ಕೊಳವನ್ನೂ, ತನ್ನ ಹೆಸರಿನಲ್ಲಿ ಒಂದು ಕೆರೆಯನ್ನೂ ಹಾಗೂ ಶಿವ ಮತ್ತು ವಿಷ್ಣುದೇವಾಲಯಗಳನ್ನೂ ನಿರ್ಮಾಣ ಮಾಡಿಸಿರುವದನ್ನು ಗಮನಿಸಬಹುದು. ಈಕೆ ಕಟ್ಟಿಸಿದ ಕೆರೆಯು ಪೊಜಿರಮಂಗಲದಲ್ಲಿ ಇತ್ತು. ಅವನಿಯಲ್ಲಿ ಕಟ್ಟಿಸಿದ ವಿಷ್ಣುಗೃಹವನ್ನು ನೊಳಂಬನಾರಾಯಣೇಶ್ವರನೆಂದು ಕರೆಯಲಾಗುತ್ತಿತ್ತು. ಈ ಮೇಲೆ ವಿವರಿಸಿದ

ದೇವಾಲಯಗಳಾದ ವಿಷ್ಣು ಮತ್ತು ಶಿವ ದೇವಾಲಯಗಳನ್ನು ರಾಣಿ ದೀವಬ್ಬರಸಿಯೇ ನಿರ್ಮಾಣ ಮಾಡಿಸಿರುವುದನ್ನು ಮೂಳಬಾಗಿಲಿನ ಶಾಸನ(ಎಕ:೧೦:ಮುಬಾ:ಸಂ: ೫೦)ವು ಸ್ಪಷ್ಟಪಡಿಸುತ್ತದೆ. ಮೂಲ ಶಿವನ ಆರಾಧಕರಾದ ನೊಳಂಬರು ಶೈವ ದೇವಾಲಯಗಳನ್ನು ಅಷ್ಟೆ ನಿರ್ಮಿಸದೆ, ಅದರೊಂದಿಗೆ ವೈದಿಕರ ವಿಷ್ಣುವಿನ ದೇವಾಲಯವನ್ನು ನಿರ್ಮಾಣ ಮಾಡಿರುವುದು ಕಂಡುಬರುತ್ತದೆ. ಅದರಲ್ಲೂ ಮಹಿಳೆಯರು ಮುಂದೆ ನಿಂತು ಈ ದೇವಾಲಯದ ಕಾರ್ಯಗಳನ್ನು ಮಾಡಿರುವುದು. ಅಂದರೆ ಮಹಿಳೆಯರು ನೊಳಂಬರ ಕಾಲದಲ್ಲಿ ಎಷ್ಟು ಸ್ವಚ್ಛ, ಸ್ವತಂತ್ರ ನಿರ್ಧಾರಗಳನ್ನು ತಗೆದುಕೊಳ್ಳುತ್ತಿದ್ದರು ಎಂಬುದನ್ನು ಈ ಮುಳಬಾಗಿಲು ಶಾಸನವು ತಿಳಿಸುತ್ತದೆ.

೩.೪. ನೊಳಂಬರ ಕಾಲದ ಘಟಿಕಾಸ್ಥಾನಗಳು

ಕರ್ನಾಟಕದಲ್ಲಿ ಗುರುಕುಲ ಶಿಕ್ಷಣ ವ್ಯವಸ್ಥೆಯು ಪ್ರಾಚೀನ ಕಾಲದಿಂದಲೂ ಬೆಳದು ಬಂದಿದೆ. ಕ್ರಿಸ್ತಶಕ ಆರಂಭದ ಶಾತವಾಹನರ ಆಳ್ವಿಕೆಯ ಸಂದರ್ಭದಲ್ಲಿಯೇ ವ್ಯವಸ್ಥಿತವಾದ ಶಿಕ್ಷಣಪದ್ಧತಿಯು ಕರ್ನಾಟಕದಲ್ಲಿದ್ದುದರ ಬಗೆಗೆ ಅನೇಕ ಉಲ್ಲೇಖಗಳಿವೆ. ಆದರೆ ಆ ಸಂದರ್ಭದಲ್ಲಿದ್ದ ದೇವಾಲಯಗಳ ಕುರುಹುಗಳ ಕೊರತೆಯು ಎದ್ದು ಕಾಣುತ್ತದೆ. ಬೌದ್ಧಧರ್ಮದ ನಾಗಾರ್ಜುನಕೊಂಡದಂತಹ ಹಲವು ಶೈಕ್ಷಣಿಕ ಕೇಂದ್ರಗಳನ್ನು ಹಾಳುಮಾಡುವುದರ ಮೂಲಕ ಪ್ರಾಚೀನ ವ್ಯವಸ್ಥೆಯ ಒಂದು ಚಾರಿತ್ರಿಕ ಆಧಾರಗಳನ್ನು ನಾಶಮಾಡುವ ಪ್ರಕ್ರಿಯೆಯು ಧರ್ಮದ ಹೆಸರಿನಲ್ಲಿ ನಡೆದು ಬಂದಿರುವುದು ಕಂಡುಬರುತ್ತದೆ. ಆ ಸಂದರ್ಭದಲ್ಲಿ ಅಶೋಕನ ಕಾಲದಲ್ಲಿ ಬೌದ್ಧವಿಹಾರಗಳೂ ದೊಡ್ಡಮಟ್ಟದ ಸಂಸ್ಥೆಗಳಾಗಿ ಬೆಳೆದು ವಿದ್ಯಾಕೇಂದ್ರಗಳಾಗಿದ್ದವು. ಪ್ರಾರಂಭದಲ್ಲಿ ಇವು ಬಿಕ್ಷುಗಳ ಶಿಕ್ಷಣಕ್ಕೆ ಮೀಸಲಾಗಿದ್ದರೂ ಕ್ರಮೇಣವಾಗಿ ಜನಸಾಮಾನ್ಯರಿಗೂ ಸೇರಿಸಿಕೊಳ್ಳುತ್ತಿದ್ದಿರಬೇಕು. ಬೌದ್ಧವಿಹಾರಗಳು ವಿದ್ಯಾ ಸಂಸ್ಥೆಗಳಾಗಿ ಬದಲಾವಣೆಯಾದದ್ದನ್ನು ನೋಡಿ, ವೈದಿಕ ಹಾಗೂ ಶೈವ ಧರ್ಮೀಯರಿಗೂ ತಮ್ಮ ವಿದ್ಯಾಸಂಸ್ಥೆಗಳ ಸ್ಥಾಪನೆಗೆ ಪ್ರೇರಣೆಯಾಗಿರಬೇಕು ಎಂದು ಡಾ.ಅಲ್ಟೇಕರ್ ಅವರು ಅಭಿಪ್ರಾಯ ಪಡುತ್ತಾರೆ(ನೊಳಂಬರ ಶಾಸನಗಳ ಸಾಂಸ್ಕೃತಿಕ ಅಧ್ಯಯನ: ಜಯಮ್ಮ ಕರಿಯಣ್ಣ ಎಚ್.:೧೩೨). ಈ ವಿಷಯ ಏನೇ ಇರಲಿ. ನೊಳಂಬರು ಈ ವಿಷಯದಲ್ಲಿ ಸ್ವಲ್ಪ ಆಧುನಿಕರೆನಿಸಿಕೊಳ್ಳುತ್ತಾರೆ. ಕಾರಣ ಅವರ ವಿದ್ಯಾಕೇಂದ್ರಗಳೆನಿಸಿರುವ ಹಲವು ಘಟಿಕಾಸ್ಥಾನಗಳು ಸಾಮಾನ್ಯವಾಗಿ ದೇವಸ್ಥಾನಗಳು ಯತಿಗಳಿಗೆ, ಛಾತ್ರರಿಗೆ ವಾಸಸ್ಥಾನವಾಗಿ ಅಸ್ತಿತ್ವದಲ್ಲಿದ್ದರೂ ಕಾಲಾಂತರದಲ್ಲಿ ಕ್ರಿಸ್ತಶಕ ೯ನೆಯ ಶತಮಾನದ ತರುವಾಯ ವಿದ್ಯಾಸಂಸ್ಥೆಗಳಾಗಿ ಅಸ್ತಿತ್ವಕ್ಕೆ ಬಂದಿರುವ ಸಾಧ್ಯತೆಯಿದೆ. ಅವುಗಳಿಗೆ ವ್ಯವಸ್ಥಿತವಾದ ಶೈಕ್ಷಣಿಕ ರೂಪವನ್ನು ನೀಡಿದವರು ಕಾಳಾಮುಖ ಪಾಶುಪತಶೈವರು. ಇವರು ಮೂಲತಃ ದೇವಾಲಯಗಳಲ್ಲಿ ಸ್ಥಾನಪತಿಯಾಗಿದ್ದವರು. ದೇವಾಲಯಗಳಲ್ಲಿ ನಡೆಯುತ್ತಿದ್ದ ಸಂಪ್ರದಾಯದ ಪೂಜೆ ಪುನಸ್ಕಾರಗಳ ಜೊತೆಗೆ ಸಾಮಾಜಿಕ ಚಟುವಟಿಕೆಗಳನ್ನು, ಶಿಕ್ಷಣವನ್ನು

ತಮ್ಮ ಕಾರ್ಯವ್ಯಾಪ್ತಿಯಲ್ಲಿ ರೂಪಿಸಿಕೊಂಡಿದ್ದರು. ಅದರ ಮೂಲಕ ಅವರು ಶಿಕ್ಷಣವನ್ನು ನೀಡುವುದು ಅವರ ಕಾಯಕವಾಗಿದ್ದಿತ್ತು.

ಘಟಿಕಾಸ್ಥಾನವೆಂದರೆ, ಗುರುಗಳು, ಶಿಷ್ಯರು ಸೇರಿ ಒಂದಡೆ ಅಧ್ಯಯನ ಶೀಲರಾಗಿರುವುದು. ಮತ್ತು ಮಹಾವಿದ್ವಾಂಸರ ಸಂಪರ್ಕದಿಂದ ಧಾರ್ಮಿಕ ಸಾಹಿತ್ಯದಲ್ಲಿ ಅತ್ಯುತ್ತಮ ಜ್ಞಾನ ಸಾಧನೆಗೆ ಸಾಧ್ಯವಿದ್ದ ಎಲ್ಲ ಅವಕಾಶಗಳನ್ನು ಮಾಡಿಕೊಡುವುದೇ ಈ ಘಟಿಕಾಸ್ಥಾನಗಳ ಉದ್ದೇಶವಾಗಿತ್ತು. ಸಾಮಾನ್ಯವಾಗಿ ಈ ವಿದ್ಯಾಕೇಂದ್ರಗಳು ಅಗ್ರಹಾರಗಳಲ್ಲಿ ಹಾಗೂ ದೇವಾಲಯಗಳಲ್ಲಿ ಇದ್ದವು. ಇಂತಹ ಘಟಿಕಾಸ್ಥಾನದಲ್ಲಿದ್ದ ವಿದ್ವಾಂಸರನ್ನು ಘಳಿಸ, ಘಳಿಸಾಸ, ಘಟಿಕಾಸಾಹಸಿ, ಘಳಿಯಸಾಸಿ ಎಂದು ಮೊದಲಾಗಿ ಸೂಚಿಸಿರುವುದು ಕಂಡುಬರುತ್ತದೆ. ಕ್ರಿಸ್ತಶಕ ೧೨೦೫ರ ಒಂದು ಶಾಸನವು ಹೆಂಜೇರಿನ ನೊಳಂಬೇಶ್ವರ ಘಟಿಕಾಸ್ಥಾನದಲ್ಲಿ ಘಟಿಕಾಸಾಹಸಿಯಾಗಿ ಹೆಸರುವಾಸಿಯಾಗಿದ್ದ 'ನರಸಿಂಹದೇವ ಘಳಿಸ'(ಎಸ್‌ಐಐ:೬:ಶಾ.ಸಂ:೫೫೮) ಎಂದು ತಿಳಿಸುತ್ತದೆ. ಈ ಹಿನ್ನೆಲೆಯಲ್ಲಿ ನೊಳಂಬರ ಆಡಳಿತದಾವಧಿಯಲ್ಲಿ ಸಾಮಾಜಿಕ ಅಂಶಗಳ ಮೇಲೆ ರೂಪುಗೊಂಡ ವ್ಯವಸ್ಥಿತವಾದ ವಿದ್ಯಾಕೇಂದ್ರ ಹಾಗೂ ಇಂಡಿಯಾದ ದಕ್ಷಿಣದಲ್ಲಿ ವಿದ್ಯಾಕೇಂದ್ರವಾಗಿ ಬಹುಪ್ರಸಿದ್ಧಿ ಪಡೆದಿದ್ದ ಕಂಚಿಯ ನಂತರ ಅಪರೂಪದ ಘಟಿಕಾಸ್ಥಾನವಾಗಿ ಹೆಂಜೇರು ಎಂಬ ವಿದ್ಯಾಕೇಂದ್ರವು ಕರ್ನಾಟಕದಲ್ಲಿ ಆರಂಭಗೊಂಡಿತ್ತು.

ನೊಳಂಬರ ಕಾಲದ ಪ್ರಸಿದ್ಧ ಘಟಿಕಾಸ್ಥಾನವಾದ ಹೆಂಜೇರು ಪಟ್ಟಣವು ಸುಮಾರು ೮–೧೨ ಕಿ.ಮೀ. ತ್ರಿಜ್ಯದ ಅಂತರದಲ್ಲಿ ಬೆಳೆದಿತ್ತೆಂದು ಊಹಿಸಲು ಸಾಧ್ಯತೆ ಇದೆ. ಹೆಂಜೇರು ಪಟ್ಟಣ ಕೇಂದ್ರದಲ್ಲಿದ್ದಂತೆ, ಅಮರಾಪುರ, ನಿಡುಗಲ್ಲು, ಬಸವನಹಳ್ಳಿ, ಶಿಬಿರ, ಬಾಮಗೆರ, ನಿಡುಗಟ್ಟೆ, ನಿದ್ರಗಟ್ಟೆ, ಎಂಜಲಗೆರೆ, ತಡಕಲೂರು ಮತ್ತು ದ್ವಾರನಕುಂಟೆ ಎಂಬ ಹೆಸರುಗಳನ್ನುಳ್ಳ ಹಳ್ಳಿಗಳು ಸುತ್ತುವರಿದವೆ. ಈ ಮೇಲೆ ಹೆಸರಿಸಿದ ಹಳ್ಳಿಗಳ ಸುತ್ತಲು ಬಯಲುಗಳಲ್ಲಿ ಪ್ರಾಚೀನ ಅವಶೇಷಗಳು ಕಾಣುತ್ತವೆ. ಈ ಎಲ್ಲ ಕಾರಣಗಳಿಂದಾಗಿ ಹೆಂಜೇರು ಪಟ್ಟಣವು ವೈಜ್ಞಾನಿಕವಾಗಿ ತುಂಬ ಅಭಿವೃದ್ಧಿಯಾದಂತೆ ಕಂಡುಬರುತ್ತದೆ. ಹಾಗೂ ಹೆಂಜೇರು ಪಟ್ಟಣವು ಒಂದು ಮಹಾಘಟಿಕಾಸ್ಥಾನ ವಿಶ್ವವಿದ್ಯಾನಿಲಯವಾಗಿತ್ತು. ನೊಳಂಬೇಶ್ವರ ದೇವಾಲಯ ಅದರ ಕೇಂದ್ರವಾಗಿತ್ತು. ಅನನ್ತಶಿವದೇವರು ಎಂಬ ಗುರು ಅದರ ಪ್ರಧಾನಗುರುವಾಗಿದ್ದಂತೆ ತಿಳಿದುಬರುತ್ತದೆ. ಕ್ರಿಸ್ತಶಕ ೧೧೬೮ರ ಶಾಸನವು ಸೀತಾದೇವಿಯರಸಿ ಎಂಬುವಳು ಈ ಘಟಿಕಾಸ್ಥಾನಕ್ಕೆ ಪ್ರಧಾನವಾಗಿ ದಾನವಿಟ್ಟಿರುವುದರ ಕುರಿತು ಹೆಂಜೇರುವಿನ ಒಂದು ಶಾಸನವು ಈ ವಿಷಯದ ಮೇಲೆ ಬೆಳಕು ಚೆಲ್ಲುತ್ತದೆ.

ಶ್ರೀಮತು ಸೀತಾದೇವಿಯರಸಿಯರಂ

ಸೀರೆ ನಾಡೊಟಗಣ ಶ್ರೀಮತು ಹೆಂಜೇರ

ಪಟ್ಟಣದ ಮಹಾಘಟಿಕಾಸ್ಥಾನಶ್ರೀ

ನೊಟಿಂಬೇಶ್ವರ ದೇವರ ಸಂನಿದಾನದ

ಲಲ್ಲಿಯಾಚಾರ್ಯ್ಯ ರಾಜಗುರುಗಳಪ್ಪನನ್ತ

ಶಿವದೇವರಿಗೆ ಯಾನೊಣಬೇಶ್ವರ

ದೇವಸ್ಥಾನದಲ್ಲಿಯೆ ಸತ್ರವನ್ನಡಸುವನ್ತಾಗಿ

ಶಕನೃಪವರ್ಷ ೧೧೯೦ನೆಯ ಸರ್ವಜಿತ್ಸಂವತ್ರರದಕ್ಷ

ತದಿಗೆಯಮಾವಾಸ್ಯೆಯಾದಿತ್ಯವಾರದಂದು ಸೂರ್ಯ

ಗ್ರಹಣಕಾಲದಲ್ಲಿಹನ್ನಿರ್ಬರುಬ್ರಾಹ್ಮಣರ್ಗ್ಗಂಹ

ರ್ಬರುತಪೋಧನರ್ಗಂಪಚ....ರರುಗರ್ವಂ

ವನ್ತುಮೂವತ್ತುಮನುಷ್ಯರ್ಗ್ಗಂವಾಹಾರದಾನಾರ್ತ್ಥವಾ

ಗಿವೆಡಲು ಚೆನ್ನೆಯಂ ಧಾರಾಪೂರ್ವಕಂವರ್ಗಂಧರ್ಮವನು....

ಮೇಲಿನ ಶಾಸನವು ತಿಳಿಸುವ ಹಾಗೇ ಸೀತಾದೇವಿಯು ಘಟಿಕಾಸ್ಥಾನದ ಪುರೋಭಿವೃದ್ಧಿಗೆ ದತ್ತಿಯನ್ನಿತ್ತಿರುವುದು ಕಂಡುಬರುತ್ತದೆ. ಇದೇ ಕಾಲಘಟ್ಟದ ಸರಿಸಮಾನವಾಗಿ ಕನ್ನಡ ನಾಡಿನಲ್ಲಿ ಹಲವು ಖ್ಯಾತಿವೆತ್ತ ಘಟಿಕಾಸ್ಥಾನಗಳಿದ್ದವು. ಅವುಗಳೆಂದರೆ, ಮೊರಿಗೆರೆ(ಕ್ರಿಸ್ತಶಕ ೧೦೪೫), ನಾಗಾಯಿ(ಕ್ರಿಸ್ತಶಕ ೧೦೫೮), ಸೂಡಿ(ಕ್ರಿಸ್ತಶಕ ೧೦೬೦), ಹೊಟ್ಟೂರು(ಕ್ರಿಸ್ತಶಕ ೧೦೬೪), ಕುಂಬಳ(ಕ್ರಿಸ್ತಶಕ ೧೦೬೮), ರಾಯಭಾಗ(ಕ್ರಿಸ್ತಶಕ ೧೧೨೭), ಪುಲಿಗೆರ(ಕ್ರಿಸ್ತಶಕ ೧೧೨೬) ಹೆಂಜೇರು(ಕ್ರಿಸ್ತಶಕ ೧೧೬೭), ಕಡಲೆವಾಡ(ಕ್ರಿಸ್ತಶಕ ೧೧೮೬) ಎಲ್ಲವು ಮಧ್ಯಕಾಲೀನ ಕರ್ನಾಟಕದ ಪ್ರಸಿದ್ಧ ಘಟಿಕಾಸ್ಥಾನಗಳಾಗಿದ್ದವು. ಉನ್ನತ ಶಿಕ್ಷಣವೆಂಬುದು ಅಂದಿನ ಹಲವು ಮಗ್ಗುಲುಗಳಲ್ಲಿ ವ್ಯಕ್ತವಾಗುತ್ತಿತ್ತು. ಹೊಟ್ಟೂರಿನದು ಅಖಿಲ ಘಟಿಕಾಸ್ಥಾನವಾಗಿತ್ತು. ಹೆಂಜೇರು ಮತ್ತು ರಾಯಭಾಗ ಎರಡು ಮಹಾಘಟಿಕಾಸ್ಥಾನಗಳಾಗಿದ್ದವು. ಈ ಹೆಂಜೇರಿನ ಮಹಾಘಟಿಕಾಸ್ಥಾನವು ಕ್ರಿಸ್ತಶಕ ೯೩೬ರಿಂದ ಕ್ರಿಸ್ತಶಕ ೧೨೦೫ರವರೆಗಿನ ಮೂರು ಶಾಸನಗಳಲ್ಲಿ ಉಕ್ತಗೊಳ್ಳುತ್ತದೆ. ಕ್ರಿಸ್ತಶಕ ೯೩೬ರ ಮಡಕಸಿರಾ ತಾಲ್ಲೂಕಿನ ಗುಣಿಮೋರು ಬಾಗಲ್‌ನ ಶಾಸನದಲ್ಲಿ ಪಂಚಮಹಾಶಬ್ದ ಮಹಾಶಮನ್ತಾಧಿಪತಿ ಪರಮೇಶ್ವರ ಪರಮ ಭಟ್ಟಾರಕರುಂ ಜಪನಿಯಮ ತಪೋಪವಾಸ ಸತ್ಯಸೌಚಾರನ್ವಿತರ್ ತಪೋವನಾನುರಾಗ ಶ್ರೀಮತು ಪುಟಿವಾಳ ಬಾವಿಗ್ರಾಮ ಮನ್ನಾಥ ಶಿವಸತ್ರಾನುರಂಜಿತ ಭಗವತ್ಪಾದ್ವೈಕಾಭರಣ ಶ್ರೀಮತು ವರುಣಿ

ಶಿವಭಟಾರರ್ ನೊಳಿಮ್ಬೇಶ್ವರದ ಸ್ತಾನಮನಾಳುತ್ತಿರೆ(ನೊಇದ:೬೭) ಎಂದು ಹೇಳುತ್ತದೆ. ಇದೇ ನೊಳಂಬೇಶ್ವರ ಸ್ಥಾನವೇ ಹೆಂಜೇರು ನೊಳಂಬೇಶ್ವರ ಮಹಾಘಟಿಕಾಸ್ಥಾನವಾಯಿತು.

ನೊಳಂಬ ವಂಶದ ಮೊದಲನೆಯ ಅರಸ ಮಂಗಳನನ್ನು ಕರ್ನಾಟೈರ್ನುನ್ನತಮಂಗಳಾಖ್ಯ ನೃಪತಿ ವಿದ್ವದ್ಭಿಶಾರಾಧಿತ ಎಂದು ಶಾಸನಗಳಲ್ಲಿ ವರ್ಣಿಸಲಾಗಿದೆ. ವಿದ್ಯಾಪಕ್ಷಪಾತಿಯಾದ ಈ ಅರಸನ ಪರಂಪರೆಯವರು ವಿದ್ಯಾಭಿವೃದ್ಧಿಗೆ ಪ್ರೋತ್ಸಾಹಿಸಿರುವುದು ಸಹಜ. ಶಿರಾ ತಾಲ್ಲೂಕಿನಲ್ಲಿ ದೊರೆತಿರುವ ಶಾಸನವು ಇದರ ಬಗೆಗೆ ಬೆಳಕುಚೆಲ್ಲುತ್ತದೆ. ಇಲ್ಲಿ ಕಾಲವನ್ನು ನಿರ್ಧರಿಸುವ ಯಂತ್ರಗಳು ಇದ್ದವು. ಅವುಗಳನ್ನು ನೋಡಿಕೊಳ್ಳಲು ವಿಶೇಷವಾಗಿ ತರಬೇತಿ ಪಡೆದ ವ್ಯಕ್ತಿಗಳನ್ನು ನಿಯೋಜಿಸಲಾಗುತ್ತಿತ್ತು. ಹೆಂಜೇರುವಿನ ನೊಳಂಬೇಶ್ವರ ದೇವಾಲಯದಲ್ಲಿರುವ ವಿವಿಧ ಚಿತ್ರಗಳಿಂದ ಆ ಘಟಿಕಾಸ್ಥಾನದಲ್ಲಿ ಖಗೋಳಶಾಸ್ತ್ರಕ್ಕೆ ಹೆಚ್ಚಿನ ಪ್ರಾಧಾನ್ಯವಿತ್ತೆಂದು ತಿಳಿದುಬರುತ್ತದೆ(ನೊಇದ:೯೭). ಇಲ್ಲಿ ಶ್ರೀನೊಣಂಬೇಶ್ವರ ದೇವರ ಸನ್ನಿಧಾನದಲ್ಲಿ ಆಚಾರ್ಯ ರಾಜಗುರುಗಳಾಗಿದ್ದ ಅನನ್ತ ಶಿವದೇವರಿಗೆ ಮತ್ತು ಶ್ರೀನೊಣಂಬೇಶ್ವರಸ್ಥಾನದಲ್ಲಿ ಸತ್ರವನ್ನು ನಡೆಸುವಂತೆ ಹೇಳಿದ ಉಲ್ಲೇಖವಿದೆ(ಎಸ್‌ಐಐ:೬:ಶಾಸಂ:೫೫೭). ಇದು ನೊಳಂಬರ ಪ್ರಾರಂಭದ ರಾಜಧಾನಿಯಾದ ಹೆಂಜೇರುಪಟ್ಟಣ ದೊಡ್ಡಪ್ಪ ದೇವಸ್ಥಾನದ ಮೂರನೆಯ ಕಂಬದಲ್ಲಿದೆ. ಇದರಿಂದ ಹೆಂಜೇರು ಪಟ್ಟಣದ ಆ ದೇವಾಲಯದಲ್ಲಿ ಒಂದು ಘಟಿಕಾಸ್ಥಾನವಗಿತ್ತೆಂದು ತಿಳಿದು ಬರುತ್ತದೆ. ಅದೇ ಕಂಬದಲ್ಲಿ ಮುಂದುವರಿದಂತೆ 'ಡಣ್ಣಾಯಕರು ಸೀರೆ ನಾಡೊಳಗಣ ಹೆಂಜೇರು ಪಟ್ಟಣದ ಮಹಾಘಟಿಕಾಸ್ಥಾನ ಶ್ರೀನೊಣಂಬೇಶ್ವರ ದೇವರ ಅಂಗಭೋಗಕ್ಕೆ ನಂದಾದೀವಿಗೆಗೆ, ತ್ರಿಕಾಲ ನೈವೇದ್ಯಕ್ಕೆ, ಖಂಡಸ್ಫುಟಿತ ಜೀರ್ಣ್ಣೋದ್ಧಾರಕ್ಕೆ ಸದಾಕಾಲ ಹನ್ನೆರಡು ಮನುಷ್ಯ ಬ್ರಾಹ್ಮಣರಿಗೂ ಬ್ರಹ್ಮನೆರಡು ಮನುಷ್ಯ ತಪೋಧನರು। ನಾಲ್ವರು ಘಳಿಯಾರದವರು, ಇಬ್ಬರು ಪೂಜಾರಿಗಳು ಅನ್ತು ನಿತ್ಯ ಮೂವತ್ತು ಮನುಷ್ಯರ ಆಹಾರದಾನವನ್ನು ನಡೆಸುವಂತೆ ಶಕ ನೃಪ ಕಾಲದ ೧೧೨೭ನೆಯ ಕ್ರೋಧನ ಸಂವತ್ಸದ ಪಾಲ್ಗುಣ ಅಮವಾಸ್ಯೆ ಆದಿತ್ಯವಾರ ಸೂರ್ಯಗ್ರಹಣದಂದು ಶ್ರೀನೊಣಂಬೇಶ್ವರದೇವರ ಆಸ್ಥಾನನದ ಆಚಾರ್ಯ್ಯರಪ್ಪ ಚಿಲುಕಜೀಯರ ಮಗ ಸೋಮಜೀಯರ ಮಗ ಪೋತಜೀಯರಿಗೂ ಜ್ಞಾನಭೂಷಣ ನಾಗರಾಸಿಪಂಡಿತರ ತಮ್ಮ ನೊಣಂಬ ಜೀಯಂ । ಆ ನಾಗರಾಸಿ ಪಂಡಿತರ ಮಗ ಅನಂತ ಶಿವರಿಗಂ । ಎರಡು ಮೊದಲಾಗಿ ಕಾಲಂ ಕಚ್ಚಿ ಕೊರೆಹೆಯ ಚತುಸ್ಸೀಮೆ ಸಹಿತ ಸರ್ವಬಾಧಾ ಪರಿಹಾರಂ ಸರ್ವ್ವನಮಶ್ಯವಾಗಿ ಧಾರಾಪೂರ್ವ್ವಕಂ ಮಾಡಿ ಶ್ರೀನೊಣಂಬೇಶ್ವರದೇವರಿಗೆ ಕೊಟ್ಟರು। ಬೀದಿವಡೆಂಗದೇವರಿಗೆ ನೊಣಂಬೇಶ್ವರದೇವರಿಗೆ ಮತ್ತು ನಾಗೇಶ್ವರದೇವರಿಗೆ ಭೂದಾನ'(ಎಸ್‌ಐಐ:೬: ಶಾಸಂ:೫೫೮) ಮಾಡಿದ ಬಗ್ಗೆ ಬೆಳಕು ಚೆಲ್ಲುತ್ತದೆ. ಹೀಗೆ ನೊಳಂಬರ ಮಹಾಘಟಿಕಾಸ್ಥಾನವನ್ನುಸಮಾಜದ ಏಳ್ಗೆಗಾಗಿ ಬಹಳ ಮುತುವರ್ಜಿಯಿಂದ ನಿರ್ಮಿಸಿ, ಪೋಷಿಸಿಕೊಂಡು ಬಂದಿರುವುದು ಅವರ ಇಡೀ ಚರಿತ್ರೆಯುದ್ದಕ್ಕೂ ಕಂಡುಬರುತ್ತದೆ.

೩.೫. ನೊಳಂಬರಸರ ದಾನ–ದತ್ತಿ ಕಾರ್ಯಗಳು

ಭಾರತದಲ್ಲಿನ ಧಾರ್ಮಿಕ ಪರಂಪರೆಯು ಸಾಮಾನ್ಯರನ್ನು ಸೇರಿದಂತೆ ಸಾಮಾಜಿಕವಾಗಿ ಉನ್ನತವಾಗಿದ್ದ ಎಲ್ಲರಲ್ಲೂ ಸಮ್ಮಿಳಿತಗೊಂಡ ಆಚರಣ ಕ್ರಮವಾಗಿದೆ. ಇದರೊಂದಿಗೆ ದೇವಾಲಯಗಳನ್ನು ಧಾರ್ಮಿಕವಾದ ನೇರ ನೋಟದಲ್ಲಿಯೇ ರೂಪಿಸಿಕೊಂಡು ಬಂದಿರುವುದು ಜೊತೆಗೆ ಈ ಧಾರ್ಮಿಕವಾದ ಚೌಕಟ್ಟಿನೊಳಗೆ ತಮ್ಮತನವನ್ನು ಬೆಳಸಿಕೊಂಡ ಮತ್ತು ಸಂಪ್ರದಾಯತ್ವವನ್ನು ಮೇಳೈವಿಸಿಕೊಂಡ ಹಲವು ರಾಜಮನೆತನಗಳು ಇಲ್ಲಿ ಆಡಳಿತವನ್ನು ಮಾಡಿರುವುದುಂಟು. ರಾಜ ತಾನು ಅಳವಡಿಸಿಕೊಂಡ ಧರ್ಮ ಅವನ ಪ್ರಜೆಗಳೂ ಸತ್ಪ್ರಜೆಯಾಗುವಂತೆ ರೂಪಿಸುವುದರ ಜೊತೆಗೆ ಸತ್ಕಾರ್ಯಗಳನ್ನು ಕೈಗೊಳ್ಳಲೂ, ಅಂತಹ ಧಾರ್ಮಿಕ ಕಾರ್ಯಗಳನ್ನು ಕೈಗೊಂಡವರನ್ನೂ ಸತ್ಕರಿಸಿ ಗೌರವಿಸುವಂತೆ ಪ್ರೇರೇಪಿಸುತ್ತಿತ್ತು. ಇಂತಹ ಪ್ರೇರಣೆಗೆ ತಮ್ಮ ಹಿಂದಿನವರ ಅಥವಾ ತಮ್ಮ ಹಿರಿಯರು ಮಾಡಿದಂತಹ ಪುಣ್ಯಕೆಲಸಗಳು ಮಾದರಿಯಾಗಿರುತ್ತದ್ದವು. ಕ್ರಿಸ್ತಶಕ ೧೫ನೆಯ ಶತಮಾನದ ಲಕ್ಷ್ಮೀಧರನ ಹಂಪೆಯ ಶಾಸನದಲ್ಲಿ ಹೇಳಿರುವಂತೆ "ಕೆರೆಯಂ ಕಟ್ಟಿಸು ಭಾವಿಯಂ ಸೆವೆಸು ದೆವಗಾರಾಮಂ ಮಾಡಿ ಸಜ್ಜರೆಯೊಳ್ಸಿಲ್ಕಿದನಾಥರಂ ಬಿಡಿಸು ಮಿತ್ರರ್ಗ್ಗಿಂಬುಕೆಯಿ ಸಂಬಿದರ್ಗ್ಗೆಜೀವೆಟ್ಟಾಗಿರು ಶಿಷ್ಟರಂ ಪೊರೆ..." ಕೆರೆಯನ್ನು ಕಟ್ಟಿಸುವುದು, ಬಾವಿಯನ್ನು ತೋಡಿಸುವುದು, ದೇವಾಲಯ ನಿರ್ಮಾಣ ಮಾಡಿಸುವುದು, ಸೆರೆಯಲ್ಲಿ ಸಿಕ್ಕಿರುವ ಅನಾಥರನ್ನು ಬಿಡಿಸುವುದು, ಮಿತ್ರರಿಗೆ ಒಳ್ಳೆಯದನ್ನು ಮಾಡುವುದು, ನಂಬಿದವರಿಗೆ ಆಶ್ರಯ ನೀಡುವುದು ಮುಂತಾದವು ಸತ್ಕಾರ್ಯಗಳು. ಇವುಗಳೊಂದಿಗೆ ದೇವಾಲಯಗಳನ್ನು ನಿರ್ಮಿಸುವುದು ಅವುಗಳಿಗೆ ದಾನ–ದತ್ತಿಗಳನ್ನು ನೀಡುವುದು ಅಂದಿನ ಬಹುದೊಡ್ಡ ಮೌಲ್ಯವೆನಿಸಿಕೊಂಡಿತ್ತು. ಕಾರಣ ದೇವಾಲಯಗಳು ಜನ ಜೀವನದ ಒಂದು ಸಾಮಾಜಿಕ ಸಂಸ್ಥೆಯಾಗಿದ್ದಿತ್ತು.

ದೇವಾಲಯಗಳನ್ನು ಕಟ್ಟಿಸುವುದು, ಕಟ್ಟಿಸಿದ ದೇವಾಲಯಗಳ ಜೀರ್ಣೋದ್ಧಾರ, ದೇವಾಲಯಗಳಲ್ಲಿ ನಡೆಯಬೇಕಾದ ಪೂಜೆ, ಪುನಸ್ಕಾರಕ್ಕೆ ಅರಸರು, ರಾಣಿಯರು, ಅವರ ಕೈಕೆಳಗಿನ ಅಧಿಕಾರಿಗಳು, ಹಾಗೂ ಪ್ರಜೆಗಳು ದಾನ–ದತ್ತಿಗಳನ್ನು ನೀಡಿ ಧಾರ್ಮಿಕಕತೆಯನ್ನು ಘೋಷಿಸಿಕೊಂಡು ಬಂದಿದ್ದಾರೆ. ಅಲ್ಲದೆ ಕೆರೆ ಕೊಳ ಕಟ್ಟಿಸುವುದು ಮತ್ತು ದುರಸ್ತಿ ಮುಂತಾದ ಹಾಗೂ ನಿರ್ವಹಣೆಗಾಗಿಯೂ, ಕಾಳಗ, ಊರಳಿವಿನಲ್ಲಿ ತುರುಗಾಳಗದಲ್ಲಿ ಜೀವ ತೆತ್ತವರ ನೆನಪಿಗಾಗಿಯು ದಾನ–ದತ್ತಿಗಳನ್ನು ನೀಡಿರುವುದನ್ನು ಶಾಸನಗಳಲ್ಲಿ ಉಲ್ಲೇಖಿಸಿರುವುದನ್ನು ಇಲ್ಲಿ ಗುರುತಿಸಬಹುದಾಗಿದೆ.

ನೊಳಂಬರ ದಾನಗಳು ಹೆಚ್ಚಿನದಾಗಿ ವ್ಯವಸಾಯಕ್ಕೆ ಸಂಬಂಧಿಸಿದಂತೆ ದಾನಗಳನ್ನು ಬಿಟ್ಟಿರುವುದು ಕಂಡುಬರುತ್ತದೆ. ಸಾಮಾಜದ ಉಪಯೋಗಕ್ಕೆಂದು ಬಾವಿಗಳನ್ನು, ಕೆರೆಗಳನ್ನು

ನಿರ್ಮಿಸುವುದು ಮತ್ತು ಅದನ್ನು ಸಾರ್ವಜನಿಕರಿಗೆ ಹಾಗೂ ಜಮೀನುಗಳಿಗೆ ಉಪಯೋಗಿಸುವುದು ಸಾಮಾನ್ಯವಾದದ್ದಾಗಿತ್ತು. ಈ ಕಾರಣಕ್ಕಾಗಿ ಮನುಷ್ಯ ತಾನು ಗಳಿಸಿದ ಸಂಪತ್ತನ್ನು ದೇವಾಲಯಗಳನ್ನು ಕಟ್ಟಿಸಲು, ಕೆರೆ ಕಟ್ಟೆಗಳ ನಿರ್ಮಾಣಕಾರ್ಯಕ್ಕಾಗಿ ಬಳಸಿಕೊಂಡು ಸದ್ವಿನಿಯೋಗ ಮಾಡುತ್ತಿದ್ದ. ದೇವಾಲಯಗಳು ಜನಜೀವನದ ಒಂದು ಸಾಮಾಜಿಕ ಸಂಸ್ಥೆಗಳಾಗಿದ್ದುದರಿಂದ ಇವುಗಳು ಹಾಳಾಗದಂತೆ ಜೀರ್ಣೋದ್ಧಾರ ಹಾಗೂ ಅಲ್ಲಿ ನಿತ್ಯ ಪೂಜಾಕಾರ್ಯಗಳು ನಡೆಯುವಂತೆ ನೋಡಿಕೊಳ್ಳಲು, ಅಲ್ಲಿನ ಪೂಜಾರಿಗಳಿಗೆ ದಾನ-ದತ್ತಿಗಳನ್ನು ನೀಡುವುದು ಸಂಪ್ರದಾಯವಾಯಿತು. ಇದು ತನ್ನ ಮತ್ತು ತನ್ನ ಕುಟುಂಬದ ಪುಣ್ಯಕ್ಕಾಗಿ ಆತ ದಾನ ನೀಡುತ್ತಿದ್ದ. ಇದೇ ದಾನ ಪ್ರಕ್ರಿಯೆಗಳು ಮುಖ್ಯ ಪ್ರೇರಣೆಯಾಗಿರಲಿಕ್ಕೆ ಸಾಧ್ಯತೆ ಇದೆ.

ನೊಳಂಬರು ಸಾಮಾನ್ಯವಾಗಿ ಬೇಸಾಯಗಾರರಾಗಿದ್ದರು. ಈ ಕಾರಣಕ್ಕಾಗಿ ದಾನದ ರೂಪದಲ್ಲಿ ಹೆಚ್ಚು ಹೆಚ್ಚು ಜಮೀನು ಹಾಗೂ ತಾವು ಬೆಳೆದ ಬೆಳೆಯನ್ನೇ ನೀಡುತ್ತಿದ್ದರು. ತೋಟಗಾರ ತನ್ನ ತೋಟದಲ್ಲಿ ಬೆಳೆಯುವ ಹೂವು, ಎಲೆ, ಅಡಿಕೆ ಮುಂತಾದವುಗಳನ್ನು, ವಣಿಕನಾದವನು ತಾನು ವ್ಯಾಪಾರ ಮಾಡುತ್ತಿದ್ದ ವಸ್ತುಗಳಲ್ಲಿ ಮುಖ್ಯವಾದವುಗಳನ್ನು, ತೆಲ್ಲಿಗರು ದೇವರ ದೀಪಕ್ಕೆ ಎಣ್ಣೆ ಮುಂತಾದವನ್ನು ತಮ್ಮ ಶಕ್ತ್ಯಾನುಸಾರವಾಗಿ ನೀಡುತ್ತಿದ್ದರು. ರಾಜನಾದವನು ಭೂದಾನ ನೀಡುವುದರ ಜೊತೆಗೆ ಆ ಭೂಮಿಗೆ ತೆರಿಗೆಯಿಂದ ವಿನಾಯಿತಿ ನೀಡುತ್ತಿದ್ದ. ರಾಜರು ತಮ್ಮ ಹೆಸರಿನಲ್ಲಿ ದೇವಸ್ಥಾನಗಳನ್ನು ಕಟ್ಟಿಸುತ್ತಿದ್ದರು. ಆ ದಾನ ನೀಡಿದವರ ಉದ್ದೇಶ ನೆರವೇರುವಂತೆ ಗಮನಿಸುವುದು ಹಾಗೂ ದುರಪಯೋಗ ಮಾಡಿದಂತಹವರನ್ನು ಶಿಕ್ಷಿಸುವುದು ಅಥವಾ ಆ ಸ್ಥಳದಿಂದ ಓಡಿಸುವದನ್ನು ಸ್ಥಳೀಯರು ಮಾಡುತ್ತಿದ್ದರು. ಇಲ್ಲವಾದರೆ ದೊರೆಗೆ ದೂರು ನೀಡುವದರ ಮೂಲಕ ಅದರ ರಕ್ಷಣೆಯನ್ನು ಮಾಡುವಂತಹ ಕೆಲಸವನ್ನು ಸ್ಥಳೀಕರು ಮಾಡುತ್ತಿದ್ದರು. ಈ ರೀತಿಯ ದಾನದ ಕಾರ್ಯಗಳನ್ನು ನೊಳಂಬರ ಆಳ್ವಿಕೆಯ ಆರಂಭದ ಕಾಲದಿಂದ ಅಂತ್ಯದವರೆಗೆ ಅವರು ಮತ್ತು ಅವರ ಕೈಕೆಳಗಿನ ಅಧಿಕಾರಿಗಳು ಮತ್ತು ಜನಸಾಮಾನ್ಯರು ನೀಡಿದ ದಾನ-ದತ್ತಿಗಳ ಉಲ್ಲೇಖಗಳು ಅಪಾರವಾಗಿವೆ. ಹೀಗೆ ದಾನ-ದತ್ತಿಗಳನ್ನು ನೀಡಿರುವ ಕೆಲವು ಮಹತ್ವದ ಶಾಸನಗಳನ್ನು ಇಲ್ಲಿ ವಿವರಣೆಗೆ ಎತ್ತಿಕೊಳ್ಳಬಹುದು ಎಂದು ತೋರುತ್ತದೆ. ಇದರೊಂದಿಗೆ ಅವರ ಅಂದಿನ ಧಾರ್ಮಿಕ ಚಟುವಟಿಕೆಯನ್ನು ಅರ್ಥೈಸಿಕೊಳ್ಳಲು ಸಾಧ್ಯವಾಗುತ್ತದೆ.

೩.೫.೧. ದೇವಾಲಯ ಮತ್ತು ಬಸದಿಗಳಿಗೆ ದಾನ-ದತ್ತಿ

ಕ್ರಿಸ್ತಶಕ ಸುಮಾರು ೮೦೦ರಲ್ಲಿ 'ಸಿಂಗಮುತ್ತರಸ'(ಎಕ:೧೧:ಸಿರಾ:೩೩)ನ ಕಾಲದಿಂದ ಹಿಡಿದು ಕ್ರಿಸ್ತಶಕ ೧೦೮೩ರ 'ಜಯಸಿಂಗದೇವ'(ಎಆರ್:೧೯೨೯:೫೪)ನ ಕಾಲದವರೆಗೂ ಅನೇಕ ದಾನ-ದತ್ತಿಗಳನ್ನು ನೀಡಿರುವುದಿದೆ. ಕ್ರಿಸ್ತಶಕ ಸುಮಾರು '೮೨೦ರ ಪೊನ್ನೇರ'

ಮಧುಗಿರಿ ಶಾಸನ(ಎಕ:೧೬:ಮ:೧೧೮)ವು 'ಪ್ರಭುಮಣಿ ಪರಮ ಸುಭಗನ ಪಗೆವರ ಗನ್ಧಾಸ್ತಿ ಪಾರ್ವ್ವರ ಇಚ್ಛೆನತಪೂರ್ವಾಚಾರದಾತೆಱಯ ಪೈಈಯೆವೊನ್ದೊಡೆ ಪೊನ್ನೆಱನುಂ ಚೋಳಮಹಾರಾಜನುಂ ಮೂವದಿಬ್ಭಪ್ಪಾರ್ವ್ವರಾನ್ಕೊದ್ಧಾ...' (ಕವಿವಿಶಾಸಂ:೧: ಬಳ್ಳಾರಿ:ಶಾಸಂ:೬೦) ಈ ರೀತಿಯಾಗಿ ಚೋಳ ರಾಜ್ಯದಲ್ಲಿ ತಮ್ಮ ಅಸ್ತಿತ್ವವನ್ನು ಕೂಡ ವ್ಯಕ್ತಪಡಿಸುವುದುಂಟು. ಮುಂದುವರೆದು ಕ್ರಿಸ್ತಶಕ ೮೭೪ರ 'ಮಹೇಂದ್ರ ತನ್ನ ಅರಮನೆಯನ್ನು ಮಹಾದೇವನಿಗೆ ನಿವೇದಿಸಿ ಮಾಹೇನ್ದ್ರೇಶ್ವರನನ್ನು ಮಾಡಿಸಿ ಭೂದಾನ'(ಎಕ:೧೨:ಸಿರಾ::೩೮) ಮಾಡಿದದುದನ್ನು ವಿವರಿಸುತ್ತದೆ. ಕ್ರಿಸ್ತಶಕ ೮೯೫ರ 'ಕಲ್ಲದೇಗುಲವನ್ನು ಕಟ್ಟಿಸಿ ವರ್ಷಕ್ಕೊಮ್ಮೆಸುಣ್ಣ ಬಳಿಯಲು ದಾನ'(ಎಕ:೭:(ರೈ):೨೮೫) ಮಾಡಿರುವುದರ ಮೇಲೆ ಬೆಳಕು ಚೆಲ್ಲುತ್ತದೆ. ಕ್ರಿಸ್ತಶಕ ೮೯೨ರ ಧರ್ಮಪುರಿಯ ಒಂದು ಶಾಸನವು 'ಬಸದಿಗೆ ನೀಡಿದ ಭೂಮಿಯ ದಾನ'(ಕವಿವಿಶಾಸಂ:೪:ಶಾನಂ:೯೩)ವನ್ನು ವಿವರಿಸುತ್ತದೆ. ಮಾದಿಗೆರೆಯ ಒಂದು ಶಾಸನವು 'ನೊಳಂಬಾಧಿರಾಜನು ಮಾದಿಗೆರಯಲ್ಲಿರುವ ಕಾಮೇಶ್ವರ ದೇವರಿಗೆ ನಾಗಮಯ್ಯನ ಮೂಲಕ ಖಂಡುಗ ಗದ್ದೆಯನ್ನು ದಾನ' ಮಾಡಿರುವುದನ್ನು ವಿವರಿಸುತ್ತದೆ(ಎಮ್ಎಆರ್:೧೨೪: ಶಾಸಂ:೪೮). 'ನನ್ನೇಶ್ವರದೇವರಿಗೆ ಪಿರಿಯ ಬಾಣಗೆರೆಯನ್ನು ನೊಳಂಬ ದಿಲೀಪರಸನು ದಾನ' ಮಾಡಿರುವುದು(ಎಸ್ಐಐ:೯:ಶಾಸಂ:೩೭:ಕ್ರಿಸ್ತಶಕ:೯೪೨). 'ಮೈಲಾರದೇವರಿಗೆ ಬಲ್ಲಕುಂದೆ ಸಮೀಪದ ನೊಳಂಬಾಧಿರಾಜ ಸಿರಿಯನೂರನ್ನು ಸರ್ವಾಭ್ಯಂತರ ಸಿದ್ಧಿದಾನ'ವನ್ನು ಮಾಡಿರುವುದನ್ನು ಕ್ರಿಸ್ತಶಕ ೧೦೧೭(ಕವಿಶಾಸಂ:೧:ಸಿರಗುಪ್ಪಿ:ಶಾಸಂ:೫೯)ರ ಪಲ್ಲವಾದಿತ್ಯ ಮಗನ್ದಪಳ್ಳಿ ಮಲ್ಲಯ್ಯನಗುಡ್ಡದ ಶಾಸನವು ವಿವರಿಸುತ್ತದೆ.

ಜೊತೆಗೆ ಕ್ರಿಸ್ತಶಕ ೧೦೧೮ರ ನೊಳಂಬ 'ಉದಯಾದಿತ್ಯನು ಬಾಗುಳಿ ಕಲಿದೇವೇಶ್ವರ ದೇವಾಲಯಕ್ಕೆ ಅಂಗ ರಂಗಭೋಗ ಮತ್ತು ಆಹಾರಧಾನ್ಯಕ್ಕೆ ಭೂಮಿಯನ್ನು ದಾನ'ವನ್ನಾಗಿ ನೀಡುವುದರ ಮೂಲಕ ಅಲ್ಲಿಯ ದೇವಾಲಯದ ಆಚರಣಾ ಕ್ರಮವನ್ನು ಮುಂದುವರೆಸಲು ಪೂರಕವಾದ ವಾತಾವರಣವನ್ನು ನಿರ್ಮಿಸಿರುವುದು ಈ ಶಾಸನವು ಉಲ್ಲೇಖಿಸುತ್ತದೆ(ಕವಿಶಾಸಂ:೧:ಹರಪನಹಳ್ಳಿ:ಶಾಸಂ:೯೭). ಹೀಗೆ ಹಲವಾರು ಶೈವದೇವಾಲಯಗಳು ಸೇರಿದಂತೆ ಅನೇಕ ರೀತಿಯಲ್ಲಿ ವ್ಯಕ್ತಿಗಳಿಗೂ ಭೂಮಿ, ಧನವನ್ನು ದಾನವಾಗಿ ನೀಡಿರುವುದು ಶಾಸನಗಳು ಆಕರವನ್ನು ಒದಗಿಸುತ್ತವೆ. ದೇವಾಲಯಗಳು ಜನಜೀವನದ ಒಂದು ಸಾಮಾಜಿಕ ಸಂಸ್ಥೆಗಳಾಗಿ ಕಾರ್ಯನಿರ್ವಸಿರುವುದುಂಟು. ಮತ್ತು ಈಗಲೂ ಪ್ರಸ್ತುತ. ದೇವಾಲಯಗಳನ್ನು ಕಟ್ಟಿಸುವುದು, ಕಟ್ಟಿಸಿದ ದೇವಾಲಯಗಳ ಜೀರ್ಣೋದ್ಧಾರ, ದೇವಾಲಯಗಳಲ್ಲಿನ ನಡೆಯಬೇಕಾದ ಪೂಜೆ, ಪುನಸ್ಕಾರಕ್ಕೆ ಅರಸರು, ರಾಣಿಯರು, ಅವರ ಕೈಕೆಳಗಿನ ಅಧಿಕಾರಿಗಳು, ಹಾಗೂ ಪ್ರಜೆಗಳು ದಾನ-ದತ್ತಿಗಳನ್ನು ನೀಡಿ ಧಾರ್ಮಿಕತೆಯನ್ನು ಘೋಷಿಸಿಕೊಂಡು ಬಂದಿದ್ದಾರೆ. ಈ ಎಲ್ಲ ಕಾರಣಗಳಿಗಾಗಿ ಅವನಿಯ ಕ್ರಿಸ್ತಶಕ ೯೫ಂಕ್ಕೆ

ಸೇರಿದ ಶಾಸನ 'ಏಕವಾಕ್ಯ ಇರುವ ನೊಳಂಬರ ಆಳ್ವಿಕೆಯಲ್ಲಿ ಪೆರ್ಗಡೆ ಬಸವಯ್ಯನಂಕ ಭಟ್ಟನು ಮಾನಸ್ತಂಭ ಮಾಡಿಸಿದ' ಎಂಬುವುದನ್ನು ವಿವರಿಸಿದೆ(ಎಕ: ೧೦:ಮುಳಬಾಗಿಲು:ಶಾಸಂ:೪೯).

ಸಾಮಾನ್ಯವಾಗಿ ನೊಳಂಬರಸರ ಸಂದರ್ಭಗಳು ಅನ್ಯ ಜೈನ ರಾಜರ ಪ್ರಭಾವ ಅಥವಾ ಮೂಲ ಭೂ ಉಳಿಮೆಗಾರರಾಗಿರುವುದರ ಕಾರಣಕ್ಕಾಗಿ ಮಹಿಳೆಯರು ಸಾಮಾಜಿಕವಾದ ತಮ್ಮ ಅಸ್ತಿತ್ವವನ್ನು ದೇವರು, ಧರ್ಮಗಳ ಮೂಲಕ ದಾನ-ದತ್ತಿಗಳ ಹಿನ್ನೆಲೆಯಲ್ಲಿ ಅನಾವರಣಗೊಳ್ಳುವಂತಹ ಪ್ರಯತ್ನಗಳ ಫಲವಾಗಿ ಅಂದಿನ ಶಾಸನಗಳು ಬೆಳಕು ಚೆಲ್ಲುತ್ತವೆ. ಕ್ರಿಸ್ತಶಕ ಸುಮಾರು ೧೦೨೦ರ 'ಮರೋಳದ ಘಟೆಯಂಕಕಾರನ ಕಾಲದ ಶಾಸನವು, ಸತ್ಯಾಶ್ರಯನ ಮಗಳು ಘಟೆಯಂಕಕಾರನ ಪತ್ನಿ ಮಹಾದೇವಿ ಮರುವೊಳನ್ನು ಆಳುತ್ತಿದ್ದಾಗ ಅಲ್ಲಿಯ ಜಿನ ಬಸದಿಗೆ ದಾನ'ವನ್ನು ನೀಡಿರುವುದರ ಮೇಲೆ ಮಾಹಿತಿ ಒದಗಿಸುತ್ತದೆ(ಎಸ್ಐಐ:೯:(೧):ಶಾಸಂ:೯೬). ಕ್ರಿಸ್ತಶಕ ೧೦೩೬ರ ಶಾಸನವು 'ಓರುವಾಯಿಯ ಒಂದು ಶಾಸನವು ನೊಳಂಬ ಪುತ್ರಿ ಹಾಗೂ ಜಗದೇಕ ಮಲ್ಲದೇವ(ಇಮ್ಮಡಿ ಜಯಸಿಂಹ)ನ ಪತ್ನಿಯೂ ಆದ ದೇವಳದೇವಿ ಕಾಲವಶವಾದಾಗ ಆಕೆಯ(ಅಂಗ) ಭಸ್ಮವನ್ನು ಗಂಗೆಯಲ್ಲಿ ಬಿಟ್ಟು ಬಂದ ಮಾಧವ ಷಡಂಗಿ ಮತ್ತು ಕೃಷ್ಣಯ್ಯನಿಗೆ ಭೂದಾನ ಮತ್ತು ತುಪ್ಪದ ದೇವಯ್ಯಂಗೆ, ಪಂಡಿತರ ಸಿದ್ದಯ್ಯಂಗೆ(ದೇವರಿಗೆ) ನಂದಾದೀವಿಗೆಗೆ ಹಾಗೂ ನೈವೇದ್ಯಕ್ಕೆ ತ್ರಿಕಾಲ ಪೂಜೆಗೆ ಭೂಮಿಯನ್ನು ದಾನ'ವಾಗಿ ನೀಡಿರುವುದನ್ನು ತಿಳಿಸುತ್ತದೆ(ಕವಿಶಾಸಂ:೧:ಬಳ್ಳಾರಿ: ಶಾಸಂ:೪೩ ಮತ್ತು ೪೪). ಕ್ರಿಸ್ತಶಕ ೧೦೪೫ರ ಕೋಗಳಿಯ ಶಾಸನದಲ್ಲಿ 'ನೊಳಂಬಶೆಟ್ಟಿ ತನ್ನ ತಾಯಿ ಪದ್ಮಾವತಿ ಅಬ್ಬೆಯ ಪರೋಕ್ಷವಿಯಕ್ಕೆ ಛತ್ರ' ಮಾಡಿಸಿದ್ದರ ಬಗೆಗೆ ಬೆಳಕು ಚೆಲ್ಲುತ್ತದೆ(ಕವಿಶಾಸಂ:೧:ಹಗರಿಬೊಮ್ಮನಹಳ್ಳಿ:ಶಾಸಂ:೧೬). ಇದರಿಂದ ನಾವು ಅರಿಯಬೇಕಾದುದು ಎಂದರೆ, ರಾಜನು ಮತ್ತು ಪುರುಷರೇ ಅಷ್ಟೇ ಧಾರ್ಮಿಕವಾದ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕಾಗಿತ್ತು ಎಂದಲ್ಲ. ಹತ್ತು ಹಲವು ದಾನ-ದತ್ತಿಗಳ ಮೂಲಕ ಸ್ತ್ರೀಯರು ಬಹುಮುಖ್ಯವಾದ ಕಾರ್ಯಗಳನ್ನು ಮಾಡುತ್ತಿದ್ದರು ಎಂಬುದಾಗಿ ತಿಳಿದುಬರುತ್ತದೆ. ಹೀಗಿರುವಾಗ ನೊಳಂಬ ಮಹಿಳೆಯರು ತಮ್ಮ ಜೀವಮಾನದಲ್ಲಿ ಪುರುಷಸಮಾನವಾಗಿ ಹಲವು ಕಾರ್ಯಗಳನ್ನು ಮಾಡಿರುವುದು ಕಂಡುಬರುತ್ತದೆ.

ಕ್ರಿಸ್ತಶಕ ಸು. ೧೨ನೆಯ ಶತಮಾನದ ಕೋಲಾರ ತಾಲ್ಲೂಕಿನ ಶಿವಾರ ಪಟ್ಟಣದ ಶಾಸನವು 'ತೊಮ್ಬುಬ್ವೋಯನ ಮಕ್ಕಳಾದ ನಾಗಯ್ಯನು, ಕೊಣ್ಡಯ್ಯನು ಶ್ರೀ ಮಣ್ಣಿಮಂಗಲದ ಮಹಾಜನರಿಗೆ ಪದಿನಾಱು ಗದ್ಯಾಣ ಪೊಜ್ಜೊಗ್ಗಟ್ಟುಕೊಂಡದ್ದನ್ನು ಇಬ್ಬರು ಬ್ರಾಹ್ಮಣಿಗೆ ದಾನ' ಮಾಡಿದ್ದನ್ನು ಉಲ್ಲೇಖಿಸಿದೆ(ಎಕ:೧೦ ಕೋಲಾರ:ಶಾಸಂ:೯). ಇದೇ ತಾಲ್ಲೂಕಿನ ಮಡಿವಾಳ ಗ್ರಾಮದ ಶಾಸನವು ನೊಳಂಬಾಧಿರಾಜನು ಗಂಗರು ಸಾಸಿರವನ್ನಾಳುತ್ತಿರುವಾಗ, ಸತ್ಯ

ಶೀಲಾಚಾರ ಸಂಪನ್ನ ಬೆಂಗಡನಾಥ ಶ್ರೀಮಪೊಮ್ಪಲ್ಲವೊಡೆಯ ದುರ್ಗಪಾಡಿಯಲ್ಲಿ ಬಾಣ ಅರಸರ ಮೇಲೆ ಯುದ್ಧ ಮಾಡಿ ಹಲವರನ್ನು 'ಇಱಿದು ಕೊಂದು ಬಿಟ್ಟು ಸತ್ತವನನ್ನು ಮೆಚ್ಚಿ ನೊಳಂಬಾಧಿರಾಜನ ಬಿನ್ನಪದಂತೆ ನೀತಿಮಾರ್ಗ ಪೆರ್ಮಾನಡಿಗಳು ಸೂಱೂರನ್ನು ಬಾಳ್ಗಟ್ಟುನ್ನಾಗಿ'(ಎಕ:೧೦:ಕೋಲಾರ:ಶಾಸಂ:೫೭) ಕೊಟ್ಟ ವಿಷಯ ಹೇಳುತ್ತದೆ.

ಕೆಲವೊಂದು ಆಶ್ಚರ್ಯಕರವೆನಿಸಿದರು ಎಂದೆಂದಿಗೂ ಪ್ರಸ್ತುತವಾಗಿರುವಂತ ಹಲವು ದಾನಶಾಸನಗಳು ದೊರೆಯುತ್ತವೆ. ಅದರಲ್ಲಿ ಕ್ರಿಸ್ತಶಕ ೧೦೪೬ರ 'ನನ್ನಿನೊಳಂಬನ ಮೊರಿಗೇರಿಯ ಉರೊಡೆಯರು ಮತ್ತು ತಿಕ್ಕಣ್ಣ ಪ್ರಮುಖ ಲೆಂಕಸಾಸಿರ್ವರು ಊರಿನ ಮಹಾಜನರ ಕೈಯಲ್ಲಿ ದೇವರ ಉಪಭೋಗಕ್ಕೆಂದು ಭೂಮಿಯನ್ನು ದಾನ'(ಕವಿವಿಶಾಸಂ:ಹಗರಿಬೊಮ್ಮನಹಳ್ಳಿ: ೨೭)ವಾಗಿ ನೀಡಿರುವುದು ಕಂಡುಬರುತ್ತದೆ. ಜೊತೆಗೆ ಕ್ರಿಸ್ತಶಕ ೧೦೫೦ರ 'ನಾರಸಿಂಘದೇವನ ಶಿರಸ್ತಹಳ್ಳಿಯ ಶಾಸನವೊಂದರಲ್ಲಿ ವಿದ್ಯಾನಿಧಿ ಪಂಡಿತರ ಕಾಲನ್ನು ತೊಳೆದು ಭೂಮಿಯನ್ನು ದಾನ'(ಎಸ್ಐಐ: ೯(೧):ಶಾಸಂ:೧೦೭)ವಾಗಿ ನೀಡಿರುವ ಉಲ್ಲೇಖವಿದೆ. ಅದರಲ್ಲಿ ಮನೆ, ತೋಟ, ತೈಲಗಾರ(ಎಣ್ಣೆಗಾಣ), ಕೈಗಾಣ ಅಡಕೆ ಮರ ಮುಂತಾದ, ದಾನಗಳನ್ನು ಮಾಡಿರುವುದನ್ನು ವಿವರಿಸುತ್ತದೆ. ಹೀಗೆ ಹಲವು ಶಾಸನಗಳು ಪ್ರತಿಯೊಂದು ದೈವ ಮತ್ತು ದೇವಾಲಯಗಳ ಹೆಸರಲ್ಲಿ ನೀಡಿದ ದಾನ-ದತ್ತಿಗಳ ಮೇಲೆ ಬೆಳಕು ಚೆಲ್ಲುತ್ತವೆ.

೩.೫.೨. ಕೆರೆ ಕಟ್ಟೆಗಳಿಗೆ ನೀಡಿದ ದಾನ-ದತ್ತಿಗಳು

ಕೆರೆಕಟ್ಟೆಗಳಿಗೆ ನೀಡಿದ ದಾನದತ್ತಿಗಳಿಗೆ ಸಂಬಂಧಿಸಿದ ವಿಷಯವನ್ನು ಪ್ರತ್ಯೇಕವಾಗಿ ಯಾಕೆ ಚರ್ಚೆಗೆ ಎತ್ತಿಕೊಳಲಾಗಿದೆ ಎಂದರೆ, ನೊಳಂಬರನ್ನು ಈ ಅಧ್ಯಯನದ ಆರಂಭದಲ್ಲಿ ಪಶುಪಾಲನೆಗಾರು ಮತ್ತು ಬೇಸಾಯಗಾರರೆಂದು ಹೇಳಲಾಗಿದೆ. ಅದರಂತೆಯೇ ನೊಳಂಬ ಅರಸರ ದಾನ-ದತ್ತಿಗಳನ್ನು ಕುರಿತು ನೋಡುವಾಗ ಕೇವಲ ದೈವ, ದೇವಾಲಯಗಳಿಗೆ ಸೀಮಿತಗೊಳಿಸಿಕೊಂಡು ನೋಡಿದಾಗ ಅವರ ಮೂಲ ಅಸ್ತಿತ್ವವು ಮರೆಯಾಗುವ ಸಾಧ್ಯತೆಯೇ ಹೆಚ್ಚಾಗಿ ಕಂಡುಬರುತ್ತದೆ ಹಾಗೂ ಕೆರೆ ಕೊಳ ಕಟ್ಟಿಸುವುದು ಮತ್ತು ದುರಸ್ತಿ ಮುಂತಾದ ನಿರ್ವಹಣೆಗಾಗಿಯೂ, ಕಾಳಗ, ಊರಳಿವಿನಲ್ಲಿ ತುರುಗಾಳಗದಲ್ಲಿ ಮುಂತಾದ ಸಂದರ್ಭಗಳಲ್ಲಿ ದಾನವನ್ನು ಬಿಟ್ಟಿರುವುದುಂಟು. ಆ ಕಾರಣಕ್ಕಾಗಿ ಅವರು ವ್ಯವಸಾಯಕ್ಕಾಗಿ ಹಲವು ಕೆರೆ-ಕಟ್ಟೆಗಳನ್ನು ನಿರ್ಮಿಸಿರುವುದರ ಕುರಿತು ಇದೇ ಅಧ್ಯಾಯದ ಸಾಮಾಜಿಕ ಕೊಡುಗೆಯ ಆರಂಭದಲ್ಲಿ ವಿವರಿಸಲಾಗಿದೆ. ಈ ಎಲ್ಲವನ್ನು ಗಮನದಲ್ಲಿರಿಸಿಕೊಂಡು, ನೊಳಂಬರು ಕೆರೆ-ಕಟ್ಟೆಗಳನ್ನು ಕಟ್ಟಿಸಿರುವುದು ಮತ್ತು ಅವುಗಳ ಜೀರ್ಣೋದ್ದಾರಕ್ಕೆ ಅನೇಕ ಶಾಸನಗಳನ್ನು ಹಾಕಿಸಿರುವುದುಂಟು. ಆಯ್ದ ಕೆಲವು ಶಾಸನಗಳನ್ನು ಅನುಲಕ್ಷಿಸಿ ಅವರ ಕೆರೆ-ಕಟ್ಟೆಗಳ ಮೇಲಿನ ಅವರ ಅಸ್ತೆಯನ್ನು ನೋಡವ ಪ್ರಯತ್ನವನ್ನು ಮಾಡಲಾಗಿದೆ.

ಕ್ರಿಸ್ತಶಕ ೮೮೩ರ 'ಮಹೇಂದ್ರನ ಕಾಲದ ಕಂಬದೂರಿನ ಶಾಸನವು ಅಲ್ಲಿಯ ಕೆರೆಯ ಕೆಳಗಿನ ಗದ್ದೆ ದೇವರಿಗೆ ಭೂಮಿಯನ್ನು ದಾನ'(ಕವಿವಿಶಾಸಂ:೫:ಬಾಗಲಕೋಟೆ:೧೧೭)ವಾಗಿ ನೀಡಿರುವುದನ್ನು ವಿವರಿಸುತ್ತದೆ. ಕ್ರಿಸ್ತಶಕ ೯೮೦ರ 'ಕರ್ಷನಪಲ್ಲಿಯಲ್ಲಿನ ಇಮ್ಮಡಿ ಮಹೇಂದ್ರನ ಶಾಸನವು ಪುಲಿನಾಡಿನ ಕೆರೆಯ ಬೆಳಗಟ್ಟೂರನ್ನುನೊಳಂಬ ಗಾವುಂಡನಿಗೆ ಕೊಡುಗೆ' (ಎಸ್ಐಐ:೯:ಭಾಗ:೧:ಶಾ:ಸಂ:೩೯)ಯಾಗಿ ನೀಡಲಾಗಿದೆ. ಕ್ರಿಸ್ತಶಕ ೧೦೩೦ರ ತೆಲಗಿಯ 'ಜಗದೇಕಮಲ್ಲ ನೊಳಂಬ ಪಲ್ಲವ ಪೆರ್ಮಾನಡಿಯು ತೆಲಗಿಯ ಉರೊಡೆಯುನಾದ ಕಣ್ಣಿಮಯ್ಯನು ಬಿಕ್ಕಿನ ಕೆರೆಯ ಕರಿಗೌಡನಿಗೆ ಕೂಡಲೂರ ಶಂಕರನಾರಾಣದೇವರ ಸಮ್ಮುಖದಲ್ಲಿ ಗದ್ದೆಯನ್ನು ದಾನ'(ಕವಿವಿಶಾಸಂ:೧:ಹರಪನಹಳ್ಳಿ:೪೦)ವಾಗಿ ನೀಡಿರುವುದನ್ನು ಉಲ್ಲೇಖಿಸುತ್ತದೆ. ಅಂದರೆ, ಕೆರೆಯ ಅಳಿವು ಮತ್ತು ಉಳಿವಿನ ಪ್ರಯತ್ನವಾಗಿ ಇಂಥ ಕೆಲಸಗಳು ಎಂದೆಂದಿಗೂ ಅವಶ್ಯಕವಾಗಿವೆ ಎಂಬುದನ್ನು ಇದರಿಂದ ತಿಳಿದುಬರುತ್ತದೆ. ಕ್ರಿಸ್ತಶಕ ೧೦೪೦(ಕವಿವಿಶಾಸಂ:೧:ಹಡಗಲಿ:೫೮)ರ ತುಂಬಿಗೆರೆಯ 'ಇರ್ಮಡಿ ನೊಳಂಬನ ಕಾಲದ ಶಾಸನವು ಚಂದಿಮಯ್ಯನು ಮುಳಸ್ಥಾನ ದೇವರಿಗೆ ಅಲ್ಲಿನ ದೊಡ್ಡ ಕೆರೆಯ ಕಾಯಕಲ್ಪಕ್ಕೆ ಹಾಗೂ ಅದರ ಕೆಳಗೆ ದೇವರ ನೈವೇದ್ಯಕ್ಕೆ ಮತ್ತು ಮಠಕ್ಕಾಗಿ ಭೂಮಿಯನ್ನು ದಾನ'ವಾಗಿ ನೀಡಿರುವುದನ್ನು ಗಮನಿಸಿದಾಗ, ದೇವರು ಮತ್ತು ಕೆರೆಗಳನ್ನು ಸಮಾನವಾಗಿ ಕಾಣುವುದರ ಜೊತೆಗೆ ಅವುಗಳನ್ನು ದೈವತ್ವದ ಮೂಲಕ ರಕ್ಷಿಸುವಂತ ಕಾರ್ಯವನ್ನು ಮಾಡಿರುವುದುಂಟು. ಆ ಕಾರಣಕ್ಕಾಗಿ ಪ್ರತ್ಯೇಕವಾಗಿ ಕೆರೆಗಳನ್ನು ರಕ್ಷಿಸುವುದು ಒಂದು ಕಡೆಯಲ್ಲಿ ಜಮೀನುಗಳನ್ನು ಮತ್ತೆ ಮತ್ತೆ ವ್ಯವಸಾಯಕ್ಕೆ ಪೂರಕವಾಗುವಂತಹ ಅಂಶವನ್ನು ಪ್ರೇರೆಪಿಸುವುದಾಗಿದೆ.

ಕ್ರಿಸ್ತಶಕ ೯೮೭ರ ಅವನಿಯ 'ಇಮ್ಮಡಿ ಪೊಳಲ್ಚೋರನ ಶಾಸನವು ಅವನ ಮಡದಿಯಾದ ದೀವಬ್ಬಳರಿಸಿ ತನ್ನ ಪತಿಯ ಹೆಸರಿನಲ್ಲಿ ಯಶೋರ್ಜ್ಜಿತಮೆನಿಪ ಅಗ್ರಹಾರವನ್ನು ವಿನ್ಯಾಸ ಮಾಡಿಸಿ ತೀರಿಕೊಂಡ ಮಗ ಮಹೇಂದ್ರನ ಹೆಸರಿನಲ್ಲಿ ಕೊಳವನ್ನು ಹಾಗೂ ತನ್ನ ಹೆಸರಿನಲ್ಲಿ ತಟಾಕ ಸೇರಿದಂತೆ ಹಲವು ಮುಂತಾದವುಗಳನ್ನು ಕಟ್ಟಿಸಿ'(ಎಕ:೧೦:ಮುಳಬಾಗಿಲು:ಶಾಸಂ:೩೮ ಮತ್ತು ೫೦) ಧಾರ್ಮಿಕ ಚಟುವಟಕೆಗಳಿಗೆ ಬಿಟ್ಟಿರುವುದನ್ನು ಉಲ್ಲೇಖಿಸುತ್ತದೆ. ಹಾಗೇಯೆ ಬೇತಮಂಗಲದ ಒಂದು ಶಾಸನವು ;ಇರಿವ ನೊಳಂಬಾಧಿ ರಾಜ ನುಲಿಪಯ್ಯನ ಆಳ್ವಿಕೆಯಲ್ಲಿ ವಿಜಯಾದತ್ಯಮಂಗಲದ ಪಿರಿಯ ಕೆರೆಗೆ ಬಿತ್ತುಕಟ್ಟು ಕೊಟ್ಟಿದ್ದನ್ನು'(ಎಕ:೧೦:ಬೌರಿಂಗ್‌ಪೇಟೆ:ಶಾಸಂ:೪) ವಿವರಿಸುತ್ತದೆ.

ನೊಳಂಬರು ಶೈವಮೂಲದವರು ಹಾಗೂ ಪಾಶುಪತದವರು. ಆ ಕಾರಣಕ್ಕಾಗಿ ಅವರನ್ನು ನಾವು ಉಳುಮೆ ಮೂಲದವರೆಂದೂ ಕೂಡ ಗುರುತಿಸಬಹುದಾಗಿದೆ. ಕ್ರಿಸ್ತಶಕ

೬ನೆಯ ಶತಮಾನದಿಂದ ೧೫ನೆಯ ಶತಮಾನಗಳವರೆಗೆ ಅ ಪಂಥದ ಬಗ್ಗೆ ತಿಳಿಸುವ ಅನೇಕ ಶಾಸನಗಳು ದೊರಕುತ್ತವೆ. ಮಹಾಕೂಟದಲ್ಲಿ ಲಕುಳೀಶನ ಹೆಸರಿನದೇ ಒಂದು ದೇವಾಲಯವಿದೆ. ಹೊಂಬಳದ ಶಾಸನದಲ್ಲಿ ಅರ್ಚಕ ಮೊಂತೆಯದೇವನು ಲಕುಳೀಶನ ಮತ್ತೊಂದು ಅವತಾರವೆಂದು ಕೀರ್ತಿತನಾಗಿದ್ದಾನೆ. ನೊಳಂಬರ ವಂಶಾವಳಿಯನ್ನು ಕೊಡುವ ಹೆಂಜೇರುವಿನ ಸ್ತಂಭಶಾಸನದಲ್ಲಿ ಲಕುಳೀಶನ ಬಗ್ಗೆ ಬರೆದಿರುವುದನ್ನು ನೋಡಿದರೆ, "ಲಕುಳೀಶೋನಿಜನಾಮ್ನೊ ವಿಸ್ಮರಣಾಂಶಂಕೆಯೇವ ಧರ್ಮಾಣಾಂಪುನರಪ್ಯವತೀರ್ಣ ಭುವಿಮುನಿನಾಥಶ್ಚಿಲುಕೋ ಜಾತಃ" ಎಂದು ಕಂಡುಬರುತ್ತದೆ. ಇರಿವನೊಳಂಬದೀಲಿಪನ ಕೈಕೆಳಗೆ ಅನೇಕ ಅಧಿಕಾರಿಗಳಲ್ಲದೆ, ರಾಜಕುಮಾರರೂ, ಧರ್ಮಗುರುಗಳೂ ಅನೇಕ ಸಂಸ್ಥಾನಗಳನ್ನಾಳುತ್ತಿದ್ದರೆಂದು ತಿಳಿದುಬರುತ್ತದೆ. ತ್ರಿಭುವನಕರ್ತಾರ ಭಟಾರ ಅಥವಾ ಕಲಿಯುಗರುದ್ರ, ಅಥವಾ ದೇವನೆಂಬ ಮಹಾ ಪ್ರಖ್ಯಾತ ಗುರುವಾಗಿದ್ದ ಈ ಶಿವಗುರು ನಲವತ್ತು ವರ್ಷಗಳ ಕಾಲ ಅನಿಸ್ಥಾನವನ್ನಾಳುತ್ತಿದ್ದನೆಂದೂ, ಐವತ್ತು ದೇವಾಲಯ, ಎರಡು ದೊಡ್ಡ ಕೆರೆಗಳನ್ನು ಕಟ್ಟಿಸಿದನೆಂದೂ, ಈತ ಕ್ರಿಸ್ತಶಕ ೯೬೧ರಲ್ಲಿ ರುದ್ರಲೋಕಪ್ರಾಪ್ತದನೆಂದು ತಿಳಿದು ಬರುತ್ತದೆ. ಈತನ ನೆಲೆಯಾದ ಅನಿಸ್ಥಾನಕ್ಕೆ ತಪೋರಾಜ್ಯವೆಂದು ಹೆಸರಿತ್ತು. ಅವನಿಯಲ್ಲಿ ನೊಳಂಬರಿಂದ ನಿರ್ಮಿಸಲಾದ ಲಕ್ಷ್ಮಣೇಶ್ವರ ದೇವಾಲಯದ ಉತ್ತರದ ಗೋಡೆಯ ಮೇಲೆ ಈತನ ಉಬ್ಬುಶಿಲ್ಪ ಮತ್ತು ಶಾಸನವೂ ಇದೆ. ಕ್ರಿಸ್ತಶಕ ೯೬೭ರ ಮಡಕಶಿರಾ ತಾಲ್ಲೂಕಿನ ಒಂದು ಶಾಸನದಲ್ಲಿ "ಶ್ರೀಮತುಹೆಂಜೇರು ಪಟ್ಟಣದ ಮಹಾಘಟಿಕಾಸ್ಥಾನಶ್ರೀನೊಟಿಂಬೇಶ್ವರ ದೇವರ ಸನ್ನಿಧಾನದಲ್ಲಿಯಾಚಾರ್ಯ್ಯರಾಜಗುರುಗಳಪ್ಪನನ್ತಶಿವದೇವರ್" ಎಂದು ಹೇಳುವ ಮೂಲಕ ಅಂದಿನ ಲಾಕುಳ ಶೈವಾಚಾರ್ಯರುಗಳ ವಿಷಯದಲ್ಲಿ ಹೆಚ್ಚು ಕಡಿಮೆ ಎಲ್ಲ ಶಾಸನಗಳಲ್ಲಿಯೂ ಇವರು ಲಾಕುಳಸಮಯಸ್ತಂಭರೆಂದೂ, ಲಾಕುಳಾಗಮ ಪಂಡಿತರೆಂದೂ ವರ್ಣಿಸಿದೆ. ಇದರೊಂದಿಗೆ ನೊಳಂಬರು ಶೈವಮೂಲದವರೆಂಬುದನ್ನು ಪ್ರಚುರಪಡಿಸುತ್ತದೆ.

ಹೀಗೆ ನೊಳಂಬರ ಧಾರ್ಮಿಕವಾದ ಬದುಕು ಕಟ್ಟಿಕೊಂಡ ರೀತಿಯು ಮಾನವ ಜೀವನದ ಸಹಜ ಆಚರಣೆಗಳನ್ನು ರೂಪಿಸುವುದಾಗಿ ಕಂಡುಬರುತ್ತದೆ. ಈ ಅಂಶಗಳ ಹಿನ್ನೆಲೆಯಲ್ಲಿ ಮೂಲದಲ್ಲಿ ಪಶುಪಾನೆ ಮತ್ತು ಬೇಸಾಯಗಾರರಾಗಿ, ನಾಡ ಒಡೆಯರಾಗಿ, ಸಾಮ್ರಾಜ್ಯವನ್ನು ಸ್ಥಾಪಿಸುವುದರ ಮೂಲಕ ಕರ್ನಾಟಕ ಉತ್ತರದಿಂದ ದಕ್ಷಿಣದ ತಮಿಳುನಾಡಿನ ಎಲ್ಲ ಕಡೆಗೂ ತಮ್ಮ ಅಧಿಪತ್ಯವನ್ನು ಸಾಧಿಸಬಯಸಿರುವ ಫಲವಾಗಿ ನೊಳಂಬಪಲ್ಲವರಾಗಿ ಚರಿತ್ರೆಯ ಪುಟಗಳಲ್ಲಿ ಗುರುತಿಸುವಂತ ಸಾಧ್ಯತೆಗಳು ವ್ಯಕ್ತವಾಗುತ್ತವೆ. ಇದರಿಂದ ಪಲ್ಲವರ ಆಚರಣಾ ಕ್ರಮವು ಶೈವ ಮೂಲದಿಂದ ಬಂದುದಾಗಿರುವುದರಿಂದ ಹಾಗೂ ಅವರ ಮೂಲದಂತಿರುವ ಈ ನೊಳಂಬರ ಧಾರ್ಮಿಕ ಆಚರಣಾಕ್ರಮವು ಕೂಡ ಶೈವಮೂಲದ್ದೇ ಆಗಿರುವುದು ಕಾಕತಾಳೀಯವಾಗಿ ಚರಿತ್ರೆಯಲ್ಲಿ ಹೆಚ್ಚಿನ ಗೊಂದಲಗಳೂ ಏರ್ಪಡದಂತೆ

ಮಾಡಿರುವುದು ಇಂದಿನ ಅಧ್ಯಯನದ ಪೂರಕವಾದ ಅಂಶಗಳಲ್ಲಿ ಒಂದೆಂದು ಅರಿಯಬಹುದು. ಇಲ್ಲಿ ಚರ್ಚಿತವಾಗಿರುವ ಎಲ್ಲ ಸಾಂಸ್ಕೃತಿಕ ಅಂಶಗಳನ್ನು ಗಮನದಲ್ಲಿರಿಸಿಕೊಂಡು ನೊಳಂಬ ಪಲ್ಲವರಿಂದ ಹಿಡಿದು ಆಧುನಿಕವಾದ ಇಂದಿನ ಸಾಮಾಜಿಕವಾದ ಸಾಂಸ್ಕೃತಿಕ ಮಜಲುಗಳು ಎಲ್ಲಿಯೂ ಬದಲಾಗದಿರುವುದು ನೊಳಂಬರನ್ನು ನೊಣಬರೆಂಬುದಾಗಿ ಗುರುತಿಸಲು ಹೆಚ್ಚು ಅನುಕೂಲವಾಗಿರುವುದು ಅಲ್ಲದೆ, ಅಧ್ಯಯನದ ಉದ್ದೇಶಗಳಲ್ಲೊಂದಾಗಿರುವುದು ಕೂಡ.

೩.೬. ದೇವಾಲಯಗಳ ನಿರ್ಮಾಣ

ಮೂಲತಃ ಶೈವರಾದ ನೊಳಂಬರು, ತಾವು ನಿರ್ಮಾಣ ಮಾಡಿದಂತ ದೇವಾಲಯಗಳಲ್ಲಿ ಹೆಚ್ಚಾಗಿ ಶಿವದೇವಾಲಯಗಳಾಗಿವೆ. ಈ ಶಿವದೇವಾಲಯಗಳನ್ನು ನಿರ್ಮಿಸಿ ದಾನದತ್ತಿಗಳನ್ನು ನೀಡಿದ್ದಾರೆ. ನೊಳಂಬರ ಶಾಸನೋಕ್ತ ಆರಂಭದ ರಾಜರಲ್ಲಿ ಒಬ್ಬನಾದ ಸಿಂಹಪೋತನ ಕಾಲದಿಂದ ದೇವಾಲಯಗಳ ನಿರ್ಮಾಣದ ಕಾರ್ಯ ನಡೆದಿರುವುದು ಕಂಡುಬರುತ್ತದೆ. ಜೊತೆಗೆ ಜಗದೇಕಮಲ್ಲ ನೊಳಂಬ ಪಲ್ಲವ ಪೆರ್ಮಾನಡಿ ಜಯಸಿಂಹನ ಕಾಲದವರೆಗೂ ದೇವಾಲಯಗಳು ಸಾಕಷ್ಟು ಪ್ರಮಾಣದಲ್ಲಿ ನಿರ್ಮಾಣಗೊಂಡಿರುವುದಿದೆ. ಕ್ರಿಸ್ತಶಕ ೮೦೦ರ ದೊಡ್ಡ ಉಳ್ವರ್ತೆ(ಎಕ:೧೧:ಚಿತ್ರದುರ್ಗ:ಶಾಸಂ:೭)ಯ ಶಾಸನವೊಂದು ಪ್ರತಿಮೆಗಳನ್ನು ಹಾಗೂ ದೇವಾಲಯ(ಅಮರ್ಆಲಯ)ಗಳನ್ನು ಮಾಡಿಸಿದಂತೆ ಉಲ್ಲೇಖ ಕಂಡುಬರುತ್ತದೆ. ಕ್ರಿಸ್ತಶಕ ೮೦೦(ಎಕ:೧೧:ಚಿತ್ರದುರ್ಗ:ಶಾಸಂ:೩೩)ಕ್ಕೆ ಸೇರಿದ ಮತ್ತೊಂದು ಚಿಕ್ಕಮಧುರೆಯ ಸಿಂಗಮುತ್ತರಸನ ಕಾಲದ ಶಾಸನವು ಅವನ ಮಗನ ಆಳ್ವಿಕೆಯ ಸಂದರ್ಭದಲ್ಲಿ ಮಾರಬ್ಬೆ ಎಂಬುವಳು ಶಿವಾಲಯುವನ್ನು ಕಟ್ಟಿಸಿದಂತೆ ಉಲ್ಲೇಖವಿದೆ. ಕ್ರಿಸ್ತಶಕ ೮೨೦(ಎಕ:೧೧:ಚಿತ್ರದುರ್ಗ:ಶಾಸಂ:೩೩)ರ ಚಿಕ್ಕಮಧುರೆಯ ಶಾಸನದಲ್ಲಿ ಚರುಪೊನ್ನೇರನ ಹೆಂಡತಿ ಗವಣಬ್ಬೆ ಮದರಿಕಲ್ಲಿನಲ್ಲಿ ಗವಣೇಶ್ವರವೆಂಬ ಶಿವಾಲಯವನ್ನು ನಿರ್ಮಿಸಿದಂತೆ ತಿಳಿದುಬರುತ್ತದೆ. ಕ್ರಿಸ್ತಶಕ ೮೭೦(ಎಕ:೧೨:ಸಿರಾ:ಶಾಸಂ:೩೮)ರ ಶಾಸನದಲ್ಲಿ ಮಹೇಂದ್ರನು ತನ್ನ ಹೆಸರಿನಲ್ಲಿಯೇ, ಅಂದರೆ ಮಹೇಂದ್ರೇಶ್ವರ ದೇವಾಲಯವನ್ನು ಮಾಡಿಸಿ ಅದರ ನಿತ್ಯಕರ್ಮಕ್ಕೆ ಭೂಮಿಯನ್ನು ದಾನವಾಗಿ ಬಿಟ್ಟಿರುವುದನ್ನು ಈ ಶಾಸನವು ವಿವರಿಸತ್ತದೆ. ಅದೇ ಮಹೇಂದ್ರನ ಕಾಲದಲ್ಲಿಯೇ ಕ್ರಿಸ್ತಶಕ ೮೯೨(ಕವಿವಿಶಾಸಂ:೪:ಶಾಸಂ:೯೩)ರ ತಗಡೂರಿನ(ಧರ್ಮಪುರಿ)ಲ್ಲಿ ಚಂದಿಯಣ್ಣ ಮತ್ತು ನಿಧಿಯಣ್ಣ ಎಂಬುವವರು ಬಸದಿಯನ್ನು ಮಾಡಿಸಿದ ಬಗ್ಗೆ ಈ ಶಾಸನವು ಹೇಳುತ್ತದೆ. ಇದೇ ಮಹೇಂದ್ರನು ತಾಯಲೂರು ಅಥವಾ ತೈಲೂರಿನಲ್ಲಿ ಕಲ್ಲದೇಗುಲವನ್ನು ನಿರ್ಮಿಸಿರುವುದರ ಬಗ್ಗೆ ಕ್ರಿಸ್ತಶಕ ೮೯೫(ಎಕ:೭(ರೈ): ಶಾಸಂ:.೨೮೫)ರ ಶಾಸನವು ವಿವರಿಸುತ್ತದೆ.

ಅಯ್ಯಪ್ಪದೇವನು ಮುಷ್ಟುಪುರದಲ್ಲಿ ಕಟ್ಟಿಸಿದ ದೇವಾಲಯವನ್ನು ಕುರಿತು ಹೇಳುವ ಕ್ರಿಸ್ತಶಕ ೯೩೩(ಎಕ:೧೧:ಜಗಳೂರು:ಶಾಸಂ:೨೯)ರ ಶಾಸನದಲ್ಲಿ, ದೇವಾಲಯದ ರಚನೆಯನ್ನು

ಕುರಿತು ವಿವರಿಸುತ್ತದೆ. ಅದರಲ್ಲಿ ಕಂಡಪೀಠ ಪಾಣಿವಟ್ಟ ಸಹಿತವಾಗಿ ಈ ದೇವಾಲಯವನ್ನು ಕಟ್ಟಿಸಲಾಗಿದೆ ಎಂದಿದೆ. ಇಲ್ಲಿ ನೊಳಂಬರ ಅರಸರು ದೇವಾಲಯಗಳನ್ನು ನಿರ್ಮಾಣ ಮಾಡುವುದರ ಜೊತೆಗೆ ನೊಳಂಬರ ಅರಸರಿಂದ ಪ್ರಭಾವದಿಂದ ಅವರ ದಂಡನಾಯಕರು ದೇವಾಲಯವನ್ನು ನಿರ್ಮಾಣ ಮಾಡಿಸಿರುವುದರ ಬಗೆಗೆ ಹಲವು ಶಾಸನಗಳು ವಿವರಿಸುತ್ತವೆ. ಅದಕ್ಕೆ ಸ್ಪಷ್ಟವಾದ ಉದಾಹರಣೆ ಎಂದರೆ, ಅಗಳಿಯ ಕ್ರಿಸ್ತಶಕ ಸುಮಾರು ೯೫೦(ಎಸ್‌ಐಐ:೯:(೧):ಶಾಸಂ:೩೩)ರ ನೊಳಂಬಾಧಿರಾಜನ ಶಾಸನವು ಅವನ ದಂಡನಾಯಕ ಬಲ್ಲಹನ ಕೋಟಯ್ಯನು ವಿಷ್ಣುದೇವಾಲಯವನ್ನು ಕಟ್ಟಿಸಿರುವುದರ ಬಗೆಗೆ ಹೇಳುತ್ತದೆ. ಜೊತೆಗೆ ಅದರ ನಿತ್ಯ ಕರ್ಮ ಮತ್ತು ನಿರ್ವಹಣೆಗೆ ಹನ್ನೆರಡು ಖಂಡುಗ ಭೂಮಿಯನ್ನು ದಾನವಾಗಿ ನೀಡಿರುವುದರ ಮೇಲೆ ಬೆಳಕು ಚೆಲ್ಲುತ್ತದೆ. ಕ್ರಿಸ್ತಶಕ ೯೫೧(ಎಕ:೧೦:ಚಿಂತಾಮಣಿ:ಶಾಸಂ:೪೯)ರ 'ಕುರುಬೂರಿನ ಶಾಸನವೊಂದು ಭೀಮಯ್ಯ ಎಂಬುವನು ಭೀಮೇಶ್ವರ ದೇವಾಲಯವನ್ನು ದೇವಭೋಗಕ್ಕೆಂದು ಖಂಡುಗ ಗದ್ದೆಯನ್ನು ಆ ದೇವಾಲಯಕ್ಕೆ ಬಿಟ್ಟರು'ವುದನ್ನು ಉಲ್ಲೇಖಿಸಿರುವುದು ಕಂಡುಬರುತ್ತದೆ. ಕ್ರಿಸ್ತಶಕ ೯೫೦(ಎಕ:೧೦:ಮುಳುಬಾಗಿಲು:ಶಾಸಂ:೫೯)ರ ಶಾಸನವು ಅವನಿಯಲ್ಲಿ ಏಕವಾಕ್ಯ ಇರಿವನೊಳಂಬನ ಆಳ್ವಿಕೆಯಲ್ಲಿ ಬಸವಯನಂಕ ಭಟ್ಟನು ಮಾನಸ್ತಂಭವನ್ನು ಮಾಡಿಸಿದಂತೆ ಹೇಳಿದೆ.

ಒಂದು ಮಹತ್ವದ ಅಂಶದ ಮೇಲೆ ಕ್ರಿಸ್ತಶಕ ೯೮೨(ಎಕ:೧೦:ಮುಳುಬಾಗಿಲು:ಶಾಸಂ:೩೮)ರ ಶಾಸನವೊಂದು ಬೆಳಕು ಚೆಲ್ಲುತ್ತದೆ. ಅದು 'ಇಮ್ಮಡಿ ಪೊಳಲ್ಚೋರನ ಪತ್ನಿ ದೀವಬ್ಬರಸಿಯು ಗತಿಸಿದ ತನ್ನ ಪತಿಯ ಹೆಸರಿನಲ್ಲಿ ಒಂದು ಕೊಳವನ್ನೂ, ತನ್ನ ಹೆಸರಿನಲ್ಲಿ ಒಂದು ಕೆರೆಯನ್ನೂ ಹಾಗೂ ಶಿವ ಮತ್ತು ವಿಷ್ಣುದೇವಾಲಯಗಳನ್ನೂ ನಿರ್ಮಾಣ ಮಾಡಿಸಿ'ರುವದನ್ನು ಗಮನಿಸಬಹುದು. ಈಕೆ ಕಟ್ಟಿಸಿದ ಕೆರೆಯು ಪೊಜಿರಮಂಗಲದಲ್ಲಿ ಇತ್ತು. ಅವನಿಯಲ್ಲಿ ಕಟ್ಟಿಸಿದ ವಿಷ್ಣುಗೃಹವನ್ನು ನೊಳಂಬನಾರಾಯಣೇಶ್ವರನೆಂದು ಕರೆಯಲಾಗುತ್ತಿತ್ತು. ಈ ಮೇಲೆ ವಿವರಿಸಿದ ದೇವಾಲಯಗಳಾದ ವಿಷ್ಣು ಮತ್ತು ಶಿವ ದೇವಾಲಯುಗಳನ್ನು ರಾಣಿ ದೀವಬ್ಬರಸಿಯೇ ನಿರ್ವಾಣ ಮಾಡಿಸಿರುವುದನ್ನು ಮೂಳಬಾಗಿಲಿನ ಶಾಸನ(ಎಕ:೧೦:ಮುಳುಬಾಗಿಲು:ಶಾಸಂ:೫೦)ವು ಸ್ಪಷ್ಟಪಡಿಸುತ್ತದೆ. ಈ ಉದಾಹರಣೆಯಿಂದ ನೊಳಂಬರಸರು ಎಲ್ಲ ಧರ್ಮಗಳಲ್ಲಿಯೂ ಉದಾರಿಗಳಾಗಿದ್ದರೂ ಎಂಬುದು ಮೇಲ್ನೋಟಕ್ಕೆ ಕಂಡುಬಂದರು. ಇದರ ಹಿಂದೆ ಪ್ರಬಲವಾದ ರಾಜಕೀಯ ಹಿತಾಸಕ್ತಿ ಕಾರ್ಯನಿರ್ವಹಿಸುತ್ತಿತ್ತು ಎಂದೇ ಹೇಳಬೇಕಾಗುತ್ತದೆ.

ಕ್ರಿಸ್ತಶಕ ೯೯೪(ಎಕ:೭:ಹೊಳೆನರಸಿಪುರ:ಶಾಸಂ:೧೧೯)ರ ನೇರಲಗುಂಡಿಯ ಶಾಸನವೊಂದರಲ್ಲಿ, ತ್ರೈಲೋಕ್ಯಮಲ್ಲ ನೊಳಂಬಪಲ್ಲವ ಪೆರ್ಮಾನಡಿದೇವನ ಕಾಲದಲ್ಲಿ ಹಯನೇರಲಗುಂಡಿಯ ಹಿಟ್ಟಮಯ್ಯನು ಮಲ್ಲಿಕಾರ್ಜುನ ದೇವಾಲಯವನ್ನು ನಿರ್ಮಾಣ

ಮಾಡಿರುವುದನ್ನು ವಿವರಿಸುತ್ತದೆ. ಈ ನೊಳಂಬರು ಯಾವುದೇ ಒಂದು ಧರ್ಮದ ಆಚರಣೆಗೆ ಕಟಿಬದ್ಧರಾಗಿರಲಿಲ್ಲ. ಎಲ್ಲ ಸಂಪ್ರದಾಯಗಳ ದೇವಾಲಯಗಳನ್ನು ನಿರ್ಮಾಣ ಮಾಡುವ ಪ್ರಯತ್ನವನ್ನು ಮಾಡಿದ್ದಾರೆ. ಜೊತೆಗೆ ಜೈನರ ಬಸದಿಗಳನ್ನು ನಿರ್ಮಾಣ ಮಾಡಿಸಿದ್ದಾರೆ. ಕ್ರಿಸ್ತಶಕ ೧೦೦೮(ಕವಿವಿಶಾಸಂ:೧:ಸಿರಗುಪ್ಪ:ಶಾಸಂ:೨೭)ರ ಬಲ್ಲಕುಂದೆಗ್ರಾಮದ ಘಟೆಯಂಕಕಾರ(ಚಿತ್ರವೆಡಮಗ)ನ ಆಳ್ವಿಕೆಯ ಶಾಸನದಲ್ಲಿ ಅವನ ನಿಯೋಗಿ ಕೌಶಿಕಗೋತ್ರದ ಮಾಚಿಣಾರ್ಯನ ಮಗ 'ಶ್ರೀಧರಾರ್ಯ್ಯ ಬಲ್ಲಕುಂದೆ ತೀರ್ಥವಸತಿಗೆ ಜೈನಬಿಂಬ'ವನ್ನು ಮಾಡಿಸಿದರ ಬಗೆಗೆ ಉಲ್ಲೇಖಿಸುತ್ತದೆ. ವೊರಿಗೇರಿಯ ಕ್ರಿಸ್ತಶಕ ೧೦೪೫(ಕವಿವಿಶಾಸಂ:೧:ಹಗರಿಬೊಮ್ಮನಹಳ್ಳಿ:ಶಾಸಂ:೨೪)ರ ಶಾಸನ ತಿಕಣ್ಣ ಮತ್ತು ಲೆಂಕಸಾಸಿರ್ವರು ಸೇರಿ ವೋರಿಂಗೆರೆಯಲ್ಲಿ ಉದಯಾದಿತ್ಯದೇವನಿಗೆ ಪರೋಕ್ಷವಿನಯವಾಗಿ ೨೪ ಸಾರ್ವಜನಿಕರಿಗಾಗಿ ಛತ್ರವನ್ನು ಕಟ್ಟಿಸಿದರು. ಅಲ್ಲಿ ಆಹಾರಕ್ಕಾಗಿ ವ್ಯವಸ್ಥೆಯನ್ನು ಮಾಡಿಸಲಾಯಿತು. ನೊಳಂಬೇಶ್ವರ ದೇವಸ್ಥಾನವನ್ನೂ ತಮ್ಮ ಹೆಸರಿನಲ್ಲಿ ಲೆಂಕೇಶ್ವರ ದೇವಾಲಯವನ್ನು ಕಟ್ಟಿಸಿದರೆಂಬುದನ್ನು ವಿವರಿಸುತ್ತದೆ.

ಕ್ರಿಸ್ತಶಕ ೧೦೫೪(ಎಕ:೧೧:ಜಗಳೂರು:ಶಾಸಂ:೧೦)ರ ನಂದಿಬೇವೂರಿನ ಶಾಸನವೊಂದರಲ್ಲಿ ಘಟ್ಟಿಯರಸನ ಕಾಲದಲ್ಲಿ ಬಸದಿಯನ್ನು ನಿರ್ಮಿಸಿರುವದರ ಬಗೆಗೆ ಉಲ್ಲೇಖವಾಗಿದೆ. ನಂದಿಬೇವೂರಿನ ಒಂದು ಶಾಸವು...

ಮೇರುವಿನಿಟ್ದಿ ಉಮಾಪತಿಯೆ ದಕ್ಷಿಣಭಾಗದ ಭೂಮಿಯಲ್ಲ
ಸಾರಂ ಇದೆಂದಿಯಸಗೋಡಿನೊಳ್ ಇಂತು ಸ್ವಯಂಭು ಆಗಿಹರ
ಹಾರಾಜಿತೇಂದ್ರಿಯರಿಗೆ ಕನಸೊಂದಮೆ ತೋಱಿ ವಿಶೇಷದಿಂದೆ ವಿ
ಸ್ತಾರದೆ ಈ ಶ್ವರಾಲಯಮನೆತ್ತಿಸಿದರ್ಥರೆಗೇನ್ ಅಪೂರ್ವಮೋ
ವಾರಿಧಿ ಸಮಸ್ತ ವಸುಧಾ
ಧಾರಿಣಿಯೊಳು ನೆಗಳ್ದ ದಿವ್ಯಕರ್ತಾರ ತಪೋ
ಭರಮ್ ಪಿರಿದೆಂದು ಅಹಿ
ಚರಣಾರಾಧನೆಗೆಯ್ದೆ ಪೆಡೆಗಳಂ ಪಸರಿಸುವಂ
ಏವೇಳ್ವುದಣ್ಣಾ ತಪದ ಈ
ಭಾವನೆಯಂ ಕರ್ಮಬಂಧನಮಂ ಕೆಡಿಸಿಯೆ ಸದ್
ಭಾವದೆ ಶಿವನಂ ಚಿತ್ತದೊಳ್
ಅವಗಮ್ ಅವಯವದೆ ತಾಳ್ದಿದರ್ ಕರ್ತಾರರ್

ಕ್ರಿಸ್ತಶಕ ೧೦೫೪(ಎಸ್‌ಐಐ:೯:ಭಾಗ-೧:ಶಾಸಂ:೧೧೫)ರ ಈ ಶಾಸನವು ನೊಳಂಬ ಪಲ್ಲವಪೆರ್ಮ್ಮಾನಡಿ ಮತ್ತು ಜಗದೇಕಮಲ್ಲ ನೊಳಂಬ ಬ್ರಹ್ಮಾಧಿರಾಜ, ಪಂಚಪ್ರಧಾನರು ಊರಿನ ಮಹಾಜನರು ಸೇರಿ ಬಸದಿಯನ್ನು ಮಾಡಿಸಿದ ವಿಚಾರ ವ್ಯಕ್ತವಾಗುತ್ತದೆ.

ಕ್ರಿಸ್ತಶಕ ೧೦೮೦ರ ಸೋಮಪುರದ ಶಾಸನವೊಂದರಲ್ಲಿ ನೊಳಂಬರಸಛತ್ರ, ಅರವಂಡಿಗೆ, ದಿಗ್ಘಿಗೆ, ಸಾಲೆ ನನ್ದನಂ, ಬಾವಿ, ತಟಾಕ, ಅಗ್ಗಿಟಗೆ, ಆರವೆ, ವಿಷ್ಣುಗೃಹ, ಶಿವಾಲಯ ಮುಂತಾದವುಗಳನ್ನು ನೊಳಂಬನ ರಾಯಭಾರಿ ಮಣ್ಣೆಯರ ಈಸಪಯ್ಯ ದಂಡನಾಯಕನು ಮಾಡಿಸಿದ್ದನ್ನು ತಿಳಿಸುತ್ತದೆ. ನರಗುಂದದ ಮೆಕ್ಕೆಗೇರಿಯಲ್ಲಿ 'ಬಾವಿ ಶಿವಾಲಯ, ಸಭಾಸದನ, ಸಿರಬಾಗಿಲು, ದೇವಗೃಹ, ಬಾದೊಬೆ, ಶತ್ರ(ಛತ್ರ)ಶಾಲೆ ದೇವಳಗಳನ್ನು' ಮಾಡಿಸಿದರೆಂದು ಒಂದು ಶಾಸನದಲ್ಲಿ ಹೇಳಿದೆ(ಎಸ್‌ಐಐ:೧೮:ಶಾಸಂ:೮೯). ಕ್ರಿಸ್ತಶಕ ೧೦೮೧(ಎಂಎಆರ್:೧೯೨೯:ಶಾಸಂ:೫೪)ರ ಹಳೆಬನ್ನೂರಿನ ಶಾಸನದಲ್ಲಿ ವೀರನೊಳಂಬ ಜಯಸಿಂಗದೇವನು ಬನ್ನಿವೂರಲಿ ಸೋಮೇಶ್ವರದೇವರ ಪ್ರತಿಷ್ಠೆ ಮಾಡಿಸಿದ ಉಲ್ಲೇಖ ವ್ಯಕ್ತವಾಗುತ್ತದೆ.

ಪ್ರಾಚೀನ ಕರ್ನಾಟಕದಲ್ಲಿ ರಚಿತವಾಗಿರುವ ವಾಸ್ತು ರಚನೆಗಳನ್ನು ಅವುಗಳ ವಿನ್ಯಾಸದ ರಿವಾಜುಗಳು ಸಾಮಾನ್ಯವಾಗಿ ನಾಗರ, ದ್ರಾವಿಡ ಮತ್ತು ವೇಸರ ಶೈಲಿಗಳೆಂದು ವಿಂಗಡಿಸಿರುತ್ತಾರೆ. ಈ ಕಾರಣದಿಂದಾಗಿ ಅಂದಿನ ಕರ್ನಾಟಕದಲ್ಲಿ ದ್ರಾವಿಡ ಮತ್ತು ವೇಸರ ಶೈಲಿಗಳು ಪ್ರಚಲಿತದಲ್ಲಿದ್ದವು. ಜೊತೆಗೆ (ಇಂದಿನ ಆಂಧ್ರಪ್ರದೇಶ)ನಾಗರ ಮತ್ತು ದ್ರಾವಿಡ ಶೈಲಿಗಳ ಮಿಶ್ರಣದ ದೇವಾಲಯಗಳು ಕಂಡುಬರುತ್ತವೆ. ಈ ಎಲ್ಲ ಶೈಲಿಗಳೊಂದಿಗೆ ಅತಿ ಉನ್ನತವಾದ ರಾಜ ಮನೆತನಗಳ ಹೆಸರಿನಲ್ಲಿಯೂ ಅಂದಿನ ವಾಸ್ತುವನ್ನು ಹೆಸರಿಸುವುದುಂಟು. ಅವುಗಳೆಂದರೆ, ಗಂಗರು, ಬಾದಾಮಿ ಚಾಲುಕ್ಯ, ಕಲ್ಯಾಣದ ಚಾಲುಕ್ಯ, ಪಲ್ಲವ, ಚೋಳ, ರಾಷ್ಟ್ರಕೂಟ, ವಿಜಯನಗರ ಮುಂತಾದ ಅರಸು ಮನೆತನಗಳ ಹೆಸರಿನೊಂದಿಗೆ ವಾಸ್ತುಶಿಲ್ಪ ಶೈಲಿಯನ್ನು ಗುರುತಿಸುವುದುಂಟು. ಈ ಬಗೆಯ ವಿಂಗಡಣೆಗಳನ್ನು ಆಯಾ ರಾಜವಂಶಗಳು ಬಳಸಿರುವ ಶಿಲೆ, ಕಂಡರಿಸುವ ಕ್ರಮ, ಮೂರ್ತಿಗಳ ಲಕ್ಷಣಗಳು ಇವುಗಳ ಆಧಾರದ ಮೇಲೆ ಮಾಡಲಾಗುತ್ತದೆ. ಈ ಶೈಲಿಗಳೇನಾದರೂ ಇರಲಿ. ನೊಳಂಬರ ವಾಸ್ತುಕಲೆಯನ್ನು ನೋಡುವ ಸಂದರ್ಭದಲ್ಲಿ ಅವರ ಸಮಕಾಲೀನ ಅರಸು ಮನೆತನಗಳಾದ ಗಂಗರು ಮತ್ತು ರಾಷ್ಟ್ರಕೂಟರು ಜೊತೆಗೆ ನೆರೆಯ ರಾಜರಾದ ಮತ್ತು ತಮ್ಮ ಮೂಲದವರಾದ ಪಲ್ಲವರ ಶಿಲ್ಪಶೈಲಿಯನ್ನು ಹಾಗೂ ಅವರ ದೇವಾಲಯಗಳ ಮಿಶ್ರಣವನ್ನು ಹೊಂದಿರುವ ಸಾಧ್ಯತೆಯಿದೆ.

ನೊಳಂಬರು ಸಾಮಾನ್ಯವಾಗಿ ಗಂಗರ ಸಾಮಂತರಾಗಿ, ಸಂಬಂಧಿಕರಾಗಿ ಅವರೊಂದಿಗೆ ರಾಜಕೀಯ ಸಂಬಂಧಗಳನ್ನು ಹಂಚಿಕೊಂಡವರಾಗಿದ್ದಾರೆ. ಗಂಗರ ರಾಜ್ಯದ ಕೆಲವು ಭಾಗಗಳಿಗೆ

ಅಧಿಪತಿಗಳಾಗಿದ್ದವರು ಈ ನೊಳಂಬರು. ಹೀಗಾಗಿ ಗಂಗರ ಪ್ರಭಾವಕ್ಕೆ ಒಳಗಾಗಿರುವುದು ಸಹಜವಾಗಿರುತ್ತದೆ. ದೇವರಕೊಂಡಾರೆಡ್ಡಿ ಅವರು ತಮ್ಮ ಸಂಶೋಧನ ಮಹಾಪ್ರಬಂಧದಲ್ಲಿ ನೊಳಂಬರ ಕಾಲದಲ್ಲಿ, ನೊಳಂಬರ ಅರಸರ ಹಾಗೂ ಅವರ ಅಧಿಕಾರಿಗಳಿಂದ ರಚಿತವಾದ ಅರಳಗುಪ್ಪೆ, ಅವನಿ, ನಂದಿ, ನೊಣವಿನಕೆರೆ, ಬರಗೂರು, ಹೆಬ್ಬಟ, ಬೇತಮಂಗಲ ಮುಂತಾದ ಕಡೆಯ ದೇವಾಲಯಗಳ ವಾಸ್ತುರಚನೆಗಳನ್ನು ಗಂಗರ ದೇವಾಲಯಗಳೆಂದೇ ಗುರುತಿಸುತ್ತಾರೆ. ಆದರೆ ಅವುಗಳ ರಚನೆಗಳನ್ನು ಗುರುತಿಸುವುದಾದರೆ, ಅವು ಗಂಗರ ದೇವಾಲಯಗಳ ರಚನೆಗಿಂತ ಸ್ವಲ್ಪ ಭಿನ್ನವಾಗಿ ಕಂಡುಬರುತ್ತವೆ.

ಈ ನೊಳಂಬರನ್ನು ಕುರಿತು ವಿಸ್ತೃತವಾಗಿ ಮೊದಲು ಅಧ್ಯಯನವನ್ನು ಮಾಡಿದವರು ಕೃಷ್ಣಮೂರ್ತಿ ಎಂ.ಎಸ್. ಎಂದು ಹೇಳಬಹುದು. ಅವರ 'ದಿ ನೊಳಂಬ' ಎಂಬ ಪುಸ್ತಕದಲ್ಲಿ, ನೊಳಂಬರ ವಾಸ್ತು ಮತ್ತು ಶಿಲ್ಪಗಳಿಗೆ ಸಂಬಂಧಿಸಿದಂತೆ, ಪ್ರತ್ಯೇಕ ಅಧ್ಯಾಯವೇ ಇದ್ದು, ಅನೇಕ ಸ್ಥಳಗಳಲ್ಲಿನ ನೊಳಂಬರ ದೇವಾಲಯಗಳ ಪರಿಚಯವನ್ನು ನೀಡಿರುವುದೇ ಅಲ್ಲದೇ ಅವರ ಎಲ್ಲ ದೇವಾಲಯಗಳು ವೈಶಿಷ್ಟ್ಯವನ್ನು ಗುರುತಿಸುವಂತ ಪ್ರಯತ್ನವನ್ನು ಮಾಡಿದ್ದಾರೆ. ತಮ್ಮ ಕೃತಿಗಳಲ್ಲಿ ನೊಳಂಬರ ದೇವಾಲಯಗಳನ್ನು ಕುರಿತು ಹಾಗೂ ಅವುಗಳ ಒಳವಿನ್ಯಾಸಗಳನ್ನು ಗುರುತಿಸಿದ್ದಾರೆ. ಅವುಗಳೆಂದರೆ,

೧) ಗರ್ಭಗೃಹವು ಚೌಕಾಕಾರವಾಗಿದ್ದು, ಒಳಗೆ ಶಿವಲಿಂಗವಿರುತ್ತದೆ.

೨) ಗರ್ಭಗೃಹದ ಮುಂದಿನ ಅರ್ಧಮಂಟಪವು ಎರಡು ಅಥವಾ ನಾಲ್ಕು ಕಂಬಗಳನ್ನು ಹೊಂದಿರುತ್ತದೆ. ಕೆಲವೊಮ್ಮೆ ಕಂಬಗಳಿರುವುದಿಲ್ಲ.

೩) ಅರ್ಧಮಂಟಪದ ಮುಂದಿನ ನವರಂಗ ಮಂಟಪವು ಸಾಮಾನ್ಯವಾಗಿ ನಾಲ್ಕು ಕಂಬಗಳನ್ನು ಹೊಂದಿರುತ್ತದೆ.

೪) ಮುಖಮಂಟಪವು ನಾಲ್ಕು ಕಂಬಗಳನ್ನೊಳಗೊಂಡಿರುತ್ತದೆ.

೫) ದೇವಾಲಯದ ಮುಂದೆ ನಂದಿಗಾಗಿ ಪ್ರತ್ಯೇಕ ಮಂಟಪವಿರುತ್ತದೆ(ನೋಇದ:೧೦೦–೧೧೦).

ಹೀಗೆ ಕೃಷ್ಣಮೂರ್ತಿ ಎಂ.ಎಸ್. ಅವರು ಗುರುತಿಸಿದ ಅನೇಕ ದೇವಾಲಯಗಳನ್ನು ಕುರಿತಂತೆ ಮಾಹಿತಿಗಳಿಂದ ಅವರ ದೇವಾಲಯಗಳ ರಚನಾ ವ್ಯವಸ್ಥೆಯನ್ನು ಸಮಗ್ರವಾಗಿ ಅರ್ಥೈಸಬಹುದಾಗಿದೆ. ಸಾಮಾನ್ಯಾವಾಗಿ ದೇವಾಲಯವು ಶಿವನಿಗಾಗಿ ಅಥವಾ ನಿಂತ ವಿಷ್ಣುವಿಗಾಗಿ ರಚಿತವಾಗಿದ್ದರೆ ಅದರ ಗರ್ಭಗೃಹ ಚೌಕಾಕಾರವಾಗಿರುತ್ತದೆ. ಬಹುಪಾಲು ರಾಜವಂಶಗಳ ದೇವಾಲಯಗಳಲ್ಲಿಯೂ ಇದೇ ರೀತಿ ಇರುತ್ತದೆ.

ನೊಳಂಬರ ದೇವಾಲಯಗಳ ಗರ್ಭಗೃಹಗಳು ಅಂತರಾಳಕ್ಕಿಂತ ಚಿಕ್ಕದಾಗಿರುತ್ತವೆ. ಮತ್ತು ಅಂತರಾಳದ ಗೋಡೆ ಚಿಕ್ಕದಾಗಿರುತ್ತವೆ. ಅವುಗಳ ಮೇಲೆ ಭಾರ ಹೊರಲು ಸಾಧ್ಯವಾಗುವಂತೆ ಗೋಡೆ ಅಂಚಿನಲ್ಲಿ ಎರಡೂ ಕಡೆ ನಾಲ್ಕು ಕಂಬಗಳನ್ನು ಪ್ರತ್ಯೇಕವಾಗಿ ಸೇರಿಸುವಂತ ಪ್ರಯತ್ನವನ್ನು ಮಾಡಿರುವುದು ಕಂಡುಬರುತ್ತದೆ. ಅಂತರಾಳವು ಮುಕ್ತವಾಗಿರದೆ, ಮುಂದುಗಡೆ ಗೋಡೆಯನ್ನು ನಿರ್ಮಿಸಿರುವುದು ಕಂಡುಬರುತ್ತದೆ. ಇದಕ್ಕೆ ಉದಾಹರಣೆ ಎಂಬಂತೆ ಧರ್ಮಪುರಿಯ ಕಾಮಾಕ್ಷಿ ದೇವಾಲಯದ ಅಂತರಾಳವು ಗರ್ಭಗೃಹಕ್ಕಿಂತ ದೊಡ್ಡದಾಗಿದೆ. ಅವರ ದೇವಾಲಯಗಳಲ್ಲಿ ಅಧಿಷ್ಠಾನ, ನೊಳಂಬರ ಬಹುತೇಕ ದೇವಾಲಯದ ಅಧಿಷ್ಠಾನಗಳು ಸರಳ ನೇರವಾಗಿರದೆ ಸಂಕೀರ್ಣವಾಗಿದೆ. ಅದೆಂದರೆ ಶಿಖರದಲ್ಲಿ ಬಂದಿರುವ ಕೂಟ, ಶಾಲ, ಪಂಜರಗಳಿಗನುಗುಣವಾಗಿ ಅಧಿಷ್ಠಾನವೂ ಸಹ ಹಿಂದೆ ಮುಂದೆ ಸರಿದಿದೆ.

ನೊಳಂಬರ ದೇವಾಲಯಗಳಲ್ಲಿ ಸಾಮಾನ್ಯವಾಗಿ ಅಧಿಷ್ಠಾನಗಳೇ ಜಾಸ್ತಿ ನಂದಿಯ ಭೋಗನಂದಿ ದೇವಾಲಯದ ಅಧಿಷ್ಠಾನದಲ್ಲಿ ಜಗತಿ, ತ್ರಿಪಟ್ಟ, ಕುಮುದ, ಕಂಭಗಳ, ಪಟ್ಟಿಕೆಗಳ, ಕಂಭ, ಊರ್ಧ್ವ ಕಮಲ ಪಟ್ಟಿಕೆಯನ್ನು ಹೊಂದಿದ್ದರೆ, ಅವನಿಯಲ್ಲಿ ಇರುವ ಲಕ್ಷ್ಮಣೇಶ್ವರ ದೇವಾಲಯದ ಜಗಲಿ, ಕಂಭಗಳ, ಜೊತೆಗೆ ತ್ರಿಪಟ್ಟ ಮತ್ತು ಕಪೋತ, ಪ್ರತಿ, ಗಳ, ಊರ್ಧ್ವಕಮಲ ಪಟ್ಟಿಕೆಯನ್ನು ಹೊಂದಿದೆ. ಸರಿಸುಮಾರು ದೇವಾಲಯದ ಭಿತ್ತಿಗಳಲ್ಲಿ ಅಧಿಷ್ಠಾನದ ರಚನೆಯನ್ನು ಅನುಸರಿಸಿ ಅವುಗಳು ಪಂಜರ, ಕೂಟ ಮತ್ತು ಶಾಲಾ ಭಾಗಗಳನ್ನು ಬಿಡಿಸಲಾಗಿದೆ. ಬೇರೆ ಬೇರೆ ದೇವಾಲಯಗಳಲ್ಲಿ ಎದ್ದು ಕಾಣುವಂತಹ ದೇವಕೋಷ್ಠಗಳಿಲ್ಲ. ಅವುಗಳಿಗೆ ಬದಲಾಗಿ ಲಕ್ಷ್ಮಣೇಶ್ವರ ಮತ್ತು ಅರುಣಾಚಲೇಶ್ವರ ದೇವಾಲಯಗಳಲ್ಲಿ ಎರಡು ಉಬ್ಬು ಕಂಬಳ ಮಧ್ಯೆ ಚಿಕ್ಕ ಕೋಷ್ಠಗಳನ್ನು ಬಿಡಿಸಿದ್ದು, ಅವುಗಳ ಮೇಲೆ ದೇವಾಲಯದ ಶಿಖರದ ಮಾದರಿಗಳನ್ನು ಬಿಡಿಸಲಾಗಿದೆ. ಕೋಷ್ಠಗಳಲ್ಲಿ ಮೂರ್ತಿಗಳನ್ನಿಡುವ ಬದಲಿಗೆ ಕೆಲವು ದೇವಾಲಯಗಳಲ್ಲಿ ವಾತಾಯನವನ್ನು ಕಲ್ಪಿಸಿ, ಬಳ್ಳಿ, ಅಲಂಕಾರಗಳನ್ನು ರಚಿಸಲಾಗಿದೆ. ಇವು ವಾತಾಯನ ಹಾಗೂ ಅಲಂಕಾರ ಎರಡೂ ಕಾರ್ಯಗಳನ್ನು ಪೂರೈಸಿದಂತಾಗಿದೆ. ಹೇಮಾವತಿಯ ದೊಡ್ಡೇಶ್ವರ ದೇವಾಯದಲ್ಲಿ ದೇವಕೋಷ್ಠಗಳಿಲ್ಲ. ನವರಂಗದ ಮತ್ತು ಅಂತರಾಳದ ಭಾಗದ ವಾತಾಯನದಲ್ಲಿ ಮಾತ್ರ ವಿಗ್ರಹಗಳು ಹಾಗೂ ಬಳ್ಳಿ ಅಲಂಕಾರಗಳಿವೆ.

ನೊಳಂಬರು ಕಟ್ಟಿಸಿದ ಹಲವು ದೇವಾಲಯಗಳಲ್ಲಿ ಹೇಮಾವತಿಯ ದೊಡ್ಡೇಶ್ವರ ದೇವಾಲಯವು ಒಂದು. ಈ ದೇವಾಲಯದ ಬಾಗಿಲ ಬಳಿ ವಾತಾಯನ ಜಾಲಂಧ್ರದಲ್ಲಿ ಗಂಗಾ, ದೊಡ್ಡಗಂಗಾ ಪ್ರತಿಮೆಗಳಿವೆ. ೮೦ ಅಡಿ ಉದ್ದ ೨ ಅಡಿ ಅಗಲ ವಿಸ್ತಾರವಾದ ಈ ದೇವಾಲಯವನ್ನು ವಿವಿಧ ರೀತಿಯ ಅಚ್ಚುಪಟ್ಟಿಗಳುಳ್ಳ ಅಧಿಷ್ಠಾನದ ಮೇಲೆ ಕಟ್ಟಲಾಗಿದೆ. ಪಶ್ಚಿಮಾಭಿಮುಖಾಗಿ ನಿಂತಿರುವ ಈ ದೇವಾಲಯದ ಮುಂಭಾಗದಲ್ಲಿ ಒರಟು ಕಲ್ಲುಗಳಿಂದ ಮಾಡಿದ ಒಂದು ನಂದಿ ಮಂಟಪವೂ ಇದೆ. ಅರಳುಗುಪ್ಪೆಯ ಬಾಗಿಲವಾಡದ ಸ್ತಂಭಶಾಖೆಯಲ್ಲಿ

ಗಂಗಾ–ಯಮುನಾ ಶಿಲ್ಪಗಳ ಚಿಕಣಿ ಶಿಲ್ಪಗಳನ್ನು ಕಾಣಬಹುದು. ಇವರ ಕಾಲದ ಹಲವು ದೇವಾಲಯಗಳಲ್ಲಿ ಕೋಲಾರ ಜಿಲ್ಲೆಯ ಮುಳುಬಾಗಿಲು ತಾಲ್ಲೂಕಿನಲ್ಲಿರುವ ಅವನಿ ನೊಳಂಬರ ಕಾಲದಲ್ಲಿ ಅತಿಮುಖ್ಯವಾದ ಒಂದು ಧಾರ್ಮಿಕ ಕೇಂದ್ರ ವಾಗಿತ್ತು. ಶೈವಮತ ಪ್ರಬಲವಾಗಿದ್ದ ಆ ಕಾಲದಲ್ಲಿ ವರುಣಶಿವಭಟ್ಟಾರರೆಂಬುವರು ಈ ಅವನಿ ಸ್ಥಾನವನ್ನು ನಲ್ವತ್ತು ವರ್ಷಗಳ ಕಾಲ ಆಳಿ ಐವತ್ತು ದೇಗುಲಗಳನ್ನೂ ಎರಡು ಕೆರೆಗಳನ್ನೂ ಕಟ್ಟಿಸಿ ಕ್ರಿಸ್ತಶಕ ೯೬೧ರಲ್ಲಿ ರುದ್ರಲೋಕ ಪ್ರಾಪ್ತನಾದನೆಂದು ಆವನಿಯ ಒಂದು ಶಾಸನದಲ್ಲಿ ಹೇಳಿದೆ. ಈ ಸ್ಥಾನಕ್ಕೆ ತಪೋರಾಜ್ಯವೆಂದೂ ಸಹ ಹೆಸರಿತ್ತು. ಆವನಿಯಲ್ಲಿ ಈಗಲೂ ಸಹ ನೊಳಂಬರ, ಚೋಳರ ಕಾಲದ ಅನೇಕ ದೇವಾಲಯಗಳನ್ನು ಕಾಣಬಹುದು. ಪೊಳಲ್ಚೋಚರನ ಪತ್ನಿಯಾದ ದಿವಾಂಬಿಕೆಯಿಂದ ನಿರ್ಮಿತವಾದುದೆಂದು, ಆವನಿಯಲ್ಲಿರುವ ಸ್ತಂಭಶಾಸನದ ಪ್ರಕಾರ ಈಕೆಯು ಆವನಿಯಲ್ಲಿ ಶಿವ ಮತ್ತು ಮುಕುಂದ ಭವನಗಳನ್ನು ಮಾಡಿಸಿದಳೆಂದು ತಿಳಿದುಬರುತ್ತದೆ. ಆವನಿಯಲ್ಲಿರುವ ಈ ದೇವಾಲಯದ ತಳಹದಿಯ ಕಲ್ಲಿನಲ್ಲಿರುವ ಶಾಸನದ ಪ್ರಕಾರ ದೀವಬ್ಬರಸಿಯು ನೊಳಂಬ ನಾರಾಣೇಶ್ವರನನ್ನು ಮಾಡಿಸಿ ಯಳನಗರವನ್ನು ಸರ್ವಬಾಧಾ ಪರಿಹಾರವಾಗಿ ದಾನ ಮಾಡಿದಳೆಂದು ತಿಳಿದುಬರುತ್ತದೆ. ಇದರಿಂದಾಗಿ ಈಗಿನ ಭರತೇಶ್ವರ ದೇವಾಲಯವು ಪ್ರಾಯಶಃ ದೀವಬ್ಬೆ ಕಟ್ಟಿಸಿದ ನೊಳಂಬ ನಾರಾಯಣೇಶ್ವರನದಿರಬಹುದೆಂದು ಊಹಿಸಬಹುದು(ನೋಇದ:೧೧೭–೧೧೮).

ಕ್ರಿಸ್ತಶಕ ೯–೧೦ನೆಯ ಶತಮಾನದ ಅಂತ್ಯದವರೆಗೂ ಈ ಪ್ರದೇಶವು ನೊಳಂಬರ ಅಧೀನದಲ್ಲಿತ್ತು. ಆ ಸಂದರ್ಭದಲ್ಲಿ ಮಹೇಂದ್ರನ ರಾಜ್ಯಭಾರದಲ್ಲಿ ನಿಧಿಯಣ್ಣ ಮತ್ತು ಚಂಡಿಯಣ್ಣನೆಂಬಿಬ್ಬರು ಒಂದು ಬಸದಿಯನ್ನು ಕಟ್ಟಿಸಿದರೆಂದು ಇಲ್ಲಿಯ ಒಂದು ಶಾಸನದಲ್ಲಿ ಹೇಳಿದೆ. ಈ ಬಸದಿಯ ವಿಷಯ ಈಗ್ಗೆ ತಿಳಿಯದಾದರೂ ಇಲ್ಲಿಯ ಕಾಮಾಕ್ಷಿಯಮ್ಮ ಮತ್ತು ಮಲ್ಲಿಕಾರ್ಜುನ ದೇವಾಲಯಗಳು ನೊಳಂಬ ವಾಸ್ತು ಶಿಲ್ಪಶೈಲಿಯ ಉತ್ತಮ ನಮೂನೆಗಳು ಎಂದು ತಿಳಿದುಬರುತ್ತದೆ.

ಈ ಕಾಮಾಕ್ಷಿಯಮ್ಮ ದೇವಾಲಯವನ್ನು ಉನ್ನತವಾದ ತಳಹದಿಯ ಮೇಲೆ ಕಟ್ಟಲಾಗಿದ್ದು ನೊಳಂಬ ವಾಸ್ತುಶೈಲಿಯ ದೃಷ್ಟಿಯಿಂದ ಇದು ಅಪೂರ್ವವಾದುದು ಎಂದು ಚರಿತ್ರಕಾರರ ಅಭಿಮತವಾಗಿದೆ. ಈ ದೇವಾಲಯವು ಸಂಪೂರ್ಣವಾಗಿ ನೊಳಂಬ ವಾಸ್ತುಶಿಲ್ಪದಲ್ಲಿಯೇ ಎಲ್ಲೂ ಕಾಣದಂತಹ ಸುಂದರವಾದ ಮತ್ತು ವಿಶಿಷ್ಟವಾದ ಅಚ್ಚಪಟ್ಟೆಗಳಿಂದ ಕೂಡಿದೆ. ಅಧಿಷ್ಠಾನದ ತಳಪಟ್ಟೆಯು ಸ್ವಲ್ಪ ಹಿಂದಕ್ಕೆ ಸರಿದಿದ್ದು ಅದರಲ್ಲಿ ರಾಮಾಯಣದ ಉಬ್ಬುಶಿಲ್ಪವಿದೆ. ಅದರ ಮೇಲ್ಭಾಗದ ಅಚ್ಚಪಟ್ಟೆಯು ಮುಂದಕ್ಕೆ ಚಾಚಿಕೊಂಡಿದ್ದು, ಹೊರಚಾಚಿರುವ ಅದರ ಪ್ರತಿಯೊಂದು ಮೂಲೆಗಳಲ್ಲು ಸಣ್ಣಸಣ್ಣ ಆನೆಗಳ ಆಸರೆಯನ್ನು ಹೊಂದಿದೆ. ಇದರ ಮೇಲ್ಭಾಗದ ಅಚ್ಚಪಟ್ಟಯು ಬೋರಲು ಹಾಕಿದ ಕಮಲದ ಪುಷ್ಪದ ಅಲಂಕರಣವನ್ನು ಹೊಂದಿದೆ.

ಇದರ ಮೇಲ್ಭಾಗದಲ್ಲಿರುವ ಕುಮುದ ಪಟ್ಟಿಯು ಅರೆಗೋಳವಿಯ ಅಥವಾ ಬಳ್ಳಿಯ ಸುರುಳಿಗಳ ಅಲಂಕರಣವನ್ನು ಹೊಂದಿದೆ. ಮೇಲ್ಭಾಗದಲ್ಲಿರುವ ಕಪೋತಪಟ್ಟಿಯು ಸ್ವಲ್ಪ ವಿಚಿತ್ರವಾಗಿದೆ. ಈ ಪಟ್ಟಿಯು ದೇವಾಲಯದ ಸುತ್ತಲೂ ಒಂದೇ ರೀತಿಯದಾಗಿಲ್ಲ. ಇದು ಕೆಲವು ಕಡೆ ಕಪೋತದ ಆಕಾರದಲ್ಲಿಯೂ ಮತ್ತು ಕೆಲವು ಕಡೆ ತುದಿಗಳಲ್ಲಿ ಮಕರದ ತಲೆಗಳನ್ನುಳ್ಳ ಚೌಕಟ್ಟಾದ ಚಪ್ಪಡಿಯ ಆಕಾರವಾಗಿಯೂ ಇದ್ದು, ಕರ್ನಾಟಕ ಹಾಗೂ ತಮಿಳು ಶೈಲಿಗಳ ಸೂಕ್ತ ಸಂಯೋಜನೆಯ ಉತ್ತಮ ಉದಾಹರಣೆ ಎನ್ನಬಹುದು. ಈ ಪಟ್ಟಿಗೂ ಮತ್ತು ಇದರ ಕೆಳಗಿರುವ ಕುಮುದಪಟ್ಟಿಗೂ ಮಧ್ಯೆ ಇರುವ ಕಂಠಭಾಗದಲ್ಲಿ ವ್ಯಾಳದಸಾಲಿನ ಉಬ್ಬು ಶಿಲ್ಪವಿದೆ. ಈ ವ್ಯಾಳದಸಾಲು ಪುನಃ ದೇವಾಲಯದ ಸುತ್ತಲೂ ಇಲ್ಲ. ಈ ರೀತಿಯ ವೈವಿಧ್ಯತೆಯುಳ್ಳ ಅಧಿಷ್ಠಾನವನ್ನು ಬಿಟ್ಟರೆ ದೇವಾಲಯದ ಇತರ ಉತ್ತಮ ಅಂಶಗಳೆಂದರೆ ಇಲ್ಲಿಯ ಕಂಭಗಳು. ಈ ಕಂಭಗಳ ಮೇಲೆ ಹೇಳಿರುವ ಐದನೆಯ ವಿಧದವು. ಈ ಕಂಭಗಳೆಲ್ಲವೂ ನೊಳಂಬ ಶೈಲಿಯ ಉತ್ತಮ ಕೆತ್ತನೆಯ ನಿದರ್ಶನಗಳು. ಇವುಗಳಲ್ಲಿ ಭಾರತೀಯ ಪುರಾಣಕ್ಕೆ ಸಂಬಂಧಿಸಿದ ಸುಂದರ ಶಿಲ್ಪಗಳನ್ನು ಬಹಳ ಚಾತುರ್ಯದಿಂದ ಬಿಡಿಸಲಾಗಿದೆ. ವಿಷ್ಣುವಿನ ವಿವಿಧ ಅವತಾರಗಳು, ಶಿವಪುರಾಣಕ್ಕೆ ಸಂಬಂಧಿಸಿದ ಕಥೆಗಳು, ಬಳ್ಳಿಯ ಸುರುಳಿಗಳು, ನರ್ತಕರು, ನರ್ತಕಿಯರು ವಾದ್ಯವೃಂದದವರು, ಇತರ ದೇವತೆಗಳ ಶಿಲ್ಪಗಳು ಇತ್ಯಾದಿ ಈ ಕಂಭಗಳು ವಿವಿಧ ವಿಷಯಗಳ ಸಮುದಾಯವೇ ಆಗಿವೆ. ನವರಂಗದಲ್ಲಿನ ಮೇಲ್ಭಾವಣಿಯಲ್ಲಿರುವ ಶಿವ ಮತ್ತು ಅಷ್ಟದಿಕ್ಪಾಲಕರ ಶಿಲ್ಪ ಸುಂದರವಾಗಿವೆ. ಹೀಗೆ ಹಲವು ರೀತಿಯಲ್ಲಿ ಮತ್ತು ವೈವಿಧ್ಯತೆಯಲ್ಲಿ ಈ ನೊಳಂಬರ ದೇವಾಲಯಗಳನ್ನು ನಾವು ಸಾಕಷ್ಟು ಪ್ರಮಾಣದಲ್ಲಿ ಅಧ್ಯಯನವನ್ನು ಮಾಡಬಹುದಾಗಿದೆ. ಇನ್ನು ಹತ್ತು ಹಲವು ದೇವಾಲಯಗಳನ್ನು ಸಾಕಷ್ಟು ಪ್ರಮಾಣದಲ್ಲಿ ಅಚ್ಚುಕಟ್ಟಾಗಿ ನಿರ್ಮಿಸಿ ಕರ್ನಾಟಕದ ಚರಿತ್ರೆಗೆ ಅತ್ಯುತ್ತಮ ಕೊಡುಗೆಯನ್ನು ನೊಳಂಬರು ನೀಡಿದ್ದಾರೆ(ನೊಇದ:೧೨೦).

ನೊಳಂಬರ ಆಡಳಿತದ ಅವಧಿಯಲ್ಲಿ ಅತಿ ಹೆಚ್ಚು ಪ್ರಸಿದ್ಧಿಯನ್ನು ಪಡೆದದ್ದು ನೊಳಂಬ ನಟರಾಜ.

ಭಾವಾನುಭಾವಮೆಸೆವ ವಿ
ಭಾವಂ ಸಾತ್ವಿಕಮನೇಕ ಸಂಚಾರಿಗಳಂ
ಆವರಿಸಿ ತೋರ್ಪುದಿಂತಿವು
ಕೋವಿದೆ ಕೇಳವ ನಾಟ್ಯವೆಂಬ ಪೆಸರಂ ಪಡೆಗುಂ

ಎಂದು ಲಾಸ್ಯರಂಜನಂ(ಸಿಂಹಭೂಪಾಲವಿರಚಿತ ಲಾಸ್ಯರಂನಂ:೧೪) ಹೇಳುತ್ತಾನೆ. ಅಂದರೆ, ಭಾವ, ತಾಳ, ಲಯಯುಕ್ತವಾದ ಅಭಿನಯವೇ ನೃತ್ಯ. ಇದರಲ್ಲಿ ಎರಡು

ಬಗೆ: ತಾಂಡವ ಮತ್ತು ಲಾಸ್ಯ. ಉದ್ಧತ ನೃತ್ಯವೇ ತಾಂಡವ; ಸುಕುಮಾರ ನೃತ್ಯವೇ ಲಾಸ್ಯ. ನಟರಾಜ, ನಾಟ್ಯಾಚಾರ್ಯ ಎಂದು ಮುಂತಾಗಿ ವರ್ಣಿಸಲ್ಪಟ್ಟ ಆದಿನಟ ಶಿವನ ಬಹುತೇಕ ನೃತ್ಯಗಳೆಲ್ಲ ತಾಂಡವಗಳೆ(ಸಿಂಹಭೂಪಾಲವಿರಚಿತ ಲಾಸ್ಯರಂನಂ:೧೬- 'ತಂಡುವಿನಿಂದುದಯಿಸೆ ಕೇಳ್ ತಾಂಡವವೆಮದೆನಿಸಿತಿಳೆಗೆ'). ಮದರಾಸಿನ ಗೌರ್ನಮೆಂಟ್ ಮ್ಯೂಸಿಯಂನ ಮೂರ್ತಿಶಿಲ್ಪ ವಿಭಾಗದಲ್ಲಿ ಶೋಭಿಸುತ್ತಿರುವ ನೊಳಂಬ ನಟರಾಜನ ಒಂದು ಅಪೂರ್ವ ಶಿಲ್ಪ ಅತ್ಯಮೋಘವಾಗಿದೆ. ಈ ನಟರಾಜ 'ಪೃಷ್ಠಸ್ವಸಿಕ್ತ' ಭಂಗಿಯಲ್ಲಿ ನೃತ್ಯ ಮಾಡುವಂತೆ ಶಿಲ್ಪಿತವಾಗಿದೆ. ಪೃಷ್ಠಸ್ವಸ್ತಿಕ ಎಂಬುದರ ವರ್ಣನೆ ಹೀಗಿದೆ-

ಎರಡುತೋಳುದ್ವೇಷ್ಟದಿಂದೆತ್ತಪಕ್ರಾಂತ
ದುರಾಚಾರಿಯಂ ಮಾಡುತಪವೇಷ್ಟನಂಗೆಯ್ದು
ಚರಣಂಗಳಗ್ರಮಂ ಸೂಚೀಮುಖಂಮಾಡಿ ಸ್ವಸ್ತಿಕದೆ ನಿಂದು ಬಲಿದು
ಕರವೆರಡನಾಕ್ಷಣಂ ಸೂಚ್ಯಾಸ್ಯಮಂ ರಚಿಸಿ
ವರಸ್ವಸ್ತಿಕವನೆಯ್ದೆ ಮಾಡಿದಡೆ ಭರತದೊಳ್
ತರುಣಿಕೇಳವ ಪೃಷ್ಠಸ್ವಸ್ತಿಕವೆಂಬ ನಾಮದಿಂ ಕರಣಮೆನಿಸುವುದು॥

ಅಂದರೆ ಕೈಗಳನ್ನು ಉದ್ವೇಷ್ಟಮಾಡಿ ಮೇಲಕ್ಕೆತ್ತಿ ಪಶ್ರಾಂತಚಾರಿಯನ್ನು ಮಾಡಿ ಕೈಗಳನ್ನು ವೇಷ್ಟನಮಾಡಿ ಎದೆಯು ಹತ್ತಿರಕ್ಕೆ ತರುವಾಗ ಸೂಚೀಚರಣಗಳನ್ನು ಸ್ವಸ್ತಿಕದಂತಿರಿಸಿ ಕೈಗಳನ್ನು ಸೂಚೀಮುಖ ಹಸ್ತದಲ್ಲಿಸ್ವಸ್ತಕದಂತೆ ಹಿಡಿಯುವುದು(ಲಾಸ್ಯರಂಜನಂ ಪದ್ಯ:೮೨:೫೨)

ಈ ನಟರಾನ ಚಿತ್ರವು ಹೇಮಾವತಿಯಲ್ಲಿ ದೊರೆತ ಸುಂದರವಾದ ನೊಳಂಬ ಸ್ತಂಭದ ಮೇಲೆ ನಟರಾಜನ ಉಬ್ಬುಗೆತ್ತನೆಯ ಶಿಲ್ಪಗಳಿವೆ. ಈ ಸ್ತಂಭದ ನಾಲ್ಕು ಭುಜಗಳಲ್ಲಿ ಅಲಂಕಾರಿಕ ಕೆತ್ತನಗಳಿವೆ. ಇವುಗಳ ಮಧ್ಯೆಯಿರುವ ಎರಡು ಪಟ್ಟಿಕೆ ಅಥವಾ ಪುಟೀಪು(Panels)ಗಳಲ್ಲಿ ನಟರಾಜನ ನಾಟ್ಯಭಂಗಿಗಳು ಶಿಲ್ಪಿತವಾಗಿವೆ. ಒಂದು ಪಟ್ಟಿಕೆಯ ಮೇಲೆ ಬಹುಭುಜ ಶಿವನು ಅಪಸ್ಮಾರವನ್ನು ಮೆಟ್ಟುನಿಂತು 'ಚತುರ' ಭಂಗಿಯಲ್ಲಿ ನೃತ್ಯಮಾಡುತ್ತಿದ್ದಾನೆ. 'ಚತುರ' ಭಂಗಿಯ ವಿವರ ಹೀಗಿದೆ-

ಎಡಗಯ್ಯಪಲ್ಲವ(ಮಂ)
ಪಡೆದೆರ್ದೆಯಲ್ಲಿರ್ದುಲದಕ್ಕೆ ಚತುರಾಖ್ಯಮ
ನೊಡರ್ಚುತಲ್ಲುದ್ಘಟ್ಟಮ
ದೊಡವೆರ್ಚಿರೆ ಪಾದವೊಂದು ಕರಣಂ ಚತುರಂ।(ಲಾಸ್ಯರಂಜನಂ:೯೧)

ಅಂದರೆ ಎಡಗೈಯನ್ನು ಆ ಪಲ್ಲವ ಹಸ್ತದಲ್ಲೂ ಬಲಗೈಯನ್ನು ಚತುರಹಸ್ತದಲ್ಲೂ ಎದೆಯ ಹತ್ತಿರ ಹಿಡಿದು ಒಂದು ಕಾಲಿನಿಂದ ಉದ್ಘಟಿತಮಾಡುವುದು(ನೋಇದ:೨೯೫) ಇನ್ನೊಂದು ಪಟ್ಟಿಕೆಯಲ್ಲಿ ನಟರಾಜನು ಸಂಗೀತಗೋಷ್ಠಿಯ ಮಧ್ಯೆ ನಿಂತು ನೃತ್ಯಮಾಡುತ್ತಿದ್ದಾನೆ. ಬಹುಭುಜ ನಟರಾಜನ ಈ ಉಬ್ಬುಗೆತ್ತನೆ ಶಿಲ್ಪದಲ್ಲಿ ಔತ್ತರೇಯ ಹಾಗೂ ದಾಕ್ಷಿಣಾತ್ಯ ಸಂಪ್ರದಾಯಗಳು ಮೇಳೈಸಿವೆ. ಈ ಎರಡೂ ಪಟ್ಟಿಕೆಗಳ ಮೇಲ್ಭಾಗದಲ್ಲಿ ಮತ್ತೊಂದು ಅಲಂಕಾರಿಕಪಟ್ಟಿಕೆ(band)ಯನ್ನು ಕೆತ್ತಲಾಗಿದೆ. ಅಲ್ಲಿಪರಸ್ಪರ ಆಲಿಂಗನದಲ್ಲಿರುವ ಮಿಥುನಶಿಲ್ಪ ಹಾಗೂ ಶಿವನ ಪಾದಾಘಾತಕ್ಕೊಳಗಾದ ಅಪಸ್ಮಾರನ ಶಿಲ್ಪ ಕಂಡುಬರುವವು. ಇಲ್ಲಿ ಈ ಅಪಸ್ಮಾರನ ಸೋಮಸ್ಕಂದಸ್ವರೂಪ ಅಪೂರ್ವವೆಂದೇ ಹೇಳಬೇಕು. ಹೀಗೆ ನಟರಾಜನ ಒಟ್ಟು ನಿರೂಪಣೆಯು ಶೃಂಗಾರ ಪ್ರಧಾನವಾಗಿರುವುದರಿಂದ ರಂಜನೀಯ ಹಾಗೂ ಸ್ವಾರಸ್ಯಕರವಾಗಿದೆ. ಜೊತೆಗೆ ನೊಳಂಬರ ಚರಿತ್ರೆಗೆ ಒಂದು ವೋಗವನ್ನು ನೀಡುವುದರ ಮೂಲಕ ಅರ್ಥಪೂರ್ಣವಾದ ಅವರ ವಾಸ್ತು-ಶಿಲ್ಪ ಕಲೆಗೆ ಐತಿಹಾಸಿಕ ಚೌಕಟ್ಟನ್ನು ಹಾಕಿದಂತಾಗಿದೆ.

ನೊಳಂಬರ ನಟರಾಜ ಶಿಲ್ಪಗಳು, ಗ್ರಾನೈಟ್ ಇಲ್ಲವೆ ಮೃದು ಅಗ್ನಿ ಶಿಲೆಗಳಲ್ಲಿ ಕಂಡರಿಸಿದ ಶಿಲ್ಪಗಳೆಲ್ಲವೂ ಮನೋಜ್ಞವಾಗಿವೆ. ಆದರೆ ಇವುಗಳಲ್ಲಿ ದುಂಡು ಶಿಲ್ಪಗಳಿಗಿಂತ ಉಬ್ಬುಗೆತ್ತನೆಯ ಶಿಲ್ಪಗಳೇ ಹೆಚ್ಚಾಗಿರುವುದರಿಂದ ಮೂರ್ತಿಶಿಲ್ಪದ ತ್ರಿಪರಿಮಾಣ ಸೌಂದರ್ಯ(Three-dimensional effect) ಏಕಪ್ರಕಾರವಾಗಿ ಮೂಡಿಬಂದಿಲ್ಲ. ಅದೇನಿದ್ದರೂ ನೊಳಂಬ ವಾಸ್ತುಗಿಂತ ಶಿಲ್ಪದಲ್ಲಿ ಅದರಲ್ಲೂ ನಟರಾಜ, ಉಮಾಮಹೇಶ್ವರ ಮುಂತಾದ ಪ್ರಮುಖ ಶಿಲ್ಪಗಳು ಅವರದೆ ಆದ ಸ್ವಂತಿಕೆ, ಕಲಾಪ್ರೌಢಿಮೆ ಹಾಗೂ ಲಾವಣ್ಯವಿಲ್ಲದಿಲ್ಲ. ಅಂತೆಯೇ ಕರ್ನಾಟಕದ ಮೂರ್ತಿಶಿಲ್ಪಗಳ ಸಮೀಕ್ಷೆಯಲ್ಲಿ 'ನೊಳಂಬ ಶಿಲ್ಪಶೈಲಿ'ಯ ಸ್ವಾರಸ್ಯವನ್ನು ಅಲ್ಲಗಳೆಯುವಂತಿಲ್ಲ ಎಂಬುದಾಗಿ ರಘುನಾಥಭಟ್ ಎಚ್.ಆರ್. ಅವರು ಅಭಿಪ್ರಾಯ ಪಡುತ್ತಾರೆ(ನೋಇದ:೯೪).

ನೊಳಂಬರ ಆಡಳಿತದವಧಿಯಲ್ಲಿ ಒಟ್ಟಾರೆಯಾಗಿ ಹಲವು ಶೈವ ದೇವಾಲಯಗಳು ನಿರ್ಮಾಣಗೊಂಡಿವೆ. ಸಾಮಾನ್ಯವಾಗಿ ಅವರ ದೇವಾಲಯಗಳನ್ನು ಈ ಕೆಳಗಿನಂತೆ ನೋಡಬಹುದಾಗಿದೆ. ಕೋಲಾರ ಜಿಲ್ಲೆಯ ಚಿಕ್ಕಬಳ್ಳಾಪುರ ತಾಲ್ಲೂಕಿನ ನಂದಿಗ್ರಾಮದಲ್ಲಿ ಭೋಗನಂದಿಶ್ವರ ದೇವಾಲಯ. ಅರುಣಾಚಲೇಶ್ವರ ದೇವಾಲಯ, ಹೇಮಾವತಿಯ ದೊಡ್ಡಪ್ಪ ದೇವಾಲಯದ ಆವರಣದಲ್ಲಿರುವ ದೊಡ್ಡೇಶ್ವರ, ಸಿದ್ದೇಶ್ವರ, ಮಲ್ಲೇಶ್ವರ, ವಿರೂಪಾಕ್ಷ, ಅಕ್ಕತಂಗಿ ಮುಂತಾದ ದೇವಾಲಯಗಳು. ಆವನಿಯಲ್ಲಿರುವ ಲಕ್ಷಣೇಶ್ವರ, ಭರತೇಶ್ವರ, ಶತ್ರುಘ್ನೇಶ್ವರ ಮುಂತಾದ ದೇವಾಲಯಗಳು ನೊಳಂಬರ ಕಾಲಕ್ಕೆ ಸೇರುತ್ತವೆ. ನೊಣವಿನಕೆರೆಯಲ್ಲಿರುವ ಗರ್ಗೇಶ್ವರ ಮತ್ತು ನೊಳಂಬೇಶ್ವರ ದೇವಾಲಯಗಳು. ಅರಳಗುಪ್ಪೆಯಲ್ಲಿರುವ ಕಲ್ಲೇಶ್ವರ

ದೇವಾಲಯ. ಕಂಪಿಲಿಯ ಸೋಮೇಶ್ವರ ದೇವಾಲಯ, ಮಲ್ಲಯ್ಯನಗುಡ್ಡದ ಮೈಲಾರ ದೇವಾಲಯ. ಹಂಪಿಯಲ್ಲಿನ ವಿರೂಪಾಕ್ಷ ದೇವಾಲಯದ ಪಕ್ಕದಲ್ಲಿರುವ ಮನ್ಮುಖಕುಂಡದ ಪಶ್ಚಿಮಕ್ಕಿರುವ ದೇವಾಲಯ ಸಮುಚ್ಚಯದಲ್ಲಿ ಎರಡು ದೇವಾಲಯಗಳು ಜೊತೆಗೆ ಕಂಪಿಲಿಯ ನೊಳಂಬರ ಕಾಲದ್ದೆನ್ನಬಹುದಾದ ದುರ್ಗಾ, ನಾಗೇಶ್ವರ ದೇವಾಲಯಗಳು. ಬಾಗಳಿಯ ಕಲ್ಲೇಶ್ವರ ದೇವಾಲಯ, ಗಂಗಾವತಿಯ ಸಮೀಪದ ದೇವಘಾತದ ಬಳಿಯಿರುವ ವಿಪ್ರಗ್ರಾಮದಲ್ಲಿ ಅಮೃತೇಶ್ವರ ದೇವಾಲಯ. ಶಂಕರಲಿಂಗನ ಗುಡಿ ಮುಂತಾದವುಗಳು.

ನೊಳಂಬರ ಆರಾಧ್ಯದೈವ ಸಿದ್ಧೇಶ್ವರ. ಈ ಸಿದ್ದೇಶ್ವರನನ್ನು ಹೇಮಾವತಿ ಅಥವಾ ಹೆಂಜೇರಿನ ಸ್ಥಳೀಯರು ಹೆಂಜೇರಪ್ಪ, ಹೆಂಜೇರು ಸಿದ್ಧಪ್ಪನೆಂದೇ ಕರೆಯುತ್ತಾರೆ. ರಾಜಧಾನಿ ಬದಲಾವಣೆಯ ತರುವಾಯ ಕಂಪಿಲಿಯಲ್ಲಿಯೂ ಶೈವ ದೇವಾಲಯವನ್ನು ನಿರ್ಮಿಸುವುದರ ಮೂಲಕ ತಮ್ಮ ಸಂಪ್ರದಾಯವನ್ನು ಮುಂದುವರೆಸಿರುವುದು ಕಂಡು ಬರುತ್ತದೆ. ಕ್ರಿಸ್ತಶಕ ೧೧೧೨ರ ಶಾಸನವೊಂದರಲ್ಲಿ ನೊಳಂಬ ಜಗದೇಕಮಲ್ಲ ಉದಯಾದಿತ್ಯನ ಆಳ್ವಿಕೆಯ ಕಾಲದಲ್ಲಿ ಈಗಿನ ಮಲ್ಲಯ್ಯನಗುಡ್ಡದಲ್ಲಿ ಮೈಲಾರ ದೇವಾಲಯವನ್ನು ಕಟ್ಟಿಸಿ ಅದಕ್ಕೆ ಹಗರಿ ನದಿಯ ದಂಡೆಯಲ್ಲಿದ್ದ ಸಿರಯನೂರು ಎಂಬ ಗ್ರಾಮವನ್ನು ದಾನ ನೀಡಿದ ಉಲ್ಲೇಖವನ್ನು ಅಲ್ಲಿಯ ಒಂದು ಶಾಸನವು ನೀಡುತ್ತದೆ.

ಸ್ವಸ್ತಿ ಸಮಸ್ತ ಭುವನಾಶ್ರಯ ಪ್ರಿಥವಿವಲ್ಲಭ ಮಹಾರಾಜಾಧಿ ರಾಜಪರಮೇಶ್ವರ ಪರಮಭಟ್ಟಾರಕಮ ಸತ್ಯಾಶ್ರಯ ಕುಳತಿಳಕ ಚಾಳುಕ್ಯಾಭರಣಂ ಶ್ರೀಮಜ್ಜಗದೇಕಮಲ್ಲದೇವರ ರಾಜ್ಯ ಮುತ್ತರೋತ್ತರಾಭಿವೃದ್ದಿ ಸಲುತ್ತಿರೆ ಸಮಧಿಗತ ಪಂಚಮಹಾಶಬ್ಧ ಪಲ್ಲವಾನ್ವಯ ಶ್ರೀ ಪ್ರಥುವಿವಲ್ಲಭ ಪಲ್ಲವ ಕುಳತಿಳಕನಮೋಘನೇಕವಾಕ್ಯ ಕಾಂಚಿಪುರವರೇಶ್ವರ ಶ್ರೀಮಜ್ಜಗದೇಕಮಲ್ಲ ನೊಱಂಬಪಲ್ಲವ ಪೆರ್ಮ್ಮಾನಡಿಗಳ್ ನೊಱಂಬವಾಡಿ ಮೂವತ್ತಿರ್ಛಾಸಿರಮುಮಂ ಕದಂಬಳಿಕೆ ಸಾಯಿರಮುಮಂ ಕೋಗಳಿ ಐನೂಱುಮಂ ಬಲ್ಲಕುಂದೆ ಮೂನೂಱುಮಂ ಕುದಿಯಪರವಿ ಯಪ್ಪತ್ತುಮಂ ಕರಿವಿಡಿ ಮೂವತ್ತುಮಂ ದುಷ್ಟನಿಗ್ರಹ ವಿಶಿಷ್ಟಪ್ರತಿಪಾಳನಂಗೆಯ್ವುತ್ತುವಿರೆ ಸಕವರ್ಷ ೯೩೯ನೆಯ ಪಿಂಗಳಸಂವತ್ಸರದ ಚೈತ್ರ ಬಹುಳ ೧೩ ಬೃಹಸ್ಪತಿವಾರದಂದು ಶ್ರೀಮತ್ಮೈಲಾರದ ದೇವಜ್ಗೆ ಬಲ್ಲಕುನ್ದೆ ಮುನೂಱಱೊಳಗಣ ಪಗರೆ ತಡಿಯ ಸಱಿಯನೂರಂ ಸರ್ವ್ವಾಭ್ಯನ್ತ ಸಿದ್ಧಿಯಾಗೆ ಕೊಟ್ಟರಿಧರ್ಮ್ಮಮಂ ಪ್ರತಿಪಾಳಿಸಿದ...ಯಾ ನೆಯಲಿಲೊಳು ವಿರ್ವ್ವಸ್ಸಿನ...ಗದಾಹ ಸಾವಿರ ಬ್ರಾಹ್ಮಣರ್ಗ್ಗೆ ಸಾಯಿರ ಕವಿಲೆಯುಮಂ ಸಾಯಿರ ಗದ್ಯಾನಹೊನ್ನಮಂ ದಾನಂಗೊಟ್ಟ ಪಲಮಕ್ಕುಂ ಈ ಧರ್ಮ್ಮಮಂ ನಱಿದಾತಂಗೆ ಈ ಪೇಟ್ಟಿತೀರ್ಥಂಗಳೊ... ಹೀಗೆ ಹತ್ತು ಹಲವು ಶಾಸನಗಳು ಆಕರಗಳನ್ನು ಒದಗಿಸುತ್ತವೆ.

ಕರ್ನಾಟಕದಲ್ಲಿ ಅತಿ ಪ್ರಾಚೀನವೂ ಹಾಗೂ ಪ್ರಮುಖವಾಗಿರುವ ಮೈಲಾರ ದೇವಾಲಯಗಳಲ್ಲಿ ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿ ತಾಲ್ಲೂಕಿನಲ್ಲಿರುವ ಹಿರೇಮೈಲಾರ ಕ್ಷೇತ್ರವೂ ಒಂದಾಗಿದೆ. ತುಂಗಭದ್ರ ನದಿ ಇದನ್ನು ಸುತ್ತು ಹಾಕಿದೆ. ಈ ಹಿರೇಮೈಲಾರ ಕ್ಷೇತ್ರದ ಮುಖ್ಯ ದೇವಾಲಯದ ರಂಗಮಂಟಪ ಎಡದ ಕಂಬದ ಮೇಲೆ ಕ್ರಿಸ್ತಶಕ ೧೪೩೬ನೆಯ ವರ್ಷದ ಶಾಸನದಲ್ಲಿ 'ಉಂಗುಲಾಲನ ಶ್ರೀನ್ಮಹಾಮಯಿಲಾರ ದೇವರ' ಎಂಬ ಉಲ್ಲೇಖವಿದೆ. ಈ ಕ್ಷೇತ್ರವನ್ನು ಹಿರೇಮೈಲಾರ, ಆದಿಮೈಲಾರ, ಮಣ್‌ಮೈಲಾರ ಅಥವಾ ಉಂಗ್ಲಾರಕ್ಷೇತ್ರವೆಂದೂ ಕರೆಯುತ್ತಾರೆ. ಜೊತೆಗೆ ಮಲ್ಲಾರಿ, ಮಾರ್ತಾಂಡ ಭೈರವ, ಖಂಡೋಬಾ ಮುಂತಾದ ಹೆಸರುಗಳಿಂದ ಕರೆದಿರುವುದುಂಟು. ಸಾಮಾನ್ಯವಾಗಿ ಕರ್ನಾಟಕದ ತುಂಬೆಲ್ಲಾ ವ್ಯಾಪಿಸಿರುವ ಈ ದೇವರ ಕ್ಷೇತ್ರಗಳಲ್ಲಿ ಇದೇ ಅತ್ಯಂತ ಪ್ರಾಚೀನವಾದ ಮತ್ತು ಮೂಲ ಮೈಲಾರ ಎಂಬ ನಂಬಿಕೆ ಕರ್ನಾಟಕದ ಉದ್ದಗಲಕ್ಕೂ ಹರಡಿದೆ.

ಈ ಮೈಲಾರನ ಪೂಜೆ ಉಗಮ ನೊಳಂಬ ಕಾಲದಲ್ಲಿ ಆರಂಭವಾಗಿ ನೊಳಂಬರ ರಾಜಕೀಯ ಸ್ಥಿತ್ಯಂತರಗಳೊಂದಿಗೆ ಕರ್ನಾಟಕದ ಉದ್ದಗಲಕ್ಕೆ ಹರಡಿದ್ದು, ಹೇಮಾವತಿಯಿಂದ ಕಂಪಿಲಿ ಮತ್ತು ಅಲ್ಲಿಂದ ಬೇರೆ ಬೇರೆ ಸ್ಥಳಗಳಿಗೆ ನೊಳಂಬರು ರಾಜರಾಗಿ, ಅಧಿಕಾರಿಗಳಾಗಿ ವಲಸೆ ಹೋದಾಗ ತಮ್ಮಿಷ್ಟದೈವವನ್ನು ತಾವು ನೆಲೆಗೊಂಡ ಸ್ಥಳಗಳಲ್ಲಿ ಪ್ರತಿಷ್ಠಾಪಿಸಿರಬಹುದು. ಅವೇ ಸಂಪ್ರದಾಯಕ್ಕೆ ಸೇರಿದ ಬ್ರಾಹ್ಮಣ ಕುಟುಂಬಗಳು ಮತ್ತು ಒಕ್ಕಲುಗಳು ಇದ್ದು, ಈ ಕುಟುಂಬಗಳ ವಲಸೆಯೊಂದಿಗೆ ಮೈಲಾರ ಸಂಪ್ರದಾಯ ರಾಜ್ಯದ ಅನ್ಯ ಸ್ಥಳಗಳಲ್ಲಿ ಹಬ್ಬಲು ಕಾರಣೀಭೂತವಾಗಿರುವ ಸಾಧ್ಯತೆಯಿದೆ.

ಹೀಗೆ ನೊಳಂಬರ ಸಾಂಸ್ಕೃತಿಕ ಬದುಕು ತಮಿಳುನಾಡಿನ ಪಲ್ಲವರಿಂದ ರೂಪಗೊಂಡು ಕನ್ನಡನಾಡಿನಲ್ಲಿನ ಗಂಗರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು ಮತ್ತು ಹೊಯ್ಸಳರೊಂದಿಗೆ ಸಮ್ಮಿಳಿತಗೊಂಡು ಹಲವು ವಿಭಿನ್ನ ಧರ್ಮಗಳೊಂದಿಗೆ ಬೆರೆತು ಹಲವು ಮಗ್ಗುಲುಗಳಲ್ಲಿ ತೆರೆದುಕೊಂಡಿದೆ. ಮೂಲತಃ ಪಶುಪಾಲನೆ ಮತ್ತು ಕೃಷಿಕರಾಗಿರುವ ನೊಳಂಬರು ತಮ್ಮ ರಾಜಕೀಯ ಜೀವನದುದ್ದಕ್ಕೂ ಹಲವು ರೀತಿಯ ಏಳು ಬೀಳುಗಳನ್ನು ಕಂಡಿದ್ದಾರೆ. ಹಲವು ಸಂಸ್ಕೃತಿಗಳನ್ನು ನೋಡಿದ್ದಾರೆ. ಅವುಗಳಿಂದ ಭಿನ್ನ ಆಚರಣಾ ಕ್ರಮಗಳನ್ನು ಎರವಲು ಪಡೆದು ತಮ್ಮದೇ ಆದ ಒಂದು ಸಾಂಸ್ಕೃತಿಕ ಜೀವನ ಕ್ರಮವನ್ನು ರೂಪಿಸಿಕೊಂಡು ಕರ್ನಾಟಕ ಚರಿತ್ರೆಯಲ್ಲಿ ವಿರಾಜಮಾನರಾಗಿದ್ದಾರೆ.

ಪರಾಮರ್ಶನ ಕೃತಿಗಳು

ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೧(ಬಳ್ಳಾರಿ)

ಜಯಣ್ಣ ಕರಿಯಣ್ಣ, ಎಚ್., *ನೊಳಂಬರ ಶಾಸನಗಳ ಸಾಂಸ್ಕೃತಿಕ ಅಧ್ಯಯನ* (ಧಾರವಾಡ: ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ೨೦೦೮

,,,,,*ಶಾಸನಗಳಲ್ಲಿ ದಾನದತ್ತಿಗಳು* (ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು, ೨೦೧೦

ಬಸವರಾಜು, ಕೆ ಆರ್(ಸಂ)., *ನೊಳಂಬರ ಇತಿಹಾಸ ದರ್ಶನ* (ಬೆಂಗಳೂರು: ನೊಳಂಬ ವೀರಶೈವ ಸಂಘ, ೨೦೦೫

ಚನ್ನಬಸವಯ್ಯ, ವೈ ಆರ್., ನೊಳಂಬವಾಣಿ: ಸಂಚಿಕೆ ೪: ಸಂಪುಟ ೩:(ಬೆಂಗಳೂರು: ವೀರಶೈವ ಸಂಘ, ೨೦೧೪)

ಮೈಸೂರ್ ಆರ್ಕಿಯೋಲೋಜಿಕಲ್ ರಿಪೋರ್ಟ್ಸ್–೧೯೩೯

Annual Report: 1929 (New Delhi: A S I: reprint 1986)

Epigraphy Carnatica Vol, 7, 9(1), 10, 11, 12 (Mysore : Mysore University,

Retrieved 2008-03-07)

South Indian Inscriptions Vol. VI (New Delhi: A S I: Miscellaneous Inscriptions in Tamil, Telugu and Kannada ,1968)

South Indian Inscriptions Vol. IX Pt. I (New Delhi: A S I: Miscellaneous Inscriptions in Kannada, 1968)

South Indian Inscriptions Vol. XI (New Delhi: A S I: Bombay-Karnataka Inscriptions, 1968)

South Indian Inscriptions Vol. XII (New Delhi: A S I: Pallava Inscriptions,1968)

ಅಧ್ಯಾಯ ನಾಲ್ಕು

ನೊಳಂಬರ ಕುಲಗಳು ಮತ್ತು ಸಾಂಪ್ರದಾಯಕ ಆಚರಣೆಗಳು

ಅಧ್ಯಾಯ ನಾಲ್ಕು

ನೊಳಂಬರ ಕುಲಗಳು ಮತ್ತು ಸಾಂಪ್ರದಾಯಕ ಆಚರಣೆಗಳು

ಪ್ರಸ್ತುತ ಸಮಾಜವು ಅನೇಕ ಸಾಮಾಜಿಕ ಪಿಡುಗುಗಳಿಗೆ ತುತ್ತಾಗುತ್ತಿದೆ. ಜಾತಿ, ವರ್ಗ, ವರ್ಣ, ಕುಲ ಹೀಗೆ ಹಲವಾರು ವೈರುದ್ಯಯಗಳ ಮಧ್ಯೆ ವ್ಯಕ್ತಿ, ಯಾವ ಜಾತಿ/ಕುಲದಲ್ಲಿ ಜನಿಸುತ್ತಾನೆಯೋ ವ್ಯಕ್ತಿಯು ಸಮಾಜದಲ್ಲಿ ಆ ರೀತಿಯ ಅಂತಸ್ತನ್ನು ಪಡೆದುಕೊಳ್ಳುತ್ತಾನೆ. ಆದರೆ ಹುಟ್ಟುವಾಗ ಪ್ರತಿಯೊಬ್ಬ ವ್ಯಕ್ತಿಯು ಕೂಡ ಶೂದ್ರನಾಗಿಯೇ ಹುಟ್ಟುತ್ತಾನೆ. ಅವನು ಬೆಳೆದಂತೆಲ್ಲ ಅವನಿಗೆ ಸಿಗುವಂತಹ ಸಂಸ್ಕಾರ, ಶಿಕ್ಷಣ, ಮಾಡುವ ಕರ್ಮ ಸಾಮಾಜಿಕ ಪರಿಸರಗಳಿಂದ ಅವನು ಉಚ್ಚ ಅಥವಾ ನೀಚನಾಗುತ್ತಾನೆ. ಈ ರೀತಿಯಾಗಿ ಒಂದು ಸಂಸ್ಕೃತಿಯು ನಿರ್ಧಿಷ್ಟ ಪರಿಸರದ ಚೌಕಟ್ಟಿನಲ್ಲಿಯೇ ರೂಪುಗೊಳ್ಳುತ್ತದೆ. ಇಂತಹ ಸಂಸ್ಕೃತಿಯ ವ್ಯಾಪ್ತಿಯ ಒಳಗೆ ಕುಲ–ಗೋತ್ರ ಬೆಡಗುಗಳು ಜನ್ಮ ತಳೆಯುತ್ತವೆ. ಆದರೆ ಈ ನಾಲ್ಕು ಪದಗಳು ಮೇಲ್ನೋಟಕ್ಕೆ ಬೇರೆ ಬೇರೆಯಾಗಿ ಕಂಡುಬಂದರು ಒಂದೇ ಅರ್ಥವನ್ನು ಕೊಡುವ ಅಥವಾ ಸೂಚಿಸುವ ಪದಗಳಾಗಿವೆ. ಇಂತಹ ಸಂದರ್ಭದಲ್ಲಿ ನಾವು ಒಂದು ಸಮುದಾಯದ ಕುಲಗಳನ್ನು ಸಾಮಾಜಿಕ ದರ್ಶನ ಹಾಗೂ ವರ್ತಮಾನದ ಸಂಘರ್ಷಗಳ ನೆಲೆಯಲ್ಲಿ ನೋಡುವ ಅವಶ್ಯಕತೆ ಇದೆ.

ಮನುಷ್ಯ ಸಮಾಜ ಮತ್ತು ಪ್ರಾಣಿ ಸಮಾಜಗಳ ನಡುವೆ ಕೆಲವು ಸಾಮಾನ್ಯಂಶಗಳು ಇವೆಯಾದರೂ, ಸಂಸ್ಕೃತಿ ಮತ್ತು ಸಂಪ್ರದಾಯದ ವಿಷಯಕ್ಕೆ ಬಂದಾಗ ಎರಡೂ ಪ್ರತ್ಯೇಕವಾಗಿ ನಿಲ್ಲುತ್ತವೆ. ಸಂಸ್ಕೃತಿ–ಸಂಪ್ರದಾಯಗಳು ಸಮಾಜದ ಅಂಗವಾದರೂ ಇದು ಪ್ರಾಣಿ ಸಮಾಜಕ್ಕೆ

ಅನ್ವಯಿಸುವುದಿಲ್ಲವೆಂಬ ಅಂಶವನ್ನು ಸಂಸ್ಕೃತಿ ವಿಶ್ಲೇಷಕರು ಒಪ್ಪಿದ್ದಾರೆ. ಈ ಅಭಿಪ್ರಾಯಕ್ಕೆ ಪೂರಕವಾಗಿ ಮಾನವ ಶಾಸ್ತ್ರಜ್ಞ, Zuckerman ಅವರ ವ್ಯಾಖ್ಯಾನ ಹೀಗಿದೆ:

The effective stimuli involved in the behavior of animals are mainly inherent in immediate physical event, which one in no way the by products of both activities of prexisting animals of the same species, man, on the other hand, amasses experience through speech, and the effective stimuli underlying human behavior are largely products of the lives of pre-existing people. The environment with in which human beings live is mainly the accumulation of activities of previous generations, culture in this sence, is an essentially human phenomenon. Herskovis ರಚಿತ Cultural Anthropology ಯಲ್ಲಿ ಉಲ್ಲೇಖಿತ(ಸಿದ್ಧಿಯರ ಸಂಸ್ಕೃತಿ: ಬೋರಲಿಂಗಯ್ಯ ಹಿ.ಚಿ.)

ಮಾನವನ ಸಂಸ್ಕೃತಿ-ಸಂಪ್ರದಾಯಗಳಲ್ಲಿ ವ್ಯಕ್ತಿಗಳ ಜೀವನ, ವಿಧಾನ ಮತ್ತು ಸಾಮಾಜಿಕ ನೆಲೆಗಳು ಒದಗಿಸಿಕೊಡುವ ವರ್ಗನೆಲೆ ಮುಖ್ಯವಾಗಿದ್ದು, ಸಂಸ್ಕೃತಿಯೆನ್ನುವುದು ವ್ಯಕ್ತಿಗಿಂತ ಸಮಾಜದ ಭಾಗವಾಗಿ, ಸಂಸ್ಕೃತಿಯ ಒಂದು ಘಟಕವಾಗಿ, ಕುಟುಂಬದ ಒಳಗು-ಹೊರಗಾಗುವ ಒಡನಾಟ ಮತ್ತು ಹೋರಾಟಗಳಲ್ಲಿ ತನ್ನ ಸಂಪ್ರದಾಯವನ್ನು ಉಳಿಸಿಕೊಂಡು ಬಂದಿದಾನೆ. ಇಲ್ಲಿ ಮನುಷ್ಯನೊಬ್ಬ ಬಡವನೊ, ಸಿರಿವಂತನೋ, ಉಚ್ಚ ಕುಲ ಅಥವಾ ಕೆಳಜಾತಿಯೋ, ಯಾವುದೂ ಮುಖ್ಯವಲ್ಲ ಸಂಪ್ರದಾಯ ಎಂಬ ಪರಿಕಲ್ಪನೆಗೆ ಮೇಲು-ಕೀಳು ಎಂಬ ತಾರತಮ್ಯವಿಲ್ಲ. ಜನರ ಜೀವನ ವಿಧಾನವೇ ಸಂಸ್ಕೃತಿ ಎಂದಾದ ಮೇಲೆ ಸಂಪ್ರದಾಯಗಳು ಅವರ ಅವರ ಇಚ್ಛೆಗೆ ಅನುಗುಣವಾಗಿರುತ್ತವೆ. ಸಂಸ್ಕೃತಿಯು ಹೇಗೆ ಒಂದೇ ತೆರನಲ್ಲವೋ ಅದೇ ರೀತಿ ಸಂಪ್ರದಾಯವು ಒಂದೇ ವಿನ್ಯಾಸದ್ದಲ್ಲ. ಒಂದೊಂದು ಸಮುದಾಯದಿಂದ ಮತ್ತೊಂದು ಸಮುದಾಯಕ್ಕೆ ಭಿನ್ನತೆಯನ್ನು ಪಡೆದುಕೊಂಡಿರುತ್ತದೆ. ಹಾಗೆಯೇ ಅದು ಪ್ರಾಚೀನ ಪರಂಪರೆಯೊಂದಿಗೆ ಸಮುದಾಯದೊಂದಿಗೆ ರೂಪುಗೊಂಡು ಬಂದಿದೆ.

ಪ್ರತಿಯೊಂದು ಜಾತಿಗಳ ಪ್ರಾಚೀನತೆಯನ್ನು ತಿಳಿಯಲು ಆಯಾ ಜಾತಿಯ ಕುಲ-ಗೋತ್ರ ಮತ್ತು ಸೂತ್ರ ಬೆಡಗುಗಳು ಯಾವ ಉದ್ದೇಶಕ್ಕಾಗಿ ಜಾರಿಗೆ ಬಂದವೋ ಎಂಬುದನ್ನು ಅರ್ಥ ಮಾಡಿಕೊಳ್ಳದ ಇಂದಿನವರು ಅವುಗಳಿಗೆ ಹೆಚ್ಚಿನ ಮಹತ್ವ ನೀಡುತ್ತಿಲ್ಲ. ಆದರೂ ಕೂಡ ಅವರವರ ವೈಯಕ್ತಿಕ ಪ್ರತಿಷ್ಠೆಗಾಗಿ ತಮ್ಮ ತಮ್ಮ ಜಾತಿ ಕುಲ ಗೋತ್ರಗಳ ಬಗ್ಗೆ ಮೇಲು-ಕೀಳೆಂಬ ಭಾವನೆ ಇದೆ.

'ರಕ್ತ ಸಂಬಧದಲ್ಲಿ ವಿವಾಹ ಜರುಗುವುದರಿಂದ ಹುಟ್ಟುವ ಮಕ್ಕಳಲ್ಲಿ ನಿರೋಧಕ ಶಕ್ತಿಯ ಕೊರತೆಯಿಂದ ಅನುವಂಶಿಕ ರೋಗ, ಬುದ್ಧಿಹೀನತೆ, ಅಂಗಹೀನತೆ ಹಾಗೂ ಅಶಕ್ತ ಮಕ್ಕಳ ಜನ್ಮಕ್ಕೆ ಕಾರಣವಾಗುತ್ತದೆ. ಅನುವಂಶಿಕವಾದ ರೋಗಗಳನ್ನು ಪಡೆದುಕೊಂಡು ಜನಿಸಿದ ಮಕ್ಕಳ ರೋಗಗಳಿಗೆ ಸುಲಭ ಚಿಕಿತ್ಸೆ ಅಸಾಧ್ಯ. ಇಂದಿನ ಆರೋಗ್ಯ ನಿಯಮಗಳನ್ನು ಸುಲಭವಾಗಿ ನಂಬುತ್ತೇವೆ ಆದರೆ ಇದನ್ನೆ ಸಾವಿರಾರು ವರ್ಷಗಳ ಹಿಂದೆ ಹೇಳಿದ ಪ್ರಾಚೀನರ ಸತ್ಯವಾದವನ್ನು ನಂಬದೇ ಅದನ್ನು ಗೊಡ್ಡು ಸಂಪ್ರದಾಯ ಎಂದು ಮೂಗು ಮುರಿಯುತ್ತೇವೆ. ಅದು ಅವೈಜ್ಞಾನಿಕವಾದುದು ಎಂದು ದೂರುತ್ತೇವೆ. ಆದರೆ ವೈಜ್ಞಾನಿಕ ಸತ್ಯವು ಸಾವಿರಾರು ವರ್ಷಗಳ ಹಿಂದೆಯೇ ಜನಜನಿತವಾಗಿರುವುದು ಕಂಡು ಬಂದಿದೆ'(ಕುರುಬರ ಹೆಜ್ಜೆಗಳು:೧೫೦) ಈ ರೀತಿಯಾಗಿ ಸಮಾಜದಲ್ಲಿ ಸಾವಿರಾರು ಜಾತಿ-ಉಪಜಾತಿ ಕುಲ ಗೋತ್ರಗಳಿಂದ ಕೂಡಿದ ಗೊಂದಲದ ಗೂಡಿನಂತೆ ಕಂಡು ಬರುತ್ತದೆ. ಇದರಲ್ಲಿ ನೊಳಂಬ ಸಮಂಜವು ಕೊಡ ಹೊರತಾಗಿಲ್ಲ.

೪.೧. ನೊಳಬರ ಪ್ರಮುಖ ಬೆಡಗುಗಳು

ನೊಳಂಬರಲ್ಲಿ ಪ್ರಮುಖವಾಗಿ ಎರಡು ಗುಂಪುಗಳನ್ನು ಕಾಣಬಹುದು. 'ಮೂರುದಿವಸದವರು ಮತ್ತು ನಾಲ್ಕು ದಿವಸದವರು, ಮೂರು ದಿವಸದವರು ವಿವಾಹ ಇತ್ಯಾದಿ ಸಾಂಪ್ರದಾಯಿಕ ಆಚರಣೆಯ ಸಂದರ್ಭದಲ್ಲಿ ಮೂರು ದಿನದವರು ಮೂರು ಬಾರಿ ಆಚರಿಸುತ್ತಾರೆ. ನಾಲ್ಕು ದಿವಸದವರು ನಾಲ್ಕು ಬಾರಿ ಆಚರಿಸುತ್ತಾರೆ. ಇವೆರಡು ಗುಂಪುಗಳು ಮಧ್ಯೆ ವೈವಾಹಿಕ ಸಂಬಂಧಗಳು ಏರ್ಪಡುವುದಿಲ್ಲ'(ಪೀಪಲ್ ಆಫ್ ಇಂಡಿಯಾ: ಕರ್ನಾಟಕ:೯೩೫). ಆದರೆ ಇತ್ತೀಚಿನ ದಿನಗಳಲ್ಲಿ ವೈವಾಹಿಕ ಸಂಬಂಧಗಳು ಇವೆರಡು ಗುಂಪುಗಳ ಮಧ್ಯ ನಡೆಯುತ್ತಿರುವುದು ಈ ಸಂಶೋಧನದ ಸಂದರ್ಭದಲ್ಲಿ ತಿಳಿದು ಬಂದಿದೆ. ಒಂದೇ ಕುಲಗಳಲ್ಲಿ ವೈವಾಹಿಕ ಸಂಬಂಧ ಏರ್ಪಡುವುದಿಲ್ಲ. ಬೇರೆ ಬೇರೆ ಕುಲಗಳ ನಡುವೆ ವೈವಾಹಿಕ ಸಂಬಂಧವನ್ನು ಏರ್ಪಡಿಸಲಾಗುತ್ತದೆ. ಗುರು ಸಿದ್ಧರಾಮೇಶ್ವರರು ಕುಡಿಯ ವಂಶಸ್ಥರು ಅವರನ್ನು ಆದಿ ದೈವ ಮಾಡಿಕೊಂಡು ದಕ್ಷಿಣ ಭಾರತದಲ್ಲಿ ರಾಜವಂಶವಾಗಿ ಆಳ್ವಿಕೆ ನಡೆಸಿದ ನೊಳಂಬರು ಶ್ರೀ ಸಿದ್ಧರಾಮರನ್ನು ತಮ್ಮ ವಂಶದ ಗುರುವಾಗಿ ಸ್ವೀಕರಿಸಿದರು. ಈ ಪ್ರಕಾರ ಶ್ರೀ ಸಿದ್ಧರಾಮೇಶ್ವರ ಅವರ ತಂದೆಯು ಕುಡಿ ಕುಲದ ಮುದ್ದುಗೌಂಡರಿಗೆ ಎಂಟು ಜನ ಮಕ್ಕಳು. ಅವರು ಮಹಾನಾಡು ಪ್ರಭುಗಳು ಏಳು ಜನ, ಕಾಳಣ್ಣಗೌಂಡರು, ಚನ್ನಪ್ಪಗೌಂಡರು, ಸಂಗಪ್ಪಗೌಂಡರು ಕಾಳಚಿಕ್ಕಪ್ಪಗೌಂಡರು, ರಾಮಪ್ಪಗೌಂಡರು, ಚಿಕ್ಕಪ್ಪ ಮತ್ತು ಎಂಟನೆಯ ಮಗನಾಗಿ ಸಿದ್ಧರಾಮರು ಜನಿಸಿದರು.

ಕುಡಿಯ ವಂಶದ ಮಾರೆಗೌಂಡರು ಮತ್ತು ಅವರ ತಮ್ಮಂದಿರು ಸಿದ್ಧರಾಮೇಶ್ವರರ ಆಶೀರ್ವಾದವನ್ನು ಪಡೆದು ದಕ್ಷಿಣದಲ್ಲಿ ರಾಜ್ಯ ಕಟ್ಟಲು ಮುಂದಾದರು. ಆಗ ಸಿದ್ಧರಾಮೇಶ್ವರರು ಒಂದು ಬಿಲ್ವಪತ್ರೆಯನ್ನು ನೀರಿನಲ್ಲಿ ಹಾಕಿದರು. ಮೂರು ದಳ ಮಾತ್ರ ನೀರಿನಲ್ಲಿ ತೇಲಿ ಉಳಿದೆಲ್ಲವೂ ನೀರಿನಲ್ಲಿ ಮುಳುಗಿದವು. ಆ ಸಂದರ್ಭದಲ್ಲಿ ನಿಮ್ಮ ರಾಜ್ಯದ ಯಶಸ್ಸು ಕೇವಲ ಮೂವತ್ತು ವರ್ಷ ಮಾತ್ರ ಎಂದು ಹೇಳಿ ಧರ್ಮರಾಜ್ಯ ಸ್ಥಾಪನೆಗೆ ಆಶೀರ್ವಾದ ಮಾಡಿದರು.

ಮುಂದೆ ಮಾರೆಗೌಂಡರ ಪರಿವಾರ ದಕ್ಷಿಣಕ್ಕೆ ಬಂದು ಬಿದರೆ ಎಂಬ ಸ್ಥಳದಲ್ಲಿ ಕೆಲ ಕಾಲ ನಿಂತು, ಕಂಪಲಿಗೆ ಬಂದು ಅಲ್ಲಿನ ರಾಜರಿಂದ ಸನ್ಮಾನಕ್ಕೆ ಒಳಗಾಗಿ ದಕ್ಷಿಣಕ್ಕೆ ಬರುತ್ತಾ ಕಾಡಿನ ಮೂಲಕ ಬೇಟೆ ನಾಯಿಗಳನ್ನು ಓಡಿಸಿಕೊಂಡು ಹೋದ ಪ್ರದೇಶವನ್ನು ಇದು ಗಂಡು ಮೆಟ್ಟಿದ ನಾಡೆಂದು ಆಶಿಸಿ ಏಳು ರಾಜ್ಯ, ಏಳು ನದಿ ಮತ್ತು ಏಳು ಜನ ಅಣ್ಣತಮ್ಮಂದಿರು ಸೇರಿ ಏಳು ನಾಡು ಎಂಬ ರಾಜ್ಯವನ್ನು ಸ್ಥಾಪಿಸಿದರು. ಈ ಸಂದರ್ಭದಲ್ಲಿ ತಮ್ಮ ಮನೆಯ ದೇವರಾಗಿ ಗುರುಸಿದ್ಧರಾಮರನ್ನು ಸ್ಥಾಪಿಸಿದರು. ಆ ನಂತರದ ದಿನಗಳಲ್ಲಿ ಏಳು ನಾಡು ಕೀರ್ತಿವೆತ್ತಿ ಜನರ ಪ್ರೀತಿಯನ್ನು ಗಳಿಸಿತು. ಏಳು ಜನ ಸಹೋದರರಲ್ಲಿ ಗೃಹಕಲಹ ಉಂಟಾಗಿ, ವೈರತ್ವ ಹೆಚ್ಚಾಗಿ ಮಾರೆಗೌಂಡ ಚನ್ನಪ್ಪಗೌಂಡ ಮತ್ತು ಸಂಗಪ್ಪಗೌಂಡರು ಒಂದು ಪಂಗಡವಾಗಿ, ಕಾಳಚಿಕ್ಕಪ್ಪಗೌಂಡನ ಯಜಮಾನಿಕೆಯಲ್ಲಿ ರಾಮಪ್ಪಗೌಂಡ ಚಿಕ್ಕಪ್ಪಗೌಂಡ ಮತ್ತು ಕಾಳಣ್ಣಗೌಂಡರು ಮತ್ತೊಂದು ಪಂಗಡವಾಗಿ ಏಳು ನಾಡು ಇಬ್ಭಾಗವಾಗಿ ಮೂರು ಮನೆಯವರು ಮತ್ತು ನಾಲ್ಕು ಮನೆಯವರು ಎಂಬ ಪಕ್ಷವಾಯಿತು.

ತಾವು ಸ್ಥಾಪಿಸಿದ ಸಿದ್ಧರಾಮರ ಪೂಜೆಯನ್ನು ಸೋಮವಾರ, ಮಂಗಳವಾರ ಮತ್ತು ಬುಧವಾರಗಳಂದು ಮೂರು ಮನೆಯವರು, ಗುರುವಾರ, ಶುಕ್ರವಾರ, ಶನಿವಾರ ಮತ್ತು ಭಾನುವಾರಗಳಂದು ಪೂಜೆಯನ್ನು ನೆರವೇರಿಸುತ್ತಿದ್ದರು. ಇದೇ ಮುಂದೆ ನೊಳಂಬರಲ್ಲಿ ಮೂರು ದಿನದ ಮತ್ತು ನಾಲ್ಕು ದಿನದವರೆಂಬ ಪ್ರಬೇಧಗಳಾಗಿವೆ ಎಂಬುದಾಗಿ ವಿದ್ವಾನ್ ಬಸವರಾಜಯ್ಯನವರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಈ ರೀತಿಯಾಗಿ ಹರಿದು ಹಂಚಿಹೋದ ಏಳು ನಾಡಪ್ರಭುಗಳು ಮಹಾನಾಡಪ್ರಭುಗಳಾಗಿ ಬೇರೆ ಬೇರೆ ರಾಜ್ಯವನ್ನು ಕಟ್ಟಿದ್ದರು. ಹೀಗೆ ಹಿರಿಯರಾದ ಮಾರೆಗೌಂಡರು ಬಿಜ್ಜಾವರವನ್ನು, ಚಿಕ್ಕಪ್ಪಗೌಂಡರು ಬಿದರೆಯನ್ನು ರಾಮಪ್ಪಗೌಂಡರು ಎಣ್ಣೆಗೆರೆಯನ್ನು, ಕಾಳಚಿಕ್ಕಪ್ಪಗೌಂಡ ಗುಬ್ಬಿ-ಹೊಸಳ್ಳಿಯನ್ನು, ಚನ್ನಪ್ಪಗೌಂಡರು ತೇರಿವೂರನ್ನು, ಸಂಗಪ್ಪಗೌಂಡರು ಚೌಳೂರನ್ನು ಮತ್ತು ಕಾಳಣ್ಣಗೌಂಡರು ಕೋರಾದಲ್ಲಿ ರಾಜ್ಯವನ್ನು ಸ್ಥಾಪನೆ ಮಾಡಿಕೊಂಡು ಏಳುನಾಡ ಪ್ರಭುಗಳಾಗಿ ಹೆಸರಾದರು. ಈಗಲೂ

ಕೂಡ ಅನೇಕ ಮನೆತನಗಳು ಇದೇ ಹೆಸರಿನಲ್ಲಿ ಅಸ್ತಿತ್ವದಲ್ಲಿ ಕಂಡುಬರುತ್ತದೆ. ಈ ತೆರನಾಗಿ ನಾಲ್ಕು ದಿನದ ನೊಳಂಬರು ಆಳುವ ವರ್ಗವಾಗಿತ್ತು. ನಾಡಗೌಡರಾಗಿ ಹಾಗೂ ನಾಡಪ್ರಭುಗಳಾಗಿ ಆಳ್ವಿಕೆ ಮಾಡಿದ್ದರಿಂದ ಉನ್ನತ ಶ್ರೇಣಿ ಅಂತಸ್ತನ್ನು ಹೊಂದಿದ್ದರು. ಆದರೆ ಒಂದೇ ಬೆಡಗು(ಕುಲ)ಗಳಲ್ಲಿ ವೈವಾಹಿಕ ಸಂಬಂಧವನ್ನು ಏರ್ಪಡಿಸುವಂತಿಲ್ಲ(ಶಾ

ರಿದ ಮಾರುಗಬಟ್ಟೆಯೆಂಬ ಗ್ರಾಮವನ್ನು ನಿರ್ಮಿಸಿ ಸಿದ್ಧರಾಮೇಗೌಡರನನ್ನು ರಂಗನಾಥನ ಪೂಜೆಗೆಂದು ನೇಮಿಸಿ ಮುಂದೆ ಹೋಗಲು ಹೊರಟಿದ್ದಾರೆ. ಚಿಕ್ಕ ಬಂದೇಗೌಡರು ಪಶ್ಚಿಮಾಭಿಮುಖವಾಗಿ ಹೊರಟು ಈರುವ ಬೇಗೂರು ಎಂಬ ಸ್ಥಳದಲ್ಲಿ ಕಾಡು ಕಡಿದು ರೊಪ್ಪ ಹಾಕಿ ಕೊಂಡು ಗೋವುಗಳನ್ನು ಸಲುಹಿಕೊಂಡು ರೊಪ್ಪದಲ್ಲಿ ವಾಸ ಮಾಡಿಕೊಂಡಿದ್ದನು. ಒಂದು ದಿವಸ ರೊಪ್ಪದಲ್ಲಿದ್ದ ಗೋವು ಬೆದರಿದವು ಅದಕ್ಕೆ ಬೇಗೂರು ಎಂಬ ಸ್ಥಳ ನಾಮಕರಣವಾಗಿದೆ. ಇಲ್ಲಿ ಚಿಕ್ಕಬಂದೇಗೌಡನು. ನೆಲೆನಿಂತನು ಅವನಿಗೆ ಮೂರು ಮಂದಿ ಮಕ್ಕಳು ಶಂಕರೇಗೌಡರಿಗೆ ಬಾಲ್ಯದ ಕೆರೆಯುಲ್ಲಿ, ಬಂದೇಗೌಡನಿಗೆ ಒತ್ತರಗೊಂಡನಹಳ್ಳಿಯುಲ್ಲಿ ಸಿದ್ದೇಗೌಡನಿಗೆ ಕಪ್ಪನಾಯಕನಹಳ್ಳಿಯಲ್ಲಿ ಕನ್ಯೆಯರನ್ನು ತಂದು ವಿವಾಹವನ್ನು ಮಾಡಿದರು.

> ಆ ವಿವಾಹದ ಬೀಗರ ಊಟದ ಸಂದರ್ಭದಲ್ಲಿ ಹಿರಿಯುರು ವಾಡಿಕೆಯಂತೆ ಹಾಸ್ಯ ಪರಿಹಾಸ್ಯದ ಮಾತುಗಳನ್ನಾಡುತ್ತ ಬಂದೇಗೌಡನು ಊಟದ ಪಂಕ್ತಿಯ ಮೇಲೆ ಕಣ್ಣಾಡಿಸುತ್ತಾ ಬೀಗರಿಗೆ ರುಚಿಕರವಾದ ಊಟವನ್ನು ಮಾಡಿಸಿ ಬೋಜನವನ್ನು ನಡೆಸುವಾಗ ಯಜುಮಾನದ ಬಂದೇಗೌಡನು ನೆಚ್ಚಿಕೊಳ್ಳಲು ಉಪ್ಪಿನಕಾಯಿ, ಪಲ್ಯ, ಇನ್ನು ಮುಂತಾದವುಗಳನ್ನು ನೋಡುತ ಎಲೆಯ ಮೇಲೆ ಎಲ್ಲ ಪದಾರ್ಥಗಳನ್ನು ಬಡಿಸುತ್ತ, ಪಕ್ತಿಯಲ್ಲಿ ಸುತ್ತಾಡುತ್ತ ಇರುವಾಗ ನೆಂಟರ ಎಲೆಯ ಮೇಲೆ ಕಲ್ಪವೃಕ್ಷ ಭರಿತವಾದ ಸೊಪ್ಪು(ಹುಳಿಸೊಪ್ಪ)ನ್ನು ನೀಡಿದರಿಂದ ಅದನ್ನು ಪಂಕ್ತಿಯಲ್ಲಿ ನೆಂಟರಿಗೆ ತಂದು ನೀಡಿದೆಯರೆಂದು ಆಶ್ಚರ್ಯದ ಮಾತುಗಳನ್ನು ಆಡುತ್ತ, ನೆಲ್ಲಿಯ ಮೇಲಿನ ಮುಚ್ಚಳದಲ್ಲಿ ಹುಳಿಸೊಪ್ಪಿನ ಸಾರನ್ನು ನೀಡಿ ತೃಪ್ತಿಪಡಿಸಿದ್ದರಿಂದ ಇವರಿಗೆ(ಹುಳಿಸೊಪ್ಪಿನವರು) ನಲ್ಲಿಯವರು ಎಂದು ಕರೆಯಲಾಗಿದೆ(ಶ್ರೀ ಬನಶಂಕರಿ ಮಹಾತ್ಮೆ:೨೩).

೨. ಕಂಬಿಯವರು: ಕಂಬಿ ಸಿದ್ಧರಾಮಣ್ಣನವರು ಶ್ರೀಶೈಲ ಮಲ್ಲಿಕಾರ್ಜುನನಿಗೆ ಪ್ರತಿವರ್ಷ ಕಂಬಿಹೊತ್ತು ಸೇವೆ ಸಲ್ಲಿಸುತ್ತಿದ್ದ ವಂಶಸ್ಥರು. ಆದ್ದರಿಂದ ಆ ಮನೆತನಕ್ಕೆ ಕಂಬಿ

ಎಂಬ ಅನ್ವರ್ಥನಾಮ ಬಂದಿದೆ. ಬೆಂಗಳೂರು ಭಾಗದಲ್ಲಿ ಕಂಬಿ ಎಂಬ ಹೆಸರಿನ ಮನೆತನಗಳು ಸಾಕಷ್ಟು ಕಂಡುಬರುತ್ತವೆ(ಶಂಕರಪ್ಪ ಎಂ.ಪಿ.).

೩. ಬೆಳ್ಳಿಯವರು

೪. ತೆನೆಯವರು

೫. ಪಾಕದವರು

೬. ಪತ್ರೆಯವರು

೭. ಸುಣ್ಣದವರು

೮. ಬಗ್ಗಡದವರು

೯. ಗೋವಿನವರು

೧೦. ದೇವನವರು

೧೧. ಹೂವಿನವರು

೧೨. ಲೆಕ್ಕೆಯವರು

೧೩. ಅರಳಿಯವರು

೧೪. ಹಟ್ಟಿಯವರು

೧೫. ಹೊನ್ನುಸೂರೆಯವರು

೧೬. ಹುಲಿಯವರು

೧೭. ಅನ್ನಸೂರೆಯವರು

೧೮. ಗೌಡಕುಲದವರು

೧೯. ಕುರುಗೌಡನವರು

೨೦. ಸಾವ್ಲಂತರು

೨೧. ಮುತ್ತಿನ ಸಾವ್ಲಂತರು

೨೨. ಮುತ್ತಿನ ತೆನೆ ಮಾಲ್ಯೆಧಾರ್

೨೩. ಮುತ್ತಿನ ದಂಡೆ ಮಾಣಿಕ್ಯರು

೨೪. ಶಾಂಟ್ಯಾಲ್ಯಾರ್

೨೫. ಸೀಗೆಬಗೆಯರು

೨೬. ಸದಾ ಸೋಲೆರೂ

೨೭. ಒಂದು ಹೆಳೆಲಾರು

೨೮. ಬಿಳೆ ಬೆಳೆಲಾರು

೨೯. ಬೆಳೆಲಾರು

೩೦. ಖತ್ತ್ ಬೆಳೆಲಾರು

೩೧. ಕೆಂಪು ಬೆಳೆಲಾರು

೩೨. ಗೌಡ್ಲರು

೩೩. ಮತ್ಲರು

೩೪. ಮನ್ಲೆರೇರು

೩೫. ಅಡಕೆಲರು

೩೬. ಆಲೆಲಾರು

೩೭. ಸಣ್ಣಕ್ಕಿಯರು

೩೮. ಡಂಬ್ಬರು

೪೦. ಬುಂಡೇಲೊರು

೪೧. ಜಾಣೆಲೊರು

೪೨. ಚಿಂಚಲೂರು

೪೩. ತುಂಬೆಲೂರು

೪೪. ಬಿಲ್ಲವರು

೪೫. ಮಲ್ಲಿಗೆಯವರು

೪೬. ಮಾಳಗಿಯವರು

೪೭. ಕಣವೆಯರು

೪೮. ಅಂಕೊಲಯರು

೪೯. ಶೀಲವಂತರು

೫೦. ಮಾಣಿಕ್ಯರು

೫೧. ಬೆಣ್ಣೆಲೊರು

೫೨. ಮಂಡಿಗೆಲೂರು

೫೩. ಸಪಲರು

೫೪. ಕಣ್ಣಪ್ಪನವರು

೫೫. ಮುತ್ತಿನವರು

೫೬. ಚಾಂಗ್ಲರು

೫೭. ಭಗತ್ತನವರು

೫೮. ಚಕ್ರಕೋಣ

೫೯. ಬಂಡಾರದವರು

೫೯. ಬೆಲ್ಲಮಲ್ಲಲೂರು

೬೦. ಚಂಗ್ಲರು

೬೧. ಬೆಟ್ಟದವರು

೬೨. ಚಿತ್ತಾರದವರು

೬೩. ಹಳ್ಳದವರು

೬೪. ಬುಳ್ಳದವರು

೬೫. ಅಡ್ಲರು

೬೬. ಮಲ್ಲಿಗೆಯವರು

೪.೨. ನೊಳಂಬರ ಸಾಂಪ್ರದಾಯಿಕ ಆಚರಣೆಗಳು

ಒಂದೊಂದು ಸಮುದಾಯದ, ಜನಪದದ ಭೌತಿಕ ಸಂಸ್ಕೃತಿಯು ನಿರ್ದಿಷ್ಟ ಪ್ರದೇಶ, ಜನಾಂಗ, ಆಯಾ ಜನಾಂಗದ ಲೋಕದೃಷ್ಟಿಯನ್ನು ಅನುಲಕ್ಷಿಸಿ ನಿರ್ಮಾಣಗೊಂಡಿರುತ್ತದೆ. ಇದರೊಂದಿಗೆ ಅವರುಗಳ ಆಚರಣೆ ಸಂಪ್ರದಾಯಗಳು ಭಿನ್ನ ಹಾಗೂ ವಿಶಿಷ್ಟವಾಗಿರುತ್ತವೆ. ಆ ವಿಶಿಷ್ಟತೆಯಿಂದಲೇ ಆಯಾ ಸಮುದಾಯದ ಅನನ್ಯತೆಯು ನಮಗೆ ಸ್ಪಷ್ಟವಾಗುತ್ತವೆ. ಆಯಾ ಸಮುದಾಯಗಳು ವಾಸಿಸುವ ಭೌಗೋಳಿಕ ಪರಿಸರ, ಪ್ರಾದೇಶಿಕತೆ, ಪ್ರಾಣಿವರ್ಗದ ಪರಿಕರಗಳು ಜನಸಮುದಾಯದ ಜೀವನಾವರ್ತನ, ವಾರ್ಷಿಕಾವರ್ತನ, ಆಚರಣೆ,

ಸಂಪ್ರದಾಯಗಳು ಮತ್ತು ಕೃಷಿ ಉತ್ಪಾದನಾ ಸಂಬಂಧಗಳು, ಕಸುಬು ಇವುಗಳಿಗನುಗುಣವಾಗಿ ಆಯಾ ಸಮುದಾಯದ ಭೌತಿಕ ಸಂಸ್ಕೃತಿಯು ರಚನೆಗೊಂಡಿರುತ್ತದೆ. ಹಾಗೆಯೇ ನೊಳಂಬರ ಜೀವನ ಕ್ರಮ ಮತ್ತು ಕೃಷಿಗೆ ಸಂಬಂಧಿತ ಆಚರಣೆಗಳನ್ನು ವಿವಿಧ ಆಯಾಮಗಳಿಂದ ಪರಿಶೀಲಿಸಲಾಗಿದೆ. ಇಲ್ಲಿ ಪ್ರಮುಖವಾಗಿ ಅವರ ಜೀವನಕ್ಕೆ ಸಂಬಂಧಿಸಿದ ಆಚರಣೆಗಳು ಹಾಗೂ ಕೃಷಿಗೆ ಸಂಬಂಧಿಸಿದ ಆಚರಣೆಗಳನ್ನು ಇಲ್ಲಿ ಚರ್ಚೆಗೆ ಎತ್ತಿಕೊಳ್ಳಲಾಗಿದೆ. ಇವರ ಜೀವನದ ಮುಖ್ಯ ಆಯಾಮಗಳೆಂದರೆ, ಧಾರ್ಮಿಕ ಮತ್ತು ಸಾಂಸ್ಕೃತಿಕ ಅಂಶಗಳನ್ನು ಪರಿಶೀಲನೆಗೆ ಒಳಪಡಿಸಿ ವಿಶ್ಲೇಷಿಸಲಾಗಿದೆ.

ನೊಳಂಬರ ಧಾರ್ಮಿಕ ಜೀವನದ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಲು ಕೆಲವು ನಿರ್ದಿಷ್ಟ ಸಂಶೋಧನ ವಿಧಾನಗಳನ್ನು ಬಳಸಿಕೊಳ್ಳಲಾಗಿದೆ. ಸಾಮಾನ್ಯವಾಗಿ ಸಂದರ್ಶನ ಮಾದರಿಯನ್ನು ಅಳಡಿಸಿಕೊಳ್ಳಲಾಗಿದೆ. ವಕ್ತೃಗಳ ವಿವರಣೆಯನ್ನು ಬಳಸಿಕೊಳ್ಳಲಾಗಿದೆ. ಆ ಮೂಲಕ ಇಲ್ಲಿ ಸಂಪ್ರದಾಯಗಳನ್ನು ಅರಿಯಲು ಕೆಲವೊಂದು ಮಠಗಳಿಗೆ ಭೇಟಿ ನೀಡುವದರ ಮೂಲಕ ಮಾಹಿತಿಯನ್ನು ಸಂಗ್ರಹಿಸಿಕೊಳ್ಳಲಾಗಿದೆ. ಜೊತೆಗೆ ಧಾರ್ಮಿಕ ಆಚರಣೆಗಳನ್ನು ನಡೆಸಿಕೊಡುವ ಗುರುವರ್ಗಗಳನ್ನು ಮತ್ತು ದಿನನಿತ್ಯ ಪರಂಪರಾಗತವಾಗಿ ಸಾಂಪ್ರದಾಯಕವಾಗಿ ಆಚರಣೆಯಲ್ಲಿ ತೊಡಗಿಕೊಂಡು ನಡೆಸಿಕೊಡುವಂತ ಹಿರಿಯ ಜೀವನದ ಅನುಭವಸ್ಥರನ್ನು ಸಂದರ್ಶಿಸಿ ಮಾಹಿತಿ ಸಂಗ್ರಹಿಸಲಾಗಿದೆ. ಹಾಗೆಯೇ ಈ ಸಂದರ್ಶನದ ಜೊತೆಗೆ ಅನೇಕ ಮಾಧ್ಯಮಗಳ ಮುಖೇನ ವಿಷಯವನ್ನು ಸೂರೆಗೊಳ್ಳಲಾಗಿದೆ. ಈ ಸಂದರ್ಭದಲ್ಲಿ ವ್ಯಕ್ತಗೊಂಡ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ವಕ್ತೃಗಳಿಂದ ಸಂಗ್ರಹಿತಗೊಂಡ ಆಚರಣೆಗಳನ್ನು ಅಧ್ಯಯನದ ಅನುಕೂಲತೆಯ ದೃಷ್ಟಿಯಿಂದ ಎರಡು ವಿಭಾಗಗಳನ್ನಾಗಿಸಿಕೊಳ್ಳಲಾಗಿದೆ. ೧. ಜೀವನಾವರ್ತನ ಆಚರಣೆಗಳು, ೨. ವಾರ್ಷಿಕಾವರ್ತ ಆಚರಣೆಗಳು.

೪.೨.೧. ಜೀವನಾವರ್ತನ ಆಚರಣೆಗಳು

ಸಾಮಾನ್ಯವಾಗಿ ಒಂದು ಸಮುದಾಯದಿಂದ ಮತ್ತೊಂದು ಸಮುದಾಯಕ್ಕೆ ಸಂಪ್ರದಾಯಗಳು ಆಚರಣೆಗಳು ಭಿನ್ನವಾಗಿರುತ್ತವೆ. ಹಾಗೆಯೇ ನೊಳಂಬ ಸಮುದಾಯದವರ ನಂಬಿಕೆಗಳು ಮತ್ತು ಆಚರಣೆಗಳು ಇತರೆ ಸಮುದಾಯಗಳಿಗಿಂತ ಭಿನ್ನವಾಗಿರುತ್ತವೆ. ವೈಯಕ್ತಿಕವಾಗಿ ಆಚರಿಸವಂತಹ ಹಲವಾರು ನಂಬಿಕೆಗಳನ್ನು ನೊಳಂಬ ಸಮುದಾಯದಲ್ಲಿ ಕಾಣಬಹುದಾಗಿದೆ. ಎಲ್ಲಾ ಆಚರಣೆಗಳನ್ನು ಆರಾಧ್ಯರ(ಜಂಗಮರು) ಮೂಲಕ ನೆರವೇರಿಸಲಾಗುತ್ತದೆ. ಕುಟುಂಬದ ಹಲವು ಮುಖ್ಯ ಆಚರಣೆಗಳ

ಸಂದರ್ಭಗಳೆಂದರೆ ಜನನ, ದೀಕ್ಷೆ, ವಿವಾಹ ಮತ್ತು ಪ್ರಮುಖವಾಗಿ ಮರಣ. ಈ ಎಲ್ಲ ಆಚರಣೆಗಳನ್ನು ಶೈವಧರ್ಮದೊಳಗೆ ನಡೆಸಿಕೊಂಡು ಬರುವಂತಹದ್ದಾಗಿವೆ.

ಜನನ

ಜನ್ಮ ನೀಡುವುದು ಮನುಷ್ಯ ಸೇರಿದಂತೆ ಪ್ರತಿಯೊಂದು ಪ್ರಾಣಿ ಪಕ್ಷಿ ಸಂಕುಲಗಳಲ್ಲಿ ವಿಶಿಷ್ಟವಾದ ಜೈವಿಕ ಕ್ರಿಯೆಯಾಗಿದೆ. ಅದರಲ್ಲೂ ಹೆಣ್ಣು ಪ್ರಾಣಿಗಳು ತಮ್ಮ ಜೀವಿತಾವಧಿಯಲ್ಲಿ ತನ್ನಿಂದ ಜೀವವನ್ನು ಹೆರದಿದ್ದ ಪಕ್ಷದಲ್ಲಿ ಬೇರೊಂದು ಪ್ರಾಣಿಯ ದೃಷ್ಟಿಯಲ್ಲಿ ಅದನ್ನು ಧಿಕ್ಕರಿಸುವುದನ್ನು ನಾವು ವಿಭಿನ್ನ ಪ್ರಾಣಿಸಂಕುಲದಲ್ಲಿ ಕಾಣುತ್ತೇವೆ. ಆದರೆ, ಮಾನವ ಕುಲದಲ್ಲಿ ಇದರ ಪರಿಕ್ರಮಗಳೇ ಭಿನ್ನವಾಗಿರುತ್ತವೆ. ಹೆಣ್ಣಾದವಳು ಮಕ್ಕಳನ್ನು ಹೆತ್ತು ತಾಯಿಯಾಗುವಾಗಿನ ಸಂಭ್ರವನ್ನು ಬೇರೆ ಯಾವ ಸಂದರ್ಭದಲ್ಲಿಯೂ ಊಹಿಸಲು ಅಸಾಧ್ಯವಾಗಬಹುದೇನೋ. ಆ ಕಾರಣಕ್ಕೆ ನೊಳಂಬರ ಜೀವನಶೈಲಿಯು ಇದಕ್ಕಿಂತ ಭಿನ್ನವಾಗಿಯೇನು ಇಲ್ಲದಿಲ್ಲ. ಆದರೂ ಕೆಲವೊಂದು ವಿಶೇಷತೆಯನ್ನು ಇಲ್ಲಿ ಸಂಗ್ರಹಿಸಲಾಗಿದೆ. ಅವುಗಳಲ್ಲಿ ತಾಯಿಯು ಮಗುವಿಗೆ ಜನ್ಮ ನೀಡುವಾಗಿನ ಕೆಲವೊಂದು ಆಚರಣೆಗಳು ಮಹತ್ವದ ಅಂಶವನ್ನು ಸ್ಫುರಿಸುತ್ತವೆ.

ಜನನ ಪೂರ್ವದಲ್ಲಿ ಗರ್ಭಿಣಿಯ ಸಂದರ್ಭದಲ್ಲಿ ಐದನೆಯ, ಏಳನೆಯ ಮತ್ತು ಒಂಬತ್ತನೆಯ ತಿಂಗಳಲ್ಲಿ ಸೀಮಂತ ಕಾರ್ಯಕ್ರಮವನ್ನು ಮಾಡುತ್ತಾರೆ. ತವರು ಮನೆಯಿಂದ ಹೊಸಬಟ್ಟೆಯನ್ನು ತಂದು ಸಿಹಿ ಊಟ ಮಾಡಿಸಿ ಉಡಿ ತುಂಬುವದರ ಮೂಲಕ ತವರು ಮನೆಗೆ ಕರೆದುಕೊಂಡು ಹೋಗುತ್ತಾರೆ.

ಮಗುವಿನ ಜನನದ ತರುವಾಯ ನೊಳಂಬ ಕುಟುಂಬದಲ್ಲಿ ಸೂತಕದ ಸಮಯ ಎಂತಲೂ ಅದರ ನಿವಾರಣೆಗೆ ಧಾರ್ಮಿಕ ಕ್ರಿಯಾ ವಿಧಿ-ವಿಧಾನಗಳನ್ನು ಆಚರಿಸಬೇಕೆಂಬುದು ಸಂಪ್ರದಾಯ. ಈ ಸೂತಕದ ಸಮಯದಲ್ಲಿ ತಾಯಿ ಮಗುವನ್ನು ಮನೆಯ ಒಂದು ಭಾಗದಲ್ಲಿ ಅಥವಾ ಒಂದು ಪ್ರತ್ಯೇಕವಾದ, ಸ್ವಚ್ಛವಾದ ಕೋಣೆಯಲ್ಲಿ ಇರಿಸುತ್ತಾರೆ. ಸೂತಕ ತೆಗೆಯುವವರೆಗೂ ಇತರೆ ಕುಟುಂಬಗಳು ಮನೆಯ ಸದಸ್ಯರು ಯಾವುದೇ ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುವಂತಿಲ್ಲ.

ಲಿಂಗಧಾರಣೆ ಮತ್ತು ನಾಮಕರಣ

ಮಗು ಜನಿಸಿದ ಮೂರು, ಐದು, ಒಂಬತ್ತು ಅಥವಾ ಹನ್ನೊಂದನೆಯ ದಿನಗಳಲ್ಲಿ ಸೂತಕ ತಗೆದು ಮಗುವಿಗೆ ಲಿಂಗಧಾರಣೆ ಅಥವಾ ಲಿಂಗ ಆರಾಧನೆಯನ್ನು ಮಾಡುತ್ತಾರೆ. ಮನೆಯನ್ನೆಲ್ಲ ಸ್ವಚ್ಛಗೊಳಿಸಿ ಸುಣ್ಣ ಬಣ್ಣ ಮಾಡಿ ಮನೆಯ ಸದಸ್ಯರು ಬಾಣಂತಿ ಮಗುವನ್ನು ಸ್ನಾನ ಮಾಡಿಸುತ್ತಾರೆ. ಅಂದು ಅದೇ ಸಂದರ್ಭದಲ್ಲಿ ಊರಿನ ಮಡಿವಾಳ ಬಂದು ಗಂಗೆಯನ್ನು ಸಿಂಪಡಿಸಿದ ತರುವಾಯ, ಗೋ-ಮೂತ್ರವನ್ನು ಮನೆಗೆಲ್ಲ ಸಿಂಪಡಿಸುತ್ತಾರೆ. ಈ ರೀತಿ ಮಾಡಿದ ಸೂತಕವನ್ನು ನಿವಾರಿಸುತ್ತಾರೆ. ಎಲ್ಲ ಚಟುವಟಿಕೆಗಳ ನಂತರದಲ್ಲಿ ಜಂಗಮರನ್ನು ಕರೆತಂದು ಪಾದ ಪೂಜೆಯನ್ನು ಮಾಡಿ ಆ ಮನೆಗೆಲ್ಲ ಪಾದೋದಕವನ್ನು ಸಿಂಪಡಿಸುತ್ತಾರೆ. ಲಿಂಗಪೂಜೆ ಮಾಡಿ ಮಗುವಿಗೆ ಲಿಂಗಧಾರಣೆಯನ್ನು ಮಾಡುತ್ತಾರೆ. ಅಂದಿನ ದಿನವೇ ಬಹುತೇಕರು ನಾಮಕರಣ ಮಾಡುತ್ತಾರೆ. ಇನ್ನೂ ಕೆಲವರು ತಮ್ಮ ಅನುಕೂಲಕ್ಕೆ ತಕ್ಕಂತೆ ಆರ್ಥಿಕವಾಗಿ ಪ್ರಬಲವಾಗಿರುವವರು ೩, ೫ ಮತ್ತು ೯ನೆಯ ತಿಂಗಳಿಗೆ ಅತ್ಯಂತ ಸಂಭ್ರಮದಿಂದ ಆಚರಿಸುತ್ತಾರೆ. ಇಲ್ಲಿ ಕುಟುಂಬದ ಬಂಧು-ಬಾಂಧವರಿಂದ ಈ ಕ್ರಿಯಾವಿಧಿಯನ್ನು ನೆರವೇರಿಸಲಾಗುತ್ತದೆ.

ಲಿಂಗಧಾರಣೆ ಸಮಯದಲ್ಲಿ ಸೋದರ ಮಾವ ಅಥವಾ ಸೋದರ ಅತ್ತೆ ಅಂದರೆ, ತಾಯಿಯ ತಮ್ಮ ಇಲ್ಲವೆ ತಂದೆಯ ತಂಗಿ ಯಾರಾದರೂಬ್ಬರು ಮುಂದೆ ನಿಂತು ಜಂಗಮರಿಂದ ಲಿಂಗಧಾರಣೆ ನೂಲು ಅಥವಾ ಸೂತ್ರವನ್ನು ಬಿಟ್ಟು, ಧರ್ಬೆ ಹುಲ್ಲಿನಿಂದ ಒಂದು ಉಂಗುರವನ್ನು ತಯಾರಿಸಿ, ಆ ಸೂತ್ರದ ದಾರದ ಮೂಲಕವಾಗಿ ಉಂಗುರಧಾರಣೆ ಮಾಡಿಸುತ್ತಾರೆ. ಮಗುವಿನ ಸೊಂಟಕ್ಕೆ ಹುಟ್ಟುದಾರವನ್ನು ಕಟ್ಟಿ ಸೋದರ ಮಾವನಿಂದ ಮಗುವಿನ ಕಿವಿಯಲ್ಲಿ ನಾಮದೇಯವನ್ನು ಮೂರು ಬಾರಿ ಸ್ಫೊರಿಸುತ್ತಾರೆ. ಹಾಗೆಯೇ ಸಿಹಿ ಭೋಜನವನ್ನು ಬಂಧು-ಬಾಂಧವರಿಗೆ ಉಣಬಡಿಸುತ್ತಾರೆ.

ನೊಳಂಬರಲ್ಲಿ ಹೆಣ್ಣು ಮಗುವಾದರೆ ಸಾಂಕೇತಿಕವಾಗಿ ಕ್ರಿಯಾ-ವಿಧಿಗಳನ್ನು ಮಾಡಿ ಮುಗಿಸುತ್ತಾರೆ. ಗಂಡು ಮಗುವಾದರೆ ಅತ್ಯಂತ ಸಂಭ್ರಮದಿಂದ ಆಚರಣೆಯನ್ನು ಮಾಡುತ್ತಾರೆ. ಗಂಡು ಮಗು ಹುಟ್ಟಿದರೆ ಸಿಹಿ ಹಂಚಿ ಸಂಭ್ರಮಪಡುವ ಆಚರಣೆ ಪ್ರಚಲಿತದಲ್ಲಿದೆ. ನೊಳಂಬ ಮೂಲ ವೃತ್ತಿಕೃಷಿ ಆಗಿರುವುದರಿಂದ ಗಂಡು ಮಗು ಜನಿಸಿದರೆ ವ್ಯವಸಾಯದಲ್ಲಿ ನೆರವು ಆಗಿ ಸಕ್ರಿಯ ಪಾತ್ರವಹಿಸುತ್ತಾರೆ ಎಂಬ ಭಾವನೆ ಹೆಚ್ಚು ಈ ಸಮುದಾಯದ ಜನರಲ್ಲಿ ಇದೆ(ಈಶ್ವರಪ್ಪ ಬುರಡೆಕಟ್ಟಿ).

ಜವುಳ ತಗೆಯುವುದು

ನೊಳಂಬರು ತಮ್ಮ ಪರಂಪರಾಗತವಾಗಿ ಆಚರಿಸಿಕೊಂಡು ಬಂದಿರುವ ಜವುಳ ತೆಗೆಯುವ ಶಾಸ್ತ್ರವನ್ನು ಮಗು ಜನಿಸಿದ ಒಂಬತ್ತು, ಹನ್ನೊಂದು ಅಥವಾ ಹದಿಮೂರನೆಯ ಮಾಸದಲ್ಲಿ ನೆರವೇರಿಸಲಾಗುತ್ತದೆ. ಈ ಸಂದರ್ಭದಲ್ಲಿ ಮಗುವಿಗೆ ಹಾಗು ಮಗುವಿನ ತಂದೆ ತಾಯಿಯರಿಗೆ ಹೊಸ ಬಟ್ಟೆಯನ್ನು ತಂದು, ನೆಂಟರಿಸ್ಟರೆಲ್ಲ ಸೇರಿಕೊಂಡು ಮನೆಯ ದೇವರು ಅಥವಾ ಇಷ್ಟ ದೇವರಿಗೆ ಈ ಜವುಳ ತೆಗೆಸುವ ಪದ್ಧತಿ ಮಾಡಲಾಗುತ್ತದೆ. ಇದನ್ನು ಮುಡಿ ಕೊಡುವ ಪದ್ಧತಿ ಎಂದು ಕರೆಯುತ್ತಾರೆ.

ಲಿಂಗೆ ದೀಕ್ಷೆ ಕೊಡುವುದು

ಈ ದೀಕ್ಷೆ ಕೊಡುವ ಆಚರಣೆಯು ಮಗು ಪ್ರೌಢಾವಸ್ಥೆಗೆ ಬಂದ ನಂತರ ಹನ್ನೊಂದು ಅಥವಾ ಹನ್ನರಡನೆಯ ವರ್ಷದಲ್ಲಿ ಗಂಡು ಮಕ್ಕಳಿಗೆ ತಲೆಕೂದಲವನ್ನು ಪೂರ್ಣ ತಗೆದು ಸ್ನಾನ ಮಾಡಿಸಿ, ಮಡಿ ಬಟ್ಟೆಯನ್ನು ಗುರುಗಳಿಂದ ದೀಕ್ಷೆ ಮಾಡಿಸುತ್ತಾರೆ. ಅಂದರೆ ಲಿಂಗ ಧರಿಸಿಕೊಳ್ಳಲು ಹೇಳುತ್ತಾರೆ. ದೀಕ್ಷೆ ಪಡೆದ ನಂತರ ದಿನನಿತ್ಯವು ಲಿಂಗ ಪೂಜೆ ಮಾಡುವುದು ಕಡ್ಡಾಯವಾಗಿರುತ್ತದೆ. ಆದರೆ ಹೆಣ್ಣು ಮಕ್ಕಳಿಗೆ ದೀಕ್ಷೆ ಕೊಡುವ ಪದ್ಧತಿ ಇರುವುದಿಲ್ಲ. ಆದರೆ ಮದುವೆ ಸಂದರ್ಭದಲ್ಲಿ ವರನ ಮನೆಯವರು ಬೆಳ್ಳಿಯಿಂದ ಮಾಡಿದ ಚೌಕ(ಕರಡಿಗೆ) ಮತ್ತು ದೇವರನ್ನು ಅಂದರೆ ಲಿಂಗವನ್ನು ಕೊಡುವ ಸಂಪ್ರದಾಯ ನಡೆದುಕೊಂಡು ಬಂದಿದೆ. ದೀಕ್ಷೆ ಸಮಾರಂಭವನ್ನು ಪ್ರಮುಖವಾಗಿ ಯಾವುದಾದರೂ ವಿಶೇಷ ಸಂದರ್ಭಗಳಲ್ಲಿ ಅಂದರೆ ಮದುವೆ, ಗೃಹಪ್ರವೇಶ ಹಾಗೂ ಹೊಸ ದೇವಾಸ್ಥಾನದ ನಿರ್ಮಾಣದ ಸಂದರ್ಭದ ಮತ್ತು ಸಾರ್ವಜನಿಕ ಧಾರ್ಮಿಕ ಸಮಾರಂಭಗಳಲ್ಲಿ ಈ ಕಾರ್ಯಕ್ರಮವನ್ನು ಸಾಮೂಹಿಕವಾಗಿ ದೀಕ್ಷೆ ಕೊಡುವ ಪದ್ಧತಿ ಜಾರಿಯಲ್ಲಿದೆ. ಇತ್ತೀಚಿನ ದಿನಗಳಲ್ಲಿ ವಿವಾಹದ ದಿನಗಳ ನಂತರ ಹೆಚ್ಚು ಲಿಂಗ ಧರಿಸುತ್ತಾರೆ. ಪೂಜೆಯನ್ನು ಕೂಡ ದಿನನಿತ್ಯ ಮಾಡುವವರು ಇದ್ದಾರೆ. ಕೆಲವು ಮಂದಿ ವಿಶೇಷ ದಿನಗಳಲ್ಲಿ ಮಾತ್ರ ಈ ಕಾರ್ಯವನ್ನು ಮಾಡುತ್ತಾರೆ(ಶಂಕರಪ್ಪ ಎಂ.ಪಿ.).

ಋತುಮತಿ ಶಾಸ್ತ್ರ

ನೊಳಂಬರಲ್ಲಿ ಹೆಣ್ಣು ಮಗುವಿಗೂ ಗಂಡು ಮಗುವಿಗೂ ಎಲ್ಲ ಆಚರಣೆಗಳನ್ನು ನಡೆಸುತ್ತಿದ್ದರು. ಹೆಣ್ಣು ಮಗಳು ಋತುಮತಿಯಾದರೆ ಸೂತಕವೆಂದು ಆ ಸೂತಕವನ್ನು ನಿವಾರಣೆ ಮಾಡಲು ಧಾರ್ಮಿಕ ಕ್ರಿಯಾ ವಿಧಿಯನ್ನು ನೆರವೇರಿಸುತ್ತಾರೆ. ಮೂರು

ಮತ್ತು ಐದು ದಿನಗಳ ವರೆಗೆ ಸ್ನಾನಮಾಡಿಸಿ ಸೋದರ ಮಾವನಿಂದ ಮೂರು ದಿನ ಒಂದೊಂದು ತರಹ ಒಟ್ಟು ಐದು ನಮೂನೆಯ ಎಲೆಗಳಲ್ಲಿ ಸಿಹಿ ಊಟ ಮಾಡಿಸುತ್ತಾರೆ. ಆ ಎಲೆಗಳು ಬಹುಮುಖ್ಯವಾಗಿ ಪ್ರಾಕೃತಿಕವಾದ ಔಷಧೀಯ ಗುಣಗಳನ್ನು ಒಳಗೊಂಡಿರುವಂತ ಎಲೆಗಳಾಗಿರುತ್ತವೆ. ಅವುಗಳೆಂದರೆ, ಮುತ್ತುಗದ ಎಲೆ, ಬಾಳೆಯ ಎಲೆ, ತಾವರೆಯ ಎಲೆ, ಅರಿಷಿಣದ ಎಲೆ ಮತ್ತು ಕಲ್ಲಬಾಳೆಯ ಎಲೆಗಳಾಗಿವೆ. ಈ ಎಲ್ಲದರ ಜೊತೆಗೆ ಬಂಧು-ಬಾಂಧವರು, ಕುಲಸ್ಥರೆಲ್ಲ ಸೇರಿ ಶೃಂಗಾರ ಮಾಡಿ ಆರತಿ ಮಾಡುತ್ತಾರೆ. ೧೧ನೆಯ ದಿನದ ನಂತರ ಆರತಕ್ಷತೆಯನ್ನು ಬಂಧು-ಬಾಂಧವರ ಸಮ್ಮುಖದಲ್ಲಿ ನೆರವೇರಿಸಲಾಗುತ್ತದೆ. ಆನಂತರ ಯಾವುದಾದರು ಒಂದು ಪುಣ್ಯಕ್ಷೇತ್ರಕ್ಕೆ ಹೋಗಿ ದೋಷ ನಿವಾರಣೆಗಾಗಿ ಗಂಗಾಪೂಜೆಯನ್ನು ಮಾಡಿಕೊಂಡು ಬರುವ ವಾಡಿಕೆ ಇದೆ. ಈ ಸಮಾರಂಭದಲ್ಲಿ ಹೆಣ್ಣು ಮಗಳಿಗೆ ಹೆಣ್ಣಿನ ಪ್ರಜ್ಞೆಯನ್ನು ಅದರ ಪಾತ್ರ ನಿವಾರಣೆಯ ಜವಾಬ್ಧಾರಿಯ ಅರಿವು ಮೂಡಿಸುವ ಆಚರಣೆಯಾಗಿ ರೂಪುಗೊಂಡಿತ್ತು.

ಮದುವೆ(ವಿವಾಹ)

ಜೀವನದಲ್ಲಿ ಹೆಣ್ಣುಮಗಳು ಋತುಮತಿಯಾದ ನಂತರದಲ್ಲಿ ಸಾಮಾನ್ಯವಾಗಿ ಪೋಷಕರಲ್ಲಿ ಮದುವೆಯ ಚಿಂತನೆಗಳು ಗರಿಗೆದರುತ್ತವೆ. ಹಾಗೆಯೇ ನೊಳಂಬರ ಲೌಕಿಕ ಜೀವನವು ಭಿನ್ನವಾಗಿ ಕಾಣದಿದ್ದರು, ಕೆಲವೊಂದು ಆಚರಣೆಗಳು ಭಿನ್ನತೆಯನ್ನು ತೆರೆದು ಇಡುತ್ತವೆ. ನೊಳಂಬರಲ್ಲಿ ವಿವಾಹವು ಪ್ರಮುಖ ಸಮಾರಂಭ. ಈ ವಿವಾಹದ ಸಂದರ್ಭದಲ್ಲಿ ಅವರ ಇಡೀ ಕುಟುಂಬ ಮತ್ತು ಕುಲ ಗ್ರಾಮದ ಜನಗಳೆಲ್ಲರ ಸಾರ್ವಜನಿಕ ಸಮಾರಂಭವಾಗಿ ವಿವಾಹವು ಪ್ರಾಮುಖ್ಯತೆ ಪಡೆದಿದೆ. ವಿವಾಹ ಎನ್ನುವುದು ಅನೇಕ ಕ್ರಿಯಾವಿಧಿವಿಧಾನಗಳನ್ನು ಒಳಗೊಂಡ ಒಂದು ಪವಿತ್ರ ಬಂಧವಾಗಿದೆ. ಈ ವಿವಾಹದ ಪ್ರಮುಖ ಕ್ರಿಯಾ ವಿಧಿವಿಧಾನಗಳು ಹಿಂದೆ ಒಂಬತ್ತು ದಿನಗಳವರೆಗೆ ನೆರವೇರುತ್ತಿದ್ದವು. ಆದರೆ ಇತ್ತೀಚಿನ ದಿನಗಳಲ್ಲಿ ಆಧುನಿಕತೆಯು ಸೋಗು ಮತ್ತು ಒತ್ತಡದ ಜೀವನಶೈಲಿಯಿಂದಾಗಿ ಸಾಂಪ್ರದಾಯಕ ಕಾರ್ಯಕ್ರಮಗಳು ನೆನೆಗುದಿಗೆ ಬಿದ್ದಿವೆ ಹಾಗೂ ಕಡಿಮೆ ಸಮಯಗಳಲ್ಲಿ ಎಲ್ಲವೂ ಬೇಗನೆ ನಡೆದು ಹೋಗಬೇಕು. ಈ ಕಾರಣಕ್ಕಾಗಿ ಒಂದು ಅಥವಾ ಎರಡು ದಿನಗಳಲ್ಲಿ ಇಂದು ವಿವಾಹದಂತಹ ಸಮಾರಂಭಗಳು ಮುಕ್ತಾಯಗೊಳ್ಳುತ್ತಿವೆ.

ಅದೇನೇ ಆಧುನಿಕತೆಯ ಸೋಂಕಿರಲಿ, ವೈವಾಹಿಕ ಸಮಾರಂಭಗಳಿಗೆ ಇರುವಂತ ಮಹತ್ವ ಇಂದಿಗೂ ಕಡಿಮೆಯಾಗಿಲ್ಲವೆಂದೆ ಹೇಳಬಹುದು. ಹೀಗಾಗಿ ನೊಳಂಬರ ಪ್ರಮುಖ

ವೈವಾಹಿಕ ಕ್ರಿಯಾವಿಧಿಗಳೆಂದರೆ ಲಗ್ನ ಕಟ್ಟಿಸುವ ಕಾರ್ಯ, ಅಕ್ಕಿಪೂಜೆ, ದೇವತಾ ಕಾರ್ಯ, ಮಾಂಗಲ್ಯಧಾರಣೆ, ನಾಗೋಲೆಶಾಸ್ತ್ರ, ಅರತಕ್ಷತೆಕಾರ್ಯ. ಈ ರೀತಿಯಲ್ಲಿ ಹಂತಹಂತವಾಗಿ ನಡೆಯುತ್ತವೆ. ಈ ರೀತಿಯಾಗಿ ವಿವಾಹವು ಎರಡು ಕುಟುಂಬಗಳ ಸಾರ್ವಜನಿಕ ಸಮಾರಂಭವಾಗಿ ರೂಪುಗೊಂಡಿದೆ.

ನೊಳಂಬರಲ್ಲಿ ಪರಸ್ಪರ ಹೆಣ್ಣು ಮತ್ತು ಗಂಡಿನ ಎರಡು ಕುಟುಂಬದವರು ಒಪ್ಪಿಕೊಂಡು ಹೊಂದಾಣಿಕೆಯಿಂದ, ಗಂಡು ಮತ್ತು ಹೆಣ್ಣಿನ ಮನೆಗೆ ಹೋಗಿ ಆನಂತರ ಒಪ್ಪಿಗೆ ಸೂಚಿಸುತ್ತಾರೆ. ಮನೆಯ ಯಜಮಾನರು ಒಪ್ಪಿಕೊಂಡರೆ ಆ ಸಂಬಂಧ ಗಟ್ಟಿಯಾಗುತ್ತಿತ್ತು. ಇಲ್ಲಿ ಹೆಣ್ಣು ಮತ್ತು ಗಂಡುಗಳ ಒಪ್ಪಿಗೆಗೆ ಹಿಂದೆ ಅವಕಾಶವಿರಲಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಹೆಣ್ಣು ಮತ್ತು ಗಂಡು ಇಬ್ಬರ ಒಪ್ಪಿಗೆಯನ್ನು ಕೇಳುತ್ತಾರೆ.

ತೆರ(ವಧುದಕ್ಷಿಣೆ)

ವರನ ಕಡೆಯವರು ವಧುವಿನ ಕಡೆಯವರಿಗೆ 'ತೆರ(ದಕ್ಷಿಣೆ) ಕೊಟ್ಟು ಅಂದರೆ, ಅದು ಹಿಂದಿನ ಕಾಲದಲ್ಲಿ ಧಾನ್ಯ, ಹಸು, ಒಳಕಲ್ಲು ಮತ್ತು ಮನೆಕಟ್ಟಿಕೊಡುವುದು. ಹೀಗೆ ಬೇರೆ ಬೇರೆ ರೂಪಗಳಲ್ಲಿ ಕೊಟ್ಟು ವಿವಾಹವಾಗುವ ಪದ್ಧತಿ ಇತ್ತು. ಇದು ಕಾಲಾಂತರದಲ್ಲಿ ವಧು ದಕ್ಷಿಣೆ ವರದಕ್ಷಿಣೆಯಾಗಿ ಪರಿಣಮಿಸಿದೆ. ಅನಂತರದಲ್ಲಿ ವಿವಾಹಕ್ಕೆ ಒಂದು ದಿನಾಂಕವನ್ನು ಜಂಗಮರ ಆಜ್ಞೆಯ ಮೇರೆಗೆ ನಿಗದಿಪಡಿಸುತ್ತಾರೆ. ಇದಕ್ಕೂ ಪೂರ್ವದಲ್ಲಿ ಎರಡು ಮನೆಯ ಕಡೆಯವರು ವಿವಾಹಕ್ಕೆ ಒಪ್ಪಿಗೆ ಸೂಚಿಸಿದ್ದೇವೆ ಎಂದು ಸಮುದಾಯದ ದೈವದ ಕಡತಕ್ಕೆ ಸಹಿ ಮಾಡುತ್ತಾರೆ'(ರುದ್ರಮ್ಮ ಬಂಡ್ರೆ).

ವರದಕ್ಷಣೆ

ಪ್ರಸ್ತುತ ದಿನದಲ್ಲಿ ವಧುವಿನ ಕಡೆಯವರು ವರನಿಗೆ ಮದುವೆಯ ಸಂದರ್ಭದಲ್ಲಿ ಒಡುವೆ, ಹಣ, ಆಸ್ತಿ ಮತ್ತು ವಿವಿಧ ವಸ್ತುಗಳನ್ನು ನೀಡುವ ಸಂಪ್ರದಾಯ ಬೆಳೆದು ಬಂದಿದೆ. ಕೆಲವು ಶತಮಾನಗಳ ಪೂರ್ವದಲ್ಲಿ ವರನ ಕಡೆಯವರೇ ವಧುವಿನ ಕಡೆಯವಿರಗೆ ಈ ರೀತಿಯ ದಕ್ಷಿಣೆಯನ್ನು, ಹಣದ ರೂಪದಲ್ಲಿ ಅಥವಾ ಆಸ್ತಿಯ ರೂಪದಲ್ಲಿ ನೀಡುವ ಪದ್ಧತಿ ಇತ್ತು. ಕಾಲಾಂತರದಲ್ಲಿ ಇದು ಬದಲಾಗಿ ವರನಿಗೆ ದಕ್ಷಿಣೆ ಕೊಡುವುದು ಬೆಳೆದು ಬಂದಿದೆ. ಇದೊಂದು ಸಾಮಾಜಿಕ ಪಿಡುಗು ಎಂದು ಪರಿಗಣಿಸಲಾಗಿದೆ.

ವಿಧಿ–ವಿಧಾನಗಳು

ನೊಳಂಬ ಸಮುದಾಯದಲ್ಲಿ ವಿವಾಹ ಕಾರ್ಯವು ಇತರೆ ಸಮುದಾಯಗಳಿಂತಲು ಭಿನ್ನವಾಗಿ ಆಚರಿಸುತ್ತಾರೆ. ಮೊಟ್ಟಮೊದಲು ವಿವಾಹದ ದಿನಾಂಕವನ್ನು ಜಂಗಮರಿಂದ ನಿಗದಿಪಡಿಸಿ ಲಗ್ನ ಪತ್ರಿಕೆಯನ್ನು ಬರೆಸುತ್ತಾರೆ. ಆ ನಂತರ ಜಂಗಮರ ಸಮ್ಮುಖದಲ್ಲಿ ನಿರ್ಣಯಸಿಕೊಂಡ ಪತ್ರಿಕೆಯನ್ನು ಮುದ್ರಿಸುತ್ತಾರೆ. ತರುವಾಯದಲ್ಲಿ ವಿವಾಹದ ಸಮಾರಂಭಕ್ಕೆ ಬೇಕಾಗುವ ಸಾಮಗ್ರಿಗಳನ್ನು ಖರೀದಿಮಾಡುವಾಗ ಪ್ರಥಮವಾಗಿ ಎರಡು ಕಡೆಯವರು ಅರಿಷಿಣ ಕುಂಕುಮವನ್ನು ತೆಗೆದುಕೊಳ್ಳುತ್ತಾರೆ. ತದನಂತರ, ಅಕ್ಕಿ ಪೂಜೆಯನ್ನು ಮಾಡುವುದು. ಮುತ್ತೈದೆಯರನ್ನು ಕರೆದು ಉಡಿತುಂಬುತ್ತಾರೆ. ಎಲೆ, ಅಡಿಕೆ ಹಣ್ಣು ಕಡಲೆ, ಬೆಲ್ಲ ಸೇರಿದಂತೆ ಪವಿತ್ರ ಸಾಮಗ್ರಿಗಳಿಂದ ಉಡಿ ತುಂಬಿ ಸಿಹಿ ಊಟ ಬಡಿಸಿ ಕಳಿಸುತ್ತಾರೆ.

ಲಗ್ನ ಕಟ್ಟಿಸುವ ಕಾರ್ಯ

ಲಗ್ನ ಕಟ್ಟಿಸುವ ದಿನ ಬಂಧು–ಬಾಂಧವರು ಹಿತೈಸಿಗಳು ಹಾಗೂ ಹಿರಿಯರ ಸಮ್ಮುಖದಲ್ಲಿ ಶುಭಲಗ್ನವನ್ನು ಗೊತ್ತು ಮಾಡಲು ಜಂಗಮರನ್ನು ಕರೆದು, ಕೊಬ್ಬರಿ, ಬೆಲ್ಲ, ಪೂಜಾ ಸಾಮಾಗ್ರಿಗಳು, ಆರತಿ, ತೆಂಗಿನ ಕಾಯಿ, ಅರಿಷಿಣ–ಕುಂಕುಮ ಮುಂತಾದ ವಸ್ತುಗಳಿಂದ ಪೂಜೆ ಮಾಡಿ ಬಿಳಿಯ ಬಟ್ಟೆಯಲ್ಲಿ ಒಂದು ತೆಂಗಿನ ಕಾಯಿ ಕಟ್ಟಿಸಿ ಜೋಪಾನವಾಗಿರುವಂತೆ ಸೂಚಿಸುತ್ತಾರೆ. ಇದನ್ನು ಮೂಹುರ್ತದ ಕಾಯಿ ಎಂದು ಕರೆಯುತ್ತಾರೆ. ಈ ಕಾಯಿಯನ್ನು ಅಕ್ಷತೆಯ ಸಂದರ್ಭದಲ್ಲಿ ಈ ಮೂಹುರ್ತದ ಕಾಯಿಯನ್ನು ಗಂಡಿನ ಬಲ ಕೈಯಲ್ಲಿ ಹಿಡಿದುಕೊಳ್ಳಲು ಕೊಡುತ್ತಾರೆ. ಮದುವೆಯ ಎಲ್ಲ ಕಾರ್ಯಗಳೂ ಮುಗಿಯುವವರೆಗೂ ಇದು ಒಡೆದು ಹೋಗದಂತೆ ನೋಡಿಕೊಳ್ಳಬೇಕಾಗುತ್ತದೆ. ಒಂದು ವೇಳೆ ಮೂಹರ್ತದ ಕಾಯಿಯು ಒಡೆದು ಹೋದರೆ, ಮುಂದೆ ಏನೋ ಕೆಟ್ಟ ಘಟನೆಗಳು ಸಂಭವಿಸುತ್ತವೆ ಎಂಬ ನಂಬಿಕೆ ಇದೆ. ಆದ್ದರಿಂದ ಬಿಳಿಯ ಬಟ್ಟೆಯನ್ನು ಕಟ್ಟುತ್ತಾರೆ.

ಗಂಗಾಪೂಜೆ

ನೊಳಂಬರ ವಿವಾಹದ ವಿಧಿಗಳ ಪ್ರಥಮವಾಗಿ ದೇವತಾ ಕಾರ್ಯದೊಂದಿಗೆ ಪ್ರಾರಂಭವಾಗುತ್ತದೆ. ವಿವಾಹದ ಹಿಂದಿನ ದಿನ ಪವಿತ್ರ ದೇವತಾ ಕಾರ್ಯ ನೆರವೇರಿಸುತ್ತಾರೆ. ಈ ದೇವತಾ ಕಾರ್ಯದಲ್ಲಿ ಮೂಲವಿಧಿಯಾಗಿ ಗಂಗಾಪೂಜೆ ನೆರವೇರಿಸುತ್ತಾರೆ. ಈ ವಿಧಿಯಲ್ಲಿ ಗಂಗೆಯಲ್ಲಿ ತರಲು ಮುತ್ತೈದೆಯರು ಬಾವಿಯ

ಹತ್ತಿರ ಹೋಗಿ ಪೂಜೆ ನೆರವೇರಿಸಿ, ಬಾವಿಯಿಂದ ಗಂಗೆಯನ್ನು ಮಂಗಳ ವಾದ್ಯಗಳೊಂದಿಗೆ ಮೆರವಣಿಗೆಯಲ್ಲಿ ತರುತ್ತಾರೆ. ತಂದ ಗಂಗೆಯ ನೀರನ್ನು ಮತ್ತೊಂದು ಬಾರಿ ಮನೆಯಲ್ಲಿ ಪೂಜಿಸಿ ಕಳಸ ಅನುಷ್ಠಾನಗೊಳಿಸಲಾಗುತ್ತದೆ.

ಕಳಸ ಪ್ರತಿಷ್ಠಾಪನೆಯನ್ನು ಮನೆ ದೇವರ ಮುಂದೆ ಜೋಪಾನವಾಗಿ ಇಡುತ್ತಾರೆ. ಈ ಕಳಸ ಮನೆಯ ಹೊರಗೆ ಹೊರಟರೆ ಇದಕ್ಕೆ ಬಿಳಿ ಕೊಡೆ ಹಿಡಿದಿರಬೇಕು. ಇತ್ತೀಚಿನ ದಿನಗಳಲ್ಲಿ ಬಿಳಿಯ ಕೊಡೆಗಳ ಅಲಭ್ಯತೆಯಿಂದಾಗಿ ಕರಿಯ ಕೊಡೆಗಳನ್ನೇ ಬಳಸಲಾಗುತ್ತಿದೆ. ಆದರೆ, ಸಾಂಪ್ರದಾಯಿಕ ನಿಯಮಾವಳಿಗಳ ಪ್ರಕಾರ ಕಪ್ಪು ಬಣ್ಣದ ಕೊಡೆಗಳನ್ನು ಬಳಸಲು ಅವಕಾಶವಿಲ್ಲದಂತಾಗಿದೆ. ಆ ಕಾರಣಕ್ಕಾಗಿ ಆ ಕಪ್ಪು ಬಣ್ಣದ ಕೊಡೆಯ ಮೇಲೆ ಬಿಳಿಯ ವಸ್ತ್ರವನ್ನು ಹೊದಿಸುವದರ ಮೂಲಕ ಆ ನಿಯಮವನ್ನು ಆಹ್ವಾನಿಸಿಕೊಳ್ಳಲಾಗುತ್ತಿದೆ. ಬಿಳಿ ಬಣ್ಣವು ಶುಭದ ಸಂಕೇತವೆಂದು ಹಾಗೂ ಕಪ್ಪು ಬಣ್ಣವು ಅಶುಭದ ಕಾರಣದಿಂದ ಕಪ್ಪ ಬಣ್ಣದ ಕೊಡೆಯ ಮೇಲೆ ಬಿಳಿ ಬಣ್ಣದ ಬಟ್ಟೆಯನ್ನು ಹೊದಿಸಲಾಗುತ್ತದೆ.

ವೀಳ್ಯ ಕೊಡುವುದು

'ವೀಳ್ಯ ನೀಡುವುದು ಒಂದು ಸಂಪ್ರದಾಯ ವೀಳ್ಯ ಮತ್ತು ದಕ್ಷಿಣೆ ಅರಿಷಿಣ-ಕುಂಕುಮವನ್ನು ಜಂಗಮ, ಮಡಿವಾಳ, ಕುಂಬಾರ, ಬಡಗಿ, ಶೀಲವಂತ(ಕ್ಷೌರಿಕ) ಇವರಿಗೆ ಐದು ಜನ ಮುತ್ತೈದೆಯರಿಂದ ವೀಳ್ಯ ಕೊಟ್ಟು ವಿವಾಹಕ್ಕೆ ಆಹ್ವಾನಿಸಲಾಗುತ್ತದೆ'(ನಂಜಪ್ಪ ಕಣಿವೇಹಳ್ಳಿ).

ಹಂದರ(ಚಪ್ಪರ)

ಚಪ್ಪರ ಹಾಕುವ ಕಾರ್ಯವನ್ನು ಸಾಮಾನ್ಯವಾಗಿ ಈಶಾನ್ಯ ಮೂಲೆಯ ಮೊದಲನೆಯ ಕಂಬ ನೆಟ್ಟು ಹಾಲು-ತುಪ್ಪ ಹಾಕಿ ಪೂಜೆಯನ್ನು ಮಾಡುವುದರ ಮೂಲಕ ಆರಂಭಿಸಲಾಗುತ್ತದೆ. ಆ ನಂತರ ಮಡಿವಾಳ ಬಂದು ಮಡಿಯಾದ ಬಟ್ಟೆಗಳನ್ನು ತಂದು ಕೊಡುತ್ತಾನೆ. ಮಡಿವಾಳ ತಂದು ಕೊಟ್ಟ ಮಡಿ ಬಟ್ಟೆಯನ್ನು ಹಂದರಕ್ಕೆ ಕಟ್ಟಲಾಗುತ್ತದೆ. ಆ ಬಟ್ಟೆಯು ಅರಿಷಿಣದಿಂದ ಕೂಡಿದ್ದಾಗಿರುತ್ತದೆ. ಈ ಚಪ್ಪರಕ್ಕೆ ಮಾವಿನ ತೋರಣ, ಹೂವು ಮತ್ತು ಬಾಳೆದಿಂಡುವಿನಿಂದ ಅಲಂಕರಿಸುತ್ತಾರೆ.

ಚಪ್ಪರ(ಕಂಭ) ತರುವುದು

ನೊಳಂಬರಲ್ಲಿ ವಿಶಿಷ್ಟವಾಗಿ ಆಚರಣೆಯಲ್ಲಿ ಇರುವಂತಹದು ಚಪ್ಪರಕಂಭ ತರುವುದು. ಇಲ್ಲಿ ಕಳ್ಳಿ ಮತ್ತು ಹತ್ತಿಯ ಕಂಭಗಳನ್ನು ಕಡಿದು ತಂದು ಊರ ದೇವಸ್ಥಾನದ ಹತ್ತಿರ ಇಟ್ಟು ಅದನ್ನು ಪೂಜೆ ಮಾಡಲಾಗುತ್ತದೆ. ಇದನ್ನು ಮುತ್ತೈದೆಯರು ಕಳಸ, ಕನ್ನಡಿಯೊಂದಿಗೆ ನೆಂಟರು ಗಂಡು ಮಕ್ಕಳು ತೆಗೆದುಕೊಂಡು ಬಂದು ಮೂಹೂರ್ತದ ಚಪ್ಪರಕ್ಕೆ ಕಟ್ಟುತ್ತಾರೆ. ಇದರ ವಿಶೇಷತೆ ಎಂದರೆ ಕಳ್ಳಿ ಮತ್ತು ಎರಡು ಕೂಡ ಹಾಲು ಇರುವಂತಹದವುಗಳು ಎಲ್ಲಿಯಾದರೂ ಬಿದ್ದರು ಹಾಗೆಯೇ ಚಿಗುರುತ್ತದೆ. ಆದ ಕಾರಣ ಸಂತಾನೋತ್ಪತ್ತಿ ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ಹೀಗೆ ವಂಶ ಬೆಳೆಯುತ್ತದೆ ಎಂಬ ನಂಬಿಕೆ ಜನರಲ್ಲಿದೆ(ನಂಜಪ್ಪ ಕಣಿವೇಹಳ್ಳಿ).

ಅರಿಷಿಣ ಎಣ್ಣೆ ಕೊಡುವುದು

ಸಾಮಾನ್ಯವಾಗಿ ಊರಿನಲ್ಲಿರುವ ಮುತ್ತೈದೆಯರು ಹಾಗೂ ಕನ್ಯೆಯ ಕಡೆಯುವರು ಸೇರಿಕೊಳ್ಳುತ್ತಾರೆ. ನಂತರ ಮಂಗಳವಾದ್ಯಗಳೊಂದಿಗೆ ಅರಿಷಿಣ ಎಣ್ಣೆ ಕೊಡಲು ತಯಾರಾಗುತ್ತಾರೆ. ಎಲೆ, ಅಡಿಕೆ, ಅರಿಷಿಣ-ಕುಂಕುಮ, ಸೀಗೆ, ಅಕ್ಷತೆ, ಎಣ್ಣೆ ತೆಗೆದುಕೊಂಡು ಮೊದಲು ದೇವಸ್ಥಾನಗಳಿಗೆ ಕೊಟ್ಟು ಆ ನಂತರ ಜಂಗಮರ ಮನೆಗೆ ಕೊಟ್ಟ ಮೇಲೆ, ಆ ಊರಿನ ಎಲ್ಲಾ ಮನೆಗಳಿಗೆ ಹೋಗಿ ಹೆಣ್ಣುಮಕ್ಕಳ ಸಮೇತ ವಿವಾಹ ಸಮಾರಂಭಕ್ಕೆ ಆಧರದಿಂದ ಸ್ವಾಗತಿಸುತ್ತಾರೆ. ಹೀಗೆ ಊರಿನ ಪ್ರತಿಯೊಂದು ಮನೆಗಳಿಗೆ ತೆರಳಿ ಸ್ವಾಗತಿಸುವುದು ಅಪರೂಪದ ಸಂಗತಿಯಾಗಿದೆ.

ಹರುಣೆ ಬಾಸಿಂಗ ತರುವುದು

ಕಳಸ, ಕನ್ನಡಿ, ದೀವಟ್ಟಿಗೆಯನ್ನು ಹಿಡಿದುಕೊಂಡು ಮುತ್ತೈದೆಯರೊಂದಿಗೆ ಅರುಣೆ ಬಾಸಿಂಗಾ ತರಲು ಅಚ್ಚಂದ ಎಲ್ಲಾ ತರಹದ ಬೆಳೆ, ಬೆಲ್ಲ. ಎಲೆ ಮತ್ತು ಅಡಿಕೆ ಕಾಣಿಕೆಯನ್ನು ಇಟ್ಟುಕೊಂಡು ಕುಂಬಾರನ ಮನೆಗೆ ಹೋಗಿ ಪೂಜೆ ಮಾಡಿ ೧೬ ಕುಂಬ ಹಾಗೂ ೧೬ ಕಂಬದ ನಾಲ್ಕು ಬಾಸಿಂಗಗಳನ್ನು ತೆಗೆದುಕೊಂಡು ಮನೆಗೆ ಹೋಗಲಾಗುತ್ತದೆ.

ಹರಿಣೆ ಊಡುವುದು

ಕುಂಬಾರರ ಮನೆಯಿಂದ ತಂದ ಹರಿಣೆ ಬಾಸಿಂಗವನ್ನು ಪೂಜಿಸಿ ಹತ್ತಿಯ ನೂಲ(ದಾರ)ನ್ನು ಬಿಟ್ಟು ಅದಕ್ಕೆ ಶರಣು ಎನ್ನಬೇಕು. ಈ ವಿಧಿಗೆ ನೊಳಂಬರು ದೇವರು ಎಂಬ ಭಾವನೆಯು ಅವರಲ್ಲಿದೆ. ಪ್ರತಿಯೊಂದು ವಿಧಿಯು ಮುಗಿದ ನಂತರ ವಧು-ವರರು ಹರಿಣೆಗೆ ಬಂದು ಶರಣು ಎನ್ನಬೇಕು. ಆಗ ಅವರು ಬಾಸಿಂಗವನ್ನು ಧರಿಸಲು ಅರ್ಹರಾಗುತ್ತಾರೆ. ಇದೊಂದು ವಿಶಿಷ್ಟವಾದ ನಿಯಮವಾಗಿದೆ.

ಹೆಣ್ಣು ಮಾಡುವುದು(ಮದುಮಗಳನ್ನು ಮಾಡುವುದು)

ವಿವಾಹದ ಮೊದಲನೆಯ ದಿನ ಬೆಳಗ್ಗೆ ಮಂಗಳ ವಾದ್ಯಗಳೊಂದಿಗೆ ಅನೇಕ ಕ್ರಿಯಾವಿಧಿಗಳನ್ನು ವಧು-ವರರ ಮನೆಯಲ್ಲಿ ನೆರವೇರಿಸುತ್ತಾರೆ. ಹೆಣ್ಣು ಮಾಡುವುದು ಎಂದರೆ, ಮಧುಮಗಳು ಆಗಿರುವವಳಿಗೆ ಅರಿಷಿಣ ಮತ್ತು ಎಣ್ಣೆಯನ್ನು ಹಚ್ಚಿ ಅರತಿ ಎತ್ತಿ ಅಕ್ಷತೆಯನ್ನು ಹಾಕಲಾಗುತ್ತದೆ. ಈ ಕ್ರಿಯಾ-ವಿಧಿಯು ಪ್ರಮುಖವಾಗಿ ಸಂಬಂಧಿಕರು ನೆರೆಹೊರೆಯವರು ಸೇರಿಕೊಂಡು ಮಾಡುವಂತ ಕಾರ್ಯವಾಗಿದೆ. ತದನಂತರದಲ್ಲಿ ಎಣ್ಣೆ ನೀರು ಹಾಕುವುದರ ಮೂಲಕ ಎಣ್ಣೆ ಸ್ನಾನ ಮಾಡಿಸಲಾಗುತ್ತದೆ. ಇದನ್ನೇ ಹೆಣ್ಣು ಮಾಡುವುದು ಎಂದು ಹೇಳಲಾಗುತ್ತದೆ. ವಧುವನ್ನು ಅಲಂಕರಿಸಿ ಆನಂತರ ಲಿಂಗಾಯತದ ಪರಂಪರೆಯಾಗಿ ಬಂದ ಶಿವಲಿಂಗವನ್ನು ಧರಿಸುವುದರ ಮುಖೇನ ಆರತಿ ಎತ್ತಿ ಅಕ್ಷತೆ ಹಾಕುತ್ತಾರೆ.

ಗಂಡು ಮಾಡುವುದು (ಮಧುಮಗನ ಮಾಡುವುದು)

ಹೆಣ್ಣಿಗೆ ಮಾಡಿದ ವಿಧಿ-ವಿಧಾನಗಳಂತೆಯೇ ವರನಿಗೂ ಸಹ ವರನ ಮನೆಯಲ್ಲಿ ನೆರವೇರಿಸುತ್ತಾರೆ. ಮದ್ಲಿಂಗ(ಮದುವೆ ಗಂಡು)ನಿಗೆ ಕ್ಷೌರವನ್ನು ಮಾಡಿಸಲು ಶೀಲವಂತ(ಕ್ಷೌರಿಕ)ನಿಗೆ ಆಹ್ವಾನಿಸಲಾಗುತ್ತದೆ. ಹೊಸ ಬಟ್ಟೆ ಅಚ್ಚಂದವನ್ನು ಕಾಣಿಕೆಯನ್ನು ಕೊಟ್ಟು ಕ್ಷೌರವನ್ನು ಮಾಡಿಸುತ್ತಾರೆ. ತದನಂತರ ವರನಿಗೆ ಅರಿಷಿಣ ಎಣ್ಣೆಯನ್ನು ಹಚ್ಚಿ ಎಣ್ಣೆಸ್ನಾನ ಮಾಡಿಸಿ ಹೊಸ ಬಟ್ಟೆಯನ್ನು ಧರಿಸುತ್ತಾರೆ. ಆ ಮೇಲೆ ಆರತಿ ಮಾಡಿ ಅಕ್ಷತೆಯನ್ನು ಮಾಡಲಾಗುತ್ತದೆ. ಹೀಗೆ ಗಂಡು ಮಾಡಿಕೊಂಡು ಆ ಗ್ರಾಮದ ದೇವಸ್ಥಾನಕ್ಕೆ ನಂದಿ ದೀವಟ್ಟಿಗೆ(ಪಂಜು), ಕಳಸ, ಕನ್ನಡಿ, ಛತ್ರಿಗಳೊಂದಿಗೆ ಹಾಗೂ ಮಂಗಳವಾದ್ಯಗಳೊಂದಿಗೆ, ಸಂಬಂಧಿಕರು ನೆರೆಹೊರೆಯವರೊಡಗೂಡಿ ಪೂಜೆಗೆ ಹೋಗಲಾಗುತ್ತದೆ.

ಇದೊಂದು ಪ್ರಾಚೀನ ಪರಂಪರಾಗತ ಅಚರಣೆಯಾಗಿರುವುದರಿಂದ ಮೊದಲು ಎತ್ತಿನಗಾಡಿಗಳಲ್ಲಿ ಪ್ರಯಾಣಿಸಿ ಈ ನಿಯಮಾವಳಿಗಳನ್ನು ಪೂರೈಸಿಕೊಳ್ಳಲಾಗುತ್ತಿತ್ತು. ಇತ್ತೀಚಿನ ಆಧುನಿಕತೆಯ ಒತ್ತಡದಿಂದಾಗಿ ಎತ್ತಿನ ಗಾಡಿಗಳ ಬದಲಾಗಿ ಪರ್ಯಾಯ ಯಾಂತ್ರಿಕ ವಾಹನಗಳನ್ನು ಬಳಸಿಕೊಳ್ಳಲಾಗುತ್ತಿದೆ.

ನೊಣಬರ ಮದುವೆಗಳು ಸಾಮನ್ಯವಾಗಿ ವಧುವಿನ ಮನೆಯಲ್ಲಿಯೇ ನಡೆಯುವುದು ವಾಡಿಕೆ. ವರನ ಕಡೆಗಿನ ಸವಾರಿ ವಧುವಿನ ಸ್ವಗ್ರಾಮಕ್ಕೆ ಬಂದ ತಕ್ಷಣ ವರನ ಕಡೆಯವರಿಗೆ ವಧವಿನ ಸಂಬಂಧಿಕರು ಬೆಲ್ಲ ಅಥವಾ ಸಕ್ಕರೆಯೊಂದಿಗೆ ತಂಪು ನೀರನ್ನು ಕುಡಿಯಲು ಕೊಡುವುದರ ಮೂಲಕ ವರನ ಕಡೆಯ ನೆಂಟರಿಷ್ಟರಿಗೆ ಆತಿಥ್ಯ ಮಾಡುತ್ತಾರೆ. ವಧುವಿನ ಮನೆಯ ಕಡೆಯವರೂ ಕೂಡ ವರನ ಕಡೆಯವರಿಗೆ, ವಧುವಿನ ಪುರವನ್ನು ಪ್ರವೇಶ ಮಾಡಿದ ತಕ್ಷಣ ಮೊದಲು ಅವರನ್ನು ಪುರದಲ್ಲಿರುವ ದೇವಸ್ಥಾನಕ್ಕೆ ಕರೆದುಕೊಂಡು ಹೋಗುತ್ತಾರೆ. ಅಲ್ಲಿ ಪೂಜೆ ಮಾಡಿಸಿ, ಅಕ್ಷತೆಯನ್ನು ವರನಿಗೆ ಇಟ್ಟು ವರನನ್ನು ವಧುವಿನ ಮನೆಗೆ ಕಳಸ, ಕನ್ನಡಿ, ನಂದಿಕೋಲುಗಳೊಂದಿಗೆ ಕರದೊಯ್ಯಲಾಗುತ್ತದೆ. ಹೀಗೆ ಸಂಪ್ರದಾಯ ಬದ್ಧವಾಗಿ ವರನಕಡೆಯವರನ್ನು ವಧುವಿನ ಮನೆಗೆ ಕರೆತಂದ ಬಳಿಕ ಅವರುಗಳೆಲ್ಲರಿಗೂ ಊಟೋಪಚಾರ ಮಾಡಲಾಗುತ್ತದೆ. ಎಲ್ಲರಿಗೂ ಶಾಸ್ತ್ರ ಬದ್ಧವಾಗಿ ಬೋಜನಮಾಡಿಸಿದ ತರುವಾಯ, ಆ ರಾತ್ರಿ ಹೆಣ್ಣಿಗೆ ಬಳೆ ತೊಡಿಸುವ ಶಾಸ್ತ್ರ ಪ್ರಾರಂಭವಾಗುತ್ತದೆ.

ವಧುವಿಗೆ ಬಳೆ ತೊಡಿಸುವ ಶಾಸ್ತ್ರ

ಈ ಬಳೆ ತೊಡಿಸುವುದು ವಧು ಅಥವಾ ಹೆಣ್ಣಿನ ಜೀವನದಲ್ಲಿ ಬಹು ಮುಖ್ಯವಾದ ಘಳಿಗೆ ಎಂದೇ ಪರಿಭಾವಿಸಲಾಗುತ್ತದೆ. ಅದು ಕನ್ಯೆಯಾದವಳನ್ನು ಗೃಹಿಣಿಯನ್ನಾಗಿಸುವ ಮೊದಲ ಪ್ರಯತ್ನವಾಗಿರುತ್ತದೆ. ಇಲ್ಲಿ ವಧುವಿಗೆ ವಿಶೇಷವಾಗಿ ಹಸಿರು ಬಳೆಗಳನ್ನು ತೊಡಿಸಲಾಗುತ್ತದೆ. ಬಳೆಗಾರ ಪೂಜೆ ಪುನಸ್ಕಾರ ಮಾಡಿದ ತರುವಾಯ ದಕ್ಷಿಣೆಯನ್ನು ಸ್ವಿಕರಿಸಿ ಬಳೆಗಳನ್ನು ತೊಡಿಸುತ್ತಾನೆ. ವಧುವಿನ ಜೊತೆಗೆ ಕೆಲವೊಂದು ಐದು, ಒಂಬತ್ತು ಅಥವಾ ಹನ್ನೊಂದು ಜನ ಮುತ್ತೈದೆಯರಿಗೆ ಬಳೆಯನ್ನು ತೊಡಿಸಲಾಗುತ್ತದೆ. ಈ ಬಳೆಯ ಶಾಸ್ತ್ರದಲ್ಲಿ ತೊಡಗಿದ ಮುತ್ತೈದೆಯರೊಂದಿಗೆ ವಧುವು ನಂದಿ ಪೂಜೆಯನ್ನು ಮಾಡಿಕೊಂಡು ಬರಲಾಗುತ್ತದೆ. ಈ ಒಂದು ಶಾಸ್ತ್ರ ಮುಗಿದ ನಂತರ ವಧುವಿಗೆ ಪ್ರಥಮವಾಗಿ ಹೆಣ್ಣು ಮಾಡುವ ಶಾಸ್ತ್ರ ಪ್ರಾರಂಭವಾಗುತ್ತದೆ.

ವಧುವಿನ ಹಸೆಮಣೆಶಾಸ್ತ್ರ

ವಧುವಿನ ಹಸೆಮಣೆಶಾಸ್ತ್ರವನ್ನು ಅತ್ಯಂತ ಕ್ರಮಬದ್ಧವಾಗಿ ನೆರವೇರಿಸಲಾಗುತ್ತದೆ. ವಿಶೇಷವಾಗಿ ಇದನ್ನು ಪ್ರಮಥವಾಗಿ ಮಾಡಲಾಗುತ್ತದೆ. ಈ ಶಾಸ್ತ್ರಕ್ಕೆ ಪ್ರಮುಖವಾಗಿ ಶುದ್ಧವಾದ ರಾಗಿ ಹಿಟ್ಟು(ಬರೀ ರಾಗಿಯನ್ನಷ್ಟೇ ಕಲ್ಲಿನಲ್ಲಿ ಬೀಸಿದ ಹಿಟ್ಟು) ಅದಕ್ಕೆ ಅರಿಷಿನಪುಡಿ ಸೇರಿಸಿ ಹಸೆ ಬರೆಯುತ್ತಾರೆ. ಅದರ ಮೇಲೆ ಒಂದು ಮಣೆ(ಕಟ್ಟಿಗೆಯ ಹಲಗೆ)ಯನ್ನು ಹಾಕಿ ಬಿಳಿಯ ವಸ್ತ್ರವನ್ನು ಹಾಕಲಾಗುತ್ತದೆ. ನಂತರ ವಧುವನ್ನು ಸೋದರ ಮಾವನ(ವಧುವಿನ ತಾಯಿಯ ತಮ್ಮ ಅಥವಾ ಅಣ್ಣ) ಮನೆಯಿಂದ ಕೊಡಮಾಡಲ್ಪಟ್ಟ ಹೊಸ ಬಟ್ಟೆ ಸೀರೆ, ರವಿಕೆ(ಕುಪ್ಪಸ) ತೊಟ್ಟು ಜೊತೆಗೆ ಹೂವು ಮುಡಿಸಿ ಹಸೆಮಣೆಯ ಮೇಲೆ ಕೂರಿಸಲಾಗುತ್ತದೆ. ಜಂಗಮರಿಂದ ಪ್ರಥಮವಾಗಿ ಕಂಕಣ(ಹಂಗನೂಲು–ವೀಳ್ಯದ ಎಲೆ)ವನ್ನು ವಧುವಿನ ಕೈಗೆ ಕಟ್ಟಿ ಕಾರ್ಯ ಪ್ರಾರಂಭಿಸಲಾಗುತ್ತದೆ. ಗುರುಗಳು ಮೊದಲು ಅರಿಷಿಣ ಎಣ್ಣೆ ಹಚ್ಚಿದ ನಂತರ ಇತರೆ ಮುತ್ತೈದೆಯರಿಗೂ ಕಂಕಣವನ್ನು ಕಟ್ಟಲಾಗುತ್ತದೆ. ಹಾಗೂ ಅವರಿಂದ ವಧುವಿಗೆ ಅಕ್ಷತೆ ಇಟ್ಟು ಜೊತೆಗೆ ಐದು ಅಥವಾ ಒಂಬತ್ತು ಜನ ಮುತ್ತೈದೆಯರು ಆರತಿ ಮಾಡುತ್ತಾರೆ. ತದನಂತರದಲ್ಲಿ ಸ್ನಾನ ಮಾಡಿಸಲಾಗುತ್ತದೆ. ಈ ರೀತಿಯಾಗಿ ಹೆಣ್ಣಿನ ಹಸೆ ಮಣೆಕಾರ್ಯ ಮುಕ್ತಾಯವಾಗುತ್ತದೆ.

ಗಂಡಿನ ಹಸೆಮಣೆಶಾಸ್ತ್ರ

ವರನಿಗೂ ಕೂಡ ಸಂಪ್ರದಾಯಬದ್ಧವಾಗಿ ಕೆಲವು ಪದ್ಧತಿಗಳನ್ನು ನೆರವೇರಿಸಲಾಗುತ್ತದೆ. ವರನಿಗೂ ಕೂಡ ನಂದಿ ಪೂಜೆಯನ್ನು ಮಾಡಿಸಲಾಗುತ್ತದೆ. ಈ ಕಾರ್ಯವು ಮುಗಿದ ನಂತರದಲ್ಲಿ ಶುದ್ಧವಾದ ರಾಗಿ ಹಿಟ್ಟಿನಿಂದ ಹಸೆಯನ್ನು ಬರೆಯಲಾಗುತ್ತದೆ. ವಧುವಿಗೆ ಮಾಡಿದ ಹಸೆಮಣೆಯ ರೀತಿಯಲ್ಲಿಯೇ ವರನಿಗೂ ಮಾಡಲಾಗುತ್ತದೆ.

ಓನಕೆ ಶಾಸ್ತ್ರ

ಓನಕೆಶಾಸ್ತ್ರವು ಮೂಲತಃ ರೈತಾಪಿ ಜನರ ನಂಬಿಕೆಯಾದ ಇದು ಮದುವೆಯ ಸಂಪ್ರದಾಯದಲ್ಲಿ ಪ್ರಮುಖವಾಗಿ ಸೇರಿಕೊಂಡಿದೆ. ಈ ಆಚರಣೆಯಿಂದ ನೊಳಂಬರ ಸಮುದಾಯವನ್ನು ಕೃಷಿ ಮೂಲದವರೆಂದು ಅರಿಯಲು ಸಾಧ್ಯವಾಗುತ್ತದೆ. ಹಿಂದಿನಿಂದ ಆಚರಣಾತ್ಮಕವಾಗಿ ಬಂದ ಈ ನಂಬಿಕೆಯ ಪ್ರಕಾರ ಭತ್ತವನ್ನು ಒಳಕಲ್ಲಿಗೆ ಹಾಕಿ

ವರನಿಂದ ಓನಕೆಯಿಂದ ಕುಟ್ಟಿ ಪುಡಿಮಾಡಿಸಿ, ಅದೇ ಅಕ್ಕಿಯನ್ನು ಮೂಹೂರ್ತಕ್ಕೆ ಹಸೆ ಬರೆಯಲು ಬಳಸುತ್ತಿದ್ದರು. ಇದರ ಉದ್ದೇಶವು ವರನೂ ಹೇಗೆ ಗ್ರಾಮೀಣ ರೈತ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಬಲ್ಲ ಮತ್ತು ಸಂಸಾರಿಕ ಜೀವನದಲ್ಲಿ ಹೇಗೆ ಬಾಳಬಲ್ಲ ಎಂಬುದನ್ನು ಅರಿಯುವ ಪ್ರಯತ್ನವನ್ನು ಮಾಡುವ ಉದ್ದೇಶವಿದ್ದ ಹಾಗೆ ಕಂಡುಬರುತ್ತದೆ. ಈ ಕಾರಣಕ್ಕೆ ವಧು ಮತ್ತು ವರನ ಇಬ್ಬರು ಕಡೆಯವರ ಹಸೆಮಣೆ ಶಾಸ್ತ್ರಕ್ಕೆ ಬೇಕಾಗುವ ಈ ಅಕ್ಕಿಯನ್ನು ವಧು ಮತ್ತು ವರನ ಕಡೆಯ ತಲಾ ನಾಲ್ಕಾರು ಜನ ಸೇರಿಕೊಂಡು ಭತ್ತವನ್ನು ತಳಿಸಿ ಈ ಕಾರ್ಯವನ್ನು ಮುಗಿಸುತ್ತಾರೆ.

ಅಚ್ಚುಮಣೆಯನ್ನು ತರುವುದು

ಮುಖ್ಯವಾಗಿ ಹಸೆಮಣೆಯ ಶಾಸ್ತ್ರವನ್ನು ಮಾಡಲು ಕಟ್ಟಿಗೆ ಮಣೆ ಬೇಕಾಗುತ್ತದೆ. ಆ ಮಣೆಯನ್ನು ಬಡಗಿಯ ಮನೆಯಿಂದ ತರಲು ಮಂಗಳ ವಾದ್ಯಗಳೊಂದಿಗೆ, ಕಳಸ, ಕನ್ನಡಿ, ಬಿಳ್ಗೊಡೆಗಳ ಜೊತೆ ದೀವಟ್ಟಿಗೆಯನ್ನು ಹಿಡಿದುಕೊಂಡು ಬರುತ್ತಾರೆ. ಆ ನಂತರ ಮಧ್ಯರಾತ್ರಿ ಆಗಿರುವ ಕಾರಣ ಮಲಗಿರುವ ಅವರನ್ನು ಸೋಬಾನೆ ಪದಗಳನ್ನು ಹೇಳುವುದರ ಮೂಲಕ ನಿದ್ದೆಯಿಂದ ಎಚ್ಚರಗೊಳಿಸಿ, ಅವರಿಗೆ ಅಚ್ಚಂದ ಕಾಣಿಕೆಯನ್ನು ಕೊಡುತ್ತಾರೆ. ಆಗ ಬಡಿಗಿಯು ಒಂದು ಮಣೆಯನ್ನು ಕೊಡುತ್ತಾನೆ. ನಂತರ ಅದೇ ವಾದ್ಯಗಳೊಂದಿಗೆ ಮರಳಿ ಮೆರವಣಿಗೆಯ ಮೂಲಕ ವಾಪಾಸ್ಸಾಗುತ್ತಾರೆ. ಇದು ನಮಗೆ ಪ್ರಾಚೀನ ಕಾಲದಿಂದಲೂ ರೈತ ಮತ್ತು ವಿಶ್ವಕರ್ಮರ ಮಧ್ಯ ಕೊಡುಕೊಳ್ಳುವ ವ್ಯವಹಾರ, ಪರಸ್ಪರ ವಿನಿಮಯ ಇರುವುದು ಕಂಡುಬರುತ್ತವೆ.

ಮೂಹೂರ್ತದ ಗಂಡಿನ ಅಕ್ಕಿ ಹಸೆ

ಮುತ್ತೈದೆಯರಿಂದ ಅಕ್ಕಿ ಹಸೆ ಬರೆಸುತ್ತಾರೆ. ವಧುವಿನ ಕಡೆಯವರು ವರನಿಗೆ ಹೊಸಬಟ್ಟೆ ಆಭರಣ ಕೊಟ್ಟು ನಂದಿಯ ಪೂಜೆಯನ್ನು ಮಾಡಿಸಿ ಅಕ್ಕಿ ಹಸೆಯ ಮೇಲೆ ವಧುವನ್ನು ಕೂರಿಸಿ ಗುರುಗಳಿಂದ ಆರತಿ ಮಾಡಿಸಿ ನಂದಿಯ ಚಿತ್ರವಿರುವ ಭಾಸಿಂಗ ಕಟ್ಟಿಸಿ ಗುರುಗಳಿಂದ ಆಶೀರ್ವಾದ ಮಾಡುತ್ತಾರೆ.

ವರನ ಒಂಟಿ ಸೂರಗೀ ಹಿಡಿಯುವುದು

ಅನಂತರ ಸೂರಗೀ ಹಿಡಿಯುವುದು ನಾಲ್ಕು ಜನ, ನಾಲ್ಕು ಮೂಲೆಯಲ್ಲಿ ನಿಂತುಕೊಂಡು ನಾಲ್ಕು ಎಳೆಯ ಸೂರುಗಿ ನೂಲನ್ನು ಹಿಡಿದುಕೊಳ್ಳುತ್ತಾರೆ. ವರನಿಗೆ ಕುಂಭದ ನೀರನ್ನು ಬಿಡುತ್ತಾರೆ. ವರನನ್ನು ಮೂಹರ್ತಕ್ಕೂ ಮೊದಲು ಒಂಟಿಯಾಗಿ ಬಂಧಿಸಲ್ಪಡುವುದು(ದಿಗ್ಬಂಧನಕ್ಕೆ ಒಳಪಡಿಸಲಾಗುತ್ತದೆ). ನಂದಿಯನ್ನು ಅಲಂಕರಿಸಿ ಹೊಸ ವಸ್ತ್ರವನ್ನು ಹಾಕಿಕೊಂಡು ನಂದಿಯನ್ನು ಮುಂದಿಟ್ಟುಕೊಂಡು ದೇವಸ್ಥಾನಕ್ಕೆ ವರನನ್ನು ಕರೆದುಕೊಂಡು ಹೋಗಿ ಅಕ್ಷತೆಯನ್ನು ತಳೆದು ವರನನ್ನು ಬಿಡದಿ ಕೊಡುತ್ತಾರೆ(ಬಿಡುವು ನೀಡುವುದು).

ವೀಳ್ಯ ತಿದ್ದುವುದು

ವೀಳ್ಯ ತಿದ್ದುವುದು ಅಂದರೆ ಗಂಡಿನ ಕಡೆಯವರು ತಂದಿರುವ ಒಡವೆ ವಸ್ತ್ರ ಇವುಗಳನ್ನು ವಧುವಿನ ಕಡೆಯವರಿಂದ ಹಿರಿಯರಿಗೆ ಒಪ್ಪಿಸಿ ಎಲ್ಲಾ ಸರಿಯಾಗಿದೆ ಎಂದು ಸೂಚಿಸಿದಾಗ ವೀಳ್ಯ ಹಂಚುವುದು ಮತ್ತು ದೈವದ ಮುಖ್ಯಸ್ಥರಿಂದ ಚಪ್ಪರದ ಹಣವನ್ನು ಕಟ್ಟಿಸಿಕೊಂಡು ಒಡವೆ ವಸ್ತುಗಳನ್ನು ಗುರು ಹಿರಿಯರ ಮೂಲಕ ಒಪ್ಪಿಸುತ್ತಾರೆ.

ಮೂಹೂರ್ತದ ವಧುವಿನ ಅಕ್ಕಿ ಹಸೆ

ಮುತ್ತೈದೆಯರಿಂದ ಅಕ್ಕಿ ಹಸೆ ಬರೆಸುತ್ತಾರೆ. ವರನ ಕಡೆಯವರು ವಧುವಿಗೆ ಹೊಸಬಟ್ಟೆ ಆಭರಣ ಕೊಟ್ಟು ನಂದಿಯ ಪೂಜೆಯನ್ನು ಮಾಡಿಸಿ ಅಕ್ಕಿ ಹಸೆಯ ಮೇಲೆ ವಧುವನ್ನು ಕೂರಿಸಿ ಗುರುಗಳಿಂದ ಆರತಿ ಮಾಡಿಸಿ ನಂದಿಯ ಚಿತ್ರವಿರುವ ಭಾಸಿಂಗ ಕಟ್ಟಿಸಿ ಗುರುಗಳಿಂದ ಆಶೀರ್ವಾದ ಮಾಡುತ್ತಾರೆ.

ವಧವಿಗೆ ಒಂಟಿ ಸೂರಗೀ ಹಿಡಿಯುವುದು

ಮೂಹರ್ತಕ್ಕೂ ಮೊದಲು ವಧುವನ್ನು ಕರೆದುಕೊಂಡು ಬಂದು, ಚಪ್ಪರದ ಕೆಳಗೆ ನಾಲ್ಕು ಜನ ನಾಲ್ಕು ಸುತ್ತು ಸೂರಗೀ ನೀರನ್ನು ಹಿಡಿದುಕೊಂಡು ನಾಲ್ಕು ಕುಂಭದ ನೀರನ್ನು ಹಾಕಲಾಗುತ್ತದೆ. ಈ ಮೂಲಕವಾಗಿ ಕನ್ಯೆಯನ್ನು ವೈವಾಹಿಕ ಬಂಧನಕ್ಕೆ ಒಳಪಡಿಸಲಾಗುತ್ತದೆ.

ಮೂಹೂರ್ತ

ಮೂಹೂರ್ತಕ್ಕೆ ಎಲ್ಲಾ ಸಾಮಾಗ್ರಿಗಳನ್ನು ಜೋಡಿಸಿಕೊಂಡು, ಗುರುಗಳನ್ನು ಕರೆದುತಂದು ಹೆಣ್ಣಿನ ಕಡೆಯವರು ವರನನ್ನು ಕರೆತರಲು ವಧುವಿನ ಸಂಬಂಧಿಕರು ಕಳಸ, ಕನ್ನಡಿಯನ್ನು ಹಿಡಿದುಕೊಂಡು ಮಂಗಳ ವಾಧ್ಯಗಳೊಂದಿಗೆ, ವರನನ್ನು ಲಗ್ನಕ್ಕೆ ಕರೆತರಲು ಹೋಗುತ್ತಾರೆ. ವರನ ಕಡೆಯಿಂದ ಕಳಸವನ್ನು ಹಿಡಿದು ವಧುವಿನ ಸಂಬಂಧಿಕರಿಗೆ ಮುಖಾಮುಖಿಯಾಗುತ್ತಾರೆ. ಹಾಗೆಯೇ ಎರಡು ಕಡೆಯವರು ಪರಸ್ಪರ ಅಕ್ಕಿ ಎಸೆಯುತ್ತಾ ಒಂದಾಗುತ್ತಾರೆ. ವಧುವಿನ ಸಹೋದರಿ ಓಕುಳಿ ಹಿಡಿದು ವರನನ್ನು ಚಪ್ಪರಕ್ಕೆ ಕರೆತರಲಾಗುತ್ತದೆ. ವರನ ಕಡೆಯವರು ಓಕುಳಿ ಮಾಡಿ ಚಲ್ಲಿದ ನಾದಿನಿ(ಸೊಸೆ)ಗೆ ದಕ್ಷಿಣೆ ಕೊಟ್ಟು ಚಪ್ಪರದ ಒಳಗೆ ಬರಮಾಡಿಕೊಳ್ಳಲಾಗುತ್ತದೆ. ಈ ಓಕುಳಿಯನ್ನು ಯಾವುದೇ ಕೆಟ್ಟ ದೃಷ್ಟಿ ತಾಕದಿರಲಿ ಎಂದು ಮಾಡಲಾಗುತ್ತದೆ.

ಗುರುಗಳ ನಿರ್ದೇಶನದಂತೆ ವರನನ್ನು ಮೂಹೂರ್ತದ ಮಂಟಪಕ್ಕೆ ಕರೆತರಲಾಗುತ್ತದೆ. ಆಗ ವಧುವಿನ ಸೋದರ ಮಾವ ವಧುವನ್ನು ಒಪ್ಪಿಸಿಕೊಂಡು ತನ್ನ ಭುಜದಮೇಲೆ ಹೊತ್ತುಕೊಂಡು ಮೂಹೂರ್ತದ ಮಂಟಪಕ್ಕೆ ತಂದು ಗುರುಗಳಿಗೆ ಒಪ್ಪಿಸಲಾಗುತ್ತದೆ. ಇತ್ತಿಚಿಗೆ ಕೈಹಿಡಿದು ಕೊಂಡು ಕೆಲವು ಕಡೆ. ವಧುವನ್ನು ಕರೆತರಲಾಗುತ್ತಿದೆ. ಇದರಿಂದ ನೊಳಂಬರಲ್ಲಿ ಬಾಲ್ಯ ವಿವಾಹ ಪದ್ಧತಿಯು ಅಸ್ತಿತ್ವದಲ್ಲಿ ಇತ್ತು ಎಂಬುದು ಸ್ಪಷ್ಟವಾಗುತ್ತದೆ.

ವಧು ಮತ್ತು ವರನ ಮುಖವನ್ನು ನೋಡದಂತೆ ಒಂದು ಪಟವನ್ನು(ಒಂದು ಬಿಳಿಯ ಬಟ್ಟೆ) ಹಿಡಿಯಲಾಗಿರುತ್ತದೆ. ಅನಂತರ ಒಂಬತ್ತು, ಹನ್ನೊಂದು ಮತ್ತು ಹದಿಮೂರು ಬಾಳೆ ಹಣ್ಣುಗಳಿರುವ ಒಂದು ಚಿಪ್ಪನ್ನು ವಧುವಿನ ಕೈಯಲ್ಲಿ ಕೊಟ್ಟು ಕೂರಿಸುತ್ತಾರೆ. ವರನ ಕೈಯಲ್ಲಿ ಲಗ್ನ ಕಟ್ಟಿಸಿದ ತೆಂಗಿನ ಕಾಯಿಯನ್ನು ಕೊಟ್ಟು ಮೂಹೂರ್ತದ ಧಾರೆಗೆ ಸಿದ್ಧರಾಗುತ್ತಾರೆ. ಪ್ರಥಮವಾಗಿ ವಧುವಿನ ತಂದೆ ತಾಯಿ ವರನ ಕಾಲು ತೊಳೆದು ಕನ್ಯಾಧಾನವನ್ನು ಮಾಡಿಕೊಡುತ್ತಾರೆ. ಹಾಲು, ತುಪ್ಪ ಎರೆದು ಅಕ್ಷತೆಯನ್ನು ಹಾಕಿ ಆಶೀರ್ವಾದಗಳನ್ನು ಮಾಡುತ್ತಾರೆ. ಆ ನಂತರ ಇತರೆ ಸಂಬಂಧಿಕರು ಹಾಲು ತುಪ್ಪ ಎರೆಯುತ್ತಾರೆ.

ಮಾಂಗಲ್ಯಧಾರಣೆ

ತಾಳಿ ಕಟ್ಟಿಸುವ ಕಾರ್ಯವನ್ನು ನಿಗಧಿತ ಸಮಯದಲ್ಲಿ ಗುರುಗಳ ಹೇಳಿಕೆಯಂತೆ ವರನು ವಧುವಿಗೆ ತಾಳಿ ಕಟ್ಟುತ್ತಾನೆ. ಹಿಂದೆ ಅರಿಷಿಣದ ಕೊಂಬು ಮತ್ತು ಅರಿಷಿಣ

ಲೇಪಿತ ಧಾರದಿಂದ ಕಟ್ಟಲಾಗುತ್ತಿತ್ತು. ಈ ತಾಳಿಯನ್ನು ಕಟ್ಟುವ ಪ್ರಮುಖ ಉದ್ದೇಶ, ನಿಂಗೆ ಏನೇ ಸಮಸ್ಯೆ, ಕಷ್ಟಗಳು ಬಂದರು ತಾಳಿಕೊಂಡು, ತಾಳ್ಮೆಯಿಂದ ಹೋಗು ಎಂದು ಅರ್ಥೈಸಲಾಗಿದೆ(ಶಾವಂತರಮ್ಮ). ತರೀಕೆರೆ ತಾಲ್ಲೂಕಿನ ಸೊಲ್ಲಾಪುರದಲ್ಲಿ ತಾಳಿಯನ್ನು ವರ ವಧುವಿಗೆ ಕಟ್ಟುವುದಿಲ್ಲ. ಅದರ ಬದಲಿಗೆ ವಧುವಿನ ಸೋಧರ ಮಾವನು ಕಟ್ಟುತ್ತಾನೆ. ಅಥವಾ ಜೊತೆಯಲ್ಲಿರುವ ಸಂಬಂಧಿಕ ಹೆಣ್ಣುಮಕ್ಕಳು ಮಾಂಗಲ್ಯವನ್ನು ಕಟ್ಟುತ್ತಾರೆ. ಇಂತಹ ಆಚರಣೆಯು ನೊಳಂಬರ ಬೇರೆ ಯಾವ ಪ್ರದೇಶದಲ್ಲಿಯೂ ಕಂಡು ಬರುವುದಿಲ್ಲ.

ಜೋಡಿ ಸೂರಗೀ ಹಿಡಿಯುವುದು

ಮಾಂಗಲ್ಯಧಾರಣೆಯ ತರುವಾಯ ವಧುವರರಿಗೆ ಸೂರಗಿ ಮಾಲೆಯನ್ನು ಗುರುಗಳಿಂದ ಹಾಕಲಾಗುತ್ತದೆ. ತದನಂತರ ವಧು ಮತ್ತು ವರರಿಬ್ಬರನ್ನು ಸೇರಿಸಿ ಸೂರಗಿ ಹಿಡಿದು ಕುಂಭ ನೀರು ಹಾಗೂ ಕಳಸ ನೀರನ್ನು ಬಿಡಲಾಗುತ್ತದೆ. ಇದರ ಮುಖ್ಯ ಉದ್ದೇಶ ಮಾಂಗಲ್ಯಧಾರಣೆಗೂ ಮುಂಚಿತವಾಗಿ ವಧು ಮತ್ತು ವರನಿಗೆ ಪ್ರತ್ಯೆಗೆ ಒಂಟಿ ಸೂರಗೀ ನೀರನ್ನು ಹಾಕಲಾಗುತ್ತದೆ. ಮಾಂಗಲ್ಯಧಾರಣೆಯ ನಂತರ ವಧು-ವರರಿರ್ವರನ್ನು ಸೇರಿಸಿ ಸೂರಗೀಯನ್ನು ಬಿಡಲಾಗುತ್ತದೆ. ಒಂಟಿಯಾಗಿದ್ದವರನ್ನು ಮಾಂಗಲ್ಯಧಾರಣೆಯ ನಂತರ ವಧುವರರನ್ನು ಒಟ್ಟಿಗೆ ಸೇರಿಸುವ ಒಂದು ಸ್ಥಳ. ಈ ಮೂಲಕ ವಧು-ವರರಿರ್ವರು ದೈಹಿಕವಾಗಿ, ಮಾನಸಿಕವಾಗಿ ಒಂದುಗೂಡುತ್ತಾರೆ ಎನ್ನುವುದು ವಿಶೇಷ. ಮತ್ತೆ ಹೋಗಿ ಅರುಣಿಗೆ ವಧು ವರರಿಬ್ಬರು ಶರಣು ಎನ್ನಿಸಿ ದೇವಸ್ಥಾನಕ್ಕೆ ಮೆರವಣಿಗೆ ಹಾಗೂ ಮಂಗಳ ವಾಧ್ಯಗಳೊಂದಿಗೆ ಕಳುಹಿಸಲಾಗುತ್ತದೆ. ಅಂತಿಮವಾಗಿ ಬಂದಂತಹ ವಧುವರರ ಕಡೆಯ ಸಂಬಂಧಿಕರಿಗೆ ಊಟೋಪಚಾರ ಮಾಡಲಾಗುತ್ತದೆ.

ಮೇಣಿಸ್ವಾಮಿ ಅಥವಾ ಹೊಂಗೆಸ್ವಾಮಿ ಪೂಜೆ

'ನೊಳಂಬರಲ್ಲಿ ನಾಲ್ಕುದಿನದವರು ಮಾಂಗಲ್ಯಧಾರಣೆ ಅನಂತರದ ವಿಶಿಷ್ಟ ವಿಧಿ ಎಂದರೆ ಮೇಣಿಸ್ವಾಮಿ ಅಥವಾ ಹೊಂಗೆ ಸ್ವಾಮಿ ಪೂಜೆ ಎಂದು ಕರೆಯುತ್ತಾರೆ. ಈ ಒಂದು ಪೂಜಾ ಕ್ರಮವು ಹೊಂಗೆ ಮರವನ್ನು ಕೇಂದ್ರದಲ್ಲಿ ನಿರ್ಧರಿಸಿ ಆಚರಿಸುತ್ತಾರೆ. ಇದನ್ನು ಕುಲದೇವತೆಯ ಪರಿಕಲ್ಪನೆಯನ್ನಾಗಿಸಿಕೊಂಡಿದ್ದರಿಂದ ಕಡೆಯುವುದಿಲ್ಲ. ಈ ಹೊಂಗೆ ಮರವನ್ನು ಜಮೀನುಗಳಿಗೆ ಗೊಬ್ಬರವನ್ನಾಗಿ ಉಪಯೋಗಿಸಿಕೊಳ್ಳುತ್ತಾರೆ. ಹೀಗಾಗಿ ತಿಪ್ಪೆಗಳ ಹತ್ತಿರ ಹೊಂಗೆ ಮರಗಳನ್ನು ಯಥೇಚ್ಛವಾಗಿ ಬೆಳೆಸುವುದರ ಮೂಲಕ ಅವುಗಳ ಎಲೆಗಳನ್ನು ಗೊಬ್ಬರವನ್ನಾಗಿಸಿ ತಮ್ಮ ಹೊಲ ಗದ್ದೆಗಳಿಗೆ ಬಳಸುತ್ತಾರೆ. ಬಹುತೇಕರು ವ್ಯವಸಾಯ

ಪ್ರಧಾನವಾಗಿರುವದರಿಂದ ಹೊಲ–ಗದ್ದೆಗಳ ಹೆಚ್ಚಿನ ಫಲವತ್ತತೆಗಾಗಿ ಇದನ್ನು ಬಳಸಲಾಗುತ್ತದೆ. ಈ ಕಾರಣದಿಂದಾಗಿ ಹೊಂಗೆಸ್ವಾಮಿ ಪೂಜೆ ಅತಿ ಮಹತ್ವವಾದದ್ದು, ಮದುವೆಯಾದ ನವವಧುವರರು ಕುಟುಂಬದವರೊಂದಿಗೆ ತಿಪ್ಪೆಯ ಬದಿಯಲ್ಲಿರುವ ಒಂದು ಹೊಂಗೆ ಮರವನ್ನು ಅಥವಾ ಹೊಂಗೆ ಕಡ್ಡಿಯನ್ನು ಪೂಜಿಸುತ್ತಾರೆ. ಹೊಯನ್ನು ಉಳುಮೆ ಮಾಡವ ನೇಗಿಲನ್ನು ಸಾಮಾನ್ಯವಾಗಿ ಹೊಂಗೆ ಮರದಿಂದ ಮಾಡಿರುತ್ತಾರೆ. ಇದು ಭೂಮಿಗೆ ಅತ್ಯಂತ ಪ್ರಮುಖ ಸಾಧನವಾಗಿದೆ ಎಂಬ ನಂಬಿಕೆ ಇದೆ'(ನೊಳಂಬರು: ಶಂಕರಪ್ಪ ಎಂ.ಪಿ.,:೧೨೨). ಈ ಪೂಜೆಯಲ್ಲಿ ಮೂರು ಅನ್ನದ ಉಂಡೆಗಳನ್ನು ತಿಪ್ಪೆಯಲ್ಲಿ ಹೂತು ಪೂಜಿಸುತ್ತಾರೆ. ಇದು ನಾಲ್ಕು ದಿನಗಳಲ್ಲಿ ಕೊಳೆತರೆ ಅತ್ಯಂತ ಮಂಗಳದಾಯಕ ಎಂಬುದಾಗಿ ಸಮುದಾಯದಲ್ಲಿ ನಂಬಿಕೆ ಇದೆ. ಈ ಒಂದು ಸಂಪ್ರದಾಯ ಆಚರಣೆಯು ತುಮಕೂರು ಜಿಲ್ಲೆಯಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

ನಾಗೋಲೆಶಾಸ್ತ್ರ(ದೇವರು ಮಾಡುವುದು)

ನೊಳಂಬರಲ್ಲಿ ಮದುವೆ ಶಾಸ್ತ್ರ, ಮಾಂಗಲ್ಯಧಾರಣೆಯ ಎಲ್ಲ ಕಾರ್ಯಗಳು ಮುಗಿದ ತರುವಾಯ, ನಾಲ್ಕು ದಿನದವರು ತಪ್ಪದೇ ಈ ನಾಗೋಲೆಶಾಸ್ತ್ರವನ್ನು ಮಾಡುತ್ತಾರೆ. ಮೂರುದಿವಸದವರು ಈ ಕಾರ್ಯ ಮಾಡುವುದಿಲ್ಲ ಅದಕ್ಕೆ ಅವರಿಗೆ ಸಾಲದ ಮೂಲತಪ್ಪಿದವರು ಅಥವಾ ನಾಗೋಲೆ ತಪ್ಪಿದವರು ಎನ್ನುತ್ತಾರೆ. ಬೇರೆ ಯಾವ ಲಿಂಗಾಯತ ಸಮುದಾಯದಲ್ಲಿ ಈ ರೀತಿಯ ಆಚರಣೆ ವಿಶೇಷವಾಗಿ ಕಂಡು ಬರುವುದಿಲ್ಲ. ವಿವಾಹವಾದ ರಾತ್ರಿ ಈ ಕಾರ್ಯವನ್ನು ಮಾಡಲಾಗುತ್ತದೆ. ನಾಗೋಲೆ ಮಾಡುವ ವಿಧಾನವೆಂದರೆ, ಇದನ್ನು ವಿಶೇಷವಾಗಿ ದೇವರು ಮಾಡುವುದು ಎಂಬುದಾಗಿದೆ. ದೇವರು ಮಾಡುವವ ಒಂದು ದಿನ ಉಪವಾಸ ಇರಬೇಕು. ಸ್ನಾನ ಮಾಡಿ ಮಡಿವಾಳರ ಮನೆಯ ಬಟ್ಟೆಯನ್ನು ಧರಿಸಿಕೊಂಡು ಈ ಎಲ್ಲ ವಿಧಿ ವಿಧಾನಗಳನ್ನು ನೆರವೇರಿಸಲಾಗುತ್ತದೆ.

ದೇವರು ಮಾಡಲು ಬಳಸುವ ಸಾಮಗ್ರಿಗಳು

ಈ ನಾಗೋಲೆಶಾಸ್ತ್ರವನ್ನು ಮಾಡಲು ಹಲವು ರೀತಿಯ ಸಾಮಾಗ್ರಿಗಳನ್ನು ಒಂದುಗೂಡಿಸಿಕೊಳ್ಳಬೇಕು. ಆ 'ಸಾಮಾಗ್ರಿಗಳು...

ನಾಲ್ಕು ಸೇರು ಅಕ್ಕಿ, ಬಾಳೆಕಾಯಿ,

ಬದನೆಕಾಯಿ,

ಒಂದು ಕೈ ಬಟ್ಟಲು,

ಒಂದು ಜಾಯಿಕಾಯಿ,

ಒಂದು ಕೆ.ಜಿ. ಬೆಲ್ಲ,

ಬಾಳೆಯ ಹಣ್ಣು,

ಬಿಲ್ವಪತ್ರೆ,

ತುಂಬೇದಳ,

ಒಂದು ಸೇರು ಬೆಣ್ಣೆ,

ಲವಂಗ, ಎಲಕ್ಕಿ,

ಕಡಲೇಕಾಳು

ಕರ್ಪೂರ,

ಮೂರು ಹೊಸ ಮಡಿಕೆ,

ದ್ರಾಕ್ಷಿ,

ಉತ್ತತ್ತಿ,

ಗೋಡಂಬಿ,

ಬಾಳೆ ಎಲೆ

ಹೀಗೆ ಹಲವು ನೈಸರ್ಗಿಕವಾಗಿ ದೊರೆಯುವ ವಸ್ತುಗಳನ್ನು ಬಳಸಲಾಗಿದೆ.

ಈ ಸಾಮಾಗ್ರಿಗಳನ್ನು ಕೊಡುವುದಕ್ಕೆ ಒಬ್ಬರನ್ನು ಸಹಾಯಕ್ಕೆ ತೆಗೆದು ಕೊಳ್ಳಲಾಗುತ್ತದೆ. ಇದನ್ನು ಮಾಡುವವರು ಯಾರ ಜೊತೆಯಲ್ಲಿ ಮಾತನಾಡುವಂತಿಲ್ಲ. ಬಾಯಿಗೆ ಬಟ್ಟೆಯನ್ನು ಕಟ್ಟಿಕೊಂಡು ಮನೆಯ ಕೋಣೆಯಲ್ಲಿ ಯಾವುದೇ ಲೋಹಗಳನ್ನು ಕಾಣದಂತೆ ಮುಚ್ಚಿ, ಬಾಳೆಯ ರತಗಿನಿಂದ ಗೋಡೆಗೆ ಸುಣ್ಣಬಳಿದುಕೊಂಡು ನೆಲ ಮತ್ತು ಒಲೆಯನ್ನು ಹಸುವಿನ ಸಗಣಿಯಿಂದ ಸಾರಿಸಿ, ೩ ಹೊಸ ಮಡಿಕೆಯಲ್ಲಿ ನೀರು ತರಬೇಕು ಯಾವುದು ಲೋಹದ ವಸ್ತುಗಳನ್ನು ಬಳಸವಂತಿಲ್ಲ. ಮಡಿಕೆಯಲ್ಲಿ ೪ ಸೇರು ಅಕ್ಕಿ ಇಟ್ಟು ಅನ್ನಮಾಡಬೇಕು. ೧ ಮಡಿಕೆಯಲ್ಲಿ ಸ್ವಲ್ಪ ತುಪ್ಪ ಕಾಯಿಸಿ, ಮರದ ಕೈ ಬಟ್ಟಲಲ್ಲಿ ಅನ್ನಹಾಕಿ ಅದಕ್ಕೆ ದ್ರಾಕ್ಷಿ, ಉತ್ತತ್ತಿ ಗೋಡಂಬಿ ೧ ಜಾಜಿ ಕಾಯಿ, ಲವಂಗ ಎಲಕ್ಕಿ ಬಾಳೆ, ಬದನೆ, ಹಾಕಿ ಅನ್ನವನ್ನು ಸರಿಯಾಗಿ ಹದಮಾಡಿಕೊಂಡು ಲಿಂಗವನ್ನು ಮಾಡಲಾಗುತ್ತದೆ. ಇದನ್ನು ದೇವರು ಎಂದು ಕರೆಯಲಾಗುತ್ತದೆ.

ಈ ದೇವರನ್ನು ಕೈ ಬಟ್ಟಲಲ್ಲಿ ಬಾಳೆ ಎಲೆಯನ್ನು ಇಟ್ಟು ಕೂರಿಸಲಾಗುತ್ತದೆ. ನಂತರ ಅಡಿಕೆ, ಹೊಂಬಾಳೆ ತರತರದ ಪುಷ್ಪ ತುಂಬೇ ಹೂ ಬಿಲ್ವ ಪತ್ರೆಯಿಂದ ಅಲಂಕರಿಸಿ, ಪೂಜೆ ಮಾಡಲಾಗುತ್ತದೆ. ಅನಂತರ ದೇವರ ಕೋಣೆಯಿಂದ ತಾಯಿಯ ಮನೆಗೆ ತೆಗೆದುಕೊಂಡು ಬರುವಾಗ ನಡೆಮಡಿಯನ್ನು(ಮಡಿವಾಳರ ಮನೆಯ ಬಟ್ಟೆ) ಹಾಕಿ ಎರಡು ಕಡೆ ಅಕ್ಕ ಪಕ್ಕದಲ್ಲಿ ಕರ್ಪೂರ ಹಚ್ಚಬೇಕು. ವಧುವರರು ಸ್ನಾನ ಮಾಡಿ ಮಡಿವಾಳನ ಮನೆಯ ಬಟ್ಟೆಯನ್ನು ಧರಿಸಿ ತಾಯಿಯ ಪಕ್ಕದಿಂದ ಬಂದು ಕೂಡಲೇ ಗಂಡು ಹೆಣ್ಣು ಬಿಲ್ವ ಪತ್ರೆಯನ್ನು ದೇವರಿಗೆ ಹಾಕಿ ಕೈ ಮುಗಿಯಬೇಕು. ೧ ಬುಟ್ಟಿಯನ್ನು ಹಸುವಿನ ಗೊಬ್ಬರವನ್ನು ತಂದು ಒಂದು ನೇಗಿಲು ಮೆಣಿಯನ್ನು ಇಟ್ಟು ಅದರಲ್ಲಿ ದೇವರನ್ನು ಮಡಗಿ(ಇಟ್ಟು) ದೇವರ ಪ್ರಸಾದವನ್ನು ವಧುವರರಿಗೆ ಯಾರಿಗೂ ಕಾಣದ ಹಾಗೆ ಕೊಡಲಾಗುತ್ತದೆ. ಉಳಿದ ಅನ್ನವನ್ನು ನೊಳಂಬ ಸಮಾಜದವರು ಮಾತ್ರ ಊಟಮಾಡಿ ಉಳಿದ ಪದಾರ್ಥ ಎಲೆಯನ್ನು ತಿಪ್ಪೆಯಲ್ಲಿ ಉಳಬೇಕು ಅನ್ನ ಕೊಳೆತು ಹುಳವಾಗಿದ್ದರೆ ಒಳ್ಳೆಯದು ಎಂಬ ನಂಬಿಕೆ ಇದೆ'(ಈಶ್ವರಪ್ಪ; ಕಣಿವೇಹಳ್ಳಿ).

ಈ ನಾಗೋಲೆ ಶಾಸ್ತ್ರವನ್ನು ಮಾಡುವ ಪ್ರಮುಖ ಉದ್ದೇಶವೆಂದರೆ, ಆ ಭಗವಂತನಲ್ಲಿ ಸಂತಾನೋತ್ಪತ್ತಿ ಬೇಡಿ ಈ ಶಾಸ್ತ್ರವನ್ನು ಮಾಡಲಾಗುತ್ತದೆ. ಹೀಗಾಗಿ ನೊಳಂಬರಲ್ಲಿ ಒಂದು ವಿಶಿಷ್ಟ ಆಚರಣೆಯಾಗಿ ಕಂಡುಬರುತ್ತದೆ.

ಅರತಕ್ಷತೆ

ಮಾಂಗಲ್ಯಧಾರಣೆ ಮರುದಿನ ವರನ ಮನೆಗೆ ವಧುವನ್ನು ಕರೆದುಕೊಂಡು ಹೋಗಿ ಬಾಗಿಲನು(ಹೊಸ್ತಿಲು) ಪೂಜೆ ಮಾಡಿ ಹೆಣ್ಣಿನ ಸಹೋದರ ಬಳುವಳಿಯನ್ನು ಒತ್ತುಕೊಂಡು ಬರುತ್ತಾನೆ. ಅದನ್ನು ನೊಳಂಬರಲ್ಲಿ ಚಾಜ(ತಾಜಾ) ಸಾಮಾನು ಒಂದು ಬುಟ್ಟಿಯಲ್ಲಿ ಅವಳಿಗೆ ದಿನನಿತ್ಯ ಬಳಕೆಯ ವಸ್ತುಗಳು, ಪಾತ್ರೆ, ಪೂಜಾ, ಸಾಮಾನು ಇತ್ಯಾದಿಗಳನ್ನು ಇಡಲಾಗಿರುತ್ತದೆ. ಇದನ್ನು ವರನ ಮನೆಯವರು ಸೋದರನಿಗೆ ಹೊಸಬಟ್ಟೆಯನ್ನು ಕೊಟ್ಟು ಪೂಜೆ ಮಾಡಿ ನೈವೇದ್ಯ ಮಡಿ ತೆಗೆದು ಕೊಳ್ಳಲಾಗುತ್ತದೆ. ವಧುವನ್ನು ಹೊಸ್ತಿಲ ಮೇಲೆ ೧ ಸೇರು ಅಕ್ಕಿ ಬೆಲ್ಲ ಇಡಲಾಗಿರುತ್ತದೆ. ಬಡಗಿಯನ್ನು ಕರೆಸಿ ಹೊಸ್ತಿಲಿಗೆ ಮೊಳೆಯನ್ನು ಬಡಿಸಲಾಗುತ್ತದೆ. ಆ ನಂತರ ಅಕ್ಕಿಯನ್ನು ಕೈಯಲ್ಲಿ ಕೊಟ್ಟು ಮನೆಯ ಒಳಗೆ ಚಲ್ಲಿಸಿ ಮನೆಯನ್ನು ತುಂಬಿಸಿ ಕೊಳ್ಳಲಾಗುತ್ತದೆ.

ಚಪ್ಪರಗಂಬ ಇಳಿಸುವದು

ನೊಳಂಬರಲ್ಲಿ ವಿವಾಹದ ಕಾರ್ಯಗಳೆಲ್ಲವೂ ಮುಗಿದ ತರುವಾಯ ಚಪ್ಪರ ಕಂಬವನ್ನು ತಗೆಯಲಾಗುತ್ತದೆ. ಅಂದು ಚಪ್ಪರಗಂಬಕ್ಕೆ ವಧುವರರ ಕೈಯಿಂದ ಪೂಜೆಯನ್ನು ನೆರವೇರಿಸಿ ಆ ಕಂಬಕ್ಕೆ ಪ್ರಸಾಧ ನೈವೇದ್ಯ ಮಾಡಿ, ವಂಧು ವರರ ಕೈಯಿಂದ ಚಪ್ಪರಗಂಬವನ್ನು ಇಳಿಸಲಾಗುತ್ತದೆ. ಇದರ ವಿಶೇಷತೆ ಎಂದರೆ ವಧು ಮತ್ತು ವರರು ಈ ಚಪ್ಪರಗಂಬವನ್ನು ತಗೆಯುವದರ ಮುಖೇನ ತಮ್ಮ ವೈವಾಹಿಕ ಜೀವನಕ್ಕೆ ಇದ್ದ ಅಡ್ಡಿಗಳನ್ನು ಬದಿಗೆ ಸರಿಸಿ ಮುಂದಿನ ನವಜೀವನಕ್ಕೆ ಅಡಿ ಇಟ್ಟರು ಎಂಬುದಾಗಿದೆ.

ವಿದವಾ ವಿವಾಹ

ನೊಳಂಬರಲ್ಲಿ ಹಿಂದೆ ವಿದವಾ ವಿವಾಹಕ್ಕೆ ಅವಕಾಶವಿರಲಿಲ್ಲ. ಹೆಂಡತಿ ತೀರಿದ ಬಳಿಕ ಗಂಡನಿಗೆ ಮರು ಮದುವೆ ಮಾಡಲಾಗುತ್ತಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಮಹಿಳೆಯರಿಗೂ ವಿದವಾ ವಿವಾಹಗಳು ನಡೆಯುತ್ತಿರುವುದು ಅಲ್ಪಪ್ರಮಾಣದಲ್ಲಿ ಕಂಡುಬರುತ್ತಿದೆ.

ಈ ಮೇಲೆ ಹೇಳಿದ ರೀತಿಯಲ್ಲಿ ನೊಳಂಬರಲ್ಲಿ ವಿವಾಹ ಕಾರ್‍ಯವನ್ನು ಬಂಧು-ಬಾಂಧವರು ಸಂಭ್ರಮದಿಂದ ಮಾಡಲಾಗುತ್ತದೆ. ವಿವಾಹದ ಎಲ್ಲಾ ಕಾರ್‍ಯಗಳನ್ನು ನಾಲ್ಕು ದಿನದವರು ನಾಲ್ಕು ಸಲ ಮತ್ತು ಮೂರು ದಿನವರು ಮೂರು ಸಲ ಮಾಡುತ್ತಾರೆ. ನೊಳಂಬರಿಗೆ ಬೆಸಸಂಖ್ಯೆ ೧, ೩, ೫, ೭, ೯, ೧೧ ಮತ್ತು ೧೩ ಇನ್ನೂ ಮುಂತಾಗಿ ಬೆಸಸಂಖ್ಯೆಗಳನ್ನು ಒಳ್ಳೆಯ ಸಂಖ್ಯೆಗಳೆಂಬುದಾಗಿ ಅವುಗಳಿಗೆ ಹೆಚ್ಚಿನ ಮಹತ್ವವನ್ನು ನೀಡುತ್ತಾರೆ. ಸಮ ಸಂಖ್ಯೆಗಳಾದ ೨, ೪, ೬, ೮, ೧೦ ಮುಂತಾದ ಸಂಖ್ಯೆಗಳ ದಿನಗಳಂದು ಯಾವುದೇ ಕಾರಣಕ್ಕೂ ಶುಭಕಾರ್‍ಯಗಳಿಗೆ ಬಳಸುವುದಿಲ್ಲ.

ನಂದಿಯನ್ನು ಮುಂದೆ ಇಟ್ಟುಕೊಂಡೇ ಎಲ್ಲಾ ಕಾರ್‍ಯಗಳನ್ನು ನೆರವೇರಿಸುತ್ತಾರೆ. ವಿಶೇಷ ಇದರಿಂದ ವ್ಯವಸಾಯಕ್ಕೆ ಯಾವ ರೀತಿಯಲ್ಲಿ ಪ್ರಾಮುಖ್ಯತೆ ನೀಡಿದ್ದಾರೆ ಎಂಬುದು ತಿಳಿದು ಬರುತ್ತದೆ. ಈಗಾಗಲೇ ಇವರು ಹೈನುಗಾರಿಕೆಯಿಂದ ಮತ್ತು ಕೃಷಿ ಮೂಲ ಸಮಾಜದಿಂದ ಬಂದವರು ಎಂಬುದಾಗಿ ತಿಳಿಯಬರುತ್ತದೆ.

ಮರಣ ಮತ್ತು ಶವ ಸಂಸ್ಕಾರದ ಕಾರ್ಯಗಳು

ನೊಳಂಬರು ಸಹ ಇತರೆ ಲಿಂಗಾಯತ ಉಪಜಾತಿಗಳಂತೆ ಲಿಂಗೈಕ್ಯರಾದವರಿಗೆ ವಿಶಿಷ್ಟ ಆಚರಣೆಗಳನ್ನು ಮಾಡಲಾಗುತ್ತದೆ. ನೊಳಂಬರಲ್ಲಿ ಸಾವು ದುಃಖದ ಸನ್ನಿವೇಶವೆಂದು ಪರಿಗಣಿಸಲಾಗುತ್ತದೆ. ಇಹಲೋಕ ತ್ಯೇಜಿಸಿದವರು ಕೈಲಾಸವಾಸಿಯಾದವರೆಂದು ಕರೆಯುತ್ತಾರೆ. ಲಿಂಗೈಕ್ಯರಾದ ತಕ್ಷಣ ಕೈ ಕಾಲುಗಳನ್ನು ಮಡಿಚಿ, ಮುಖ ಮಜ್ಜನ ಮಾಡಿ ವಿಭೂತಿಧಾರಣೆ ಮಾಡಲಾಗುತ್ತದೆ. ಮನೆಯ ಮುಂದೆ ಅಗ್ನಿಯನ್ನು ಹಚ್ಚುತ್ತಾರೆ. ಸಾಮಾನ್ಯವಾಗಿ ಸಹಜ ಸಾವು ಸಂಭವಿಸಿದವರನ್ನು ಹೂಳುವುದು ಇಲ್ಲಿ ಪರಂಪರಗತವಾಗಿ ನಡೆದುಕೊಂಡು ಬಂದ ಪದ್ಧತಿಯಾಗಿರುತ್ತದೆ. ಸ್ಮಶಾನದಲ್ಲಿ ಒಂಬತ್ತು ಅಥವಾ ಹದಿಮೂರು ಜನ ಶವ ಹೂಳಲು ಗುಂಡಿಯನ್ನು ತಗೆಯುತ್ತಾರೆ. ಇದಕ್ಕೆ 'ಕುಣಿ' ಎಂಬುದಾಗಿ ಕರೆಯುತ್ತಾರೆ. ಇದು ಶ್ರಮದಾಯಕ ಕಾರ್ಯವಾಗಿರುತ್ತದೆ. ಸರಿಸಮವಾಗಿ ಇತ್ತ ಮನೆಯಲ್ಲಿ ಶವಕ್ಕೆ ಸ್ನಾನ ಮಾಡಿಸಿ ಹೊಸ ಬಿಳಿಯ ೭ ಮೀಟರ್ ಬಟ್ಟೆಯನ್ನು ಧರಿಸಲಾಗುತ್ತದೆ. ಈ ಬಟ್ಟೆಯನ್ನು ಶಿವಸೆರಗು ಎಂದು ಕರೆಯಲಾಗುತ್ತದೆ.

ಮುತ್ತೈದೆ ಸಾವನ್ನಪ್ಪಿದರೆ ತವರು ಮನೆಯಿಂದ ಹೊಸ ಬಟ್ಟೆ ತಂದು ತಲೆಗೆ ಬೆಣ್ಣೆ, ಉಡಿ ಅಕ್ಕಿ ತರುತ್ತಾರೆ. ಇಲ್ಲಿ ಸಾವನ್ನಪ್ಪಿದ ಮುತ್ತೈದೆಯ ತಲೆಗೆ ಬೆಣ್ಣೆ ಹಚ್ಚುವ ಕ್ರಿಯೆಯು ತುಂಬಾ ಪ್ರಾಚೀನವಾಗಿ ನಡೆದುಕೊಂಡು ಬಂದ ಸಂಪ್ರದಾಯವಾಗಿದೆ. ಅಂದರೆ ಮೂಲ ಪಶುಪಾಲನೆಯ ವೃತ್ತಿಯವರಾದವರು ಮನೆಯಲ್ಲಿ ಯಥೇಚ್ಚವಾಗಿ ಬೆಣ್ಣೆ ಇರುವದರಿಂದ ಈ ಆಚರಣೆಯನ್ನು ರೂಢಿಸಿಕೊಂಡು ಬಂದಿವುರುದು ತಿಳಿದುಬರುತ್ತದದೆ. ಗುರುಗಳನ್ನು ಕರೆತಂದು ಪೂಜೆ ಮಾಡಲಾಗುತ್ತದೆ. ತದನಂತರ ಎಲ್ಲಾ ಸಂಬಂಧಿಕರು ಶವವನ್ನು ಮುಟ್ಟಿ ದೇವರ ಸಮಾನವೆಂದು ಪೂಜೆ ಸಲ್ಲಿಸಿ ನಮಸ್ಕರಿಸುತ್ತಾರೆ. ಎಲ್ಲಾ ಸಂಬಂಧಿಗಳು ಬಂದು ದರ್ಶನ ಪಡೆದ ನಂತರ ಶವವನ್ನು ರುದ್ರಭೂಮಿ(ಸಾರ್ವಜನಿಕ ಸ್ಮಶಾನ) ಅಥವಾ ಅವರ ಸ್ವಂತ ಹೊಲ, ಗದ್ದೆ ಅಥವಾ ತೋಟಗಳಲ್ಲಿ ಹೂಳುವುದುಂಟು. ಶವವನ್ನು ಗುಂಡಿಯ ಕಡೆಗೆ ಹೋಗುವ ಸಂದರ್ಭದಲ್ಲಿ ಮನೆಯ ಹಿರಿಯ ಮಗನಿಂದ ಕಿಚ್ಚು(ಬೆಂಕಿ)ಯನ್ನು ಹಿಡಿದುಕೊಂಡು ತಲೆಗೆ ರೂಮಾಲು ಸುತ್ತಿಕೊಂಡು ಕರ್ಪೂರ ಹಚ್ಚಿ ನಾಲ್ಕು ಜನ ಸೇರಿ ಚಟ್ಟವನ್ನು ಹೊತ್ತುಕೊಳ್ಳುತ್ತಾರೆ. ಬಂದ ಸಂಭಂಧಿಗಳೆಲ್ಲ ನಾಲ್ಕಾರು ಹೆಜ್ಜೆಗೊಬ್ಬರಂತೆ ಆ ಶವ ತುಂಬಿದ ಚಟ್ಟವನ್ನು ಪರಸ್ಪರ ಹೆಗಲಿನಿಂದ ಹೆಗಲಿಗೆ ಬದಲಾಯಿಸಿಕೊಳ್ಳುತ್ತಾರೆ. ಜೊತೆಗೆ ವಾದ್ಯಗಳೊಂದಿಗೆ ಕರೆದೊಯ್ಯುತ್ತಾರೆ. ಆ ಮೂಲಕ ಆತ್ಮಕ್ಕೆ ಶಾಂತಿ ಸಿಗಲಿ ಎಂಬ ನಂಬಿಕೆ ಇದೆ.

ದಾರಿಯುದ್ದಕ್ಕೂ ಮಂಡಕ್ಕಿ, ಸಾಸಿವೇ ಮತ್ತು ಸೊಪ್ಪಿನ ಬೀಜವನ್ನು ಸೂರೆಮಾಡುತ್ತಾರೆ. ಏಕೆಂದರೆ ಸತ್ತವರ ಆತ್ಮವೂ ತಿರುಗಿ ಬರಕೂಡದು ಎಂಬುದಾಗಿ ಈ ರೀತಿ ದಾರಿಯುದ್ದಕ್ಕೂ ಸೋರೆಮಾಡುವ ಸಂಪ್ರದಾಯವಿದೆ. ಅಕಸ್ಮಾತ್ ಹಾಗೇನಾದರೂ ತಿರುಗಿ ಬಂದರೆ, ದಾರಿಯುದ್ದಕ್ಕೂ ಬಿದ್ದ ಸಾಸಿವೆ, ಸಪ್ಪಿನ ಬೀಜವನ್ನು ಆಯ್ದುಕೊಂಡು ಬರಬೇಕು ಇದು ಸಾಧ್ಯವಿಲ್ಲ ಎಂಬ ಅಪಾರ ಮುಂದಾಲೋಚನಾ ನಂಬಿಕೆಯನ್ನು ಹೊಂದಿ ಈ ಕಾರ್ಯವನ್ನು ಮಾಡಲಾಗುತ್ತದೆ. ಆದರೆ, ಈ ರೀತಿಯ ನಂಬಿಕೆಗಳು ಕೇವಲ ನಂಬಿಕೆಗಳೇ ಹೊರತು, ಮತ್ತು ಕೇಳಿಸಿಕೊಳ್ಳಲು ಮಾತ್ರ ಚೆನ್ನಾಗಿರುತ್ತವೆ. ಈ ಒಂದು ಆಚರಣೆಯು ಬುಡಕಟ್ಟು ಸಮುದಾಯದ ಲಕ್ಷಣವಾಗಿದೆ. ಇದರ ಹಿಂದೆ ಭೂತಾರಾಧನೆ ಮತ್ತು ಅವುಗಳ ಬಗೆಗೆ ಜನಸಾಮಾನ್ಯರಲ್ಲಿರುವಂತಹ ಭಯದ ಪ್ರತಿಕವಾಗಿ ಈ ಆಚರಣೆಯನ್ನು ನೆರವೇರಿಸಲಾಗುತ್ತದೆ.

ಶವವನ್ನು ಊರ ಸೀಮೆ ಅಥವಾ ಬಾಗಿಲನ್ನು ದಾಟಿದ ನಂತರ ಒಂದು ಮೊರ(ಮುತ್ತಲು)ದಲ್ಲಿ ರಾಗಿ, ಉಪ್ಪು ಮೆಣಸಿನಕಾಯಿಯನ್ನು ಇಟ್ಟು ಮುಂದೆ ಸಾಗುತ್ತಾರೆ. ಅನಂತರ ಶವವನ್ನು ಗುಂಡಿ(ಕುಣಿ)ಯ ಒಳಗೆ ಉತ್ತರಾಭಿಮುಖವಾಗಿ ಯೋಗಮುದ್ರೆಯಲ್ಲಿ ಕೂರಿಸಲಾಗುತ್ತದೆ. ಯೋಗಮುದ್ರೆಯಲ್ಲಿ ಕುಳಿತ ಶವದ ಎಡತೋಳಿಗೆ ಲಿಂಗವನ್ನು ಒಂದು ಬಿಳಿವಸ್ತ್ರದಲ್ಲಿರಿಸಿ ಕಟ್ಟಲಾಗುತ್ತದೆ. ಸಮಾಜದ ಗುರುಗಳು ಪೂಜೆಮಾಡಿ ಗುರುಗಳ ಪಾದವನ್ನು ಶವದ ಹಣೆಗೆ ಇಟ್ಟು ಪೂಜಿಸಿ ತದನಂತರ ಮನೆಯ ಹಿರಿಯ ಮಗನಿಗೆ ಪೇಟ(ರುಮ್ಮಾಲು) ತೊಡಿಸುತ್ತಾರೆ. ಇದರ ಮೂಲ ಉದ್ದೇಶ ತಂದೆಯ ನಂತರ ಮಗನು ಯಜಮಾನಿಕೆಯ ಅಧಿಕಾರವನ್ನು ಪಡೆದು ಕೊಳ್ಳುವುದು ಎಂದರ್ಥ.

ಮನೆಯ ಯಜಮಾನ ಲಿಂಗೈಕ್ಯರಾಗಿದ್ದರೆ, ಹೆಂಡತಿಗೆ ಶವದ ಬಳಿ ಕರೆತಂದು ತವರು ಮನೆಯವರು ತಂದುಕೊಟ್ಟ ಹೊಸ ಬಟ್ಟೆ ಅರಿಷಿಣ–ಕುಂಕುಮ, ಬಳೆ, ಹೂ ಎಣ್ಣೆ(ಬೆಣ್ಣೆ) ತಂದು ಹಚ್ಚಿ, ಉಡಿ ಅಕ್ಕಿ(ಇದನ್ನು ಕೊನೆಯ ಮಡಿಲಕ್ಕಿ ಎನ್ನುತ್ತಾರೆ)ಯನ್ನು ಹಾಕಿ ಕೈಗೆ ತೊಡಿಸಿಕೊಂಡ ಬಳೆಗಳನ್ನು ಒಡೆದು, ಹಣೆಯ ಮೇಲಿನ ಕುಂಕುಮವನ್ನು ಅಳಿಸಿ, ತಲೆಯಲ್ಲಿ ಮುಡಿದ ಹೂ ತಗೆದು ನಂತರ ತಾಳಿ, ಕಾಲುಂಗರ ತಗೆಯಲಾಗುತ್ತದೆ. ಕೊನೆಯಲ್ಲಿ ಮೂರು ಬೊಗಸೆ ಮಣ್ಣನ್ನು ತನ್ನ ಗಂಡನ ಶವದ ಮೇಲೆ ಹಾಕುತ್ತಾರೆ.

ನಂತರ ಶವಕ್ಕೆ ಮನೆಯ ಹಿರಿಯ ಮಗನಿಂದ ಪೂಜೆ ನೆರವೇರಿಸಲಾಗುತ್ತದೆ. ಆ ಹಿರಿಯಮಗ ಪೂಜೆಯ ಸಂದರ್ಭದಲ್ಲಿ ಶವದ ಮೇಲೆ ಬಿಲ್ವಪತ್ರೆ ಹಾಕುತ್ತಾನೆ. ತದನಂತರ ಮೂರು ಬೊಗಸೆ ಮಣ್ಣನ್ನು ತಂದೆಯ ಶವಕ್ಕೆ ಹಾಕಲಾಗುತ್ತದೆ ಹಾಗೂ ವಿಭೂತಿಯನ್ನು ಹೆಚ್ಚಾಗಿ ಸಂಸ್ಕಾರ ಮಾಡಲು ಬಳಸಲಾಗುತ್ತದೆ. ಈ ಕಾರ್ಯ ಮುಗಿಯುತ್ತಿದ್ದಂತೆ, ಶವಸಂಸ್ಕಾರಕ್ಕೆ ಬಂದ ಎಲ್ಲ ಬಾಂಧವರು, ಸಾರ್ವಜನಿಕರು ಅಕ್ಷತೆ, ಬಿಲ್ವ ಪತ್ರೆ ಕೊಟ್ಟು ಗುರುಗಳಿಂದ ಪುಷ್ಪಾಂಜಲಿ ಶ್ಲೋಕವನ್ನು ಬೋಧಿಸಿ, ಜನರೆಲ್ಲ ಕೈಲಾಸಕ್ಕೆ ಉಘೇ ಉಘೇ ಎಂದು ಹೂ, ಬಿಲ್ವ ಪತ್ರೆಗಳನ್ನು ಶವದ ಮೇಲೆ ಹಾಕಿ ತಲಾ ಮೂರು ಬೊಗಸೆ ಮಣ್ಣನ್ನು ಹಾಕಲಾಗುತ್ತದೆ. ನಂತರ ಕುಣಿಗೆ ಮಣ್ಣನ್ನು ಹಾಕಿ ಮುಚ್ಚಲಾಗುತ್ತದೆ. ಶವಸಂಸ್ಕಾರಕ್ಕೆ ಬಂದ ಬಂಧುಬಾಂಧವರೆಲ್ಲ ಮುಖ ಮತ್ತು ಕೈಕಾಲುಗಳನ್ನು ತೊಳೆದುಕೊಂಡು ದೇವರ ಬಾಗಿಲಲ್ಲಿ ನಿಂತು ದೇವರ ದರ್ಶನ ಮಾಡಿ ಮನೆಗೆ ತೆರಳಿ, ಸ್ನಾನಗೈದು, ಮಡಿ ಬಟ್ಟೆ ಧರಿಸಿ, ಗೋ ಮೂತ್ರ ಸಿಂಪಡಿಸಲಾಗುತ್ತದೆ. ತರುವಾಯ ಮೃತನಾದ ವ್ಯಕ್ತಿಯ ಮನೆಗೆ ಹೋಗಿ ದೀಪವನ್ನು ದರ್ಶಿಸಿ, ಪೂಜಿಸಿ, ಪ್ರಸಾದವನ್ನು ಸೇವಿಸಿ ಮನೆಗೆ ಹಿಂತಿರುಗುತ್ತಾರೆ.

ಮೂರು ದಿನ ಕಾರ್ಯ

ಸಾವಿನ ಮನೆಯಲ್ಲಿ, ಸಾವನಪ್ಪಿದ ದಿನದಿಂದ ಮೂರನೆಯ ದಿನದಲ್ಲಿ ಈ ಕಾರ್ಯ ಜರುಗುತ್ತದೆ. ಆ ಸಂದರ್ಭದಲ್ಲಿ ಶವದ ಗುಡ್ಡೆಗೆ ಪೂಜೆ ಮಾಡಬೇಕಾದ ಮತ್ತು ಸತ್ತ ವ್ಯಕ್ತಿಗೆ ಇಷ್ಟವಾದ ತಿಂಡಿ ತಿನಿಸುಗಳನ್ನು ತಗೆದುಕೊಂಡು ಹೋಗಿ ಪೂಜೆ ನೆರವೇರಿಸಲಾಗುತ್ತದೆ. ಪೂಜೆ ಸಲ್ಲಿಸಿ ಎಡೆಯನ್ನು ಹಾಕಲಾಗುತ್ತದೆ. ಹೀಗೆ ಇಟ್ಟ ಎಡೆಯನ್ನು ಕಾಗೆ ಬಂದು ಮುಟ್ಟಬೇಕು ಎಂದು ಕಾಯುತ್ತಾರೆ. ಕಾಗೆ ಬಂದು ಗುಡ್ಡಿಗೆ ಇಟ್ಟ ಎಡೆಯನ್ನು ತಿಂದರೆ, ಸತ್ತ ವ್ಯಕ್ತಿಯು ಸಂತೃಪ್ತನಾಗಿರುವುದಾಗಿ ಭಾವಿಸಲಾಗುತ್ತದೆ. ಹೀಗೆ ಮೂರುದಿನದ ಕಾರ್ಯ ಮುಗಿದ ತರುವಾಯ, ಒಂಬತ್ತು, ಹನ್ನೊಂದು ಇಪ್ಪತ್ತೊಂದು ದಿನಗಳ ಕೈಲಾಸ ಆರಾಧನಾ ಕಾರ್ಯಗಳನ್ನು ಹಮ್ಮಿಕೊಳ್ಳಲಾಗುತ್ತದೆ.

೪.೨.೨. ವಾರ್ಷಿಕಾವರ್ತನ ಆಚರಣೆಗಳು

ಪ್ರಸ್ತುತ ಅಧ್ಯಯನವು ನೊಳಂಬರ ವಾರ್ಷಿಕಾವರ್ತನ ಆಚರಣೆಗಳಾದ ಹಬ್ಬಗಳನ್ನು ಪ್ರಮುಖ ಧಾರ್ಮಿಕ ಕ್ಷೇತ್ರಗಳು, ಉತ್ಸವಗಳ ಆಚರಣೆ ಮತ್ತು ನಂಬಿಕೆಗಳನ್ನು ಕೇಂದ್ರವಾಗಿಟ್ಟುಕೊಂಡು ಪ್ರಮುಖ ಧಾರ್ಮಿಕ ಕೇಂದ್ರಗಳಿಗೆ, ಸಮಾರಂಭಗಳಿಗೆ ಹಾಜರಾಗಿ ಆಚರಣೆಗಳ ಬಗೆಗೆ ಸ್ವಾನುಭವಾತ್ಮಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ಅನೇಕ ಸಮುದಾಯಗಳ ಬದುಕು ಕೃಷಿ. ಈ ಕೃಷಿ ಸಂಬಂಧಿತ ಆಚರಣೆಗಳ ಗೊಂಚಲು ಎಂದರೆ, ವರ್ಷದ ಹನ್ನೆರಡು ತಿಂಗಳೂ ಜೀವಂತವಾಗಿರುವ ಹಬ್ಬ ಹಾಗೂ ಆಚರಣೆಗಳು ಜನಜೀವನದ ಕಾಲಬದ್ಧ ಸಂಭ್ರಮ ಹಾಗೂ ಸಮೃದ್ಧಿಯ ಸಂಕೇತಗಳು(ಸಂಸ್ಕೃತಿ ಸಂಕಥನ:೧). ಇಂತಹ ಆಚರಣೆಗಳು ವಿವಿಧ ಹಬ್ಬಗಳನ್ನು ಆಚರಿಸುತ್ತಾರೆ. ಕೆಲವು ಹಬ್ಬಗಳು ನೊಳಂಬರಿಗೆ ವಿಶಿಷ್ಟವಾಗಿವೆ. ಹಾಗೆಯೇ ಕೆಲವು ಹಬ್ಬಗಳನ್ನು ಗ್ರಾಮದ ಎಲ್ಲ ಜನತೆ ಸಾಮಾನ್ಯವಾಗಿ ಸಾಮರಸ್ಯದಿಂದ ಆಚರಿಸುತ್ತಾರೆ. ನೊಳಂಬರ ಹಲವು ಹಬ್ಬಗಳು ಇತರೆ ಲಿಂಗಾಯತರ ಸಾಮಾನ್ಯ ಹಬ್ಬಗಳೊಂದಿಗೆ ಸಾಮ್ಯತೆಯನ್ನು ಹೊಂದಿದೆ.

ನೊಳಂಬರ ಪ್ರಮುಖ ಆರಾಧ್ಯ ದೈವಗಳೆಂದರೆ, ನೊಳಂಬೇಶ್ವರ ವೀರಭದ್ರೇಶ್ವರ, ಕಲ್ಲೇಶ್ವರ, ಮಲ್ಲಿಕಾರ್ಜುನ, ಸಿದ್ದೇಶ್ವರ, ಗಂಗಾದರೇಶ್ವರ, ಚನ್ನಕೇಶವ, ಆಂಜನೆಯ, ಬನಶಂಕರಿ, ಮಲ್ಲಯ್ಯ, ತಿರುಪತಿ ತಿಮ್ಮಪ್ಪ, ರಂಗನಾಥಸ್ವಾಮಿ ನಂಜುಂಡೇಶ್ವರ, ಬೈರವೇಶ್ವರ, ಸಿದ್ಧರಾಮೇಶ್ವರ ಹೀಗೆ ನೊಳಂಬರಲ್ಲಿ ಶೈವ ಮತ್ತು ವೈಷ್ಣವ ಆರಾಧನೆಗಳನ್ನು ಕಾಣಬಹುದು.

ಇಂದಿನ 'ನೊಳಂಬರಲ್ಲಿ ನಾಲ್ಕು ಒಳಬೇಧಗಳಿರುವುದು ಕಂಡುಬರುತ್ತದೆ. ಮೊದಲನೆಯ ಬೇಧ, ಮೂರುದಿನದವರು, ೨. ನಾಲ್ಕುದಿನದವರು, ೩. ತಿಮ್ಮಪ್ಪನ ಪೂಜಕರು, ೪. ಸಾಲಮೂಲ ತಪ್ಪಿದವರು ಹೀಗೆ ನಾಲ್ಕು ಬೇಧಗಳನ್ನು ಗುರುತಿಸಲಾಗಿದೆ. ನೊಳಂಬೇಶ್ವರ(ಬೈರವೇಶ್ವರ)ನ ಮೂಲ ಪುಜಾರಿಗೆ, ಇಬ್ಬರು ಪುತ್ರರು ಪೂಜೆ ಮಾಡುವ ಸರದಿ ಒಬ್ಬನಿಗೆ ೩ ದಿನ. ಇನ್ನೊಬ್ಬನಿಗೆ ನಾಲ್ಕು ದಿನ ಎಂದು ಇಬ್ಬರೂ ಮಕ್ಕಳಿಗೆ ಹಂಚಿಕೊಟ್ಟಿರುವುದಿದೆ. ಇದರಿಂದ ನೊಳಂಬರು ಮೂಲದಲ್ಲಿ ಪುಜಾರಿಗಳೆಂಬುದು ಸ್ಪಷ್ಟವಾಗುತ್ತದೆ. ಕರ್ನಾಟಕದ ಉತ್ತರ ಭಾಗದಲ್ಲಿ ಕುರುಬರನ್ನು 'ಗೌರವದಿಂದ 'ಪುಜಾರಿ'ಗಳೆಂದು ಕರೆಯುವ ರೂಢಿಯಿದೆ. ಒಂದೇ ಕುಟುಂಬದವರನ್ನು ಮೂರು ಮತ್ತು ನಾಲ್ಕು ದಿನದ ಪುಜಾರಿಗಳೆಂದು ಅಣ್ಣ ತಮ್ಮಂದಿರ ವಂಶಜರನ್ನು ಗುರುತಿಸಿದರು. ಇವರು ಶೈವರಾಧಕರಾಗಿದ್ದರು. ಇನ್ನೂ ಮೂರನೆಯವರು ಕಾಲಘಟ್ಟದಲ್ಲಿ ಕೆಲವರು ವಿಷ್ಣು ಆರಾಧನೆಗೆ ಒಕ್ಕಲಾದವರು ಅವರು ತಿಮ್ಮಪ್ಪನ ಪುಜಾರಿಗಳೆಂದು ಕರೆದರು.

ಕಾಲಗತಿಸಿದಂತೆ ಮೂರು ದಿನದ ಪುಜಾರಿ, ನಾಲ್ಕು ದಿನದ ಪುಜಾರಿ, ಎಂಬ ಪದಗಳು ಸಂಕ್ಷೇಪಗೊಂಡು ಮೂರುದಿನದವರು, ನಾಲ್ಕುದಿನದವರು ಎಂದು ಬಳಕೆಗೆ ಬಂದವು. ಇನ್ನೂ ನಾಲ್ಕನೆಯದ್ದು, 'ಸಾಲಮೂಲ ತಪ್ಪಿದವರು' ಒಟ್ಟು ನೊಳಂಬರಲ್ಲಿ ಧರ್ಮಸಮ್ಮತ ಅಲ್ಲದ ಮತ್ತು ವಿವಾಹೇತರ ಸಂಬಂಧಗಳಿಂದ ಜನಿಸಿದ ವಂಶಜರನ್ನು ಈ

ರೀತಿ ಕರೆಯುತ್ತಿದ್ದರು ಎಂಬುದಾಗಿದೆ. ಇವರನ್ನು ಬೇಸಾಯ ಕಾಯಕದ ಹಿನ್ನೆಲೆಯಲ್ಲಿ ಈ ರೀತಿ ಕರೆಯಲಾಗಿದೆ. ಮೂರು ದಿನದವರು ತಮ್ಮದೇ ಶಾಖೆಯಲ್ಲಿ ಗುರುಮಠಗಳನ್ನು ಹೊಂದಿದ್ದಾರೆ. ನಾಲ್ಕುದಿನದವರು ಬೇರೆ ಲಿಂಗಾಯತರ ಗುರುಗಳನ್ನು ತಮ್ಮ ಗುರುಗಳನ್ನಾಗಿ ಸ್ವಿಕರಿಸಿದ್ದಾರೆ. ಕೆಲವರು ಇತ್ತೀಚೆಗೆ ಶೈವಬ್ರಾಹ್ಮಣರನ್ನು ತಮ್ಮ ಶುಭಕಾರ್ಯಗಳಿಗೆ ಅರ್ಚಕರೆಂದು ಆಹ್ವಾನಿಸುತ್ತಾರೆ. ಇವರಲ್ಲಿ 'ನೊಗಹೊತ್ತ ಲಿಂಗಾಯತ' ಮತ್ತು 'ತಕ್ಕಡಿ ಹಿಡಿದ ಲಿಂಗಾಯತ' ಎಂಬ ಎರಡು ವೃತ್ತಿಪರವಾದ ಉಪಪಂಗಡಗಳನ್ನು ಕಸುಬುಗಳಿಗೆ ಸಂಬಂಧಿಸಿದಂತೆ ಬೇಧಗಳನ್ನು ಮಾಡಲಾಗಿದೆ'(ಸೊನ್ನಲಿಗೆ ಸಿದ್ಧರಾಮ:೨೩)

ನೊಳಂಬರು ಸಾಮಾನ್ಯವಾಗಿ ಹಿಂದೂ ಕ್ಯಾಲೆಂಡರನ ಅನುಗುಣವಾಗಿ ಮತ್ತು ಕೃಷಿ ಅವಲಂಬಿತವಾಗಿ ಹಬ್ಬಗಳನ್ನು ಆಚರಿಸುತ್ತಾರೆ. ವರ್ಷದ ಆರಂಭದಲ್ಲಿ ಬರುವ ಉಗಾದಿ, ಭಾರತದ ದಕ್ಷಿಣ ಭಾಗದಲ್ಲಿ ಚಂದ್ರಮಾನದಂದು ಈ ಹಬ್ಬವನ್ನು ಆಚರಿಸಲಾಗುತ್ತದೆ. ಅಂದರೆ, ವಸಂತ ಋತುವಿನ ಚೈತ್ರ ಮಾಸದ ಅಮವಾಸ್ಯೆಯ ಪಾಡ್ಯದ ದಿನದಿಂದ ಇದರ ಆಚರಣೆಗಳು ಶುರುವಾಗುತ್ತವೆ. ಈ ಹಬ್ಬವು ಕೃಷಿ ಚಟುವಟಿಕೆಗಳು ಆರಂಭವಾಗುವ ಸೂಚಕದಂತೆಯೂ ಗೋಚರಿಸುತ್ತದೆ. ಹೊನ್ನಾರು(ಭೂಮಿ ಪೂಜೆ), ಇದು ವರ್ಷಧಾರೆಯ ಮೊದಲ ದಿನ ರೈತರು ಭೂಮಿ ಪೂಜೆಯನ್ನು ಕೈಗೊಳ್ಳುವುದು. ಈ ಸಂದರ್ಭದಲ್ಲಿ ಕೃಷಿ ಉಪಕರಣಗಳನ್ನೆಲ್ಲ ಮನೆಯ ಮುಂದೆ ಇಟ್ಟು ಪೂಜಿಸಿ ವ್ಯವಸಾಯದ ಚಟುವಟಿಕೆಗಳಿಗೆ ಚಾಲನೆಯನ್ನು ನೀಡುವುದಾಗಿದೆ. ನಂತರ ಹೊಲಕ್ಕೆ ತೆರಳಿ ಪೂಜಿಸಿ, ಗೋವುಗಳನ್ನು ಪೂಜಿಸಿ, ಅವುಗಳಿಗೆ ನೈವೇದ್ಯ ಮಾಡುವುದರ ಮೂಲಕ ಭೂಮಿಗೆ ಉಳಿಮೆ ಮಾಡುವದ ಮುಖೇನ ವರ್ಷದ ವ್ಯವಸಾಯವನ್ನು ಆರಂಭಿಸಲಾಗುತ್ತದೆ.

ಬಸವ ಜಯಂತಿ, ನೊಳಂಬರಲ್ಲಿ ಬಸವ ಜಯಂತಿಯನ್ನು ತುಂಬಾ ಶ್ರದ್ಧಾಭಕ್ತಿಯಿಂದ ಆಚರಿಸುತ್ತಾರೆ. ಈ ದಿನದಂದು ಎತ್ತುಗಳಿಗೆ ಶೃಂಗಾರ ಮಾಡಿ, ಗೋಧೂಳು ಸಂದರ್ಭದಲ್ಲಿ ಊರ ಹೊರವಲಯದಿಂದ ಊರಿನ ಪ್ರಮುಖ ಬೀದಿಗಳಲ್ಲಿ ಅವುಗಳನ್ನು ಮೆರವಣಿಗೆ ಮಾಡುವುದರ ಮೂಲಕ ಈ ಹಬ್ಬವನ್ನು ಆಚರಿಸಲಾಗುತ್ತದೆ.

ಕಾರುಹುಣ್ಣಿಮೆ, ಈ ಹಬ್ಬವನ್ನು ಕೃಷಿಚಟುವಟಿಕೆಗಳು ಗರಿಗೆದರಿದ ಸಂದರ್ಭವಾಗಿದ್ದು, ಪ್ರತಿಯೊಂದು ಮನೆಯ ಗಂಡುಮಕ್ಕಳು, ಮುಂಜಾನೆ ಹೊತ್ತಲ್ಲಿ ಬ್ಯಾಟೆ, ಸೊಪ್ಪು ಮತ್ತು ಬೇವಿನ ಸೊಪ್ಪನ್ನು ತಂದು, ಎಲ್ಲರ ಒಡಗೂಡಿಗೆ ಪುರಪ್ರವೇಶ ಮಾಡಿ, ಗ್ರಾಮದೇವರ ಗುಡಿಯ ಹತ್ತಿರ ತಂದ ಆ ಎಲ್ಲ ಸೊಪ್ಪನ್ನು ಸೇರಿಸಿ, ಊರಿನ ಎಲ್ಲರು ಮತ್ತೆ ಅದನ್ನು ತಮಗೆ ಬೇಕಾದಷ್ಟು ಎತ್ತಿಕೊಂಡು ಮನೆಗೆ ತೆರಳಿ, ತಂದ ಸೊಪ್ಪನ್ನು ಮನೆಯ ಸೂರಿಗೆ

ಅಲಂಕರಿಸುತ್ತಾರೆ. ದೇವರ ಪೂಜೆ, ದೇವಸ್ಥಾನಕ್ಕೆ ಎಡೆಯನ್ನು ಕೊಟ್ಟು, ಊರಿನ ಹೊರವಲಯದಲ್ಲಿರುವ ಕರಿಕಲ್ಲಿಗೆ ತಾವು ತಂದ ಸೊಪ್ಪಿನಿಂದ ಹಗ್ಗವನ್ನು ತಯಾರಿಸಿ ಆ ಕಲ್ಲನ್ನು ಎಳೆದಾಡುತ್ತಾರೆ. ಕೊನೆಗೆ ಉಳಿಕೆ ಸೊಪ್ಪಿನಿಂದ ಮನೆಯ ಜಂತಿಗೆ ಕಟ್ಟಲಾಗುತ್ತದೆ. ಆ ದಿನದಂದು ಮನೆಯಿಂದ ಹೊರಗೆ ಯಾವ ವಸ್ತುಗಳನ್ನು ಕೊಡುವ ಪದ್ಧತಿ ಇರುವುದಿಲ್ಲ. ಅಕಸ್ಮಾತ್ ಏನಾದರೂ ಕೊಟ್ಟಲ್ಲಿ ಮನೆಯ ಸಂಪತ್ತು ಮಗದೊಬ್ಬರ ಮನೆಗೆ ಹೋಗುವುದು ಎಂಬ ಪ್ರತೀತಿ ಇದೆ. ಆಶ್ಚರ್ಯಕರ ಸಂಗತಿ ಎಂದರೆ, ಕಾರುಹುಣ್ಣಿಮೆಯ ದಿನದಂದು, ಏನಾದರೂ ಅನಾಹುತಗಳು ಸಂಭವಿಸಿದಲ್ಲಿ ಅಥವಾ ಯಾರಾದರೂ ಸಾವು ಅಪ್ಪಿದಲ್ಲಿ ಆ ವರ್ಷದಿಂದ ಮುಂದೆಂದೂ ಆ ಊರಿನಲ್ಲಿ ಈ ಕಾರುಹುಣ್ಣಿಮೆ ಹಬ್ಬವನ್ನು ಮಾಡಲಾಗುವುದಿಲ್ಲ.

ಪಂಚಮಿ, ಇದು ವರ್ಷದ ಶ್ರಾವಣ ಮಾಸದಲ್ಲಿ ಬರುವ ಪವಿತ್ರ ಎಂದು ಭಾವಿಸಿದ ತಿಂಗಳ ಪೂರ್ತಿ ಆಚರಿಸುವ ಹಬ್ಬವಾಗಿದೆ. ಈ ಮಾಸದಲ್ಲಿ, ದೇವರ ಪೂಜೆ ಪುನಸ್ಕಾರಗಳು ದಿನವಹಿ ಜರುಗುತ್ತವೆ. ಇದು ನಾಗರ ಅಮವಾಸ್ಯೆಯ ನಂತರದ ಪಂಚಮಿಯಿಂದ ಶುರುವಾಗುತ್ತದೆ. ಸಾಮಾನ್ಯವಾಗಿ ಕರ್ನಾಟಕದ ಉತ್ತರದ ಭಾಗದಲ್ಲಿ ಈ ಹಬ್ಬವನ್ನು ತುಂಬ ವಿಜೃಂಬನೆಯಿಂದ ನಡೆಸಲಾಗುತ್ತದೆ. ಪಂಚಮಿಯ ಹಬ್ಬವನ್ನು ಮಣ್ಣು ಮತ್ತು ಕಲ್ಲಿನಿಂದ ನಿರ್ಮಿಸಿದ ನಾಗರ ಮೂರ್ತಿಗೆ ಹಾಲು ಎರೆಯುವುದರ ಮೂಲಕ ಆಚರಿಸಲಾಗುತ್ತದೆ. ಈ ಮಾಸದಲ್ಲಿ ಸಿಹಿ ತಿನಿಸುಗಳನ್ನು ಮಾಡುವುದರ ಮೂಲಕ ಹಬ್ಬಕ್ಕೆ ಕಳೆ ಬರುತ್ತದೆ.

ಗೌರಿ, ಗಣೇಶ ಹಬ್ಬ, ಈ ಹಬ್ಬವನ್ನು ಶ್ರಾವಣ ಮಾಸದಲ್ಲಿ ಆಚರಿಸಲಾಗುತ್ತದೆ. ಈ ದಿನದಂದು, ಹೆಂಗಳೆಯರಿಗೆ ಬಾಗಿನ ಅರ್ಪಿಸುವುದರ ಮೂಲಕ ಅಚರಿಸಲಾಗುತ್ತದೆ.

ನವರಾತ್ರಿ(ದಸರಾ), ಇದು ಶ್ರಾವಣ ಮಾಸ ಕಳೆದ ನಂತರದ ಭಾದ್ರಪದ ಮಾಸದಲ್ಲಿ ಜರುಗುತ್ತದೆ. ಮಹಾನವಮಿ ಅಮವಾಸ್ಯೆಯ ದಿನದಿಂದ ಒಂಬತ್ತು ದಿನಗಳ ಕಾಲ ಜರುಗುತ್ತದೆ. ಈ ಸಂದರ್ಭದಲ್ಲಿ ಊರಿನ ಜನರೆಲ್ಲ ಸೇರಿ ದೇವಸ್ಥಾನಗಳನ್ನು ಅಲಂಕರಿಸಿ, ದೇವರ ಸನ್ನಿದಿಯಲ್ಲಿ ದೀಪವನ್ನು ಉರಿಸಲಾಗುತ್ತದೆ. ಈ ದೀಪವು ಸತತ ಒಂಬತ್ತು ದಿನಗಳ ಕಾಲ ಆರದಂತೆ ನೋಡಿಕೊಳ್ಳಲಾಗುತ್ತದೆ.

ದೀಪಾವಳಿ, ಈ ಹಬ್ಬವು ಆಶ್ವಿಜ ಮಾಸದಲ್ಲಿ ಜರುಗುತ್ತದೆ. ಈ ದಿನದಂದು ಕೃಷಿ ಬೆಳೆಗಳು ಫಸಲ ತೆನೆಹೊಡೆದಿರುತ್ತದೆ. ಈ ಸಂದರ್ಭದಲ್ಲಿ ಸೆಗಣಿಯಿಂದ 'ಗುಳ್ಳವ್ವ'(ಕೆರಕಪ್ಪ)ನನ್ನು

ಮಾಡಿ ಪುಷ್ಪಗಳಿಂದ ಸಿಂಗರಿಸಿ, ಮನೆಯ ಬಾಗಿಲ ಮುಂದೆ ಪ್ರತಿಷ್ಠಾಪಿಸಲಾಗುತ್ತದೆ. ನಂತರ ಆರತಿ ಬೆಳಗಿ ಪೂಜೆ ಮಾಡುತ್ತಾರೆ.

ಕಾರ್ತೀಕ ಅವಮಾಸ್ಯೆ, ನೊಳಂಬರ ಮಹತ್ವದ ಆಚರಣೆ ಎಂದರೆ, ಮಾಘ ಮಾಸದಲ್ಲಿ ದೀಪೋತ್ಸವವನ್ನು ಆಚರಿಸುವುದು ಸಂಪ್ರದಾಯವಾಗಿದೆ. ನೊಳಂಬರ ಪ್ರಾದೇಶಿಕ ಮಠ ಮಂದಿರಗಳಲ್ಲಿ ಈ ದೀಪೋತ್ಸವವನ್ನು ಧಾರ್ಮಿಕ ಆಚರಣೆಯಾಗಿ ಆಚರಿಸುತ್ತಾರೆ. ಈ ದೀಪೋತ್ಸವದಲ್ಲಿ ಮಠ ಆವರಣದಲ್ಲಿ ಸಾವಿರಾರು ಲಕ್ಷಗಟ್ಟಲೇ ದೀಪಗಳನ್ನು ಹೊತ್ತಿಸಿ ದೇವರ ಪೂಜೆ ನಡೆಸಿ ಸಂಭ್ರಮ ಪಡುವುದು ಮುಖ್ಯ ಸಂಗತಿಯಾಗಿದೆ. ಇತ್ತೀಚಿನ ದಿನಗಳಲ್ಲಿ ಲಕ್ಷದೀಪೋತ್ಸವವೆಂದು ಇದನ್ನು ಪರಿಗಣಿಸಲಾಗುತ್ತದೆ. ಆದರೆ ಪ್ರಸ್ತುತ ದಿನಗಳಲ್ಲಿ ಸಾವಿರಾರು ದೀಪಗಳನ್ನು ಹಚ್ಚಿ ಉಳಿದಂತೆ ವಿದ್ಯುತ್ ದೀಪಗಳನ್ನು ಹಾಕಿ ಪೂಜಿಸುವ ಹೊಸ ಆಯಾಮವಾಗಿದೆ.

ಸಂಕ್ರಾಂತಿ, ಈ ಸಂಕ್ರಾಂತಿ ದಿನದಂದೇ, ಪ್ರತಿವರ್ಷವೂ ಕೂಡ ಸಿದ್ಧರಾಮೇಶ್ವರರ ಜಯಂತಿಯನ್ನು ಆಚರಿಸಲಾಗುತ್ತದೆ. ಸಿದ್ದರಾಮೇಶ್ವರರ ಜಯಂತಿಯನ್ನು ನೊಳಂಬರ ಸಮುದಾಯದವರು ಪ್ರತಿವರ್ಷವು ಬೇರೆ ಬೇರೆ ಊರುಗಳಲ್ಲಿ ಆಚರಿಸುತ್ತಾರೆ.

ಶಿವರಾತ್ರಿ, ನೊಳಂಬರು ಮೂಲದಲ್ಲಿ ಶೈವರಾಗಿರುವುದರಿಂದ ಈ ಹಬ್ಬವು ನಿರ್ದಿಷ್ಟವಾಗಿ ಶಿವನ ಆರಾಧನೆಗೆ ಮೀಸಲಾಗಿರುತ್ತದೆ. ಅಂದು ಉಪವಾಸ ಮಾಡಿ, ಶಿವನಿಗೆ ನೂರೊಂದು ಅಭಿಷೇಕ ಮಾಡಿ ಹಬ್ಬವನ್ನು ಆಚರಿಸಲಾಗುತ್ತದೆ. ಜೊತೆಗೆ ಹಿರಿಯರ ಪೂಜೆಯನ್ನು ವರ್ಷಕ್ಕೊಮ್ಮೆ ಮಾಡಲಾಗುತ್ತದೆ. ಅಂದು ತೀರಿಹೋದ ಗತದ ಹಿರಿಯರಿಗೆ ಪೂಜೆಯನ್ನು ಸಲ್ಲಿಸಲಾಗುತ್ತದೆ. ಹೀಗೆ ಹಲವು ಸ್ಥಳೀಯವಾಗಿ ಇತರೆ ಸಮುದಾಯಗಳು ಆಚರಿಸುವಂತಹ ಸಾಮಾನ್ಯ ಹಬ್ಬಹರಿದಿನಗಳನ್ನು ನೊಳಂಬರು ಆಚರಿಸುತ್ತಾರೆ. ಹಾಗೂ ಜಾತ್ರೆಗಳು ನೆರವೇರುತ್ತವೆ.

ಸಿದ್ಧರಾಮೇಶ್ವರ ಜಾತ್ರಾ ಉತ್ಸವಗಳು

ನೊಳಂಬರು ತಮ್ಮ ವಾರ್ಷಿಕಾವರ್ತನದಲ್ಲಿ ಬಹಳ ಸಂಭ್ರಮದಿಂದ ಮನೆಯಿಂದ ಹೊರಗೆ, ಅದರೆ ಸಮುದಾಯದವರೊಟ್ಟಿಗೆ ಆಚರಿಸುವ ಆಚರಣೆಗಳಲ್ಲಿ ಪ್ರಮುಖವಾಗಿ ಜಾತ್ರೆಯಾಗಿದೆ. ಈ ರೀತಿಯಲ್ಲಿ ಎಲ್ಲ ಸಮುದಾಯಗಳು ಈ ರೀತಿಯ ಜಾತ್ರೆ–ಮಹೋತ್ಸವಗಳನ್ನು ಆಚರಿಸುತ್ತಾರೆ. ಹಾಗೇ ನೊಳಂಬರು ಕೂಡ ಸಮುದಾಯ ಸಾಂಸ್ಕೃತಿಕ ನಾಯಕನಾದ ಶ್ರೀ ಸಿದ್ಧರಮೇಶ್ವರನ ಜಾತ್ರೆಯನ್ನು ನೆರವೇರಿಸುವುದುಂಟು. ಬಹಳ ದೊಡ್ಡ ಪ್ರಮಾಣದಲ್ಲಿ

ನೆರವೇರುವ ಸಿದ್ಧರಾಮ ಜಯಂತಿಯನ್ನೇ ಜಾತ್ರೆಯ ಸ್ವರೂಪದಲ್ಲಿ ಸಮುದಾಯದ ಎಲ್ಲರೂ ಒಗ್ಗಟ್ಟಾಗಿ ಆಚರಣೆ ಮಾಡುತ್ತಾರೆ.

ಸಾಮಾನ್ಯವಾಗಿ ತುಮಕೂರು ಜಿಲ್ಲೆಯ ಗೋಡೆಕೆರೆ ಮತ್ತು ಯಳನಾಡು, ಚಿಕ್ಕಮಗಳೂರು ಜಿಲ್ಲೆಯ ಸೊಲ್ಲಾಪುರ ಮತ್ತು ಬುಕ್ಕಸಾರಗಳಲ್ಲಿ ಈ ಸಿದ್ಧರಾಮೇಶ್ವರರ ಜಾತ್ರೆ ನಡೆಯುತ್ತದೆ. ಇವರ ಜಾತ್ರೆಗಳ ಆಚರಣೆಗಳು ಕೂಡ ಕೃಷಿ ಸಂಬಂಧಿತವಾಗಿಯೇ ನಡೆಯುತ್ತಿರುವುದು ಒಂದು ವಿಶೇಷ. ಅಂದರೆ, ಶ್ರೀ ಸಿದ್ಧರಾಮೇಶ್ವರ ಜಾತ್ರೆಯನ್ನು ಮಾಡಿದರೆ, ಜಾತ್ರೆ ನಡೆದ ಸುತ್ತಮುತ್ತಲಿನ ಪ್ರದೇಶದಲ್ಲಿ ಆ ವರ್ಷ ವರ್ಷಧಾರೆಯಾಗುತ್ತದೆ ಎಂಬ ಬಲವಾದ ನಂಬಿಕೆ ಈ ಭಕ್ತರದ್ದು.

ಕಂಥಧಾರಣೋತ್ಸವ

ಸಿದ್ಧರಾಮೇಶ್ವರ ಜಾತ್ರೆಗಳ ಸಂದರ್ಭದಲ್ಲಿ ಸಾಮಾನ್ಯವಾಗಿ ಈ ಭಾಗದಲ್ಲಿ ನಡೆಯುವ ಕಂಥಾಧಾರಣೋತ್ಸವ ಮತ್ತು ಶ್ರೀ ಹರಿಯಪ್ಪನ ಸೇವೆಯನ್ನು ತಪ್ಪದೇ ಮಾಡುತ್ತಾರೆ. ಸಿದ್ಧರಾಮೇಶ್ವ ಸ್ವಾಮಿಯ ಅಪ್ಪಣೆಯ ಮೇರೆಗೆ ನಾಲ್ಕು ಕುರುಬ ಮನೆತನದವರು ಜಾತ್ರೆಗೂ ಒಂದು ತಿಂಗಳು ಮುಂಚಿತವಾಗಿ ಕಾಲ್ನಡೆಗೆಯಲ್ಲಿ ನಂದಿ(ಸ್ವಾಮಿ ಬಸವ)ಯನ್ನು ಕರೆದುಕೊಂಡು ಇಂದಿನ ಆಂಧ್ರಪ್ರದೇಶದ ಪೆನುಗೊಂಡೆಗೆ ಹೋಗುತ್ತಾರೆ. ಅಲ್ಲಿ ಹನ್ನೆರಡು ವರ್ಷಗಳಿಗೊಮ್ಮೆ ಬರುವ ಈ ಭಕ್ತರ ನಿರೀಕ್ಷೆಯಲ್ಲಿ ಕುರುಬ ಕುಟುಂಬವಿದೆ. ಅಲ್ಲಿರುವ ಹಿಂಡಿನ ಎರಡು ಕುರಿಗಳನ್ನು ಅಂದರೆ, ಯಾವ ದೈಹಿಕ ನ್ಯೂನತೆ ಇಲ್ಲದ ಎರಡು ಕುರಿಗಳನ್ನು ಆಯ್ಕೆ ಮಾಡಿ, ಆ ಕುರಿಗಳಿಗೆ ಲಿಂಗ ಕಟ್ಟುತ್ತಾರೆ. ಲಿಂಗ ಕಟ್ಟಿದ ಕುರಿಗಳು ಭಕ್ತರನ್ನು ಹಿಂಬಾಲಿಸಿ ಚಿಕ್ಕಮಗಳೂರು ಜಿಲ್ಲೆಯ ಸೊಲ್ಲಾಪುರಕ್ಕೆ ಬರುತ್ತವೆ. ಅಲ್ಲಿಯ ಸಿದ್ಧರಾಮೇಶ್ವರ ಗುಡಿಯ ಸ್ವಾಮಿಯ ತೀರ್ಥ ಹಾಕಿಸಿಕೊಂಡು ಬಂದು, ಕುರುಬ ಮನೆಯಲ್ಲಿ ತಂಗುತ್ತಾರೆ(ರಾಜಶೇಖರಯ್ಯ, ಪುಜಾರಿಗಳು). ಇದೊಂದು ವೈಶಿಷ್ಟ್ಯಪೂರ್ಣವಾದ ಕಾರ್ಯಕ್ರಮವಾಗಿದೆ.

ಕುರುಬ ಉಳಿದ ಮನೆಯಲ್ಲಿ, ಅಂದು ಕಂಥಾಧಾರಣೆಯ ದಿವಸ ಗಂಗಮ್ಮನ ಕೆರೆಯಲ್ಲಿ ಅವುಗಳ ಜಳಕ ಮಾಡಿಸಿ, ಉಣ್ಣೆಯನ್ನು ತೆಗೆದು, ನೂಲನ್ನು ತಗೆದು ಕಂಬಳಿ ನೇಯುತ್ತಾರೆ. ಹೀಗೆ ನೇಯ್ದ ಕಂಬಳಿಯನ್ನು ಗದ್ದುಗೆ ಕಂಬಳಿ ಎಂದು ಕರೆಯಲಾಗುತ್ತದೆ. ದೇವಸ್ಥಾನದ ಸ್ವಾಮಿ ವಿಗ್ರಹದ ಕೆಳಗೆ ಹನ್ನೆರಡು ವರ್ಷದ ಹಿಂದೆ

ಹಾಕಿದ್ದ ಕಂಬಳಿಯನ್ನು ತೆಗೆದು, ಆ ದೇವಸ್ಥಾನದಲ್ಲಿಯೇ ನೇಯ್ದು ಕಂಬಳಿಯನ್ನು ಹಾಕುತ್ತಾರೆ. ಹೀಗೆ ತಗೆದ ಗದ್ದುಗೆ ಕಂಬಳಿಯನ್ನು ಗಂಗಮ್ಮನ ಹೊಂಡದಲ್ಲಿ ಪವಿತ್ರ ವಿಧಿ-ವಿಧಾನಗಳ ಮೂಲಕ ಯಾರು ತುಳಿಯದ ಜಾಗದಲ್ಲಿ ವಿಸರ್ಜಿಸಲಾಗುತ್ತದೆ. ಈ ಕಂಥೆಯನ್ನು ಮಾಡುವವರು ಶುಚಿಭೂತರಾಗಿ ಎಂಜಿಲು, ಕಾಲು ಇತ್ಯಾದಿ ಅಪವಿತ್ರ ಪರಿಕರಗಳು ತಾಗದಂತೆ ಮಡಿಯಿಂದ ಈ ಸೇವೆಯನ್ನು ಮಾಡುತ್ತಾರೆ. ಈ ತೆರನಾಗಿ ನೆರವೇರುವುದೇ ಕಂಥಧಾರಣೋತ್ಸವ.

ಈ ಕಂಥಧಾರಣ ಸೇವೆಯನ್ನು, 'ಕುರುಬರು ತಮ್ಮ ಕುಲದೈವ ರೇವಣಸಿದ್ಧರಿಗೆ ಚಿಕ್ಕ ಕಂಬಳಿಯನ್ನು ನೇಯ್ದು ಅರ್ಪಿಸುವ ಶ್ರದ್ಧಾಪೂರ್ವಕ ಆಚರಣೆಯಾಗಿದೆ. ಕುರುಬರಲ್ಲಿ ಈ ಕಂಥೆಯನ್ನು ನೇಯುವ ಪದ್ಧತಿಯ ಬಹು ವಿಶಿಷ್ಟತೆಯಿಂದ ಕೂಡಿದೆ. ಒಡೆಯರು ಮುಂಜಾನೆ ಪೂಜೆಯನ್ನು ಮಾಡಿ, ರೇವಣಸಿದ್ಧೇಶ್ವರ ಪೂಜಾಜಲವನ್ನು ಕುರಿಮಂದೆಗೆ ಬರುತ್ತಾರೆ. ಲಕ್ಷಣವಾದ ಕಪ್ಪುಬಣ್ಣದ ಯಾವುದೇ ಬಣ್ಣದ, ಐಬು ಇಲ್ಲದ, ನಾಯಿ ಮುಟ್ಟದ ಗಂಡು ಕುರಿಮರಿಯನ್ನು ಆಯ್ದು ಅದಕ್ಕೆ ಪವಿತ್ರ ಜಲವನ್ನು ಸಿಂಪಡಿಸುತ್ತಾರೆ. ಹಲವು ದಿನಗಳ ನಂತರ ಉಣ್ಣೆ ಬೆಳೆಯುತ್ತದೆ. ಇದಕ್ಕೆ ಕಂಥೆಮರಿ ಎಂದು ಹೆಸರು. ಇದನ್ನು ಕುರುಬರು ದೈವೀಭಾವನೆಯಿಂದ ರಕ್ಷಿಸಿಕೊಂಡು ಬರುತ್ತಾರೆ. ಹೀಗೆ ರಕ್ಷಿಸಿಕೊಂಡು ಬಂದ ತಮ್ಮ ಕುಲದೈವ ರೇವಣಸಿದ್ಧರಿಗೆ, ಪೂಜೆಮಾಡಿ ತೀರ್ಥ, ಪ್ರಸಾದ ಸ್ವಿಕರಿಸಿ ಉಣ್ಣೆ ಕತ್ತರಿಸುವವರು(ಉಣ್ಣೆ ಕುರುಬರು), ಮಂಡೆಯ ಒಡೆಯನಿಗೆ ಕಾಣಿಕೆಯನ್ನು ಇಟ್ಟು ಕಂಥೆಯ ಮರಿಯನ್ನು ಹಿಡಿದು ಉಣ್ಣೆಯನ್ನು ಕತ್ತರಿಸುತ್ತಾರೆ. ಅದನ್ನು ತಗೆದುಕೊಂಡು ದೇವಸ್ಥಾನಕ್ಕೆ ಹೋಗಿ ದೇವರ ಸನ್ನಿದಿಯಲ್ಲಿಟ್ಟು ಮಡಿಯಿಂದ ಉಣ್ಣೆಯಿಂದ ನೂಲನ್ನು ತಯಾರಿಸುತ್ತಾರೆ. ನಂತರ ಆ ನೂಲಿನಿಂದ ಕಂಥೆಯನ್ನು ನೇಯ್ದು, ಹೊಸ ಬಿದಿರು ಬುಟ್ಟಿಯಲ್ಲಿಟ್ಟು ಮೆರವಣಿಗೆಯಲ್ಲಿ ಸಾಗಿ, ರೇವಣಸಿದ್ಧೇಶ್ವರರಿಗೆ ಅರ್ಪಿಸುತ್ತಾರೆ. ಕರಿಯ ಕಂಥೆಯನ್ನು ಧರಿಸುವದರಿಂದ ದೈವಿಕ ಶಕ್ತಿ ಬರುವುದೆಂದು ಜನರು ನಂಬಿದ್ದಾರೆ. ಹಳೆಯದಾದ ಕಂಥೆಯನ್ನು ಅತ್ಯಂತ ವಿಧಿ-ವಿಧಾನದಿಂದ ಹರಿಯುವ ನದಿಯಲ್ಲಿ ವಿಸರ್ಜಿಸುತ್ತಾರೆ. ಹಾಲುಮತದ ಕುರುಬ ಜನಾಂಗದವರು ತಮ್ಮ ಕುಲಗುರು ರೇವಣಸಿದ್ಧರಿಗೆ ಕಂಥೆಯನ್ನು ಒಪ್ಪಿಸುವ ಆಚರಣೆಯು ಸೊಲ್ಲಾಪುರದ ಸಿದ್ಧರಾಮೇಶ್ವ ದೇವಸ್ಥಾನದ ಕಂಥಾಧಾರಾಣ ಸೇವೆಯು ಈ ಪದ್ಧತಿಯನ್ನು ಹೋಲುತ್ತದೆ'(ಹಳ್ಳಿಕೇರಿ, ಎಫ್ ಟಿ. ರೇವಣಸಿದ್ಧ ಪರಂಪರೆ:ಹಾಲುಮತ ವ್ಯಾಸಂಗ:೫:೧೦೩-೧೦೪).

ಹರಿಯಪ್ಪನ ಸೇವೆ

ಮರುದಿನ ಒಂದು ನಿರ್ದಿಷ್ಟ ಕುರುಬ ಮನೆತನದವರು ಸಿದ್ಧರಾಮ ಕಟ್ಟಿಸದನೆಂದು ಪ್ರತೀತಿ ಇರುವ ಗಂಗಮ್ಮನ ಕೆರೆಯ ಬಳಿ ಈ ಕುರಿಗಳನ್ನು ತಂದು, ಆ ಕುರಿಗಳ ಕಡಿದು ತುಂಡು ತುಂಡು ಮಾಡಿ, ಎಣ್ಣೆಯಲ್ಲಿ ಕರಿಯುತ್ತಾರೆ. ಆ ಕರಿದ ಕುರಿ ಮಾಂಸ ತುಂಡುಗಳನ್ನು ಪ್ರಸಾದದ ರೀತಿಯಲ್ಲಿ ತಿನ್ನಲು ಕೊಡುತ್ತಾರೆ. ಈ ಪ್ರಸಾದವನ್ನು ತಿನ್ನುವುದರಿಂದ ಮಕ್ಕಳಿಲ್ಲದವರಿಗೆ ತಾಯಿತನ ಉಂಟಾಗುತ್ತದೆ ಹಾಗೂ ರೋಗರುಜಿನಗಳಿಂದ ಬಳಲುತ್ತಿರುವವರು ತಮ್ಮ ಉಡಿ(ಅಥವಾ ಮಡಿಲು)ಯಲ್ಲಿ ಹಾಕಿಸಿಕೊಳ್ಳುತ್ತಾರೆ. ಸಾಮಾನ್ಯವಾಗಿ ಮಾಂಸವನ್ನು ಸೇವಿಸುವವರು ಇದನ್ನು ಸ್ವೀಕರಿಸುತ್ತಾರೆ. ಮಾಂಸವನ್ನು ತಿನ್ನದವರು ತಮ್ಮ ಉಡೆ(ಡಿ) ಅಥವಾ ಮಡಿಲು ತುಂಬಿಸಿಕೊಳ್ಳುತ್ತಾರೆ. ಹಾಗೇ ತುಂಬಿಸಿಕೊಂಡ ಮಾಂಸದ ಪ್ರಸಾದವನ್ನು ಅಲ್ಲಿಯೇ ಇರುವ ಮರದ ಕೆಳಗೆ ಇರಿಸುತ್ತಾರೆ. ಈ ಕಾರ್ಯವನ್ನು ಹರಿಯಪ್ಪನ ಸೇವೆ ಎಂದು ಕರೆಯಲಾಗುತ್ತದೆ(ಸಿದ್ಧರಾಮೇಗೌಡ).

ನೊಳಂಬರಲ್ಲಿ ಈ ಹರಿಯಪ್ಪನ ಕುರಿತಂತೆ ಪ್ರಚಲಿತವಾದ ಕತೆಯೊಂದಿದೆ. ನೊಳಂಬರ ಆರಾಧ್ಯ ಸಾಂಸ್ಕೃತಿಕ ನಾಯಕ ಆದ ಸಿದ್ಧರಾಮನ ಶಿಷ್ಯನೇ ಈ ಹರಿಯಪ್ಪ, ಸಾಮುದಾಯಿಕವಾದ ಜನಹಿತ ಚಟುವಟಕೆಯಲ್ಲಿ ತೊಡಗಿರುವಂತಹ ಸಿದ್ಧರಾಮನ ಜೊತೆಯಲ್ಲಿಯೇ ಸದಾ ಇರುವಾತ ಹರಿಯಪ್ಪನಿಗೆ, ಒಂದು ಸಾರಿ ಹಸಿವು, ನೀರಡಿಕೆ ಎಲ್ಲವನ್ನೂ ಮರೆತು ಬಿಟ್ಟು ತನ್ನ ಕೆಲಸದಲ್ಲಿ ಲೀನನಾಗಿದ್ದ ಸಿದ್ಧರಾಮ. ಕೊನೆಗೆ ಹಸಿವು ತಾಳಲಾರದೇ, ನೀರಡಿಕೆಯಿಂದ ಬಳಲಿದ ಹರಿಯಪ್ಪ ಕುರಿಯ ಮಾಂಸವನ್ನೇ ತಿಂದು, ಆ ಕುರಿಯ ರಕ್ತ ಕುಡಿದನಂತೆ.

ಹರಿಯಪ್ಪನು ಈ ರೀತಿಯಾಗಿ ವರ್ತಿಸಿದ ಕಾರಣದಿಂದಾಗಿ ಸಿದ್ಧರಾಮೇಶ್ವರರು ತಮಗಿಂತ ಪೂರ್ವದಲ್ಲಿ ಹರಿಯಪ್ಪನ ಯೋಗಕ್ಷೇಮವನ್ನು ವಿಚಾರಿಸಿಕೊಳ್ಳುವುದು ಎಂದು ಹೇಳಿದರು. ಆ ಕಾರಣಕ್ಕಾಗಿ ಸಿದ್ಧರಾಮ ಸ್ವಾಮಿಯ ಪೂಜೆ ಮತ್ತು ರಥೋತ್ಸವಕ್ಕಿಂತ ಮೊದಲು ಸಿದ್ಧರಾಮನ ಭಕ್ತರು ಹರಿಯಪ್ಪನ ಸೇವೆಯನ್ನು ಮಾಡುತ್ತಾರೆ. ಈ ಹರಿಯಪ್ಪನ ಆಚರಣೆಯ ಜೊತೆಯೊಂದಿಗೆ, ಮಾಯಕ್ಕ ಕುಣಿತವು ಬಹು ಪ್ರಸಿದ್ಧಿ ಪಡೆದಿದೆ. ಸಿದ್ಧರಾಮೇಶ್ವರನ ಜಾತ್ರೆಯಲ್ಲಿ ರಥೋತ್ಸವದ ಸಂದರ್ಭದಲ್ಲಿ ಈ ಮಾಯಕ್ಕನನ್ನು ಕುಣಿಸುತ್ತಾರೆ. ಈ ಆಚರಣೆಯು ಸಿದ್ಧರಾಮೇಶ್ವರರ ರಥವನ್ನು ಎಳೆದು ಉತ್ಸವ ಮಾಡುವ ಮುನ್ನ ಇದು ಜರುಗುತ್ತದೆ. 'ಸಿದ್ಧರಾಮನನ್ನು ಆಕರ್ಷಿಸಲು ಮಾಯಕ್ಕ ಏನೆಲ್ಲ ಶೃಂಗಾರ, ಹಾವ ಭಾವಗಳನ್ನು ಮಾಡಿದರೂ ಸಿದ್ಧರಾಮೇಶ್ವರ ವಿಚಲಿತನಾಗಲಿಲ್ಲ ಎಂಬುದಾಗಿ

ಸೂಚಿಸಲು ಈ ರೀತಿಯ ಕುಣಿತದ ಆಚರಣೆಗಳನ್ನು ಮಾಡುತ್ತಾರೆ. ಯಕ್ಷಗಾನ ಮಾದರಿಯ ವೇಷಭೂಷಣ, ಮುಖವಾಡಗಳನ್ನು ಕೋಲಿಗೆ ಸಿಕ್ಕಿಸಿ ಭಕ್ತರು ಕುಣಿಸುತ್ತಾರೆ. ಸಾಮಾನ್ಯವಾಗಿ ಇಂತಹ ಕುಣಿತದ ಆಚರಣೆಗಳನ್ನು ತುಮಕೂರು ಜಿಲ್ಲೆಯ ಗೋಡೆಕೆರೆ ಬಳಿಸಾಗರಗಳಲ್ಲಿ ಜರುಗುವ ಸಿದ್ಧರಾಮನ ಜಾತ್ರೆಯಲ್ಲಿ ಕಂಡುಬರುತ್ತದೆ.

ಬಹಳ ಮುಖ್ಯವಾಗಿ ಜಾತ್ರೆ-ಉತ್ಸವಗಳಲ್ಲಿ ಸಿದ್ಧರಾಮೇಶ್ವರನೇ ಮಹತ್ವ ಮತ್ತು ಪ್ರಧಾನ ದೇವರಾಗಿ ಆರಾಧನೆಗೊಳ್ಳುತ್ತದೆ. ಗುಡಿಗಳಲ್ಲಿ ಸಿದ್ಧರಾಮೇಶ್ವರಸ್ವಾಮಿಯ ಪೂಜೆಯನ್ನು ಮಾಡುವ ಮುನ್ನ ಸಣ್ಣಪ್ಪ, ಸಣ್ಣದೇವರು ಎಂದು ಕರೆಯುವ ಕಟ್ಟಿಗೆಯ ತುಂಡ(ಅಥವಾ ದೊಣ್ಣೆಯ ರೀತಿಯಲ್ಲಿರುವ ಕೋಲು ಆಗಿರಬಹುದು)ಗೆ ಮೊದಲು ಪೂಜೆಯನ್ನು ಮಾಡಲಾಗುತ್ತದೆ'(ಕಲಬುರ್ಗಿ ಎಂ ಎಂ., ಲಿಂಗಾಯತ:೨೫೨-೫೩) ಇದನ್ನು ಗಮನಿಸಿಯೇ 'ಸಿದ್ಧರಾಮಣ್ಣನನ್ನು ತರಬೇಕೆ? ಎಂಬ ಪಡೆಮಾತು ದೊಣ್ಣೆ ತಂದು ಮಕ್ಕಳನ್ನು ಹೆದರಿಸಬಯಸುವ ತಾಯಂದಿರು ಬಳಸುವುದು ರೂಢಿಯಲ್ಲಿದೆ. ನಂತರ ನೊಳಂಬ ಅಯ್ಯನವರು ಸಿದ್ಧರಾಮನಿಗೆ ದಿನಕ್ಕೆ ಮೂರು ಸಲ ಪೂಜೆ ಸಲ್ಲಿಸುವ ವಾಡಿಕೆ ಇದೆ. ಪ್ರತಿ ನಿತ್ಯವು ನೂರೊಂದು ಪೂಜೆಯನ್ನು ಬಿಲ್ವಪತ್ರೆ ಮತ್ತು ತುಂಬೆ ಹೂವಿನಿಂದ ಪೂಜೆ ಮಾಡಲಾಗುತ್ತದೆ. ಪೂಜೆಮಾಡುವಾಗ ಬಾಯಿಗೆ ಬಟ್ಟೆ ಕಟ್ಟಿಕೊಳ್ಳುತ್ತಾರೆ ಮತ್ತು ಬಾಗಿಲು ಮುಚ್ಚುತ್ತಾರೆ. ಪ್ರಾಚೀನ ಕರ್ನಾಟಕ ಸೇರಿದಂತೆ ಎಲ್ಲ ಪ್ರದೇಶಗಳಲ್ಲೂ ಈ ರೀತಿಯ ಸಿದ್ಧರಾಮೇಶ್ವರ ಜಾತ್ರೆಗಳು ಮತ್ತು ಉತ್ಸವಗಳು ಜರುಗುತ್ತವೆ.

೪.೨.೩. ಕೃಷಿ ಸಂಬಂಧಿತ ಆಚರಣೆಗಳು.

ಕೃಷಿ ಬದುಕು ಎನ್ನುವುದು ಆಚರಣೆಗಳ ಸಮೂಹವೇ ಆಗಿದೆ. ವರ್ಷದ ಹನ್ನೆರಡು ತಿಂಗಳೂ ಜೀವಂತವಾಗಿರುವ ಹಬ್ಬ ಹಾಗೂ ಆಚರಣೆಗಳು ಜನಜೀವನದ ಕಾಲಬದ್ಧ ಸಂಭ್ರಮ ಹಾಗೂ ಸಮೃದ್ಧಿಯ ಸಂಕೇತಗಳು. ವಿಶೇಷವಾಗಿ ಮುಂಗಾರು ಹಂಗಾಮಿನ ಜೇಷ್ಠ, ಆಷಾಢ, ಶ್ರಾವಣ, ಭಾದ್ರಪದ, ಅಶ್ವೀಜ ಮಾಸಗಳಲ್ಲಂತೂ ಭೂಮಿ ಪೂಜೆಯ ಸಮೃದ್ಧ ಸಂಗತಿಗಳನ್ನು ಗರ್ಭೀಕರಿಸಿಕೊಂಡಿರುವಂಥವು. ಮಣ್ಣೆತ್ತಿನ ಅಮವಾಸ್ಯೆಯಿಂದ ಆರಂಭವಾಗುವ ಭೂಮಿ ಪೂಜೆಯ ಪ್ರಕ್ರಿಯೆಗಳು ಭೂಮಿಯ ನಿಸರ್ಗಮುಖಿ ಬೆಳವಣಿಗೆಯೊಂದಿಗೆ ಕರಳು ಬಳ್ಳಿಯ ಸಂಬಂಧವನ್ನು ಹೊಂದಿವೆ. ಫಲವಂತಿಕೆ ಮತ್ತು ಫಲಸಮೃದ್ಧಿಯ ಆಶಯಗಳನ್ನು ಪ್ರಧಾನವಾಗಿ ತೆರೆದುತೋರಿಸುವ ಈ ಆಚರಣೆಗಳು ಮಾನವ ತನ್ನ ಬದುಕಿನೊಂದಿಗೆ ನಿಕಟ ಸಂಬಂಧವನ್ನು ಹೊಂದಿವೆ.

ಭೂಮಾತೆಯೆಂದು ಭೂಮಿಯನ್ನು ಕಾಣುವ ರೈತ. ಅವಳನ್ನು ದೇವಿಯಾಗಿ ಅವಳ ಮಗನಾಗಿ, ಬಿತ್ತುವ ಬೆಳೆಯುವ, ಕೊಯ್ಯುವ, ಗೂಡು ಬಡಿಯುವ, ತನೆ ಮುರಿಯುವ, ಕಣ ಮಾಡುವ, ತೆನೆ ತುಳಿಸುವ, ತೂರುವ, ತುಂಬುವ ವೇಳೆಯಲ್ಲಿ ತಾಯಿಗೆ ಪೂಜೆಸಲ್ಲಿಸುವ ಕೆಲಸ ಮಾಡುತ್ತ ಬಂದ. ಭೂಮಿಯಲ್ಲಿ ದುಡಿಯುವುದರಿಂದ ತಾಯಿಯಾದ ಬೂದೇವಿಗೆ ನೋವಾಗದಿರಲಿ, ನೋವಾಗಿದ್ದರೆ ಕ್ಷಮಿಸಲಿ ಅವಳು ಮುನಿದರೆ ತಾನು ಬದುಕಲಾರ ಎನ್ನುವ ಅಳುಕು ಅವನದು. ಈ ರೀತಿಯ ಆಚರಣೆಗಲು ವೇದಕಾಲದಿಂದಲೂ ರೂಢಿಯಲ್ಲಿದ್ದದ್ದು ತಿಳಿದುಬರುತ್ತದೆ. ಈ ಹಿನ್ನೆಯಲ್ಲಿ ವ್ಯವಸಾಯದ ಪ್ರಮುಖ ಘಟ್ಟವಾದ ಸುಗ್ಗಿಯ ಸಂದರ್ಭದ ಕಣ, ಹಂತಿ, ರಾಶಿ ಇವುಗಳ ಸಾಂಸ್ಕೃತಿಕ ಅನನ್ಯತೆಯನ್ನು ಗುರುತಿಸುವ ಪ್ರಯತ್ನ ಇಲ್ಲಿನದಾಗಿದೆ.

ವ್ಯವಸಾಯ ಕಾರ್ಯವು ಪ್ರತಿಯೊಂದು ವಿಧ್ಯಮಾನಗಳನ್ನು ದೈವೀನೆಲೆಯಲ್ಲೇ ಪರಿಭಾವಿಸುವ ಕೃಷಿಕನಿಗೆ ಧರ್ಮಕ್ಕಿಂತ ದೇವರು ದೊಡ್ಡವನು. ಭೂಮಿ ಉಳುಮೆ ಮಾಡುವದರಿಂದ ಹಿಡಿದು ಬಿತ್ತನೆ, ಬೆಳೆ ರಕ್ಷಣೆ, ಕಾಲಕಾಲಕ್ಕೆ ಮಳೆ ಸುರಿದು ಬೆಳೆ ಸಮೃದ್ಧವಾಗಿರಲು, ಬೆಳೆಗಳಿಗೆ ಹಾಗೂ ದನಗಳಿಗೆ ಬರುವ ರೋಗ ರುಜಿನಗಳನ್ನು ದೂರ ಮಾಡಲು, ತನ್ನ ಕುಟುಂಬಕ್ಕೆ ಯಾವುದೇ ಧಕ್ಕೆ ಬಾರದಿರಲು ಹೀಗೆ ಒಂದೊಂದೂ ಕೆಲಸಕಾರ್ಯಗಳಿಗೆ ಒಂದೊಂದು ದೇವರನ್ನು ಸೃಷ್ಟಿಸಿಕೊಂಡು, ಸಂದರ್ಭಕ್ಕನುಗುಣವಾಗಿ ಅವುಗಳ ಆರಾಧನೆ ವಿಧಿಗಳನ್ನು ನಿಷ್ಠೆಯಿಂದ ನಡೆಸುತ್ತ ಬಂದಿದ್ದಾನೆ. ಈ ನಿಷ್ಠೆಯೇ ಆತನ ಬದುಕಿನ ಶ್ರೀರಕ್ಷೆಯಾಗಿದೆ. ಹೀಗಾಗಿ ಕೃಷಿಯು ಮನುಷ್ಯ ಪ್ರಯತ್ನಕ್ಕಿಂತ ದೈವೀ ನೆಲೆಯಲ್ಲೇ ಪ್ರಧಾನವಾಗಿ ಬೆಳೆದು ಬಂತು. ರೈತ ಲಾಭ ಹಾನಿಗಳನ್ನು ತನ್ನವಾಗಿಸಿಕೊಳ್ಳದೆ ದೇವರ ಮೇಲೆ ಜಾರಿಸುತ್ತಾ ಕೈಗೆ ಬಂದದ್ದರಲ್ಲಿ ದಾನ ದಾಸೋಹ ಮಾಡುವುದರ ಮೂಲಕ ಧನ್ಯತಾಭಾವವನ್ನು ಹೊಂದುತ್ತಾನೆ.

ಇಷ್ಟೆಲ್ಲಾ ದೈವೀಕ ಭಾವನೆಗಳ ಮೂಲಕ ಭೂಮಿಯಲ್ಲಿ ಕೃಷಿಚಟುವಟಿಕೆಗಳನ್ನು ರೂಪಿಸಿಕೊಂಡ ಕನ್ನಡ ನಾಡಿನ ಕೃಷಿಕ, ತಾನೂ ಉತ್ತಿ-ಬಿತ್ತಿದ ಬೆಳೆಯನ್ನು ಒಕ್ಕುವದರಲ್ಲಿಯೂ ಕೂಡ ಅನೇಕ ಸಂಪ್ರದಾಯಗಳನ್ನು ರೂಪಿಸಿಕೊಂಡಿದ್ದಾನೆ. ಅವುಗಳಲ್ಲಿ ಕಣ ಸಂಸ್ಕೃತಿ, ಮೇಟಿಕಂಬ ನೆಡುವುದು. ಹಂತಿ, ರಾಶಿ ಮಾಡುವುದು ಇತ್ಯಾದಿ ಚಟುವಟಿಕೆಗಳು ಕೃಷಿಯಲ್ಲಿ ಮಹತ್ವದ್ದಾಗಿವೆ. ಈ ಎಲ್ಲ ಚಟುವಟಿಕೆಗಳನ್ನು ನಾನು ಸಂಸ್ಕೃತಿ ಎಂತಲೇ ಕರೆಯುತ್ತೇನೆ. ಸಂಸ್ಕೃತಿ ಎಂಬುದೇ ಕೃಷಿಯ ಮತ್ತೊಂದು ರೂಪವಾಗಿದೆ.

ಕಣದ ಉಪಯೋಗ

ಆಧುನಿಕರಣ ಮತ್ತು ಜಾಗತಿಕರಣದದ ಪ್ರಭಾವದಿಂದಾಗಿ ಇಂದು ಕಣ ಸಂಸ್ಕೃತಿಯು ಕಾಣದಾಗಿದೆ. ನಿಜವಾದ ಕೃಷಿಕ ಕಣವನ್ನೇ ಅವಲಂಬಿಸಿರುತ್ತಾನೆ. ಇಡೀ ತನ್ನ ವರ್ಷದ ಭೂಮಿಗೆ ಸಂಬಂಧಿಸಿದ ಎಲ್ಲ ಚಟುವಟಿಕೆಗಳನ್ನು ಈ ಕಣದಿಂದಲೇ ಆರಂಭವಾಗುತ್ತಿದ್ದವು. ಕಣ ಮಾಡುವ ಕೆಲಸವು ಸಾಮಾನ್ಯವಾಗಿ ರೈತರು ಸೋಮವಾರ ಕಳೆದು ಮಂಗಳವಾರದಂದು ಇಲ್ಲವೇ ಶುಕ್ರವಾರದಂದು ಹಮ್ಮಿಕೊಳ್ಳುತ್ತಾರೆ. ಈ ದಿನಗಳು ಶುಭ ಮುಹೂರ್ತಗಳಿಂದ ಆರಂಭವಾಗುತ್ತವೆ ಎಂಬುದು ಕೃಷಿಚಟುವಟಿಕೆಯಲ್ಲಿರುವ ನಂಬಿಕೆ. ಸಾಮಾನ್ಯವಾಗಿ ಈ ಕಣ ಸಂಸ್ಕೃತಿಯು ಬನ್ನಿಗಿಡದ ಸುತ್ತಲೇ ನಡೆಯುತ್ತದೆ. ಅಂದರೆ, ಕಣ ಮಾಡುವ ಜಾಗದಲ್ಲಿ ಬನ್ನಿಗಿಡ ಇದರೇ ತುಂಬ ಒಳ್ಳೆಯದು. ಆ ಬನ್ನಿಗಿಡಕ್ಕೆ ಒಂದು ಕಟ್ಟೆಯನ್ನು ನಿರ್ಮಿಸಲಾಗುತ್ತದೆ. ಕಣ ಮಾಡುವ ಜಾಗೆಯು ಸಮಪಾತಳಿಯಿಂದ ಕೂಡಿರಬೇಕು ಮತ್ತು ಬಿರುಸಾದ ನೆಲವಾದರೂ ಇರಬೇಕು. ಕಣ ಮಾಡಲು ಪಶಸ್ತ ದಿನಗಳನ್ನು ನೋಡುವುದುಂಟು. ಸಾಮಾನ್ಯವಾಗಿ ಶ್ರವಣ ಅಥವಾ ಪುಷ್ಯ ನಕ್ಷತ್ರಗಳಲ್ಲಿ ಈ ಪ್ರಕ್ರಿಯೆ ನಡೆಯುತ್ತದೆ. ಎಲ್ಲವೂ ದೈವದಿಂದಲೇ ನೋಡುವ ನಮ್ಮ ಕೃಷಿಕರು, ತಾವು ಮಾಡಲಿರುವ ಕಣದಲ್ಲಿ ಐದು ಸಮಾನ ಮಣ್ಣಿನ ಗುಂಪಿಗಳನ್ನು ಮಾಡಿ ಅವುಗಳಿಗೆ ಅರಿಶಿಣ, ಕುಂಕುಮ ಬಳಿದು, ನೈವೇದ್ಯ ಮಾಡುವುದರ ಮೂಲಕ ಪೂಜೆ ಮಾಡಲಾಗುತ್ತದೆ. ಇಲ್ಲಿ ಕಣದಲ್ಲಿರುವ ಬನ್ನಿಗಿಡವು ಎಲ್ಲ ಚಟುವಟಿಕೆಗಳಿಗೂ ಪ್ರಧಾನವಾಗಿರುತ್ತದೆ.

ಮೇಟಿಕಂಬ ನೆಡುವ ವಿಧಾನ

ಶ್ರವಣ ಅಥವಾ ಪುಷ್ಯ ನಕ್ಷತ್ರದಲ್ಲಿ ತಯಾರುಗೊಳ್ಳುವ ಕಣದಲ್ಲಿ ರಾಶಿಯನ್ನು ಮಾಡುವ ಸಂದರ್ಭದಲ್ಲಿ ಪ್ರಧಾನವಾಗಿ ಬೇಕಾಗಿದುದ್ದು ಮೇಟಿಕಂಬ. ರಾಶಿ ಮಾಡುವ ಇಡೀ ವ್ಯವಸಾಯದ ಕೇಂದ್ರ ಬಿಂದುವಾದಂತೆ ಸಮೃದ್ಧಿಯ ಸಂಕೇತವನ್ನಾಗಿಯೂ ಅದನ್ನು ಬಳಸುತ್ತಾರೆ.

ಮೇಟಿಕಂಬವನ್ನು ತಯಾರಿಸುವ ವಿಧಾನ. ಈ ಮೇಟಿ ಕಂಬವು ಸಾಮಾನ್ಯವಾಗಿ ಬನ್ನಿ ಮತ್ತು ಆರಿ ಮರದಿಂದ ಕೂಡಿರುತ್ತದೆ. ಈ ಮೇಟಿಕಂಬವನ್ನು ಕರ್ನಾಟಕದ ಬೇರೆ ಬೇರೆ ಕಡೆಗಳಲ್ಲಿ ಭಿನ್ನವಾಗಿರುತ್ತದೆ. ಹೆಚ್ಚಾಗಿ ಪೂಜೆಗೆ ಅರ್ಹವಾದ ಮರವನ್ನೇ ಈ ಮೇಟಿಕಂಬವನ್ನಾಗಿ ರೂಪಿಸುತ್ತಾರೆ. ಇದು ೬ ಅಡಿ ಉದ್ದ ೧೦ ರಿಂದ ೧೨ ಅಂಗುಲ ದಪ್ಪವಾಗಿರುತ್ತದೆ. ನೆತ್ತಿಯ ಮೇಲೆ ಕವಲಾಗಿರುತ್ತದೆ. ಒಂದರಿಂದ ಒಂದೂವರೆ ಅಡಿ

ಉದ್ದದ ಕುಣಿ ತೆಗೆದು ಈ ಮೇಟಿಯನ್ನು ನೆಡಲಾಗುತ್ತದೆ. ಮೇಟಿಯ ಪೂಜೆಯು ಕೂಡ ಅಷ್ಟೇ, ಸಿಹಿಯ ಅಡುಗೆಯನ್ನು ಮಾಡುವದರ ಮೂಲಕ ಇದರ ಅನುಷ್ಠಾನ ಮಾಡಲಾಗುತ್ತದೆ. ಈ ಮೇಟಿಯನ್ನು ಹೂಳಲು ತೋಡಿರುವ ಕುಣಿಯ ಮಣ್ಣನ್ನು ಹತ್ತಿರದ ರಸ್ತೆಗೆ ಅಡ್ಡಲಾಗಿ ಐದು ಸಣ್ಣ ಸಣ್ಣ ಗುಂಪಿಗಳನ್ನಾಗಿ ಸುರಿಯುತ್ತಾರೆ. ಇದು ರೈತನ ಸಂವಹನ ಮಾಧ್ಯಮವಾಗಿ ಕೆಲಸ ಮಾಡುತ್ತದೆ. ಸಂವಹನ ಮಾಧ್ಯಮಗಳಿಲ್ಲದ ದಿನದಲ್ಲಿ ಇಂದಿನ ಸುಸ್ವಾಗತ ಬೋರ್ಡಿನಂತೆ ಈ ಮಣ್ಣಿನ ದಿನ್ನೆಗಳು ಕೆಲಸ ಮಾಡುತ್ತಿದ್ದವು. ಈ ದಿನ್ನೆಗಳನ್ನು ನೋಡಿದೊಡನೆಯೇ ಇಲ್ಲಿ ಕಣ ಕಾರ್ಯ ನಡೆಯುತ್ತಿದೆ ಎಂದು ಭಾವಿಸಿಕೊಂಡು ಆಯಗಾರರು ಕಣಕ್ಕೆ ಬಂದು ತಮ್ಮ ಪಾಲಿನ ಆಯವನ್ನು ಪಡೆದುಕೊಳ್ಳುತ್ತಿದ್ದರು.

ಕಣದ ಮೇಟಿಯು ಶಾಶ್ವತವಾಗಿರಬೇಕು ಎಂಬ ಆಶಯದೊಂದಿಗೆ, ತರೀಮರದ ತುಂಡನ್ನು ಬಳಸಲಾಗುತ್ತಿತ್ತು. ಶಾಶ್ವತ ಮೇಟಿಗಲು ಸುಮಾರು ೧೦ ವರ್ಷಗಳವರೆಗೆ ಏನೂ ಆಗುತ್ತಿರಲಿಲ್ಲ. ರೋಲರ್ ಕಲ್ಲುಗಳು ಬಂದ ಮೇಲೆ ಈ ಮೇಟಿಯ ಪ್ರಭಾವ ಬಹಳ ಕಡಿಮೆ ಆಗಿರುವುದುಂಟು. ಈ ಕುರಿತಂತೆ, ಸುಮಾರು ೫೦-೬೦ ವರ್ಷಗಳ ಹಿಂದೆಯೇ ಶಾಶ್ವತ ಮೇಟಿಗಳನ್ನು ಉಪಯೋಗಿಸುತ್ತಿದ್ದರು ಎಂಬುದಾಗಿ ತಿಳಿದು ಬರುತ್ತದೆ(ಸಂಸ್ಕೃತಿ ಸಂಕಥನ:೫೭).

ಹಂತಿ ಕಟ್ಟುವ ವಿಧಾನ

ಹಂತಿ ಎನ್ನುವ ಪದವು ಪಂತಿ, ಪಂಗ್ತಿ, ಬಂತಿ, ಹಂತಿ ಆಗಿ ಪರಿವರ್ತನೆಗೊಂಡಿದೆ. ಅಂದರೆ, ಸಾಲು ಎಂದು ಅರ್ಥವನ್ನು ಸ್ಫುರಿಸುತ್ತದೆ. ಕೃಷಿಸಂಸ್ಕೃತಿಯಲ್ಲಿ ಇದನ್ನು ಪಂತಿಗಟ್ಟು, ಹಂತಿಕಟ್ಟು ಎಂದು ಬಳಸುವುದುಂಟು. ಹಂತಿಕಟ್ಟು ಎನ್ನುವದು ತೆನೆಗಳನ್ನು ತುಳಿಸುವುದಕ್ಕಾಗಿ ದನಗಳನ್ನು ಸಾಲಾಗಿ ಕಟ್ಟು(ಕನ್ನಡ ನಿಘಂಟು:ಸಂಪುಟ:೫:೫೦೬೨ : ೫೦೬೩) ಎಂದಾಗುತ್ತದೆ. ತೆನೆಯನ್ನು ತುಳಿಸುವುದು ಅಂದರೆ, ಇಲ್ಲಿ ಎತ್ತುಗಳೇ ಪ್ರಧಾನವಾಗಿರುತ್ತವೆ. ಅಷ್ಟೇ ಅಲ್ಲ ಈ ಭಾಗದಲ್ಲಿ ಗೊಡ್ಡು ಬಿದ್ದ ಹಸು, ಎಮ್ಮೆಗಳನ್ನು ಬಳಸುವುದುಂಟು. ಕರ್ನಾಟಕದ ಉತ್ತರ ಭಾಗದಲ್ಲಿ ಕೇವಲ ಎತ್ತು ಹಾಗು ಪಳಗದ ಹೋರಿಗಳನ್ನು ಬಳಸುವುದುಂಟು.

ಹಂತಿ ಎಂದರೆ, ಕಣದಲ್ಲಿ ನೆಟ್ಟ ಮೇಟಿಕಂಬವನ್ನು ಕೇಂದ್ರವಾಗಿಸಿಕೊಂಡು, ಎತ್ತುಗಳು ಅದರ ಸುತ್ತಲು ಸುತ್ತುವ ರೀತಿ, ಸರಳವಾಗಿ ಹೇಳುವುದಾದರೆ, ತೆನೆಯಿಂದ ಕಾಳನ್ನು ಬೇರ್ಪಡಿಸುವ ವಿಧಾನ. ಈ ರೀತಿಯಾಗಿ ಎತ್ತುಗಳು ಸುತ್ತುವಾಗ ಅವುಗಳ ಗೊರಸಿಗೆ ತೆನೆ, ಕಾಯಿ ಸಿಕ್ಕು ಕಾಳುಗಳು ಬೇರ್ಪಡುತ್ತವೆ. ಹಂತಿಕಟ್ಟುವುದು ಸಾಮಾನ್ಯವಾಗಿ ಮುಂಗಾರಿನ ಜೋಳ, ಹಿಂಗಾರಿನ ಬಿಳಿಜೋಳ ಬಹುಮುಖ್ಯವಾದವುಗಳು. ನಂತರದ

ಸ್ಥಾನ ಗೋಧಿರಾಶಿ ಮತ್ತು ಸಜ್ಜೆರಾಶಿಯನ್ನು ಮಾಡಲು ಹಂತಿಯನ್ನು ಕಟ್ಟುವುದು ಬಳಕೆಯಲ್ಲಿದೆ. ಈ ಹಂತಿಕಟ್ಟುವಿಕೆಯು ಸಾಮಾನ್ಯವಾದ ರಾಶಿಯನ್ನುಂಟು ಮಾಡುತ್ತಿರಲಿಲ್ಲ. ಮೊದಲು ನೂರು ಚೀಲ ಇನ್ನೂರು ಚೀಲದ ರಾಶಿ, ನೂರು ಎತ್ತುಗಳು ತುಳಿದು ಮಾಡುವ ರಾಶಿಗಳಿದ್ದ ಬಗ್ಗೆ ಮಾಹಿತಿ ಸಿಗುತ್ತದೆ. ಇಂತಹ ರಾಶಿಗೆ ತಿಂಗಳು ಗಟ್ಟಲೇ ತಮ್ಮ ಎತ್ತು ಬಂಡಿಗಳ ಸಮೇತ ಬೀಗರು-ಬಿಜ್ಜರು-ಸ್ನೇಹಿತರು ಮತ್ತು ಮುಯ್ಯಕಾರರು ಭಾಗಿಗಳಾಗುತ್ತಿದ್ದರು.

ಕೃಷಿಕರದು ಶ್ರಮದ ಜೊತೆಗೆ ಕ್ರಮವರಿತ ಜೀವನ. ಮೇಟಿಗೆ ಕಟ್ಟುವ ಎತ್ತುಗಳು ಹೆಚ್ಚಾಗಿ ಹಳೆಯ ಮತ್ತು ನಡುವಯಸ್ಸಿನವು. ಇದಕ್ಕೆ ಪ್ರಬಲ ಕಾರಣವಿದೆ. ಹಳೆ ಎತ್ತುಗಳ ಹೆಜ್ಜೆಯನ್ನು ಅರಿತಿರುವದರಿಂದ ಸರಾಗವಾಗಿ ನಡೆಯಲಾಗುವುದಿಲ್ಲ. ಹಗಂತ ಅವುಗಳನ್ನು ಬಿಡಲು ಬರುವುದಿಲ್ಲ. ಮೇಟಿಗೆ ಹತ್ತಿರವಿರುವುದರಿಂದ ಕೊನೆ ಎತ್ತು ಎರಡು ಸುತ್ತು ಸುತ್ತಿ ಬಂದರೆ ಮೇಟಿಯ ಪಕ್ಕದಲ್ಲಿರುವ ಎತ್ತು ಒಂದೇ ಸುತ್ತು ಸುತ್ತಿದಂತಾಗುತ್ತದೆ. ಸಾಮಾನ್ಯವಾಗಿ ಒಂದು ಚಕ್ರದ ಗತಿಯನ್ನು ಗಮನಿಸಿದರೆ ಇದರ ಸ್ಪಷ್ಟ ಅರ್ಥಬರಬಹುದು.

ಹಂತಿಯ ಪ್ರಕ್ರಿಯೆ ಮತ್ತು ಅವಧಿ

ಹಂತಿಯ ಪ್ರಕ್ರಿಯೆಯು ಸಾಮಾನ್ಯವಾಗಿ ಇಡೀ ರಾತ್ರಿ ಜರುಗುತ್ತಿತ್ತು. ಗೆಳೆಯರು, ಬಂಧು-ಬಾಂದವರು ದೈಹಿಕ ಹಾಗೂ ಮಾನಸಿಕವಾಗಿ ಈ ಹಂತಿ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ಶ್ರಮಪರಿಹಾರಕ್ಕಾಗಿ ಹಾಡು, ಕಥೆಗಳಂತಹ ಮನರಂಜನೆಗಳ ಮೂಲಕ ಇದನ್ನು ಮುಂದುವರೆಸುತ್ತಿದ್ದರು. ಜೊತೆಗೆ ವಿವಿಧ ವಿನೋದಾವಳಿಗಳನ್ನು ಮಾಡುತ್ತಿದ್ದರು. ರಾತ್ರಿ ಊಟವೆಲ್ಲ ಮುಗಿಸಿಕೊಂಡು ಹಂತಿಕಟ್ಟಿದರೆ, ಮುಂಜಾನೆಯ ಸೂರ್ಯೋದಯ ಆಗುವವರೆಗೂ ಇದು ಸಾಂಗೋಪಸಾಂಗವಾಗಿ ನಡೆಯುತ್ತಿತ್ತು.

ಹಂತಿಯ ಕೆಲಸ ಮುಗಿದ ತರುವಾಯ ಅದನ್ನು ರಾಶಿ ಮಾಡಲಾಗುತ್ತಿತ್ತು. ಈ ಸಂದರ್ಭದಲ್ಲಿ ಮಾಡುವ ಊಟಕ್ಕೆ ರಾಶಿಊಟ ಎಂದು, ಇದಕ್ಕಾಗಿ ತರುವ ಬುತ್ತಿಯನ್ನು ರಾಶಿಬುತ್ತಿ ಎಂತಲೂ ಕರೆಯುತ್ತಾರೆ. ಇದನ್ನು ಕಣಸುಗ್ಗಿ, ಕಣಚ್ಚು ಇತ್ಯಾದಿಯಾಗಿ ಹಲವು ಹತ್ತು ಹೆಸರುಗಳಿಂದ ಕರೆಯಲಾಗುತ್ತದೆ. ಪ್ರಾದೇಶಿಕ ಭಿನ್ನತೆ ಇದಕ್ಕೆ ಮುಖ್ಯ ಕಾರಣ. ರಾಶಿಬುತ್ತಿಗೆ ಬಹುಮುಖ್ಯವಾಗಿ ಹುಗ್ಗಿ, ಹೋಳಿಗಿ, ಕರಗಡಬು, ಸಜ್ಜಿ ರೊಟ್ಟಿ, ಕಿಚಡಿ, ಸಜ್ಜಕ ಇತ್ಯಾದಿ ಅಡುಗೆಗಳನ್ನು ಮಾಡಲಾಗುತ್ತದೆ. ಇದು

ರೈತನ ಆರ್ಥಿಕ ಸ್ಥಿತಿಯ ಮೇಲೆ ಮತ್ತು ಜೊತೆಗೆ ಕಣದಲ್ಲಿರುವ ರಾಶಿಯ ಮೇಲೆ ನಿರ್ಧರಿತವಾಗುವಂತಹದು. ಉಳ್ಳವರು ಸಾಕಷ್ಟು ಪ್ರಮಾಣದಲ್ಲಿ ವ್ಯಯಸುತ್ತಾರೆ. ಕಡಿಮೆ ಹಿಡುವಳಿ ಹೊಂದಿರುವ ರೈತ ತನಗೆ ನೀಗಿದ್ದರಲ್ಲೇ ರಾಶಿಬುತ್ತಿಯನ್ನು ಮಾಡುವದರ ಮೂಲಕ ಕಣದಲ್ಲಿನ ರಾಶಿಯೊಂದಿಗೆ ಸಂಭ್ರಮಿಸುತ್ತಾನೆ. ಈ ರಾಶಿಬುತ್ತಿ ಊಟಕ್ಕೆ, ಹಿಂದಿನ ರಾತ್ರಿ ಹಂತಿಗೆ ಬಂದವರನ್ನು ಬಂಧುಬಳಗದವರನ್ನು ಸ್ನೇಹಿತರು, ಮಠದಯ್ಯರು, ಬಡಿಗ, ಕಂಬಾರ, ನಾವಿಂದರಂತಹ ಆಯಗಾರರನ್ನು ಮನೆಗೊಬ್ಬರಂತೆ ಕರೆಯುತ್ತಾರೆ. ಶ್ರೀಮಂತರು ನೂರಾರು ಜನರನ್ನು ಕರೆಸುತ್ತಾರೆ. ಮಧ್ಯಮ ಅಥವಾ ಬಡವರಾಗಿದ್ದರೆ ಸೀಮಿತ ಚೌಕಟ್ಟಿನಲ್ಲಿ ಇದನ್ನು ಮುಗಿಸಿ ನಿಯಮ ಪಾಲಿಸುತ್ತಾರೆ.

ರಾಶಿಬುತ್ತಿ ರೈತನ ಕೊನೆಯ ಚೆರಗವಾಗಿದೆ. ಭೂದೇವಿಗೆ ಆ ವರ್ಷದಲ್ಲಿ ರೈತ ಪೂಜಿಸುವ ಹಾಗೂ ಎಡೆ ಹಿಡಿಯುವ ಕೊನೆಯ ಪ್ರಕ್ರಿಯೆ ಈ ರಾಶಿಬುತ್ತಿಯಾಗಿದೆ. ವಾರ್ಷಿಕಾವರ್ತನದ ಕೊನೆಯ ಹೊಲದೂಟ ಮತ್ತು ಹೊಲದ ಪೂಜೆ ಇದು. ಮೊದಲನೆಯದು ಜೋಕುಮಾರನ ಅಂಬಲಿ ಎರಡನೆಯದ್ದು ಸೀಗಿಹುಣ್ಣಿಮೆ ಚೆರಗ, ಚೆರಗದ ಉದ್ದೇಶ ಫಲಸಮೃದ್ಧಿಯಾಗಿದೆ. ಕೆಲವೊಂದು ಚೆರಗಗಳನ್ನು ಭೂಮಿಯ ಮೇಲೆ ಚೆಲ್ಲಿದರೆ, ಜೋಕುಮಾರನ ಅಂಬಲಿಯನ್ನು ನೆಲದೊಳಗೆ ಹಾಕಿ ಮುಚ್ಚಲಾಗುತ್ತದೆ. ಜೋಕುಮಾರನ ಹಬ್ಬದ ಸಂದರ್ಭದಲ್ಲಿ ಬೆಳೆ ಇನ್ನೂ ಚಿಕ್ಕದಾಗಿರುತ್ತದೆ. ಭೂಮಿಯ ಮೇಲೆ ಅನ್ನ ಬಿದ್ದರೆ ಪಶುಪಕ್ಷಿ ತಿನ್ನುವುದರಿಂದ ಹುಲುಸು ಹೋಗುತ್ತದೆ. ಹೀಗಾಗಿ ಭೂಮಿಯಲ್ಲಿ ಅದನ್ನು ಮುಚ್ಚುವುದು ವಾಡಿಕೆ. ಉಳಿದ ಚೆರಗದ ಸಂದರ್ಭದಲ್ಲಿ ಬೆಳೆ ಎತ್ತರವಾಗಿ ಭೂಮಿ ಕಾಣದೆ ಇರುತ್ತದೆ. ಅದು ಅಲ್ಲದೆ ಜೋಳ ತೆನೆ ಹಾಕಿರುತ್ತದೆ. ಈ ಕಾರಣಕ್ಕೆ ಹಕ್ಕಿ ಪಕ್ಷಿಗಳು ಕೆಳಗೆ ಬಿದ್ದ ಅನ್ನಕ್ಕೆ ಬಾಯಿ ಹಾಕುವ ಬದಲು ಮೇಲಿದ್ದ ತೆನೆಗಳನ್ನು ತಿನ್ನುತ್ತವೆ.

ರಾಶಿಯ ಪೂಜಾ ವಿಧಾನ

ರಾಶಿ ಅಥವಾ ಧಾನ್ಯ ಪೂಜೆ ಮತ್ತು ಬೆಳೆಪೂಜೆ ಅವುಗಳಿಗೂ ಆತ್ಮ ವಿದೆ ಎನ್ನುವ ನೆಲೆಯಿಂದ ಹುಟ್ಟಿಕೊಂಡದ್ದು ಆದಿವಾಸಿ ಸಮುದಾಯಗಳಲ್ಲಿ ಒಂದು ಹೊಲದಲ್ಲಿ ಸಮೃದ್ಧ ಬೆಳೆ ಇದ್ದರೆ ಅದರಲ್ಲಿ ಧಾನ್ಯ ಮಾತೃವಿನ ಆತ್ಮವಿದೆ ಎನ್ನುವ ನಂಬಿಕೆ ಇತ್ತು. ಈ ಮಾತೃ ಬೆಳೆ ಕಟಾವು ಮಾಡುವವರೆಗೂ ಎತ್ತಲೂ ಕದಲುವುದಿಲ್ಲ. ಆದರೆ ಬೆಳೆ ಕಟಾವು ಮಾಡುತ್ತ ನಡೆದಂತೆ ಪ್ರಾಣಭಯದಿಂದ ಅವಳು ಫಸಲಿನಿಂದ ಫಸಲಿಗೆ ವರ್ಗಾಂತರವಾಗುತ್ತ ಹೋಗುತ್ತಾಳೆ. ಹೀಗೆ ಸ್ಥಾನಾಂತರ ಮಾಡುತ್ತಾ ಮಾಡುತ್ತಾ ಕೊನೆ ಬೆಳೆಯಲ್ಲಿ ಅವಳು

ಅಡಗುತ್ತಾಳೆಂದು ಪ್ರತೀತಿ. ಈ ಕಾರಣಕ್ಕಾಗಿ ಅವಳು ಹೊರಗೆ ಹೋಗದಂತೆ ಹೊಲದಲ್ಲಿಯೇ ಬಡಿದು ಸಾಯಿಸುತ್ತಾರೆ. ಈ ಸಾಯಿಸುವ ಕ್ರಮ ಕುತೂಹಲಕರವಾದದ್ದು. ಉಳಿದ ಕೊನೆಯ ಬೆಳೆಯನ್ನು ಬಡಿದು ನೆಲಕ್ಕೆ ಕೆಡವಿ ಚಿತ್ರಹಿಂಸೆ ಮಾಡುವುದು ಒಂದು ರೀತಿ. ಕೊನೆಯ ಬೆಳೆಕೊಯ್ದು ವ್ಯಕ್ತಿಯನ್ನೇ ಯದ್ವಾತದ್ವಾ ಹೊಡೆಯುವುದು ಇನ್ನೊಂದು ರೀತಿ. ಇದರಿಂದ ದೇವಿ ಅದೇ ನೆಲದಲ್ಲಿಯೇ ಬಿದ್ದು ಪ್ರಾಣಬಿಡುವಳು. ಮುಂದಿನ ವರ್ಷ ಬೆಳೆ ಹುಲುಸಾಗುವುದು ಎನ್ನುವ ನಂಬಿಕೆಯಿತ್ತು. ಇಂದೂ ಕೂಡ ಕಬ್ಬುಕೊಯ್ದ ನೆಲದಲ್ಲಿ ಬೆಂಕಿ ಹಾಕುವ, ಸಣಬಿನಂತಹ ಸಸಿಗಳನ್ನು ಬೆಳಸಿ ಅದನ್ನು ಗದ್ದೆಯಲ್ಲಿಯೇ ಕೊಚ್ಚಿ, ಗೊಬ್ಬರ ಮಾಡುವ ವಿಧಾನಗಳು ವೈಜ್ಞಾನಿಕವಾಗಿ ಏನೇ ಹೇಳಿದರೂ ಈ ಕ್ರಿಯೆಯನ್ನು ಮಾಡುವ ಕೃಷಿಕ ಜನರ ಮನದಲ್ಲಿ ಮೇಲ್ಕಂಡ ಚಿಂತನೆಯೇ ಬಹಳ ಪ್ರಮುಖವಾಗಿ ಕಂಡುಬರುತ್ತದೆ. ಬೆಳೆ ಕೊಯ್ಯುವ ಮುಂಚೆಯೇ ಅಥವಾ ತೆನೆ ಮುರಿಯುವಾಗ ಸಮೃದ್ಧವಾಗಿ ಬೆಳೆದು ನಿಂತ ಇಡೀ ಬೆಳೆಯಲ್ಲಿಯೇ ಎದ್ದು ಕಾಣುವಂತಹ ತೆನೆಗಳನ್ನು ಆರಿಸಿ ಕೊಯ್ಯುತ್ತಾರೆ. ಅದನ್ನು ಸಂರಕ್ಷಿಸಿ ಇಟ್ಟು ಮುಂದಿನ ವರ್ಷದ ಬಿತ್ತನೆಗೆ ಬಳಸಿಕೊಳ್ಳುತ್ತಾರೆ(ಸಂಸ್ಕೃತಿ ಸಂಕಥನ:೬೭-೬೮). ಇದಕ್ಕೆ ಬೀಜರಿಕಾಳುಗಳು ಎಂದು ಕೂಡ ಕರೆಯುತ್ತಾರೆ.

ಇಷ್ಟೆಲ್ಲಾ ಕೃಷಿ ಆಚರಣೆಗಳು ಭೂಮಿಯ ಮಡಿಲಿನಲ್ಲಿ ನಡೆದ ಮೇಲೆ, ಧಾನ್ಯ, ರಾಶಿಗೆ ಕಣದಲ್ಲಿ ಪೂಜೆ ಪುನಸ್ಕಾರಗಳು ಜರುಗುತ್ತವೆ. ತೂರಿದ ರಾಶಿಯನ್ನು ಎರಡು ಹೆಸರನಿಂದ ಗುರುತಿಸುತ್ತಾರೆ. ಮೇಟಿಕಂಬಕ್ಕೆ ಗುಂಪಿ ಹಾಕಿದ ರಾಶಿಯನ್ನು 'ತನುರಾಶಿ' ಅಥವಾ 'ತೆಲಿರಾಶಿ' ಎಂದು ಕರೆಯುತ್ತಾರೆ. ಫಸಲಿನ ಶುದ್ಧ ಮತ್ತು ಮುಖ್ಯವಾದ ಪ್ರಥಮ ರಾಶಿ ಇದು. ತೂರಿದ ಭಾಗದಲ್ಲಿ ಅಂದರೆ ಮೆಟ್ಟಿನ ಕೆಳಗಡೆ ಮುಖ್ಯರಾಶಿ ೩/೧ ಭಾಗದಷ್ಟು ಉಳಿಸುತ್ತಾರೆ. ಇದಕ್ಕೆ 'ದಾನ ಧರ್ಮದ ರಾಶಿ' ಬೂದನರಾಶಿ ಎಂದು ಕರೆಯುತ್ತಾರೆ. ಈ ವಿಂಗಡಣೆಯು ತುಂಬಾ ಸಾಂಕೇತಿಕವಾಗಿದೆ. ಉತ್ಪಾದನೆಯ ಸಮಾನಹಂಚಿಕೆಯನ್ನು ಇಲ್ಲಿ ಗಮನಿಸಬಹುದು. ದಾನ-ಧರ್ಮದ ರಾಶಿಯನ್ನು ಒಕ್ಕಲಿಗ ಮುಟ್ಟುವುದಿಲ್ಲ. ದಾನ ಧರ್ಮ ಮಾಡಿ ಉಳಿದರೆ ಅದನ್ನು ಕಣದಲ್ಲಿ ದುಡಿದ ಹೊಲೆಮಕ್ಕಳಿಗೆ ಬಿಟ್ಟು ಬಿಡುತ್ತಾರೆ. ತನ್ನ ಪಾಲಿನ ಉತ್ಪನ್ನವನ್ನು ಮಾತ್ರ ತಾನೊಯ್ಯುತ್ತಾನೆ.

ಕಂಬಕ್ಕೆ ರಾಶಿ ಹಾಕಿದ ಜೋಳದ ಗುಂಪಿಯ ಮೇಲೆ ಸೂರ್ಯ-ಚಂದ್ರರನ್ನು ನವಗ್ರಹಗಳನ್ನು ಬಿಡಿಸಿರುತ್ತಾರೆ. ಹೂವು ಪತ್ರಿಗಳನ್ನು ರಾಸಿಯ ಮೇಲೆ ಚೆಲ್ಲಿರುತ್ತಾರೆ. ರಾಶಿಸುತ್ತ ಮರೆಕೋಲಿನಿಂದ

ಗೆರೆ ಹಾಕಿ ಅದರಲ್ಲಿ ಒಲೆಬೂದಿ ತಂದು ಸುತ್ತಲೂ ಉಡದಾರ ಕಟ್ಟುತ್ತಾರೆ. ಇದಕ್ಕೆ 'ಕರಿಕಟ್ಟುವುದು ಎಂತಲೂ ಕರೆಯುತ್ತಾರೆ. ಯಾವ ಕೆಟ್ಟ ಶಕ್ತಿಗಳು ರಾಶಿಗೆ ತೊಂದರೆ ಮಾಡದಿರಲಿ ಎನ್ನುವ ಭಯದ ಭಾವನೆ ಇಲ್ಲಿದೆ. ಅಷ್ಟೇ ಅಲ್ಲ ಈ ಕ್ರಿಯೆಯಲ್ಲಿ ಇನ್ನೂ ಒಂದು ತಾತ್ವಿಕವಾದ ತರ್ಕ ಅಡಗಿದೆ ಎಂದು ವಿರೇಶ ಬಡಿಗೇರ ಅವರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ(ಸಂಸ್ಕೃತಿ ಸಂಕಥನ:೬೬). ಮಾಟ ಮಂತ್ರದ ಹಿನ್ನಲೆಯನ್ನು ಇಲ್ಲಿನ ಕ್ರಿಯೆಗಳಲ್ಲಿ ಗುರುತಿಸಬಹುದಾಗಿದೆ.

ಪರಾಮರ್ಶನ ಸಾಹಿತ್ಯ

ಉತ್ನಾಳ, ಸಿದ್ದಣ್ಣ., *ಕುಡು ಒಕ್ಕಲಿಗರು* (ಅಥಣಿ: ಅನುಪಮ ಪ್ರಕಾಶನ, ೨೦೧೦)

ಕನ್ನಡ ನಿಘಂಟು, ಸಂಪುಟ–೫ (ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು,, ೨೦೧೦)

ಕಡ್ಲಪ್ಪನವರ, ಬಸಪ್ಪ., *ಶ್ರೀ ಬನಶಂಕರಿ ಮಹಾತ್ಮೆ* (ಹೊಸದುರ್ಗ: ಬಸವಶ್ರೀ ಆಫ್‌ಸೆಟ್ ಪ್ರೀಂಟರ್ಸ್,, ೨೦೦೧)

ಕಲಬುರ್ಗಿ, ಎಂ ಎಂ., *ಲಿಂಗಾಯತ* (ಇಲಕಲ್ಲು: ಸಿ.ಎಸ್.ವಿ.ಎಂ., ಎಜ್ಯುಕೇಶನ್ ಸೋಸೈಟಿ, ೨೦೦೯)

ಬಡಿಗೇರ, ವಿರೇಶ., *ಸಂಸ್ಕೃತಿ ಸಂಕಥನ* (ಕಮಲಾಪುರ: ಮಾಯಾ ಪ್ರಕಾಶನ, ೨೦೦೯)

ಬಿಜ್ಜರಗಿ, ಚಂದ್ರಕಾಂತ., *ಕುರುಬರ ಹೆಜ್ಜೆಗಳು* (ವಿಜಾಪುರ: ಶೈಲೇಂದ್ರ ಪ್ರಕಾಶನ, ೨೦೧೧

ಶಂಕರಪ್ಪ ಎಂ ಪಿ., *ನೊಳಂಬರು* (ಬೆಂಗಳೂರು: ಅನ್ನಪೂರ್ಣ ಪ್ರಕಾಶನ, ೨೦೦೭)

ಹಳ್ಳಿಕೇರಿ, ಎಫ್ ಟಿ., *ಹಾಲುಮತ ವ್ಯಾಸಂಗ–ರೇವಣಸಿದ್ಧ ಪರಂಪರೆ* (ಹಂಪಿ: ಕನ್ನಡ ವಿಶ್ವವಿದ್ಯಾಲಯ, ೨೦೧೪)

ಹೋರಿ, ಎಂ ವಿ,, *ಸಿರಿಸಂಗಿ ಸಂಸ್ಥಾನ; ಒಂದು ಅಧ್ಯಯನ;* (ಮುಂಡರಗಿ: ತ್ಯಾಗವೀರ ಸಿರಸಂಗಿ ಲಿಂಗರಾಜ ಸೇವಾ ಸಂಸ್ಥೆ, ೨೦೧೦)

Singh, K S., *The People of India: Karnataka* (New Delhi: Anthropological, Survey, of India, 2003)

ಅಧ್ಯಾಯ ಐದು

ಸಮಾರೋಪ

ಅಧ್ಯಾಯ ಐದು

ಸಮಾರೋಪ

ಕರ್ನಾಟಕ ಚರಿತ್ರೆಯಲ್ಲಿ ಹಲವು ಶತಮಾನಗಳ ಕಾಲ ಆಳ್ವಿಕೆ ನಡೆಸಿದ ನೊಳಂಬರ ಕೊಡುಗೆ ಅಪಾರವಾದುದು. ಇವರ ರಾಜಧಾನಿ ಹೆಂಜೇರು. ಈಗ ಇದರ ಹೆಸರು ಹೇಮಾವತಿ, ಇದು ತುಮಕೂರು ಜಿಲ್ಲೆಯ ಮಡಕಶಿರಾ ತಾಲ್ಲೂಕಿನಲ್ಲಿದೆ. ಪ್ರಾಚ್ಯಸಂಶೋಧನಾ ಆಕರಗಳು ನೊಳಂಬರ ಚಾರಿತ್ರಿಕ ಅಧ್ಯಯನಕ್ಕೆ ಆಕರಗಳಾಗಿದ್ದರೂ, ನೊಳಂಬರ ಚಾರಿತ್ರಿಕವಾದ ಹೆಚ್ಚಿನ ವಿಶ್ಲೇಷಣೆಗೆ ತೊಡಗಬೇಕಾದ ಸಂದರ್ಭದಲ್ಲಿ ನಮಗೆ ಬಹುಮುಖ್ಯವಾದ ಆಕರಗಳೆನಿಸಿದ್ದು ಶಾಸನಗಳು. ಅದರಲ್ಲೂ ಕನ್ನಡ ವಿಶ್ವವಿದ್ಯಾಲಯದ ಶಾಸನ ಸಂಪುಟಗಳು ಮಹತ್ವದ ವಿಷಯಗಳನ್ನು ಒದಗಿಸಿರುವುದು. ಸಂಪುಟ ಒಂದು ಬಳ್ಳಾರಿ ಜಿಲ್ಲೆಯ ಶಾಸನ ಸಂಪುಟ, ಸಂಪುಟ ೨ ಕೊಪ್ಪಳ ಜಿಲ್ಲೆಯ, ೪ ಮತ್ತು ೫ ಕ್ರಮವಾಗಿ ತಮಿಳುನಾಡು ಹಾಗೂ ಆಂಧ್ರಪ್ರದೇಶದ ಈ ಶಾಸನ ಸಂಪುಟಗಳಲ್ಲಿ ನೊಳಂಬರ ಚಾರಿತ್ರಿಕ ಕುರುಹುಗಳನ್ನು ಗುರುತಿಸಲಾಗಿದೆ. ಪಲ್ಲವರಾಮ, ಗುಣದಬೆಡಂಗ, ಮಹೇಂದ್ರ ನೊಳಂಬ, ನೊಳಂಬಾಧಿಯರಸ, ವೀರನೊಳಂಬಾಧಿರಾಜ, ಬೀರನೊಳಂಬ ಅಣ್ಣಯ್ಯದೇವ, ಅಯ್ಯಪದೇವ, ದಿಲೀಪರಸ, ಇರಿವ ನೊಳಂಬ, ನೊಳಂಬಾಧಿರಾಜ, ನೊಳಪಯ್ಯ, ಇರಿವ ನೊಳಂಬಾಧಿರಾಜ, ಇರುಳಚೋರ, ಪೊಳಲ್‌ಚೋರ ಇನ್ನೂ ಮುಂತಾದ ಅರಸು, ಸಾಮಂತರು ಆಳ್ವಿಕೆಯನ್ನು ಮಾಡಿರುವದರ ಬಗೆಗೆ ಹಲವು ಉಲ್ಲೇಖಗಳು ದೊರಕುತ್ತವೆ. ಹೀಗೆ ದೊರಕಿದ ಆಧಾರದ ಮೇಲೆ ಅವರ ಆಳ್ವಿಕೆ ಸಂದರ್ಭದಲ್ಲಿರುವ ಅನೇಕ ಅಂಶಿಕ ವಿಚಾರಗಳನ್ನು ಸರಿಹೊಂದಿಸಿಕೊಂಡು ನೊಳಂಬರ ಚಾರಿತ್ರಿಕ ಮಹತ್ವವನ್ನು ಅರಿಯುವಂತ ಪ್ರಯತ್ನ ಇಲ್ಲಿ ಮಾಡಲಾಗಿದೆ.

ಬ್ರಿಟಿಷ್ ವಸಾಹತುಷಾಹಿ ಕಾಲಾವಧಿಯಲ್ಲಿ ನಡೆದ ಜಾತಿ/ಬುಡಕಟ್ಟುಗಳ ಅಧ್ಯಯನಕ್ಕೆ ಎರಡು ಉದ್ದೇಶ ಈ ಅಧ್ಯಯನದ ಮೂಲಕ ಜನರ ಮನಸ್ಥಿತಿಯನ್ನು ತಿಳಿದು ಅವರನ್ನು ಆಡಳಿತದ ಮೂಲಕ ನಿಯಂತ್ರಿಸುವುದು ಮೊದಲನೆಯ ಉದ್ದೇಶ. ಅವರ ಧರ್ಮವನ್ನು ಚೆನ್ನಾಗಿ ಅರ್ಥಮಾಡಿಕೊಂಡು ಕ್ರೈಸ್ತಧರ್ಮಕ್ಕೆ ಮತಾಂತರ ಮಾಡುವುದು ಎರಡನೆಯ ಉದ್ದೇಶ. ಸ್ವಾತಂತ್ರ್ಯ ನಂತರ ಭಾರತದಲ್ಲಿ ನಡೆಯುತ್ತಿದ್ದ ಅಧ್ಯಯನಗಳು ಜಾತಿ/ಬುಡಕಟ್ಟುಗಳ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಜೀವನವನ್ನು ಉತ್ತಮಗೊಳಿಸುವ ಉದ್ದೇಶ ಹೊಂದಿವೆ. ಈ ಬಗ್ಗೆ ಸರ್ಕಾರಗಳು ಆಸಕ್ತಿ ಹೊಂದಿವೆ. ಹಾಗೆಯೇ ಜಾತಿ/ಬುಡಕಟ್ಟು ಸಮುದಾಯಗಳೂ ಆಸಕ್ತಿ ಹೊಂದಿವೆ. ಬುಡಕಟ್ಟುಗಳ ಜಾತಿ ಜಾತಿಗಳ ಜೀವನಕ್ರಮಗಳು ಆಧುನಿಕ ಕಾಲಕ್ಕೆ ಮೊದಲಿಗೆ ೧೯ನೆಯ ಶತಮಾನದ ಕೊನೆಯವರೆಗೆ ಹೇಗಿದ್ದವು? ಆಧುನಿಕಕತೆಯಿಂದಾಗಿ ಇಪ್ಪತ್ತನೆಯ ಶತಮಾನದಲ್ಲಿ ಹೇಗೆ ಬದಲಾಗಿವೆ? ಜಾಗತೀಕರಣದ ಸಂದರ್ಭದಲ್ಲಿ ಹೇಗೆ ಬದಲಾಗುತ್ತವೆ? ಈ ಬಗ್ಗೆ ಅಧ್ಯಯನ ಮಾಡುವುದು ಅಗತ್ಯವಾಗಿದೆ. ಅನ್ವಯಿಕವಾದ ಈ ಅಧ್ಯಯನಗಳಿಂದ, ಇವು ಸರಿಯಾಗಿ ಅನುಷ್ಠಾನಗೊಂಡರೆ, ಸರಕಾರಗಳು ಈ ಸಮುದಾಯಗಳಿಗೆ ನೆರವಾಗಲು ಸಾದ್ಯವಾಗುತ್ತದೆ. ಹಿಂದೂ ಧರ್ಮದಲ್ಲಿ ವೈದಿಕ ಧರ್ಮವೆ ಶ್ರೇಷ್ಠ ಎಂಬ ಯಜಮಾನಿಕೆಯ ದೋರಣೆಯನ್ನು ವಿರೋದಿಸಿ, ತಮ್ಮ ಬುಡಕಟ್ಟುಗಳಲ್ಲಿ ಹಾಗೂ ಉಪಜಾತಿ, ಬೆಡಗು ಬಳಿಗಳಲ್ಲಿಯೂ ಮೌಲಿಕವಾದ ಅಂಶಗಳಿವೆ ಎಂಬುದನ್ನು ಆಧಾರ ಸಮೇತ ಸಾಧಿಸಿ ತೋರಿಸುವುದು. ಆ ಮೂಲಕ ಜಾತಿಯ ಕೀಳರಿಮೆಯನ್ನು ಮೀರಿ, ಎಲ್ಲರಿಗೂ ತಾವು ಸಮಾನರಾದವರು ಎಂದು ಜಗತ್ತಿಗೆ ತೋರಿಸುವುದು ಹಾಗೂ ತಮ್ಮ ಸಾಂಸ್ಕೃತಿಕ ಅನನ್ಯತೆಯನ್ನು ತಮ್ಮ ಪುರಾಣ ಐತಿಹ್ಯಗಳೊಂದಿಗೆ ಇತಿಹಾಸದ ಮೂಲಕ ಎತ್ತಿತೋರಿಸುವುದು.

ನಾವು ಜ್ಞಾನದಲ್ಲಿ ಎರಡು ಬಗೆಗಳನ್ನು ಕಾಣುತ್ತೇವೆ. ಒಂದು ಅಕ್ಷರವಿದ್ಯೆಯಿಲ್ಲದ ಸಮುದಾಯಗಳು. ಎರಡು ಪರಂಪರಾನುಗತವಾಗಿ ಅನುಭವದಿಂದ ಪಡೆದುಕೊಂಡ ಜ್ಞಾನ. ಇದು ಮೌಖಿಕವಾಗಿ ಹಾಗೂ ಅನುಕರಣೆಯ ಮೂಲಕ ವ್ಯಕ್ತಿಯಿಂದ ವ್ಯಕ್ತಿಗೆ, ತಲೆಮಾರಿನಿಂದ ತಲೆಮಾರಿಗೆ ವರ್ಗಾವಣೆಯಾಗುತ್ತದೆ. ಇದರ ಸ್ವರೂಪವನ್ನು ತಿಳಿಯುವುದಕ್ಕಾಗಿ ಅಧ್ಯಯನ ಮಾಡುವುದು ಮೊದಲನೆಯದು. ಎರಡನೆಯದು, ಅಕ್ಷರ ವಿದ್ಯೆಯನ್ನು ಕಲಿತು ಪಾಶ್ಚತ್ಯ ಮೂಲದ ಆಧುನಿಕತೆಯಿಂದ ರೂಪುಗೊಂಡ ವಿದ್ಯೆಯಿಂದ ಪಡೆದುಕೊಂಡ ಜ್ಞಾನ. ಹೀಗೆ

ಪಡೆದುಕೊಂಡ ಜ್ಞಾನಗಳಿಂದ ನಾವು ಚರಿತ್ರೆಯನ್ನು ಪುನರ್‌ರಚನೆ ಮಾಡುವಾಗ ಕೇವಲ ರಾಷ್ಟ್ರಗಳ, ರಾಜ್ಯಗಳ ರಾಜಕೀಯ ಇತಿಹಾಸವನ್ನು ಮಾತ್ರವಲ್ಲದೆ ಸಮುದಾಯಗಳ ಸಾಂಸ್ಕೃತಿಕ ಇತಿಹಾಸವನ್ನು ಸೇರಿಸುವುದು ಅತ್ಯಗತ್ಯ. ಯುನೆಸ್ಕೋ ಈ ತತ್ವವನ್ನು ಒಪ್ಪಿಕೊಂಡು ತನ್ನ ಸದಸ್ಯ ರಾಷ್ಟ್ರಗಳಿಗೆ ವೈಚಾರಿಕ ತಾಂತ್ರಿಕ ನೆರವು ನೀಡುವ ಸಲುವಾಗಿ ೧೯೮೯ರಲ್ಲಿ ರೂಪಿಸಿದ ಶಿಫಾರಸ್ಸುಗಳು ಈ ಸಂದರ್ಭದಲ್ಲಿ ಮುಖ್ಯವಾಗುತ್ತವೆ. ಹಾಗೆಯೇ ಸಂಸ್ಕೃತಿಯ ಉಳಿದ ಘಟಕಗಳಾದ ಭಾಷೆ, ತಂತ್ರಜ್ಞಾನ, ಕಲೆ, ಸಂಗೀತ ನೃತ್ಯ ಇತ್ಯಾದಿ ಎಲ್ಲ ಅಂಶಗಳನ್ನು ಉಳಿಸಿಕೊಳ್ಳುವುದು ಅಗತ್ಯ. ಈ ದೃಷ್ಟಿಯಿಂದ ಸಮುದಾಯಗಳ ಅಧ್ಯಯನ ಅವಶ್ಯವಾಗಿ ನಡೆಯಬೇಕಾಗಿದೆ. ಈ ಹಿನ್ನೆಲೆಯಲ್ಲಿ ಸಾಂಸ್ಕೃತಿಕ ಅನನ್ಯತೆಯನ್ನು ಸ್ಥಾಪಿಸಿ ಸಮಾಜದಲ್ಲಿ ಸೂಕ್ತವಾದ ಸಾಂಸ್ಕೃತಿಕ ಪ್ರತಿನಿಧೀಕರಣವನ್ನು ಪಡೆಯುವುದು ಎರಡನೆಯ ಹಂತವಾದರೂ, ಸಮುದಾಯಗಳು ಈ ಕಾರಣಗಳಿಗಾಗಿ ಅಧ್ಯಯನಗಳನ್ನು ಪ್ರೋತ್ಸಾಹಿಸುತ್ತವೆ. ಇಂದು ಜಾತಿಗಳ ಬಗ್ಗೆ ಅಧ್ಯಯನ ಮಾಡುವವರು ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಕೇವಲ ಕುತೂಹಲಕ್ಕಾಗಿ ಮಾಡುವ ವಿವರಣಾತ್ಮಕ ಅಧ್ಯಯನಗಳ ಉಪಯುಕ್ತತೆ ಪರಿಮಿತವಾಗಿರುತ್ತದೆ.

ನೊಳಂಬರು ಸಂಪೂರ್ಣ ಆಧುನಿಕತೆಗೆ ಒಳಗಾಗುವ ಪೂರ್ವದಲ್ಲಿ ಒಂದು ಬುಡಕಟ್ಟು ಸಮುದಾಯವಾಗಿ ಸಮಾಜದಲ್ಲಿ ಗೋಚರವಾಗುತ್ತಾರೆ. ಗ್ರಾಮ, ನಾಡು, ಸಾಮ್ರಾಜ್ಯದ ಪರಿಕಲ್ಪನೆಯಲ್ಲಿ ನೊಳಂಬರು ಬಂದ ತರುವಾಯ ತಮ್ಮದೇ ಆದ ಆಡಳಿತಾತ್ಮಕ ವ್ಯವಸ್ಥೆಯೊಂದನ್ನು ರೂಪಿಸಿಕೊಂಡ ಮೇಲೆ ಹಲವು ಕ್ರಾಂತಿಕಾರಕ ನಿರ್ಧಾರಗಳೊಂದಿಗೆ ಚರಿತ್ರೆಯಲ್ಲಿ ದಾಖಲಾಗುತ್ತಾರೆ. ಈವರೆಗೆ ಇವರು ಕೈಗೊಂಡ ಅನೇಕ ದಿಗ್ವಿಜಯಗಳಿಗಿಂತ ಮುಖ್ಯವಾಗಿ ಸಾಮಾಜಿಕವಾಗಿ ಇವರುಗಳು ಮಾಡಿದ ಕಾರ್ಯಗಳನ್ನು ಅರಿಯುವಂತ ಪ್ರಯತ್ನವನ್ನು ಮಾಡಲಾಗಿದೆ. ಸಾಮಾನ್ಯವಾಗಿ ನೊಳಂಬರು ಶೈವಮತಾವಲಂಬಿಗಳು. ಇವರು ಕ್ರಿಮಿ, ಕೀಟಗಳ, ಪಶುಗಳ ಮತ್ತು ಪ್ರಕೃತಿಯ ರಕ್ಷಕರು. ಇಂದು ಬಹುಸಂಖ್ಯಾತರು ಕೃಷಿಕರಾಗಿರುವರು. ಆ ಕಾರಣಕ್ಕಾಗಿ ನೊಣ, ನಂದಿ ಇವರ ಆದಿದೈವದ ರೂಪದಲ್ಲಿ ದೇವಾಲಯಗಳನ್ನು ನಿರ್ಮಿಸಿರುವುದು ಕಾಣಸಿಗುತ್ತವೆ. ನೊಳಂಬರ ಶಿಲ್ಪಗಳಲ್ಲಿ ನಂದಿ ಶಿಲ್ಪಗಳು ಬಹು ವೈಶಿಷ್ಟ್ಯಪೂರ್ಣವಾಗಿರುವುದು. ಶೈವದೇವಾಲಯಗಳಲ್ಲಿ ನಂದಿಗಾಗಿಯೇ ಮುಂಬಾಗದಲ್ಲಿ ಪ್ರತ್ಯೇಕ ನಂದಿ ಮಂಟಪಗಳನ್ನು ರಚಿಸುತ್ತಿದ್ದರು.

ಈ ನಂದಿಗಳ ಶಿಲ್ಪಗಳ ರಚನೆಯು ಚಾರಿತ್ರಿಕವಾಗಿರುತ್ತಿದ್ದವು. ಘಂಟಾಹಾರ, ಗೆಜ್ಜೆ ಹಾರ, ಸರಪಳಿ, ಹಣೆಪಟ್ಟಿ, ಕಿವಿ ಪಕ್ಕ ಕುಚ್ಚಗಳು ಇತ್ಯಾದಿ ಅಲಂಕರಣಗಳು ಇರುತ್ತವೆ. ಇವು ಅವುಗಳ ಓಜಸ್ಸು, ದೈಹಿಕ ಸೌಂದರ್ಯ ಮತ್ತು ನೈಜತೆಯಿಂದ ಕೂಡಿದವಾಗಿರುತ್ತವೆ. ಸಣ್ಣ ನಂದಿಯಿಂದ ಸುಮಾರು ಐದು ರಿಂದ ಆರು ಅಡಿ ಎತ್ತರದ ನಂದಿಗಳೂ ಇವೆ. ಹೇಮಾವತಿಯಲ್ಲಿ ದೊಡ್ಡೇಶ್ವರ. ಮಲ್ಲೇಶ್ವರ ಮಲ್ಲಿಕಾರ್ಜುನ, ದೇವಾಲಯಗಳ ಮುಂದೆ, ನಂದಿಗಳನ್ನು ಕಾಣಬಹುದು.

ಪಾರಂಪರಿಕೆ ಕೃಷಿವೃತ್ತಿಯನ್ನೇ ತಮ್ಮ ಮೂಲ ಕಸುಬನ್ನಾಗಿಸಿಕೊಂಡು ಉತ್ತುಂಗಕ್ಕೇರಿದ ನೊಳಂಬರು ಪಲ್ಲವರ ಸಾಮಂತರಾಗಿ ಪ್ರಾಚೀನ ಕರ್ನಾಟಕದ ದಕ್ಷಿಣ ಭಾಗವನ್ನು ಅಂದರೆ ತುಂಗಭದ್ರಾ ಮತ್ತು ಹೇಮಾವತಿ ನದಿಗಳ ಮಧ್ಯದ ಪ್ರದೇಶದಲ್ಲಿ ತಮ್ಮ ಶಕ್ತಿಕೇಂದ್ರವನ್ನು ಸ್ಥಾಪಿಸಿಕೊಂಡಿದ್ದರು. ಇದು ಸಾಮಾಜಿಕ ಕೌಟುಂಬಿಕ ವ್ಯವಸ್ಥೆಯ ಮೂಲವಾಗಿಯೇ ಕಂಡುಬರುತ್ತದೆ. ಈ ಎಲ್ಲ ಅಂಶಗಳನ್ನು ಪ್ರಧಾನವಾಗಿ ಗಮನದಲ್ಲಿರಿಸಿಕೊಂಡು ನೊಳಂಬರ ಚಾರಿತ್ರಿಕ ಅಧ್ಯಯನವನ್ನು ಕೆಳಗಿನ ಅಧ್ಯಾಯಗಳ ಸ್ವರೂಪದಲ್ಲಿ ವಿವರಿಸಲಾಗಿದೆ. ಒಟ್ಟು ಆರು ಅಧ್ಯಾಯಗಳಲ್ಲಿ ಈ ಸಂಶೋಧನ ಅಧ್ಯಯನವು ಹರಡಿಕೊಂಡಿದೆ.

ನೊಳಂಬರ ಮೂಲವನ್ನು ಸ್ಪಷ್ಟವಾಗಿ ನಾವು ಕರ್ನಾಟಕದ ಇತಿಹಾಸದಲ್ಲಿ ಕ್ರಿಸ್ತಶಕ ಸುಮಾರು ೮ನೆಯ ಶತಮಾನದಲ್ಲಿ ಗುರುತಿಸುತ್ತೇವೆ. ಕ್ರಿಸ್ತಶಕ ೪ನೆಯ ಶತಮಾನದ ಮಧ್ಯಭಾಗದಲ್ಲಿ ಬನವಾಸಿಯ ಕದಂಬರ ಹಾಗೂ ತಲಕಾಡಿನ ಗಂಗರ ಸಂಸ್ಥಾನಗಳು ಪ್ರಾಬಲ್ಯಕ್ಕೆ ಬಂದಾಗಲೆ, ಮೊದಲಬಾರಿಗೆ ಇಡೀ ಕನ್ನಡ ನಾಡಿನ ಆಡಳಿತವು ಸ್ಥಳೀಯ ಎನಿಸಿಕೊಂಡ ಅರಸು ಮನೆತನಗಳ ವ್ಯಾಪ್ತಿಗೆ ಬರಲಿಲ್ಲವೆಂದು ಮೇಲ್ನೋಟಕ್ಕೆ ಕಂಡುಬಂದರು, ಆಳುಪ, ಬಾಣ, ಕೇಕೆಯ ಇತ್ಯಾದಿ ರಾಜವಂಶಗಳೂ ಅವರ ಸಂಸ್ಥಾನಗಳೂ ಕನ್ನಡ ನಾಡಿನ ನೆಲದಲ್ಲಿ ಪುಟ್ಟಿಬೆಳೆದಿವೆ. ಹಾಗೇಯೇ ದಕ್ಷಿಣ ಭಾರತದಲ್ಲಿ ಮೌರ್ಯರ ಆಳ್ವಿಕೆಯ ನಂತರದಲ್ಲಿ ಶಾತವಾಹನರೂ, ಚುಟುಕುಲದವರೂ, ಪಲ್ಲವರೂ ಕರ್ನಾಟಕದ ಕೆಲಭಾಗಗಳಲ್ಲಿ ಪ್ರಬಲರಾಗಿ ಮೆರೆದಿದ್ದಾರೆ. ನಂತರದಲ್ಲಿ ಕನ್ನಡಿಗರದ್ದೇ ಆದ ಕದಂಬ, ಗಂಗರ ರಾಜ್ಯಗಳು ಅಸ್ತಿತ್ವಕ್ಕೆ ಬಂದಮೇಲೆ ಕನ್ನಡಿಗರ ರಾಜಕೀಯ, ಸಾಮಾಜಿಕ ಪರಂಪರೆಗಳ ಪ್ರತೀಕಗಳಾಗಿ, ನೆಲೆಬೀಡುಗಳಾಗಿ, ಉಳಿದು ಬೆಳೆಯಲು ಹೆಚ್ಚಿನ

ಅವಕಾಶಗಳು ಒದಗಿಬಂದವು ಈ ಕುರಿತಂತೆ ಅಂದಿನ ಸಮಕಾಲೀನ ಶಾಸನಗಳು ಸಾಕಷ್ಟು ಮಾಹಿತಿಯನ್ನು ಹೊರಹಾಕುತ್ತವೆ.

ಆದರೆ ಕ್ರಿಸ್ತಶಕ ಆರನೆಯ ಶತಮಾನದಲ್ಲಿ ಕದಂಬರನ್ನು ಪದಚ್ಯುತಗೊಳಿಸಿ ಆಧಿಪತ್ಯವನ್ನು ಗಳಿಸಿಕೊಂಡ ವಾತಾಪಿ ಅಥವಾ ಬಾದಾಮಿ ಚಾಲುಕ್ಯರು ಕರ್ನಾಟಕವನ್ನು ಹೊಸದೊಂದು ಚಕ್ರಾಧಿಪತ್ಯಕ್ಕೆ ಎರವಾದರು. ದೊಡ್ಡ ಸಾಮ್ರಾಜ್ಯಗಳ ಆಡಳಿತದ ಹಿಡಿತವನ್ನು ಬಲಪಡಿಸಿಕೊಳ್ಳಲೋಸುಗ ಸಣ್ಣ ಸಣ್ಣ ಸಂಸ್ಥಾನಗಳನ್ನು ಸ್ಥಾಪಿಸಲು ಪ್ರೋತ್ಸಾಹಿಸುವ ಸಂದರ್ಭದಲ್ಲಿ ವಿಕೇಂದ್ರಿಕೃತ ಆಡಳಿತಕ್ಕೆ ಚಾಲನೆಯನ್ನು ನೀಡಿರುವುದು ಕಂಡುಬರುತ್ತದೆ. ಚಾಳುಕ್ಯರೂ ಅವರ ನಂತರ ರಾಜ್ಯವಾಳಿದ ರಾಷ್ಟ್ರಕೂಟರೂ ಮಹತ್ವಾಕಾಂಕ್ಷಿಗಳಾಗಿದ್ದು, ತಮ್ಮ ರಾಜಕೀಯ ಪ್ರಭಾವವನ್ನು ಕರ್ನಾಟಕದ ಹೊರಗೆ ಎಲ್ಲೆಡೆಗಳಲ್ಲೂ ಮೆರೆಸುವ ಪ್ರಯತ್ನಗಳಲ್ಲಿ ಸತತ ನಿರತರಾಗಿದ್ದರಾದ ಕಾರಣ, ಕರ್ನಾಟಕದ ಒಳಾಡಳಿತವನ್ನು ಗಮನಿಸಿಕೊಳ್ಳಲು ಹಾಗೂ ಸಾಮ್ರಾಟರ ಪ್ರಭಾರವವು ಕುಂದದಂತೆ ನೋಡಿಕೊಳ್ಳಲು ಮತ್ತು ಅಗತ್ಯಬಿದ್ದಂತೆ ಸಾಮ್ರಾಟರ ದಿಗ್ವಿಜಯಗಳಲ್ಲಿ ನೆರವಾಗಲು ಅನೇಕ ಸಾಮಂತ ಅರಸುಗಳು ಅಲ್ಲಲ್ಲಿಯ ಸಂಸ್ಥಾನಗಳಲ್ಲಿ ಸಿಂಹಾಸನಸ್ಥರಾಗಿ ಆಡಳಿತ ಸೂತ್ರಗಳನ್ನು ವಹಿಸಕೊಂಡರು. ರಾಷ್ಟ್ರಕೂಟರ ಕಾಲದಲ್ಲಂತೂ ಕರ್ನಾಟಕದ ಸಾಮ್ರಾಟರು ಒಳನಾಡು ಹೊರನಾಡುಗಳಲ್ಲಿ ತಮ್ಮ ಪ್ರಭಾವವನ್ನು ಹರಡಿಸಿ ಕಾಪಾಡಿಕೊಳ್ಳುವಲ್ಲಿ ತಮ್ಮ ಸಾಮಂತರ ಮೇಲೆ ಹೆಚ್ಚುಹೆಚ್ಚಾಗಿ ಅವಲಂಬಿಸಿದ್ದರೆಂಬುದು ಅಂದಿನ ಶಾಸನಗಳ ಅಧ್ಯಯನದಿಂದ ವಿಶದವಾಗಿಯೇ ತಿಳಿದುಬರುತ್ತದೆ. ಹಾಗೆಯೇ ರಾಷ್ಟ್ರಕೂಟರ ಕಾಲದಲ್ಲಿ ಅಸ್ತಿತ್ವಕ್ಕೆ ಬಂದು ಕರ್ನಾಟಕದ ಇತಿಹಾಸವನ್ನು ಬೆಳಗಿದ ಸಾಮಂತ ಮನೆತನಗಳಲ್ಲಿ ನೊಳಂಬ–ಪಲ್ಲವ ವಂಶವೂ ಮುಖ್ಯವಾದದ್ದು.

ನೊಳಂಬರು ಅಂದು ಸಾಮಾನ್ಯವಾಗಿ ಬದುಕಿದ ರಾಜಮನೆತನಗಳಿಗಿಂತ ವಿಭಿನ್ನವಾಗಿ ಬದುಕಿರುವುದು ಕಂಡುಬರುತ್ತದೆ. ಅವರ ಸಾಂಸ್ಕೃತಿಕ ಬದುಕನ್ನು ಶಾಸನಗಳು, ದೇವಾಲಯಗಳು ಮತ್ತಿತರ ಸಾಹಿತ್ಯಿಕ ಆಕರಗಳನ್ನು ಕೆದಕಿನೋಡಿದಾಗ ಅವರ ಸ್ವಾರಸ್ಯಕರ ಬದುಕಿನ ಚಿತ್ರಣ ನಮ್ಮ ಕಣ್ಣೆದುರು ತೆರೆದುಕೊಳ್ಳುತ್ತದೆ. ನೊಳಂಬರು ಅಂದು ಗಂಗರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು ಮುಂದುವರೆದು ಕಲ್ಯಾಣದಚಾಲುಕ್ಯರು ಹಾಗೂ

ಹೊಯ್ಸಳರ ಕಾಲಾವಾಧಿಯ ಸಂದರ್ಭದಲ್ಲಿ ಪಶುಪಾಲನೆ ಮತ್ತು ಕೃಷಿಮೂಲದಿಂದಲೇ ತಮ್ಮ ಅಸ್ತಿತ್ವವನ್ನು ಕಟ್ಟಿಕೊಂಡವರಾಗಿದ್ದರು. ಈ ವೃತ್ತಿ ಮೂಲವೇ ಅವರಿಂದ ಸಾಮಾಜಿಕ, ಸಾಂಸ್ಕೃತಿಕ ಬದುಕಿಗೆ ಉತ್ತಮ ಕೊಡುಗೆಯನ್ನು ಕೊಡಲು ಪ್ರೇರಕ ಶಕ್ತಿಯಾಗಿರಲಿಕ್ಕೆ ಸಾಧ್ಯತೆಯಿದೆ. ಕಾರಣ ಅವರು ನಿರ್ಮಿಸಿದ ದೇವಾಲಯಗಳ ರಚನೆಯು ಹಲವು ರಾಜಮನೆತನಗಳವರ ಕೊಡುಗೆಗಳಿಗಿಂತ ಭಿನ್ನವಾಗಿವೆ. ಆದರೆ, ಈ ಮೇಲೆ ಹೇಳಿದ ಹಾಗೆ ಅವರು ಕೃಷಿ ಅಥವಾ ವ್ಯವಸಾಯದ ಮೂಲದವರಾಗಿದ್ದರ ಫಲವಾಗಿ ಅವರ ಶೈವದೇವಾಲಯಗಳಲ್ಲಿ ನಂದಿಯ ವಿಗ್ರಹವು ಕಲ್ಯಾಣದ ಚಾಲುಕ್ಯರ ಶೈವದೇವಾಲಯಗಳಲ್ಲಿನ ನಂದಿ ವಿಗ್ರಹಗಳಿಗಿಂತ ಭಿನ್ನವವಾಗಿ ಮತ್ತು ಶೈವದೇವಾಲಯದಲ್ಲಿ ಶಿವನಿಗಿಂತ ಎತ್ತರವಾಗಿ ಪ್ರತಿಷ್ಠಾಪಿಸಿರುವುದು ಅವರು ನಿರ್ಮಿಸಿದ ಶೈವದೇವಾಲಯಗಳನ್ನು ಸಂದರ್ಶಿಸಿದಾಗ ಇಂತಹ ಅಭಿಪ್ರಾಯಕ್ಕೆ ಬರಲು ಸಾಧ್ಯತೆ ಇದೆ. ಮಧ್ಯಕಾಲೀನ ಕರ್ನಾಟಕದ ಚರಿತ್ರೆಗೆ ನೊಳಂಬರು ನೀಡಿದ ಕೊಡುಗೆ ಅಪಾರವಾದುದಾಗಿದೆ.

ಮುಂದುವರೆದು, ಪ್ರಾಚೀನ ಕರ್ನಾಟಕದ ಸ್ತ್ರೀಯರು ಅದರಲ್ಲೂ ರಾಜ ಮಾಂಡಲಿಕ, ಸಾಮಂತ ಮನೆತನದ ಸ್ತ್ರೀಯರು ಶೈವ ಧರ್ಮಕ್ಕೆ ಸಂಬಂಧಪಟ್ಟ ಲಿಂಗ ಪ್ರತಿಷ್ಠೆ, ದೇವಸ್ಥಾನ ನಿರ್ಮಾಣದ ಜೊತೆಗೆ ಕೆರೆ, ಬಾವಿ, ಸತ್ರ, ಅರವಟ್ಟಿಗೆಗಳ ನಿರ್ಮಾಣ ಇತ್ಯಾದಿ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿರುವುದು ವಿಶೇಷವಾಗಿ ಕಂಡುಬರುತ್ತದೆ. ಇವುಗಳನ್ನು ಅಧ್ಯಯನದ ಅನುಕೂಲತೆಯ ದೃಷ್ಟಿಯಿಂದ ವೈಯಕ್ತಿಕ, ಕೌಟುಂಬಿಕ, ಸಾಮೂಹಿಕ ದಾನವೆಂದು ನೋಡಬಹುದು. ಈ ಹಿನ್ನೆಲೆಯಲ್ಲಿ ಪ್ರಾಚೀನ ಕರ್ನಾಟಕದಲ್ಲಿ ಶೈವ ಧರ್ಮಕ್ಕೆ ತುಂಬು ಸೇವೆ ಸಲ್ಲಿಸಿದವರು ಸಮಕಾಲೀನವರಾದ ಕಲ್ಯಾಣದ ಚಾಲುಕ್ಯರನ್ನು ಹೊರತುಪಡಿಸಿದರೆ ಅದು ನೊಳಂಬರು. ನೊಳಂಬರ ಆಳ್ವಿಕೆಯಲ್ಲಿ ದೊರೆತ ಶಾಸನಗಳಲ್ಲಿ ಸಾಮಾನ್ಯವಾಗಿ ಶೈವದೇವಾಲಯಗಳಿಗೆ ದಾನ-ದತ್ತಿ ನೀಡಿರುವುದು, ದೇವಾಲಯಗಳನ್ನು ಕಟ್ಟಿಸಿರುವುದರ ಬಗ್ಗೆ ಮಾಹಿತಿ ದೊರೆಯುತ್ತವೆ. ಬಹುಮುಖ್ಯವಾಗಿ ಸಾಮಾಜಿಕ ಕಾರ್ಯಗಳಲ್ಲಿ ಕೆರೆ-ಕಟ್ಟೆಗಳನ್ನು ಕಟ್ಟಿಸಿದ ಕೆಲವು ಶಾಸನಗಳು ನಮಗೆ ದೊರೆಯುತ್ತವೆ. ಸಹಜವಾಗಿ ಈ ಎಲ್ಲ ಶಾಸನಗಳನ್ನು ಗಮನಿಸಿದರೆ, ಧಾರ್ಮಿಕ ಚಟುವಟಿಕೆಯೊಂದಿಗೆ ಸಾಮಾಜಿಕ ಕಾರ್ಯಗಳಲ್ಲಿ ಅಂದಿನ ಅರಸು ಮನೆತನದ ಮಹಿಳೆಯರು ಭಾಗವಹಿಸುತ್ತಿದ್ದರು ಎಂಬುದು ವೇದ್ಯವಾಗುತ್ತದೆ.

ಸ್ತ್ರೀಯರಿಗೆ ಕ್ರಮವಾಗಿ ಕೌಟುಂಬಿಕ ಧಾರ್ಮಿಕ ಮತ್ತು ಸಾಮಾಜಿಕ ಕ್ಷೇತ್ರಗಳಷ್ಟು ಸುರಕ್ಷಿತವಾದ ಕ್ಷೇತ್ರಗಳು ರಾಜಕೀಯ ಕ್ಷೇತ್ರವಾಗಿರಲಿಲ್ಲ. ಶಿಷ್ಟ ಪರಿಪಾಲನೆ, ದುಷ್ಟ ಮರ್ದನದಂಥ ಉಭಯ ಜವಾಬ್ದಾರಿಯ ಕಾರ್ಯವಲಯವಾಗಿರುವ ರಾಜಕೀಯ ವಲಯವು, ಅಂದು ಮಹಿಳೆಗೆ ನಿಲುಕಿಸಿಕೊಳ್ಳಲಾರದ ಕ್ಷೇತ್ರವಾಗಿದ್ದಿತು. ಪ್ರಜಾಹಿತಕ್ಕೋಸ್ಕರ ವೈರಿಗಳ ಜೊತೆ ಸೆಣಸುವ, ಅಪಾಯಕಾರಿ ಜೀವನ ವ್ಯಾಪಾರವಾಗಿದ್ದಿತು. ಅಂದು ದೇಹ ಸಾಮರ್ಥ್ಯ, ಶೀಲ ಸಂರಕ್ಷಣೆಯ ದೃಷ್ಟಿಗಳಿಂದ ಮಹಿಳೆ, ಇದನ್ನು ನಿಲುಕಿಸಿಕೊಳ್ಳುವುದು ಕಷ್ಟಸಾಧ್ಯವಾಗಿತ್ತು. ಹೀಗಿದ್ದರೂ ನೊಳಂಬ ಮಹಿಳೆಯರು ರಾಜಕೀಯೇತರ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದು ತಿಳಿದುಬರುತ್ತದೆ. ಇವುಗಳೆಲ್ಲದರ ಜೊತೆಗೆ ಕೆರೆಗಳ ನಿರ್ಮಾಣ, ಅವುಗಳ ನಿರ್ವಹಣೆ ಮತ್ತು ಪೋಷಣೆಗಳಂತ ಚಟುವಟಿಕೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರುವುದನ್ನು ಬಹಳ ವಿಶೇಷವಾಗಿ ಶಾಸನಾಧರಗಳಿಂದ ಕಾಣಬಹುದಾಗಿದೆ.

ನೊಳಂಬ ಪಲ್ಲವ ವಂಶಸಂಜಾತರು 'ನೊಳಂಬವಾಡಿ ಮೂವತ್ತೆರಡು ಸಾವಿರದ ಪ್ರಾಂತ್ಯವನ್ನು ಕಟ್ಟಿಕೊಂಡು ಕರ್ನಾಟಕದ ಬಹುಭಾಗವನ್ನು ಆಳಿದ ಅರಸು ಮನೆತನದವರು ಹನ್ನೊಂದನೆಯ ಶತಮಾನದ ಮಧ್ಯದವರೆಗೂ ಪ್ರಕಾಶಮಾನವಾಗಿದ್ದು ಆಮೇಲೆ ಅಪ್ರಕಾಶರಾಗಿದ್ದಾರೆ. ಈ ಹಿಂದಿನ ಅಧ್ಯಾಯದಲ್ಲಿ ಚರ್ಚಿಸಿದಂತೆ ಇವರು ಕದಂಬ, ಗಂಗ ಮತ್ತು ಚಾಳುಕ್ಯರೊಡನೆ ಸಂಬಂಧವನ್ನು ಪಡೆದಿದ್ದರು. ಇಂತಹ ಪ್ರಸಿದ್ಧವಾದ ಅರಸು ಮನೆತನದ ವಂಶಸ್ಥರೇ ಮುಂದೇ ಕರ್ನಾಟಕದಲ್ಲಿ ಚದುರಿದ ಸಾಮಂತರಾಗಿ ತಮ್ಮ ಅಸ್ತಿತ್ವವನ್ನು ಚರಿತ್ರೆಯ ಭಾಗವಾಗಿ ಕಾಯ್ದುಕೊಂಡು ಬಂದಿರುವುದಲ್ಲದೇ, ತಮ್ಮ ಆಳ್ವಿಕೆಯ ಮೂಲದಿಂದಲೂ ನಾಡಿನ ಸಾಂಸ್ಕೃತಿಕ ಜಗತ್ತಿಗೆ ಅಪಾರ ಕೊಡುಗೆಯನ್ನು ನೀಡಿದ್ದಾರೆ. ಅದರಲ್ಲಿ ಬಹುಮುಖ್ಯವಾದದ್ದೆಂದರೆ, ಶೈಕ್ಷಣಿಕ ಕೊಡುಗೆಯನ್ನು ನೆನೆಯಬೇಕು. ಅಪಾರ ಶಾಸನಸಾಹಿತ್ಯ ಸಂಪತ್ತನ್ನು ಉಳಿಸಿದ್ದಾರೆ. ಕರ್ನಾಟಕ ವಾಸ್ತುಶಿಲ್ಪಕ್ಕೆ ಅಪಾರ ಮಹತ್ವದ ಕೊಡುಗೆಯನ್ನು ನೀಡಿದ್ದಾರೆ. ಅವರ ಧಾರ್ಮಿಕ ಪರಂಪರೆಯು ಕೂಡ ಮಹತ್ವದ ಕೊಡುಗೆಗಳಲ್ಲಿ ಒಂದಾಗಿದೆ.

ಕರ್ನಾಟಕದ ಸಾಮಾಜಿಕ ಸಂರಚನೆಯು ಕುಲಕಸುಬಗಳನ್ನೇ ಕೇಂದ್ರವಾಗಿರಿಸಿಕೊಂಡು, ವೃತ್ತಿಗಳೇ ಜಾತಿಗಳಾಗಿ ಪರಿಣಮಿಸಿ, ಆಯಾ ಕುಲ

ಮತ್ತು ಜಾತಿಗಳಿಗೆ ಸಂಬಂಧಿಸಿದಂತೆ ಅನೇಕ ಸಂಪ್ರದಾಯ, ಆಚರಣೆಗಳು ಚಾಲನೆಯಲ್ಲಿವೆ. ಇದಕ್ಕೆ ನೊಳಂಬರ ಜೀವನ ಕ್ರಮಗಳೇನು ಭಿನ್ನವೆನಿಸಲಾರವು. ಹಾಗಾಗಿ ಈ ನೊಳಂಬರ ಸಂಪ್ರದಾಯಗಳು ೧೨ನೆಯ ಶತಮಾನದಲ್ಲಿ ನಡೆದ ಶರಣ ಕ್ರಾಂತಿಯ ಪ್ರತಿಫಲವಾಗಿ ಹಾಗೂ ಚಳುವಳಿಯ ಭಾಗವಾಗಿ ಆಯ್ದುಕೊಂಡ ವೃತ್ತಿಯೇ ಕೃಷಿ. ೧೨ನೆಯ ಶತಮಾನಕ್ಕೂ ಪೂರ್ವದಲ್ಲಿ ಪಶುಪಾಲನೆ ಮತ್ತು ಕೃಷಿ ಒಟ್ಟೊಟ್ಟಿಗೆ ನಡೆದುಕೊಂಡ ಬಂದ ವೃತ್ತಿಯಾಗಿತ್ತು. ಹೀಗಾಗಿ ಅಲ್ಲಿಂದ ಈ ವರೆಗೆ ಕೃಷಿಯನ್ನೇ ತಮ್ಮ ಮೂಲ ವೃತ್ತಿಯನ್ನಾಗಿಸಿಕೊಂಡು, ಅದಕ್ಕೆ ಸಂಬಂಧಿಸಿದ ಆಚರಣೆಗಳು, ಸಂಪ್ರದಾಯಗಳನ್ನು ರೂಢಿಗತವಾಗಿ ಪರಂಪರೆಯನ್ನಾಗಿಸಿಕೊಂಡು ಬಂದಿವೆ.

ನೊಳಂಬರ ಜೀವನ ಕ್ರಮವನ್ನು ವಿವಿಧ ಆಯಾಮಗಳಿಂದ ಪರಶೀಲಿಸಲಾಗಿ, ಇವರ ಜೀವನದ ಮುಖ್ಯವಾದ ಆಯಾಮಗಳೆಂದರೆ, ಧಾರ್ಮಿಕ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಅಂಶಗಳು. ಪ್ರಸ್ತುತ ಅಧ್ಯಯನವು ನೊಳಂಬರ ಧಾರ್ಮಿಕ ಮತ್ತು ಸಾಂಸ್ಕೃತಿಕ ಅಂಶಗಳನ್ನು ಪರಿಶೀಲನೆಗೆ ಒಳಪಡಿಸಿ ವಿಶ್ಲೇಷಿಸುವುದಾಗಿದೆ. ನೊಳಂಬರ ಧಾರ್ಮಿಕ ಜೀವನದ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಲು ಕೆಲವು ಕುಲಗಳು ಮಠಗಳಿಗೆ ಹಾಗೂ ಧಾರ್ಮಿಕ ಆಚರಣೆಗಳನ್ನು ನಡೆಸಿಕೊಡುವ ಗುರುವರ್ಗಗಳನ್ನು, ಮತ್ತು ದಿನನಿತ್ಯದ ಆಚರಣೆಯನ್ನು ನಡೆಸುವಂತ ಸಮುದಾಯದ ಸಂಪ್ರದಾಯ ನಿಷ್ಠ ಹಿರಿಯರನ್ನು ಸಂದರ್ಶಿಸಿ ಮಾಹಿತಿ ಸಂಗ್ರಹಿಸಲಾಗಿದೆ. ಹಾಗೆಯೇ ಈ ಸಂದರ್ಶನದ ಜತೆಗೆ ಅನೇಕ ಮಾಧ್ಯಮಿಕ ಮೂಲಗಳಿಂದ ದಾಖಲೆಗಳನ್ನು ಸಂಗ್ರಹಿಸಲಾಗಿದೆ. ಒಟ್ಟಾರೆಯಾಗಿ ನೊಳಂಬರು ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶಗಳಲ್ಲಿದ್ದಾಗ್ಯೂ ಕರ್ನಾಟಕದ ಮಣ್ಣಿನೊಂದಿಗೆ ಅವರ ಬೆಸುಗೆಯನ್ನು ಗುರುತಿಸಬಹುದು. ಏಕೆಂದರೆ, ಅವರ ಆಚರಣೆಗಳೆಲ್ಲವು ಶೈವ ಧರ್ಮದ ಸಂಪ್ರದಾಯಗಳನ್ನೇ ಅವು ಹೋಲುತ್ತವೆ. ಹೀಗಾಗಿ ಒಂದು ವಿಶಿಷ್ಟ ಸಮುದಾಯವು ಕೃಷಿಕರಿಂದ ರಾಜರಾಗಿ ಇಂದು ಸಮುದಾಯಗಳಲ್ಲಿ ಬೆರೆತಿರುವುದನ್ನು ಗುರುತಿಸಲು ಸಾಧ್ಯವಾಗುತ್ತದೆ.

ನೊಳಂಬರಲ್ಲಿ ಅನೇಕ ಸಂಪ್ರದಾಯಗಳು ನಂಬಿಕೆಗಳು, ಆಚರಣೆಗಳು ಕುಟುಂಬದ ನೆಲೆಯಲ್ಲಿ, ಕುಲದ ನೆಲೆಯಲ್ಲಿ, ಉಪಜಾತಿಯ ನೆಲೆಯಲ್ಲಿ, ಜಾತಿಯ ನೆಲೆಯಲ್ಲಿ, ಗ್ರಾಮದ ನೆಲೆಯ ವಿಶಿಷ್ಟ ಪರಿಧಿಯಲ್ಲಿ ನಡೆಯುತ್ತವೆ. ನೊಳಂಬರ ಅನೇಕ ಆಚರಣೆಗಳನ್ನು ನಿತ್ಯ ನಿರ್ವಹಿಸುತ್ತಾರೆ. ಇವರು ತಮ್ಮ ಮನೆ ದೇವರನ್ನು ವಾರದ ಸೋಮವಾರ ಮತ್ತು ಶನಿವಾರಗಳಂದು ಬಹು ಕಟ್ಟುನಿಟ್ಟಾಗಿ ಪೂಜಿಸುತ್ತಾರೆ. ಇವರ ಇತರೆ ದೈನಂದಿನ ಆಚರಣೆಯಂದರೆ ಇಷ್ಟಲಿಂಗ ಪೂಜೆ. ಬಹಳಷ್ಟು ಜನ ದಿನನಿತ್ಯ ಸ್ನಾನ ಮಾಡಿ ಊಟ ಮಾಡುವುದಕ್ಕಿಂತ ಮೊದಲು ನೆರವೇರಿಸುತ್ತಾರೆ. ಅನೇಕ ನೊಳಂಬರು ತಿರುಪತಿ ತಿಮ್ಮಪ್ಪ, ಆಂಜನೇಯ, ಕಲ್ಲೇಶ್ವರ, ಮಲ್ಲೇಶ್ವರ, ಮಲ್ಲಿಕಾರ್ಜುನ ತಮ್ಮ ಮನೆದೇವರನ್ನಾಗಿ ಪರಂಪರಾಗತವಾಗಿ ವಾರಕ್ಕೊಮ್ಮೆ ಮನೆದೇವರ ದಿವಸ ಪೂಜೆ ಸಲ್ಲಿಸುವುದನ್ನು ಕಾಣಬಹುದು. ಅನೇಕ ಗ್ರಾಮಗಳಲ್ಲಿ ಶೈವ ಪಂಥದವರು ವಿಷ್ಣುವನ್ನು ಹಾಗೆ ವೈಷ್ಣವರು ಶಿವನನ್ನು ಪೂಜಿಸುವುದು ಕಂಡುಬರುತ್ತದೆ. ಇಲ್ಲಿ ಜನರು ಬ್ರಹ್ಮ ವಿಷ್ಣು ಮಹೇಶ್ವರರನ್ನು ಏಕರೀತಿಯಲ್ಲಿ ಪೂಜಿಸುತ್ತಾರೆ.

ಸಾಮಾನ್ಯವಾಗಿ ಒಂದು ಸಮುದಾಯದಿಂದ ಮತ್ತೊಂದು ಸಮುದಾಯಕ್ಕೆ ಸಂಪ್ರದಾಯಗಳು ಆಚರಣೆಗಳು ಭಿನ್ನವಾಗಿರುತ್ತವೆ. ಹಾಗೆಯೇ ನೊಳಂಬ ಸಮುದಾಯದವರ ನಂಬಿಕೆಗಳು ಮತ್ತು ಆಚರಣೆಗಳು ಇತರೆ ಸಮುದಾಯಗಳಿಗಿಂತ ಭಿನ್ನವಾಗಿರುತ್ತವೆ. ವೈಯಕ್ತಿಕವಾಗಿ ಆಚರಿಸವಂತಹ ಹಲವಾರು ನಂಬಿಕೆಗಳನ್ನು ನೊಳಂಬ ಸಮುದಾಯದಲ್ಲಿ ಕಾಣಬಹುದಾಗಿದೆ. ಎಲ್ಲಾ ಆಚರಣೆಗಳನ್ನು ಆರಾಧ್ಯರ(ಜಂಗಮರು) ಮೂಲಕ ನೆರವೇರಿಸಲಾಗುತ್ತದೆ. ಕುಟುಂಬದ ಹಲವು ಮುಖ್ಯ ಆಚರಣೆಗಳ ಸಂದರ್ಭಗಳೆಂದರೆ ಜನನ, ದೀಕ್ಷೆ, ವಿವಾಹ ಮತ್ತು ಪ್ರಮುಖವಾಗಿ ಮರಣ. ಈ ಎಲ್ಲ ಆಚರಣೆಗಳನ್ನು ಶೈವಧರ್ಮದೊಳಗೆ ನಡೆಸಿಕೊಂಡು ಬರುವಂತಹದ್ದಾಗಿವೆ.

ನೊಳಂಬರಲ್ಲಿರುವ ಕೆಲವು ಬೆಡಗುಗಳಾದ ಬೆಳ್ಳಣ್ಣವರು, ಬೆಳ್ಳಿಯುವರು, ಹೊನ್ನಸೂರಿಯವರು, ಹುಲಿಯರು, ಶೆಟ್ಟಿಯವರು, ಗೌಡ ಕುಲದವರು, ನೆಲ್ಲಿಯವರು ಒಂದುಹೆಳೆಲಾರು, ಸಾವ್ಲಂತರು, ಅರಳೆಯವರು, ಸುಣ್ಣದವರು, ಪತ್ರೆಯವರು, ಹಟ್ಟಿಯವರು ಮತ್ತು ಬಗ್ಗರದವರು ಇತ್ಯಾದಿ ಬೆಡಗುಗಳು ಕುರುಬರಲ್ಲಿಯೂ ಕಾಣಸಿಗುತ್ತವೆ. ಇವುಗಳ ಬಗೆಗೆ ವಿಸ್ತೃತವಾದ ಅಧ್ಯಯನದ ಅವಶ್ಯಕತೆ ಇದೆ.

ಫಲಿತಗಳು

ಒಟ್ಟಾರೆಯಾಗಿ ಕ್ಷೇತ್ರಕಾರ್ಯ, ಸಮುದಾಯದ ವಕ್ತೃಗಳ ಮಾಹಿತಿಯಿಂದ, ಶಾಸನಗಳ ಪಠ್ಯಗಳಿಂದ ಹಲವು ಮಾಹಿತಿಗಳನ್ನು ಹೆಕ್ಕಿಕೊಂಡು ಮಾಡಿದ ಅಧ್ಯಯನದಿಂದ ಉಂಟಾದ ಅಂಶಗಳನ್ನು ಸಂಶೋಧನಾತ್ಮಕವಾಗಿ ಈ ಕೆಳಗಿನ ಫಲಿತಗಳನ್ನು ಕಂಡುಕೊಂಡಿದ್ದೇನೆ.

೧. ನೊಳಂಬರು ಮೂಲತಃ ಪಲ್ಲವ ವಂಶದವರು ಎಂಬ ಅಂಶವನ್ನು ಶಿಲಾಶಾಸನಗಳು ಸ್ಪಷ್ಟಪಡಿಸುತ್ತವೆ.

೨. ಚಾರಿತ್ರಿಕವಾಗಿ ಸಿಗುವ ನೊಳಂಬವಾಡಿ-೩೨೦೦೦ರದ ಪ್ರದೇಶಗಳಲ್ಲಿ ಕೆಲವು ಕಡೆಗಳಲ್ಲಿ ನೊಣಬ ಸಮುದಾಯದ ಕುಟುಂಬಗಳು ಕಾಣಸಿಗುತ್ತವೆ.

೩. ಭಾಷಿಕವಾಗಿ ನೊಳಂಬ ಎಂಬ ಪದವು ನೊಣಬ, ನೊಳಂಬರ ಎಂಬ ಶಬ್ಧದಿಂದ ಬಂದಿರುವುದು.

೪. ನೊಳಂಬರು ಪಶುಪಾಲನೆ-ಕೃಷಿಯಿಂದ ರಾಜಕೀಯಕ್ಕೆ ಸ್ಥಿತ್ಯಂತರಗೊಂಡು, ಅನಂತರ ಸಾಮಾನ್ಯ ಸಮುದಾಯವಾಗಿ ರೂಪುಗೊಂಡಿರುವುದು.

೫. ಹೆಚ್ಚಾನು ಹೆಚ್ಚು ನೊಳಂಬರು ಇಂದು ಹೈನುಗಾರಿಕೆ ಮತ್ತು ಕೃಷಿಗೆ ಒತ್ತು ನೀಡುತ್ತಿದ್ದಾರೆ.

೬. ಮೂಲತಃ ಇವರು ಶೈವಾರಾಧಕರು. ಇವರಲ್ಲಿ ಕೆಲವರು ವಿಷ್ಣುವಿನ ಒಕ್ಕಲು ಆಗಿದ್ದಾರೆ. ಜೊತೆಗೆ ಹರಿಹರನ ಆರಾಧನೆಯು ಇವರಲ್ಲಿ ಕಂಡುಬರುತ್ತದೆ.

೭. ನೊಳಂಬರು ಮೂಲ ಪಶುಪಾಲನೆ ಮತ್ತು ಕೃಷಿಕರು ಆಗಿರುವದರಿಂದ ಇವರ ಸಮುದಾಯದ ರಚನೆಯು ನದಿ ಸಂಬಂಧಿ ಆಗಿದ್ದು, ಇವರು ಪ್ರಮುಖವಾಗಿ ಕರ್ನಾಟಕದಲ್ಲಿ ಎರಡು ನದಿಗಳಗುಂಟ ತಮ್ಮ ನಾಗರಿಕತೆಯನ್ನು ಬೆಳಸಿಕೊಂಡಿದ್ದಾರೆ. ಒಂದು ಹೇಮಾವತಿ ಮತ್ತು ತುಂಗಭದ್ರ.

೮. ಸೊಲ್ಲಾಪುರ ಸಿದ್ಧರಾಮೇಶ್ವರರನ್ನು ನೊಳಂಬ ಸಮುದಾಯದ ಸಾಂಸ್ಕೃತಿಕ ನಾಯಕನನ್ನಾಗಿಸಿಕೊಂಡಿದ್ದಾರೆ.

೯. ಪ್ರಾಚೀನ ಕಾಲದಿಂದಲೂ ನೊಳಂಬರಲ್ಲಿ ಮಹಿಳೆಯರಿಗೆ ಕೌಟುಂಬಿಕ ವ್ಯವಸ್ಥೆಯಲ್ಲಿ ಸ್ವತಂತ್ರ ನಿರ್ಧಾರ ತಗೆದುಕೊಳ್ಳಲು ಅವಕಾಶ ನೀಡಲಾಗಿರುವುದು ಕಂಡುಬರುತ್ತದೆ.

೧೦. ನೊಳಂಬರು ಪ್ರಕೃತಿ ಮತ್ತು ಮೂರ್ತಿಗಳ ಆರಾಧನೆಯಲ್ಲಿ ಅಪಾರ ನಂಬಿಕೆ ಹೊಂದಿದ್ದಾರೆ. ಹೀಗಾಗಿ ಚಾರಿತ್ರಿಕವಾಗಿ ಅವರು ದೇವಾಲಯಗಳು ಮತ್ತು ಮೂರ್ತಿ ನಿರ್ಮಾಣ ಮಾಡಿಸಿರುವುದು ಕಂಡುಬರುತ್ತದೆ.

೧೧. ನೊಳಂಬ ಸಮುದಾಯದ ಪ್ರಾಚೀನತೆಯನ್ನು ಅರಿಯಲು ಚರಿತ್ರೆಯ ಭಾಗವಾಗಿ ಕೆರೆ–ಕಟ್ಟೆಗಳನ್ನು ನಿರ್ಮಿಸಿರುವುದಕ್ಕೆ, ಭೂಮಿ ದಾನವನ್ನು ನೀಡಿರುವುದಕ್ಕೆ ಮತ್ತು ತಮ್ಮ ಸ್ವ–ವಿವರವನ್ನು ಹೇಳುವುದಕ್ಕಾಗಿ ಶಾಸನಗಳನ್ನು ಬರೆಸಿರುವುದು ಈ ಸಮುದಾಯದ ಹೆಗ್ಗಳಿಕೆಗೆ ಸಾಕ್ಷಿಯಾಗಿದೆ.

೧೨. ನೊಳಂಬರ ವೈವಾಹಿಕ, ಸಾಂಪ್ರದಾಯಿಕ ಆಚರಣೆಗಳಲ್ಲಿ ಪ್ರಾದೇಶಿಕವಾಗಿ ಭಿನ್ನತೆ ಕಂಡುಬರುತ್ತದೆ.

ಸಲಹೆಗಳು:

ನೊಳಂಬರ ಪ್ರಾಚೀನ ಆಡಳಿತ ವಿಭಾಗಗಳಿಗೆ ಸಂಬಂಧಿಸಿದಂತೆ, ನೊಳಂಬವಾಡಿ–೩೨೦೦೦ ದ ವಿಭಾಗಗಳಲ್ಲಿ ಕೆಲವುಗಳನ್ನು ಈಗಾಗಲೆ ಇತಿಹಾಸಕಾರರು ಗುರುತಿಸಿದ್ದಾರೆ. ಇನ್ನೂಳಿದಂತೆ ಕೆಲವು ವಿಭಾಗಗಳನ್ನು ಗುರುತಿಸುವ ಅವಶ್ಯಕತೆ ಇದೆ.

ಕರ್ನಾಟಕದಲ್ಲಿ ನೆಲೆ ಕಂಡುಕೊಂಡಿರುವ ನೊಳಂಬ ಸಮುದಾಯಗಳ ಆರ್ಥಿಕ, ಶೈಕ್ಷಣಿಕ ಸ್ಥಿತಿಗತಿಗಳ ಕುರಿತು ಅಧ್ಯಯನ ಮಾಡುವ ಅವಕಾಶವಿದೆ.

ಮಹಾರಾಷ್ಟ್ರದಲ್ಲಿ ನೆಲೆಸಿರುವ 'ನೊಣಚ' ಎಂಬ ಸಮುದಾಯಕ್ಕೂ ಹಾಗೂ ಕರ್ನಾಟಕದಲ್ಲಿ ನೆಲೆಸಿರುವ 'ನೊಣಬ' ಸಮುದಾಯಕ್ಕೂ ಹಾಗೂ ಜೇನುಕುರುಬರ ಮಧ್ಯದಲ್ಲಿ ಚಾರಿತ್ರಿಕ, ಸಾಂಸ್ಕೃತಿಕ ಹಾಗೂ ಸಾಮುದಾಯಿಕ ಸಂಬಂಧಗಳು ಇರುವದರ ಬಗೆಗೆ ಅಧ್ಯಯನ ಮಾಡುವ ಅವಕಾಶವಿದೆ.

ನೊಳಂಬರ ಕುಲಗಳು, ಬೆಡಗು, ಸಂಪ್ರದಾಯಗಳು, ಅವರ ಪಾರಂಪರಿಕ ವೃತ್ತಿ ಇತ್ಯಾದಿಯಾಗಿ ಜಾನಪದೀಯ ಅಧ್ಯಯನ ಮಾಡಲು ಅವಕಾಶವಿದೆ.

ನೊಳಂಬರ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಅಧ್ಯಯನವು ಹಲವು ಚಾರಿತ್ರಿಕ ಅಂಶಗಳೊಂದಿಗೆ ಕರ್ನಾಟಕದಲ್ಲಿ ನೊಳಂಬ ಸಮುದಾಯದಲ್ಲಿ ಉಂಟಾದ ಹಲವು

ಸ್ಥಿತ್ಯಂತರಗಳನ್ನು, ಐತಿಹಾಸಿಕ ದಾಖಲೆಗಳಾದ ಶಾಸನಗಳು, ಸಮಕಾಲೀನ ಪತ್ರಗಳು, ಪುರಾಣಗಳು, ದೇವಾಲಯಗಳು, ಶಿಲ್ಪಗಳು ಜೊತೆಗೆ ಮೌಖಿಕ ಆಕರಗಳನ್ನು ಕ್ರೋಢೀಕರಿಸಿಕೊಂಡು, ನೊಳಂಬರ ಸಾಂಸ್ಕೃತಿಕ ಜೀವನವು ಹೇಗೆ ಪಶುಪಾಲನೆಯಿಂದ ಕೃಷಿ, ಕೃಷಿಯಿಂದ ರಾಜಸತ್ತೆಗೆ ಹೊರಳಿಕೊಂಡ ಮನ್ವಂತರ ಗತಿಯನ್ನು ಗುರುತಿಸಲಾಗಿದೆ. ಮುಂದುವರೆದು, ರಾಜಸತ್ತೆಯಿಂದ ನಾಡಪ್ರಭುಗಳಾಗಿ, ಅನಂತರದ ಘಟ್ಟದಲ್ಲಿ ಒಂದು ಸಮುದಾಯವಾಗಿ ರೂಪುಗೊಂಡು ಅನೇಕ ಸಾಂಸ್ಕೃತಿಕವಾದಂತಹ ಆಚರಣಾ ವಿಧಿ-ವಿಧಾನಗಳು, ತಮ್ಮದೇ ಆದ ಪ್ರಾದೇಶಿಕ ಪರಂಪರೆ, ಸಂಪ್ರದಾಯಗಳ ಹಿನ್ನೆಲೆಯಲ್ಲಿ ಒಂದು ಸಮುದಾಯವಾಗಿರುವುದನ್ನು ಗುರುತಿಸುವ ಕ್ರಮ ಈ ಸಂಶೋಧನ ಅಧ್ಯಯನದಲ್ಲಿದೆ.

ಅನುಬಂಧ

೧. ವಕ್ತ್ರಗಳ ವಿವರ

೨. ನೊಳಂಬ ಅರಸರ ಶಾಸನಗಳ ಪಟ್ಟಿ

೩. ನೊಳಂಬ ಅರಸುಮನೆತನದ ಪ್ರಾಚೀನ ವಂಶವೃಕ್ಷ

೪. ಸಾಂಸ್ಕೃತಿಕ ಪದಸೂಚಿ

೫. ಛಾಯಾಚಿತ್ರಗಳು

೬. ಪರಾಮರ್ಶನ ಸಾಹಿತ್ಯ

೧. ವಕ್ತೃಗಳು ವಿವರ

ಕ್ರ.ಸಂ.	ಹೆಸರು	ಸ್ಥಳ	ವಯಸ್ಸು	ಉದ್ಯೋಗ	ಜಿಲ್ಲೆ
೧.	ನಾಗನಗೌಡ ಕೆ.ಎಚ್.	ಕೆ.ಎನ್.ಹಳ್ಳಿ	೪೨	ವಕೀಲ	ದಾವಣಗೆರೆ
೨.	ರವಿ ಕೆ.ಜಿ.	ಕೆ.ಎನ್.ಹಳ್ಳಿ	೪೪	ಕಂಟರ್	ದಾವಣಗೆರೆ
೩.	ನಾಗೇಂದ್ರಪ್ಪ	ಹೊಸಪಾಳ್ಯ	೪೬	ಗ್ರಾ.ಪಂ.ಸದಸ್ಯ	ದಾವಣಗೆರೆ
೪.	ಭರಮಗೌಡ	ಹೊಸಪಾಳ್ಯ	೩೮	ಕೃಷಿ	ದಾವಣಗೆರೆ
೫.	ಸೋಮಣ್ಣ	ಹಳೆಪಾಳ್ಯ	೬೮	ಕೃಷಿ	ದಾವಣಗೆರೆ
೬.	ನೀಂಗಪ್ಪ	ಹಳೆಪಾಳ್ಯ	೬೦	ಕೃಷಿ	ದಾವಣಗೆರೆ
೭.	ದೇವರಾಜ ಜಿ.	ವಾಸನ	೫೦	ಕೃಷಿ	ದಾವಣಗೆರೆ
೮.	ಗಂದಿಗೌಡ್ರ	ವಾಸನ	೭೦	ರಾಜಕೀಯ	ದಾವಣಗೆರೆ
೯.	ಪರಮೇಶ್ವರಯ್ಯ	ನಂದಿಗುಡಿ	೪೮	ಗ್ರಾ.ಪಂ.ಸದಸ್ಯ	ದಾವಣಗೆರೆ
೧೦.	ಶಿವಾಲಯ	ನಂದಿಗುಡಿ	೪೦	ಕೃಷಿ	ದಾವಣಗೆರೆ
೧೧.	ಸುರೇಶ ಎಸ್.	ಉಕ್ಕಡಗಾತ್ರಿ	೪೮	ಕಾರ್ಯದರ್ಶಿ(ಎಸ್.ಜಿ.ಕೆ. ಟ್ರಸ್ಟ್ ಉಕ್ಕಡಗಾತ್ರಿ ಹಾವೆರಿ ಜಿಲ್ಲೆ	
೧೨.	ಪ್ರಕಾಶ	ಉಕ್ಕಡಗಾತ್ರಿ	೪೫	ಎಸ್.ಜಿ.ಕೆ. ಟ್ರಸ್ಟ್ ಸದಸ್ಯ ಉಕ್ಕಡಗಾತ್ರಿ, ಹಾವೆರಿ ಜಿಲ್ಲೆ	
೧೩.	ಪುಟ್ಟಯುವರಾಜು	ಗೋವಿನಹಾಳು	೪೦	ಕೃಷಿ	ಡಾವಣಗೆರೆ

೧೪.	ಹನುಮಗೌಡ ಡಿ.ಎನ್.	ಗೋವಿನಹಾಳು	೪೨	ಕೃಷಿ	ದಾವಣಗೆರೆ
೧೫.	ಮುರುಗೆಪ್ಪ	ಬೆಹಿಸಗಟ್ಟಿ	೫೦	ವರ್ತಕ	ದಾವಣಗೆರೆ
೧೬.	ಭರಗೌಡ ಎಸ್.ಕೆ.	ಬೆಹಿಸಗಟ್ಟಿ	೪೪	ಕೃಷಿ	ದಾವಣಗೆರೆ
೧೭.	ಬಸವನಗೌಡ ಓ.	ಕೊಕ್ಕನೂರು	೫೨	ವರ್ತಕ	ದಾವಣಗೆರೆ
೧೮.	ಶಿವನಗೌಡ ಎಚ್.ವಿ.	ಕೊಕ್ಕನೂರು	೩೮	ಶಿಕ್ಷಕ	ದಾವಣಗೆರೆ
೧೯.	ನಿಂಗನಗೌಡ ಕೆ.ಜಿ.	ಕಂಬತನಹಳ್ಳಿ	೩೮	ಉಪನ್ಯಾಸಕ	ದಾವಣಗೆರೆ
೨೦.	ಕುಬೇರಪ್ಪ	ಕಂಬತನಹಳ್ಳಿ	೪೦	ವರ್ತಕ	ದಾವಣಗೆರೆ
೨೧.	ಮಹದೇವಪ್ಪ	ಅಳಿಹಾಳ	೭೦	ಕೃಷಿ	ದಾವಣಗೆರೆ
೨೨.	ಜಗದೀಶ	ಅಳಿಹಾಳ	೩೮	ಕೃಷಿ	ದಾವಣಗೆರೆ
೨೩.	ಉಲ್ಲತ್ತಿ ರುದ್ರಗೌಡ	ಬೇವಿನಹಳ್ಳಿ	೪೨	ಕೃಷಿ	ದಾವಣಗೆರೆ
೨೪.	ಬೆನ್ನೂರು ಕುಬೇರಪ್ಪ	ಬೇವಿನಹಳ್ಳಿ	೫೦	ಕೃಷಿ	ದಾವಣಗೆರೆ
೨೫.	ಮಲ್ಲಯ್ಯ	ಬಸಾಪುರ	೪೦	ಕೃಷಿ	ದಾವಣಗೆರೆ
೨೬.	ಸೋಮಶೇಖರಯ್ಯ	ಬಸಾಪುರ	೫೫	ಕೃಷಿ	ದಾವಣಗೆರೆ
೨೭.	ಇಂದುಧರ ರುದ್ರಗೌಡ	ಜಿಗಳಿ	೪೫	ಕೃಷಿ	ದಾವಣಗೆರೆ
೨೮.	ವಿಜಯಕುಮಾರ	ಜಿಗಳಿ	೪೨	ಕೃಷಿ	ದಾವಣಗೆರೆ
೨೯.	ಮಂಜುನಾಥ	ನಂದಿತಾವರೆ	೩೮	ಸಾರಿಗೆ ಇಲಾಖೆ	ದಾವಣಗೆರೆ
೩೦.	ಚಂದ್ರಶೇಖರಯ್ಯ	ನಂದಿತಾವರೆ	೫೦	ಕೃಷಿ	ದಾವಣಗೆರೆ

೩೧. ವೀರಭದ್ರಪ್ಪ	ಏಕ್ಕೆಗುಂದಿ	೬೦	ಕೃಷಿ	ದಾವಣಗೆರೆ
೩೨. ಪ್ರಕಾಶ	ಏಕ್ಕೆಗುಂದಿ	೪೨	ಕೃಷಿ	ದಾವಣಗೆರೆ
೩೩. ನಂಜಪ್ಪ	ಕಣಿವೇಹಳ್ಳಿ	೬೯	ಕೃಷಿ	ಚಿತ್ರದುರ್ಗ
೩೪. ಈಶ್ವರಪ್ಪ	ಕಣಿವೇಹಳ್ಳಿ	೬೨	ಕೃಷಿ	ಚಿತ್ರದುರ್ಗ
೩೫. ನಾಗರಾಜು	ಅರಬಘಟ್ಟ	೪೮	ಉಪನ್ಯಾಸಕ	ಚಿತ್ರದುರ್ಗ
೩೬. ಈಶ್ವರಪ್ಪ	ಬುರಡೆಕಟ್ಟೆ	೬೫	ಕೃಷಿ	ಚಿತ್ರದುರ್ಗ
೩೭. ತಮ್ಮಯ್ಯ	ಬುರಡೆಕಟ್ಟೆ	೭೦	ಕೃಷಿ	ಚಿತ್ರದುರ್ಗ
೩೮. ಮರುಳಯ್ಯ	ನವಣೆಕೆರೆ	೬೨	ಕೃಷಿ	ಚಿತ್ರದುರ್ಗ
೩೯. ಮೂಡಲ ಗಿರಿಯಪ್ಪ	ಮುದ್ದಾಪುರ	೭೫	ಕೃಷಿ	ಚಿತ್ರದುರ್ಗ
೪೦. ಮಲ್ಲೇಶಪ್ಪ	ಮಲ್ಲಪನಹಳ್ಳಿ	೭೫	ಕೃಷಿ	ಚಿತ್ರದುರ್ಗ
೪೧. ಧನಂಜಯ್ಯ ಬಿ.ಎಸ್.	ಚಿಕ್ಕಯಗಟಿ	೪೮	ಎಂಜಿನಿಯರ್	ಚಿತ್ರದುರ್ಗ
೪೨. ಕಳಾಸಿ ನಾಗಪ್ಪ	ಸಿಂಗೇನಹಳ್ಳಿ	೭೫	ಕೃಷಿ	ಚಿತ್ರದುರ್ಗ
೪೩. ಚಂದ್ರಪ್ಪ	ತಾಳಗಟ್ಟ	೭೦	ಎಂಜಿನಿಯರ್(ನಿ)	
೪೪. ಬಮ್ಮಲಿಂಗಪ್ಪ	ಮುತ್ತೂಡು	೬೮	ಕಲಾವಿದ	ಚಿತ್ರದುರ್ಗ
೪೫. ರಾಮಲಿಂಗಪ್ಪ	ಲಕ್ಷ್ಮೀದೇರಹಳ್ಳಿ	೭೩	ಕೃಷಿ	ಚಿತ್ರದುರ್ಗ
೪೬. ಪ್ರಸನ್ನ ಜಿ.ಸಿ.	ಗಂಜೀಗೆರೆ	೩೭	ಉಪನ್ಯಾಸಕ	ಚಿಕ್ಕಮಗಳೂರು
೪೭. ಚಂದ್ರಪ್ಪ	ಬಳ್ಳಿಕೆರೆ	೭೦	ಕೃಷಿ	ಚಿಕ್ಕಮಗಳೂರು

೬೮. ಉಮೇಶ	ಸೊಲ್ಲಾಪುರ	೩೫	ಶಿಕ್ಷಕ	ಚಿಕ್ಕಮಗಳೂರು
೬೯. ರಾಜಶೇಖರಯ್ಯ	ಸೊಲ್ಲಾಪುರ	೬೮	ಪೂಜಾರಿ	ಚಿಕ್ಕಮಗಳೂರು
೭೦. ಹನುಮಂತಪ್ಪ	ಸೊಲ್ಲಾಪುರ	೭೦	ಹೇಳವ	ಚಿಕ್ಕಮಗಳೂರು
೭೧. ಸಿದ್ಧರಾಮೇಗೌಡ	ಸೊಲ್ಲಾಪುರ	೬೭	ಕೃಷಿ	ಚಿಕ್ಕಮಗಳೂರು
೭೨. ರುದ್ರಮ್ಮ	ಬಂಡ್ರೆ	೬೫	ಕೃಷಿ, ವರ್ತಕ	ಚಿಕ್ಕಮಗಳೂರು
೭೩. ಕಡ್ಲೆಪ್ಪರ ಬಸಪ್ಪ	ಗಡಿಗಿರ್ಯಾಪುರ	೭೫	ಶಿಕ್ಷಕ(ನಿ)	ಚಿಕ್ಕಮಗಳೂರು
೭೪. ಅರೆ ತಿಮ್ಮಪ್ಪ	ಹೊನ್ನಿಕೆರೆ	೭೦	ಕೃಷಿ	ಚಿಕ್ಕಮಗಳೂರು
೭೫. ಪ್ರವೀಣ	ಸಕ್ಲಾಪುರ	೩೨	ಉಪನ್ಯಾಸಕ	ಚಿಕ್ಕಮಗಳೂರು
೭೬. ಕರಿಬಸಪ್ಪ	ಸಂಕ್ಲಾಪುರ	೭೪	ಕೃಷಿ	ಚಿಕ್ಕಮಗಳೂರು
೭೭. ಮಲ್ಲೇಶಪ್ಪ	ಹಿರೆಮಲ್ಲೂರು	೫೦	ಕೃಷಿ	ಚಿಕ್ಕಮಗಳೂರು
೭೮. ಶಾಂತವೀರಯ್ಯ	ಬೆಂಗಳೂರು	--	ಸಾಹಿತಿಗಳು	
೭೯. ಶಂಕರಪಎಂ.ಪಿ.	ತುಮಕೂರು	--	ಉಪನ್ಯಾಸಕರು	
೮೦. ಚಿದಾನಂದ ಮೂರ್ತಿ	ಬೆಂಗಳೂರು	--	ಸಂಶೋಧಕರು	
೮೧. ವಿದ್ವಾನ್ ಬಸವರಾಜಯ್ಯ	ಮೈಸೂರು	--	ಸಂಶೋಧಕರು	
೮೨. ಕುಂ.ಬಾ. ಸದಾಶಿವಪ್ಪ	ಹರಪನಹಳ್ಳಿ	--	ಸಂಶೋಧಕರು	
೮೩. ಹೋರಿ ಎಂ.ವಿ.	ಕೊಪ್ಪಳ(ಅಳವಂಡಿ)		ನಿವೃತ್ತ ಶಿಕ್ಷಕರು	
೮೪. ವಿದ್ವಾನ್ ಚನ್ನಬಸವಯ್ಯ	ವೈ.ಆರ್. ಎಲಗುಂದ		ಸಂಶೋಧಕರು	

೮೫. ಸಿದ್ಧರಾಮೇಗೌಡ	ಸೊಲ್ಲಾಪುರ	ಸಂಶೋಧಕರು, ಸಾಹಿತಿಗಳು
೮೬. ಕತ್ತಿಗೆ ಚೆನ್ನಪ್ಪ	ಶಿವಮೊಗ್ಗ	ಸಂಶೋಧಕರು
೯೦. ಕಲಬುರ್ಗಿ ಎಂ.ಎಂ.	ಧಾರವಾಡ	ಸಂಶೋಧಕರು
೯೧. ಉತ್ನಾಳ ಸಿದ್ಧಣ್ಣ	ಅಥಣಿ	ಪ್ರಾಧ್ಯಾಪಕರು
೯೨. ಪಂಪನಗೌಡ	ಹೊಸಪೇಟೆ	ಎಂಜಿನಿಯರ್, ಸಂಶೋಧಕರು
೯೩. ಪ್ಯಾಟಿ ಎಸ್.ಎಚ್.	ಹರಿಹರ	ಪ್ರಾಂಶುಪಾಲರು
೯೪. ರಾಕೇಶ್ ಬಿ.ಸಿ.	ದಾವಣಗೆರೆ	ಉಪನ್ಯಾಸಕರು
೯೫. ಬುರಡೆಕಟ್ಟೆ ಮಂಜಪ್ಪ	ದಾವಣಗೆರೆ	ಉಪನ್ಯಾಸಕರು

ಅನುಬಂಧ:೨

ನೊಳಂಬ ಅರಸರ ಪ್ರಮುಖ ಶಾಸನಗಳು

ನೊಳಂಬ ಅರಸರ ಪ್ರಮುಖ ಶಾಸನಗಳು

ಆಕಶಾಸಂ:೧:೫೩:ಅಗಳಿ, ಮಡಕಸಿರ; ಆಕಶಾಸಂ:೧:೧೦೪:ಹೇಮಾವತಿ: ಚೋರಮವಾಡಿನಾಡು ಎಂಬುದು ಮಡಕಸಿರ ತಾಲೂಕಿನ ಅಗಳಿ ಶಾಸನದಲ್ಲಿ ಇದರ ಉಲ್ಲೇಖವಿದೆ. ನೊಳಂಬಾಧಿ ರಾಜನು ಇದನ್ನು ಆಳುತ್ತಿದ್ದನು. ಪೊಳಲಿನಾಡು ಕಾಲ ನಿರ್ದೇಶನವಿಲ್ಲದ ಹೇಮಾವತಿ ಶಾಸನ 'ಪೊ[ಳ]ಲಿನಾಡುಳ್ಕೊಲೆಯೂರ ಬರಗೂರಂ ಬಿಜ ಅಮಾದೇವಿ' ಆಳುತ್ತಿದ್ದಳೆಂದು ಹೇಳಿದೆ ಈ ಶಾಸನಗಳಲ್ಲಿ ಉಲ್ಲೇಖವಿದೆ.

ಆಕಶಾಸಂ:೧:೭೦:ಕಾಲ ನಿರ್ದೇಶನವಿಲ್ಲ: ಕೊರ್‍ರೆವು, ಮಡಕಸಿರ: ೧ನೆಯ ಸೋಮೇಶ್ವರನ ಸಾಮಂತ ಚೋಳ ಬಚ್ಚರಸ, ಗೋನರಸ ಮತ್ತು ಭೀಮರಸರು "ಅಯಣ್ಯವಾಡಿ ಮೂನೂಱುಮಂ ಕಣಿಯಲ್ಮೂನೂಱು" ವಿಭಾಗಗಳನ್ನು ಆಳುತ್ತಿದ್ದರು. ಈ ವಿಭಾಗವು ರಾಯದುರ್ಗ, ಕಲ್ಯಾಣದುರ್ಗ, ಮಡಕಸಿರ ಮತ್ತು ಕರ್ನಾಟಕದ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕಿನ ವ್ಯಾಪ್ತಿ ಹೊಂದಿರಬೇಕು. ಈ ತಾಲೂಕಿನ ಶಾಸನಗಳಲ್ಲಿ ಕಾಣಸಿಗುವ ವಿಭಾಗಗಳು ಇದರಲ್ಲಿ ಸೇರಿರಬೇಕು. ಇದನ್ನು ನೊಳಂಬಪಲ್ಲವರು ಆಳುತ್ತಿದ್ದರು. ಇದರ ಉಪವಿಭಾಗಗಳು ಕೆಳಗಿನಂತಿವೆ. ಗೋವಿಂದವಾಡಿ ಕೊರ್‍ರೆವು ಶಾಸನ ಚಾಲುಕ್ಯ ಜಗದೇಕಮಲ್ಲನ ಸಾಮಂತ ವೀರನೊಳಂಬ ಬಮ್ಮದೇವ ಚೋಳಮಹಾರಾಜ ಈ ವಿಭಾಗ ಆಳುತ್ತಿದ್ದನೆಂದು ಹೇಳಿದೆ.

ಆಕಶಾಸಂ:೧:೮೧:೫೫೦-೫೧:ಮಡಕಸಿರ, ಮಡಕಸಿರ: ನೊಳಂಬವಾಡಿ-೩೨೦೦೦ ಆಡಳಿತದ ವಿಭಾಗಗಳಲ್ಲೊಂದಾದ ಚಿರಪಿ-೧೨ ಎಂಬುದು ಇರಿವನೊಳಂಬನ ಸಾಮಂತ ಮಲ್ಲಣಸಿವರಿ ಎಂಬುವನು ಚಿರಪಿ ೧೨ನ್ನು ಆಳುತ್ತಿದ್ದನು. ಇದರಲ್ಲಿ ಚಿರುಪಿ, ಚಿನ್ತಕುಂಟೆ, ಚಿಜೆಯವೊಟಿಲು ಮತ್ತು ವಳುವಟ್ಟು ಗ್ರಾಮಗಳು ಸೇರಿದ್ದವೆಂದು ಶಾಸನ ಹೇಳಿದೆ.

ಆಕಶಾಸಂ:೧:೩೫೮:ತ್ರಿಪುರಾಂತಕ: ನೊಳಂಬವಾಡಿಯ-೩೨೦೦೦ರದ ಅನಂತಪಾಳಯ್ಯನು ಬೇಂಗಿ ಮತ್ತು ಎಮ್ಮೆದೆಲೆಗಳನ್ನು ದಂಡನಾಯಕನಾಗಿ ಆಳುತ್ತಿದ್ದಾಗ ಈತನ ಅಳಿಯ ಗೋವಿಂದ ದಂಡನಾಯಕನು ಕೊಂಡುಪಳ್ಳಿ-೩೦೦ರನ್ನು ಆಳುತ್ತಿದ್ದದರ ಬಗೆಗೆ ತಿಳಿಸುತ್ತದೆ.

ಆಕಶಾಸಂ:ಭಾ-೧:೧೧೧:ಕ್ರಿಸ್ತಶಕ:೧೧೯೯:ಉರುವಕೊಂಡ, ಗುತ್ತಿ, ಅನಂತಪುರ: ನೊಳಂಬವಾಡಿ-೩೨೦೦೦ರದರೊಳಗೆ ಬರುವ ಕಣಿಯಕಲ್ಲು-೩೦೦ ಎಂಬುದನ್ನು ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿ ಚೋಳವಂಶದ ಘಟೆಯಂಕಕಾರನು ಈ ವಿಭಾಗವನ್ನು ಆಳುತ್ತಿದ್ದನು. ಮಹಾಮಂಡಳೇಶ್ವರ ಮಂಗರಸನು ರೊದ್ದ-೩೦೦ ಮತ್ತು ಕಣಿಯಕಲ್ಲು-೩೦೦ಗಳನ್ನು ಆಳುತ್ತಿದ್ದನು. ಶಾಸನವು ಇವುಗಳನ್ನು 'ಎರಡಱುನೂರು' ವಿಭಾಗಗಳೆಂದು ಕರೆದಿದೆ.

ಆಕಶಾಸಂ:೧:೧೭೮:ಕ್ರಿಸ್ತಶಕ:೧೧೨೫:ನರಸಾಪುರ, ಕಲ್ಯಾಣದುರ್ಗ:
ಆಕಶಾಸಂ:೧:೨೦೬:ಕ್ರಿಸ್ತಶಕ ೧೦೭೩: ಸಂಗಮೇಶ್ವರ, ರಾಯದುರ್ಗ: ನೊಳಂಬವಾಡಿ-೩೨೦೦೦ ಆಡಳಿತದಲದಲ್ಲಿ ಬರುವ ನರಸಾಪುರೆ ಮತ್ತು ಎರಡು ಕೆರೆ ಶಾಸನಗಳಲ್ಲಿ ಇದರ ಉಲ್ಲೇಖವಿದೆ. ರಾಯದುರ್ಗ ತಾಲೂಕಿನ ಗೋವಿಂದ ವಾಡ ಗ್ರಾಮವೇ ಇದರ ಮುಖ್ಯಸ್ಥಳವಾಗಿದೆ. ಗೋವಿಂದವಾಡಿಯ ಸಂಗಮೇಶ್ವರ ದೇವರಿಗೆ ಆರನೆಯ ವಿಕ್ರಮಾದಿತ್ಯನು ದತ್ತಿ ನೀಡಿದ್ದಾನೆ. ಶಾಸನವು ಆರಂಭದಲ್ಲಿ ಚಕ್ರವರ್ತಿಯನ್ನು ಪ್ರಸ್ತಾಪಿಸದೆ ನೇರವಾಗಿ ಆರನೆಯ ವಿಕ್ರಮಾದಿತ್ಯನನ್ನು ಹೇಳಿದೆ. ಇದು ಅವನ ಸ್ವತಂತ್ರ ನಡವಳಿಕೆಯನ್ನು ಸೂಚಿಸುತ್ತದೆ.

ಆಕಶಾಸಂ:೧:೧೬೭: ಕ್ರಿಸ್ತಶಕ:೧೧೩೯: ಎರಡುಕೆರೆ, ಕಲ್ಯಾಣದುರ್ಗ: ನೊಳಂಬವಾಡಿ-೩೨೦೦೦ ದರ ಆಡಳಿತವಿಭಾಗದ ಸುಳಿಯನೂರು-೭೦ ಇದು ಸೀರೆನಾಡಿನ ಉಪವಿಭಾಗವೆಂಬುದು "ಸೀರೆನಾಡೊಳ ಗಣ ಸುಳಿಯುನೂರೆಪ್ಪತ್ತಱ ಬಳಿಯೆರಡುಕೆರೆ" ಬೆಳಕು ಚೆಲ್ಲುತ್ತದೆ. ಪ್ರಸ್ತುತ ಶಾಸನವಿರುವ ಎರಡುಕೆರೆ ಗ್ರಾಮವು ಸುಳಿಯನೂರು ವಿಭಾಗದಲ್ಲಿತ್ತು ಎಂಬುದನ್ನು ತಿಳಿಸುತ್ತದೆ.

ಆಕಶಾಸಂ:೧:೧೭೮:೧೧೨೫ ಜನೆವರಿ ೪:ನರಸಾಪುರ, ಕಲ್ಯಾಣದುರ್ಗ; ಆಕಶಾಸಂ:೧:೧೦೩:೧೧೬೭: ಹೇಮಾವತಿ; ಆಕಶಾಸಂ:೧:೧೦೨: ಕ್ರಿಸ್ತಶಕ ೧೨೦೬: ಹೇಮಾವತಿ, ಮಡಕಸಿರ; ಆಕಶಾಸಂ:೧:೧೦೬:ಕ್ರಿಸ್ತಶಕ ೧೧೬೨: ಹೇಮಾವತಿ: ನೊಳಂಬವಾಡಿ-೩೨೦೦೦ರಲ್ಲಿ ಬರು ಆಡಳಿತ ವಿಭಾಗವಾದ ಬಂಗಿಚೆರು-೩೦ ಎಂಬುದು ಇದು ಗೋವಿಂದವಾಡಿಯ ಉಪವಿಭಾಗ. ನರಸಾಪುರ ಶಾಸನ "ಕಣಿಯಕಲ್ಲು ದಕ್ಷಿಣ ದಿಸಾಭಾಗದ ಬಂಗಿಚೆರು ಮೂವತ್ತರ" ಮನ್ನೆಯವನ್ನು ದತ್ತಿ ನೀಡಿದ್ದನ್ನು ಹೇಳಿದೆ. ಕಲ್ಯಾಣದುರ್ಗ ತಾಲೂಕಿನ ಬೆಳ್ಳುಗುನ್ದೆ, ಕುಂದುರುಪೆ ಗ್ರಾಮಗಳು ಇದರಲ್ಲಿ ಸೇರಿರಬೇಕು. ಸೀರೆನಾಡು ಹೇಮಾವತಿ ಶಾಸನ 'ಸೀರುನಾಡೊಳಗಣ ಹೆಂಜೆಱ ಪಟ್ಟಣದ ಮಹಾಘಟಿಕಾಸ್ಥಾನ ಶ್ರೀನೊಳಂಬೇಶ್ವರ ದೇವ'ರಿಗೆ ಕೊರೆಹ ಗ್ರಾಮವನ್ನು ದತ್ತಿಯಾಗಿ ನೀಡಿದರೆಂದು ಹೇಳಿದೆ. ಅದು ಮಡಕಸಿರ ತಾಲೂಕಿನ 'ಕೊರ್ರೆವು' ಗ್ರಾಮವಾಗಿದೆ. ಇಲ್ಲಿಯ ಮತ್ತೊಂದು ಶಾಸನ ಇದೇ ವಿಷಯವನ್ನು ಉಲ್ಲೇಖಿಸಿ ನೊಳಂಬೇಶ್ವರ ದೇವರಿಗೆ 'ವೆಡುಲಚಿನ್ತೆ' ಗ್ರಾಮ ನೀಡಿದರೆಂದು ಹೇಳಿದೆ. ಮಡಕಸಿರ ಗ್ರಾಮದ ಪ್ರಾಚೀನ ಹೆಸರು ಸೀರೆನಾಡು ಆಗಿದೆ. ಇದರ ರಾಜಧಾನಿ ಹೆಂಜೇರಪಟ್ಟಣ. ಅಲ್ಲಿಯ ಶಾಸನ 'ಸೀರೆನಾಡ ಶ್ರೀಮದ್ರಾಜಧಾನಿ ಹೆಂಜೆಱ' ಎಂದು ಸ್ಪಷ್ಟವಾಗಿ ಹೇಳಿದೆ. ಹೆಂಜೇರ ಪಟ್ಟಣವು ಏಕಕಾಲದಲ್ಲಿ ನೊಳಂಬವಾಡಿ ಮತ್ತು ಸೀರೆನಾಡುಗಳ ರಾಜಧಾನಿಯಾಗಿತ್ತು ಎಂಬುದನ್ನು ತಿಳಿಸುತ್ತದೆ.

ಆಕಶಾಸಂ:೧,೩೬೦:ತ್ರಿಪುರಾಂತಕ; ೩೫೯: ತ್ರಿಪುರಾಂತಕ: ಮೊಟ್ಟವಾಡಿನಾಡೊಳಗಣ ಚಾಪಲಮಡುಗೆ"ಯನ್ನು ಹೇಳಿದೆ. ಇಲ್ಲಿಯ ಮತ್ತೊಂದು ಶಾಸನ "...ಳಗಣ

ಪಿಟ್ಟವುಮಪೂಳಿ ಆ ಬಳಿಂಉು ಮೆಳಿ xxx ಗಣ ಪಾತಡಿ ಚಾಪಲಮಡುಗೆ"ಯನ್ನು ಹೇಳಿದೆ.

ಆಕಶಾಸಂ:೧. ೩೪೧, ೧೦೫೭ ಏಪ್ರಿಲ್ ೨೧, ಶಿವಪುರ, ನಂದಿಕೊಟ್ಕೂರು; ೩೬೧, ೧೦೬೮ ಡಿಸೆಂಬರ ೨೪, ಪಂಚಲಿಂಗಾಲ, ಸಂದ್ಯಾಲ; ಮತ್ತು ೪೫೫, ೧೦೭೩ ಎಪ್ರಿಲ್ ೨೪, ಅಲಂಪುರ; ೪೬೩, ೧೧೦೭, ಅಲಂಪುರ; ೪೬೪, ೧೧೦೮ ಅಲಂಪುರ: ಕನ್ನೆನಾಡೊಳಗಣ ಶಿವಪುರಂ ಅದರ ಪ್ರವಿಷ್ಟ ಬಾಡಂ ಜಾವುಟೂರು ಆ ಬಳಿಯ ಕಲ್ಲೋಟುಗಳನ್ನು ಹೇಳಿದೆ. ೧೧೦೭ರ ಶಾಸನವು "ಕನ್ನೆ ಮುನ್ನೂಱಱ ಬಳಿಯ ವಡ್ಡಮಾನಿ" ಯನ್ನು, ಕ್ರಿ.ಶ. ೧೧೦೮ರ ಶಾಸನ "ಕನ್ನೆ....... ಬಳಿಯ ದಾಮಗಟ್ಟಳಿ" ಗ್ರಾಮಗಳನ್ನೂ ಉಲ್ಲೇಖಿಸಿವೆ. ಶಿವಪುರವು ಕನ್ನೆ ವಿಭಾಗ ದಲ್ಲಿದ್ದುದು ಮೇಲಿನ ವಿವರಗಳಿಂದ ತಿಳಿಯುತ್ತದೆ. ಸಂಗಮೇಶ್ವರ ಶಾಸನದಲ್ಲಿಯೂ ಇದರ ಉಲ್ಲೇಖವಿದೆ. ಪಂಚಲಿಂಗಾಲ ಶಾಸನ "ಕನ್ನೆನ್ನಾಡೊಳಗಣ ಕ್ರಿಷ್ಣವೆನ್ನಾ ನದಿಯ ಬಡಗದಡಿಯ ಬೆರ್ಕ್ಕೆ"ಯನ್ನು ಹೇಳಿದೆ. ಚಿದ್ದಣ ಚೋಳಮಹಾರಾಜನು "ಕನ್ನೆ ಮುನೂಱುಂ ಪೆಡೆಕಲ್ಲೆಂಟುನೂಱುಂ ನೞವಾಡಿಯಯ್ನೂಱುಮಿನ್ತು ನಾಲ್ಕುನಾಡುಮಂ" ಆಳುತ್ತಿದ್ದನೆಂದು ಅಲಂಪುರ ಶಾಸನ ಹೇಳಿದೆ.

ಆಕಶಾಸಂ: ೧, ೩೪೬, ಕ್ರಿ.ಶ.೧೦೭೯ ಸಂಗಮೇಶ್ವರ, ನಂದಿಕೊಟ್ಕೂರು: ನಳವಾಡಿ ಪ್ರದೇಶವುನೊಳಂಬರ ೩೨೦೦೦ ನಾಡೊಳಗಣ ಪ್ರದೇಶವಾಗಿದೆ. ಸಂಗಮೇಶ್ವರ ಮತ್ತು ಅಲಂಪುರ ಶಾಸನಗಳು ಕನ್ನೆ, ಪೆಡಕಲ್ಲುಗಳ ಜೊತೆಗೆ 'ನೞವಾಡಿ ಅಯ್ನೂಱು' ವಿಭಾಗವನ್ನೂ ಹೇಳಿದೆ.

ಆಕಶಾಸಂ:೧:೪೫೩, ಅಲಂಪುರ: ನೊಳಂಬವಾಡಿಯ ಆಡಳಿತ ವಿಭಾಗಗಳೊಂದರ ನೆೞವಾಡಿಯಯ್ನೂಱುಂ ಬಾಡದ ಬಳಿಯ ತುಂಗಭದ್ರೆಯ ತಡಿಯ ಕನ್ದನವೊಳಲ ಸಾರ್ದ ಬಣ್ಣಿಗಿ ಕಿಱುಗೆಯೊಳ ಮೋಪುಪೊಂಗೆ"ಯನ್ನು ಹೇಳಿದೆ. ಇಲ್ಲಿಯ 'ಕನ್ದನ ಪೊಳಲು' ಗ್ರಾಮವು ಈಗಿನ ಜಿಲ್ಲಾ ಕೇಂದ್ರವಾದ ಕರ್ನೂಲು ಆಗಿದೆ.

ಆಕಶಾಸಂ: ೨: ೪೬೯, ೧೦೨೮-೨೯, ಅಲಂಪುರ,; ಆಂಧ್ರಪ್ರದೇಶ ಕನ್ನಡ ಶಾಸನಗಳು ಭಾ-೧. ೩೩೮, ೧೦೫೭ ಏಪ್ರಿಲ್ ೨೧, ಕೊತ್ತಪಲ್ಲಿ, ನಂದಿಕೊಟ್ಕೂರು: ಕೊತ್ತಪಲ್ಲಿ ಶಾಸನ "ಕನ್ನೆ ಮೂನೂಱಱ ಬಳಿಯ ದುದ್ದಿಯಾಲು, ಸಿರಿವುರ, ಕುಱುಕುನ್ದೆ"ಗಳನ್ನು ಹೇಳಿದೆ. ಅಲ್ಲದೆ ಆತಕೂರು, ಸುರಲೂರು, ಕೊಕ್ಕರವೆಂಟೆ, ಹೊನ್ನಲೂರು, ಕೊಳ್ಳ ಮೊದಲಾದ ಊರುಗಳ ಉಲ್ಲೇಖ ಇಲ್ಲಿದೆ. ಇದನ್ನು 'ಕನ್ನೆನಾಡು' ಎಂದೂ ಶಾಸನಗಳು ಕರೆದಿವೆ.

ಆಕಶಾಸಂ: ೨: ೪೬೩, ೧೧೧೭, ಅಲಂಪುರ; ೪೬೪, ೧೧೦೮ ಅಲಂಪುರ: "ಕನ್ನೆ ೩೦೦... ತುಂಗಭದ್ರೆಯ ತಟಿಯ ಬೆಲ್ಗೆಱೆ"ಯನ್ನು ಹೇಳಿದೆ.

ಆಕಶಾಸಂ: ೨: ೪೮೫, ಕ್ರಿ.ಶ. ೭೮೦, ಅಲಂಪುರ: ಅಲಂಪುರವು ನೊಳಂಬರ ೩೨೦೦೦ ನಾಡೊಳಗಣ ಪ್ರದೇಶವಾಗಿದೆ. ಇದು ಕನ್ನೆನಾಡಿನಲ್ಲಿದ್ದುದು ಶಾಸನಗಳಿಂದ ತಿಳಿಯುತ್ತದೆ. ರಾಷ್ಟ್ರಕೂಟ ದ್ರುವನ ಆಳ್ವಿಕೆಯ ಶಾಸನ "ಅಲಂಪುರಾ ಮೂವತ್ತಱಾ ಗಾಮುನ್ಡ"ನನ್ನು ಉಲ್ಲೇಖಿಸಿದೆ

ಆಕಶಾಸಂ:೨:೪೪೯:ಅಲಂಪುರ, ಮಹಬೂಬನಗರ: ಮುಂಗುಳದ ಮೂನೂಱು ರಾಷ್ಟ್ರಕೂಟ ೩ನೇ ಗೋವಿಂದನ ಆಳ್ವಿಕೆಯ ಅಲಂಪುರ ಶಾಸನದಲ್ಲಿ ಈ ವಿಭಾಗದ ಉಲ್ಲೇಖವಿದೆ. ಮುಂಗುಳದ-೩೦೦ ಒಕ್ಕಲುಗಳ ಸಂಘದ ಶ್ರೀಮಾರ ಎಂಬುವನು ದತ್ತಿ ನೀಡಿದ್ದಾನೆ.

ಆಕಶಾಸಂ: ೧: ೨೪೪, ವಲಿಗಲ್ಲು, ಮದನಪಲ್ಲಿ: ಎಂಬುದು ಶಂಗಂ ಕಾಲದ ಎರುಮೆನಾಡಿನ ಭಾಗವಾದ ಇದು ನೊಳಂಬವಾಡಿ ವಿಭಾಗಕ್ಕೆ ಸೇರಿರಬೇಕು. ಎರುಮೆ ಜನಾಂಗ ವಾಸವಾಗಿದ್ದ ಈ ಪ್ರದೇಶವನ್ನು ಶಾಸನಗಳು 'ಎರುಮೆನಾಡು', 'ಎರುಮರೈನಾಡು' ಎಂದು ಕರೆದಿವೆ. ಇದು ಎರುಮೆ+ಅರ+ನಾಡು>[ಎರುಮೆ]ರೇನಾಡು ಎಂದು ಬದಲಾಗಿರಬೇಕು. ಅಲ್ಲದೆ ಎರುಮೆ>ಎಮ್ಮೆ/ಎರುಮೆ+ ಊರವರ್>ಎಮ್ಮೆಯೂರವರ ಆಗಿರಬೇಕು. ಮುಂದೆ ಇದು ಸಂಸ್ಕೃತಿರುಗಿ 'ಮಹಿಷ' ಆಗಿರಬೇಕು. ವೈದುಂಬ ದೊರೆ ಗಂಡ ತ್ರಿಣೇತ್ರ ಈ ವಿಭಾಗವನ್ನು ಆಳುತ್ತಿದ್ದನು. ಆಗ ವೆಳುಂಗಗುಂಟ(ಇಂದಿನ ವೆಲಿಗಲ್ಲು) ಗ್ರಾಮದಲ್ಲಿ ದತ್ತಿ ನೀಡಿದ್ದರ ಬಗೆಗೆ ತಿಳಿದು ಬರುತ್ತದೆ.

ಆಕಶಾಸಂ: ೨: ೩೮೧: ಕ್ರಿಸ್ತಶಕ ೧೧೨೪: ಪೆದ್ದಮುಡಿಯಂ, ಜಮ್ಮಲಮಡುಗು, ಕಡಪ; ಆಕಶಾಸಂ: ೧: ಶಾ.ಸಂ. ೩೬೨: ಕ್ರಿಸ್ತಶಕ ೧೧೩೪: ಕೊಲಿಮಿಗುಂಡ್ಲ, ಕೋಯಿಲಕುಂಟ್ಲ, ಕರ್ನೂಲ; ಆಕಶಾಸಂ: ೧೨:ಶಾ.ಸಂ. ೩೬೬: ಕ್ರಿಸ್ತಶಕ ೧೧೯೨, ಚೌದೂರು, ಪ್ರೊದ್ದಟ್ಟೂರು, ಕಡಪ: ರೇನಾಡು ಎಂಬುದು ಮಹಾಮಂಡಳೇಶ್ವರ ಚಿದ್ದಣಚೋಳನು ಅತ್ಯಣಚೋಳ ಮಹಾರಾಜನ ಸಾಮಂತನಾಗಿ ಹೆಡಕಲ್ಲು, ಅವುಕುಮಂ ವಿಭಾಗಗಳ ಜೊತೆಗೆ 'ರೇನಾ ಡೆರ್ಪ್ಪತ್ತುಮಂ' ಆಳುತ್ತಿದ್ದನು ಇದು ನೊಳಂಬವಾಡಿ ೩೨೦೦೦ದರ ಆಡಳಿತ ವಿಭಾಗವಾಗಿತ್ತು. ಕ್ರಿ.ಶ. ೧೧೩೪ರಲ್ಲಿ "ಹಂಡಕಲ್ಲು ಕನ್ನೆನಾಡು ರೇನಾಡು" ಮೊದಲಾದ ವಿಭಾಗಗಳನ್ನು ನಂದ್ಯಾಲೆಯ ಬೀಡಿನಿಂದ ಮಹಾಮಂಡಳೇಶ್ವರ ವಂಕಣ ಚೋಳ ಮಹಾರಾಜನು ಆಳುತ್ತಿದ್ದನು. ಮಹಾಮಂಡಳೇಶ್ವರ ನಲ್ಲಸಿದ್ದಣ್ಣದೇವ ಚೋಳನು ಮೂಲಿಕಿ, ಹೆಡಕಲ್ಲು, ಕನ್ನೆ ೩೦೦ಗಳ ಜೊತೆಗೆ 'ರೇನಾಡೆಳ್ಪತ್ತುಮಂ' ಅಳುತ್ತಿದ್ದನು. ಇಲ್ಲಿ ಬರುವ 'ಕೊಲ್ಮಗುಡಿಯು' ಈಗಿನ ಕೊಲಿಮಿಗುಂಡ್ಲ ಗ್ರಾಮವಾಗಿದೆ.

ಆಕಶಾಸಂ: ೨: ಶಾ.ಸಂ.೧೬೬, ಕ್ರಿಸ್ತಶಕ ೧೦೭೯: ಹಾವಲಗಿ, ಗುತ್ತಿ: ರೊದ್ದ-೩೦೦ ಇದು ನೊಳಂಬವಾಡಿಯ ಉಪವಿಭಾಗವಾಗಿರುವ ಸಾಧ್ಯತೆ ಇದೆ. ಹಾವಲಗಿ ಶಾಸನದಲ್ಲಿ ಈ ವಿಭಾಗದ ಉಲ್ಲೇಖವಿದೆ. ಇದು ಅನಂತಪುರ ಜಿಲ್ಲೆ ಪೆನುಕೊಂಡ ತಾಲೂಕಿನ 'ಪಿನಾಕಿನಿ' ನದಿ ತೀರದ ಪ್ರದೇಶವನ್ನೊಳಗೊಂಡಿದೆ.

ಆಕಶಾಸಂ:೧ಮತ್ತು೫:ಕ್ರಿಸ್ತಶಕ:೧೩೨೮: ಕೊಡಿಗೆಪಲ್ಲಿ, ಹಿಂದುಪುರ: ಹೊಯ್ಸಳ ೩ನೆಯ ಬಲ್ಲಾಳನ ಅಧಿಕಾರಿ ಮಾಚಿಯ ದಣ್ಣಾಯಕನು ಪೆನುಗೊಂಡೆಯ ನೆಲೆವೀಡಿನಿಂದ ಆಳುತ್ತಿದ್ದಾಗ 'ಹಡುಹೆ..'ಯ(ಕೊಡುಗೆಪಲ್ಲಿ) ಗವುಂಡರಿಗೆ ಬೆಣಗೂರನ್ನು ಕೊಡುಗೆಯಾಗಿ ನೀಡಿದನು.

ಆಕಶಾಸಂ:೧:೫೬:ಕ್ರಿಸ್ತಶಕ:೧೨೭೭, ಅಮರಾಪುರ, ಮಡಕಸಿರ: ಅಮರಾಪುರ ಶಾಸನ ಮಹಾಮಂಡಳೇಶ್ವರ 'ರೊದ್ದದ ಗೋವ' ಬಿರುದಿನ 'ಯಿರುಂಗೋಳದೇವಚೋಳ' ರಾಜನು ನಿಡುಗಲ್ಲ ನೆಲೆವೀಡಿನಿಂದ ಆಳುತ್ತಿದ್ದ ನೆಂದು ಈ ಶಾಸನದಲ್ಲಿ ಹೇಳಿದೆ.

ಆಕಶಾಸಂ: ೧: ೨೦೯, ೧೨೨೦, ಮೇಡಿಕುರ್ತಿ, ತಾಡಪತ್ರಿ: ನೊಳಂಬವಾಡಿ-೩೨೦೦೦ ದೊಳಗಿನ ಪೆನ್ನಪರಿನಾಡು ತಾಡಪತ್ರಿ ಎಂಬಲ್ಲಿ ದೊರೆತ ಒಂದು ಶಾಸನದಲ್ಲಿ ಈ ವಿಭಾಗದ ಉಲ್ಲೇಖವಿದೆ. ಪ್ರಾಚೀನ ಆಂಧ್ರಪ್ರದೇಶದ "ತೆಂಕಣಾಧಾರಿಣಿಯಲ್ಲಿ ಪೆನ್ನಪರಿನಾಡು ನಿರಂತರ ಒಪ್ಪಿ ತೋಱುಗುಂ" ಎಂದು ಹೇಳಿದೆ. ಇದು ಪ್ರಾಚೀನ ಕರ್ನಾಟಕದ ಪೂರ್ವದ ಗಡಿಯಾಗಿತ್ತೆಂದು ಶಾಸನ ಸ್ಪಷ್ಟವಾಗಿ ಹೇಳಿದೆ. ಪೆನ್ನೇರು ನದಿಯಿಂದ ಈ ವಿಭಾಗಕ್ಕೆ 'ಪೆನ್ನಪರಿನಾಡು' ಎಂಬ ಹೆಸರು ಬಂದಿದೆ.

ಆಕಶಾಸಂ: ೧: ೨೬, ೧೧೭೮, ಪೆರಿಗಿ, ಹಿಂದುಪುರ: ಹೊಯ್ಸಳ ೨ನೆಯ ಬಲ್ಲಾಳನು ತಳಕಾಡು, ಗಂಗವಾಡಿ, ನೊಳಂಬವಾಡಿಗಳನ್ನು ಆಳುತ್ತಿದ್ದಾಗ "ಹಱುಹನಾಡ ಹಱುವೆಯ ಕೆಱೆಗೆ ಗುರುಗುಂಜಿ ಕೋಲಿ"ನಲ್ಲಿ ಭೂಮಿ ನೀಡಿದನು. ಹಿಂದುಪುರ ತಾಲೂಕಿನ ಪರಗಿ ಗ್ರಾಮದ ಪ್ರಾಚೀನ ಹೆಸರು ಹಱುಹವಾಗಿದ್ದು, ಅದು ವಿಭಾಗವೊಂದರ ಮುಖ್ಯಸ್ಥಳವಾಗಿದೆ.

ಆಕಶಾಸಂ:೧:೩೦೮:೧೧೮೪ ಮಲಕಾಪುರ: ನೊಳಂಬವಾಡಿಯ ಪ್ರಮುಖ ಆಡಳಿತ ವಿಭಾಗವಾಗಿದ್ದ ಇದು, ಸಿಂದವಾಡಿ ವಿಭಾಗದ ಆರಂಭದ ರಾಜಧಾನಿಯಾಗಿರಬೇಕು. ಕಲ್ಯಾಣ ಚಾಲುಕ್ಯರ ಕಾಲಕ್ಕೆ ಅದು ತುಂಬುಳ ಗ್ರಾಮಕ್ಕೆ ಸ್ಥಳಾಂತರವಾಯಿತು.

ಆಕಶಾಸಂ:೧:೧೪೫: ಬೇತಪಲ್ಲಿ, ಗುತ್ತಿ: ನೊಳಂಬವಾಡಿಯ ಪ್ರಮುಖ ಆಡಳಿತ ವಿಭಾಗವಾಗಿದ್ದ ಗುತ್ತಿ ಆಂಧ್ರಪ್ರದೇಶದ ಕರ್ನೂಲು ಜಿಲ್ಲೆಯ ಆದೋನಿ, ಆಲೂರು; ಅನಂತಪುರ ತಾಲೂಕಿನ ಗುತ್ತಿ; ಬಳ್ಳಾರಿ ತಾಲೂಕಿನ ಪೂರ್ವಭಾಗ ಮತ್ತು ಸಿರುಗುಪ್ಪ ತಾಲೂಕಿನ ಪೂರ್ವ-ಈಶಾನ್ಯ ಭಾಗದ(ವೇದಾವತಿ ಮತ್ತು ಪೆನ್ನಾರ ನದಿಗಳ ನಡುವಿನ ಪ್ರದೇಶ) ಹಳ್ಳಿಗಳಗಳನ್ನು ಹೆಸರಿಸುತ್ತದೆ.

ಎಂಎಆರ್: ೧೯೨೮: ಶಾ.ಸಂ. ೩೧: ಕ್ರಿಸ್ತಶಕ ೧೦೫೬; ಎಕ: ೩: ೩೨: ಕ್ರಿಸ್ತಶಕ ೧೪ನೆಯ ಶತ: ಹಸುಗೂಲಿ, ಗುಂಡ್ಲುಪೇಟೆ; ಆಕಶಾಸಂ :೨: ೩೬೩: ಅಬ್ಬಾವರಂ, ರಾಯಚೋಟಿ: ಮಹಾರಾಜವಾಡಿ- ೭೦೦೦ ನೊಳಂಬವಾಡಿ-೩೨೦೦೦ ನಾಡಿನ

ಉಪವಿಭಾಗವಾಗಿರಬೇಕು. "ಮಹರಾಜಾಡಿಯ ಮಹಾದೇವನು" ದತ್ತಿ ನೀಡಿದ ವಿವರ ೧೪ನೆಯ ಶತಮಾನದ ಹಸುಗೂಲಿ ಶಾಸನದಲ್ಲಿದೆ. ಕಾಲ ನಿರ್ದೇಶನವಿಲ್ಲದ ಅಬ್ಬಾವರಂ ಶಾಸನ "ಮಾರುಜವಾಡಿಯೊಳಗಣ ವಂಗಿಮಡುವಿನ ಸ್ಥಳದಲು ವ್ರಾತ ಅಬ್ಬವುರ" ಗ್ರಾಮವನ್ನು ತ್ರಿಯಂಬಕದೇವರ ಸೇವೆಗೆ ನೀಡಿದರೆಂದು ಹೇಳಿದೆ.

ಎಂಎಆರ್:೧೨೪: ಶಾಸಂ:೪೮: ಮಾದಿಗೆರೆಯ ಒಂದು ಶಾಸನವು 'ನೊಳಂಬಾಧಿರಾಜನು ಮಾದಿಗೆರಯಲ್ಲಿರುವ ಕಾಮೇಶ್ವರ ದೇವರಿಗೆ ನಾಗಮಯ್ಯನ ಮೂಲಕ ಖಂಡುಗ ಗದ್ದೆಯನ್ನು ದಾನ' ಮಾಡಿರುವುದನ್ನು ವಿವರಿಸುತ್ತದೆ.

ಎಂಎಆರ್:೧೯೨೯:ಶಾಸಂ:೫೪: ಕ್ರಿಸ್ತಶಕ ೧೦೮೧ರ ಹಳೆಬನ್ನೂರಿನ ಶಾಸನದಲ್ಲಿ ವೀರನೊಳಂಬ ಜಯಸಿಂಗದೇವನು ಬನ್ನಿವೂರಲಿ ಸೋಮೇಶ್ವರದೇವರ ಪ್ರತಿಷ್ಠೆ ಮಾಡಿಸಿದ ಉಲ್ಲೇಖ ವ್ಯಕ್ತವಾಗುತ್ತದೆ.

ಎಇಂ:೨೬:೬: ಕ್ರಿಸ್ತಶಕ ೮೮೫ರ ಒಂದು ಶಾಸನದಲ್ಲಿ ಬಾಣರಸರುಂ ನೋರೆಮಟ್ಟೆ ಕೋಟ್ಟೆಯಿಟ್ಟಲ್ಲಿ **ನೊಟಂಬ**ದಡಿಗ ರಾಚಮಲ್ಲ ಎಂದು ಉಲ್ಲೇಖ ಬರುತ್ತದೆ.

ಎಇಂ:೧೨:೧೯: ಕ್ರಿಸ್ತಶಕ: ೧೦೮೭: ನೀಲ್ಗುಂದ: ಹರಪನಹಳ್ಳಿ; ಎಸ್‌ಐಐ:೯(೧): ೧೪೫: ಕ್ರಿಸ್ತಶಕ: ೧೦೭೯: ಬಾಗಳಿ; ಎಸ್‌ಐಐ:೯(೧):೧೮೧: ಕ್ರಿಸ್ತಶಕ:೧೧೧೦: ನೀಲ್ಗುಂದ, ಹರಪನಹಳ್ಳಿ; ಎಇಂ:೧೨:೧೯: ಕ್ರಿಸ್ತಶಕ:೧೦೮೭: ನೀಲ್ಗುಂದ:ಹರಪನಹಳ್ಳಿ: ನೊಳಂಬವಾಡಿ–೩೨೦೦೦ದೊಳಗಿನ ಬಿಕ್ಕಿಗ–೭೦ ಎಂಬ ಎಪ್ಪತ್ತು ಗ್ರಾಮಗಳ ಈ ವಿಭಾಗದ ಉಲ್ಲೇಖ ನೀಲ್ಗುಂದ ಶಾಸನದಲ್ಲಿದೆ. "ಕೋಗಳಿಯಯ್ನೂಱರ ಕಂಪಣಂ ಬಿಕ್ಕಿಗನೆಪ್ಪತ್ತಱ ಮೊದಲ ಕಂಪಣ ಶ್ರೀಮದಗ್ರಹಾರಂ ನೀರ್ಗುಂದ" ಎಂದಿದೆ. ಇಲ್ಲಿಯ ಮತ್ತೊಂದು ಶಾಸನ "ವಿಕ್ಕಿಗ ಸಪ್ತಾತ್ಯನ್ತವರ್ತ್ತಿ ನೀರಗುಂದ ನಾಮಾಗ್ರಾಮಃ" ಎಂದು ಹೇಳಿದೆ. ದಾವಣಗೆರೆ ಜಿಲ್ಲೆ ಹರಪನಹಳ್ಳಿ ತಾಲೂಕಿನ ದುಗ್ಗವತಿ, ಅರಸಿಕೆರೆ, ಈ ಶಾಸನದಲ್ಲಿ ಉಲ್ಲೇಖದ ಗ್ರಾಮಗಳು ಬಿಕ್ಕಿಗ–೭೦ರಲ್ಲಿದ್ದುದು ಶಾಸನಗಳಿಂದ ತಿಳಿಯುತ್ತದೆ. ಮುತ್ತಗೆ–೩೦ ಇದರ ಉಪವಿಭಾಗವಾಗಿರುವದರ ಬಗೆಗೆ ಬೆಳಕು ಚೆಲ್ಲುತ್ತವೆ.

ಎಇಂ: ೧೨: ೧೮೮: ಕ್ರಿಸ್ತಶಕ ೧೧೧೨ ಗುಡಿಹಳ್ಳಿ, ಹರಪನಹಳ್ಳಿ: ನೊಳಂಬವಾಡಿ–೩೨೦೦೦ ದೊಳಗಿನ ಆಡಳಿತ ವಿಭಾಗದಲ್ಲೊಂದಾದ ಮುತ್ತಗೆ–೩೦ ಎಂಬುದು ಗುಡಿಹಳ್ಳಿ ಶಾಸನ "ಕೋಗಳಿ ಐನೂಱಱ ಕಂಪಣ ಮುತ್ತಗೆ ಮೂವತ್ತಱ ಬಳಿಯ ಬಾಡಂ ಶ್ರೀಮದರಸಿಯಕೆಱೆಯ"ನ್ನು ಹೇಳಿದೆ. ಬೆಣ್ಣೆಹಳ್ಳಿ ಶಾಸನ "ಕೋಗಳಿಯ್ಯೆನೂಱರ ಕಂಪಣ ಮುತ್ತಗೆ ಮೂವತ್ತಱೊಳಗಣ ಬೆಣ್ಣೆಗನೂರ"ನ್ನು ಹೇಳಿದೆ. ಹರಪನಹಳ್ಳಿ ತಾಲೂಕಿನ ಮುತ್ತಗಿ ಇದರ ಮುಖ್ಯಪಟ್ಟಣವಾಗಿದೆ. ಈ ತಾಲೂಕಿನ ಅರಸಿಕೆರೆ, ಬೆಣ್ಣೆಹಳ್ಳಿಗಳು ಇದರಲ್ಲಿ ಸೇರಿದ್ದವು ಎಂಬುದರ ಬಗೆಗೆ ಬೆಳಕು ಚೆಲ್ಲುತ್ತವೆ.

ಎಇಂ:೧೨: ೨: ಕ್ರಿಸ್ತಶಕ ೧೨೨೬ ಬೆಣ್ಣೆಕಲ್ಲು, ಹಗರಿಬೊಮ್ಮನಹಳ್ಳಿ: ಈ ಶಾಸನವು ನೊಳಂಬವಾಡಿ–೩೨೦೦೦ರಲ್ಲಿ ಆಡಳಿತ ವಿಭಾಗವಾಗಿದ್ದ ಬೆಣ್ಣೆಕಲ್ಲು–೧೨ ಎಂಬ ಹೆಸರಿನ ಚಿಕ್ಕನಾಡನ್ನು ಬೆಣ್ಣೆಕಲ್ಲು ಶಾಸನ "ಕೋಗಳಿಯಯಿನೂಱಱ ಬೆಂಣೆಕಲ್ಲು ಹಂನೆರಡ" ವಿಭಾಗವನ್ನು ಹೇಳಿದೆ. ಇದು ಹಗರಿಬೊಮ್ಮನಹಳ್ಳಿ ತಾಲೂಕಿನ ಬೆಣ್ಣೆಕಲ್ಲು ಗ್ರಾಮವಾಗಿದೆ.

ಎಕ:೨:೨೦:ಕ್ರಿಸ್ತಶಕ:೧೧೬೦ರ ಶಾಸನದಲ್ಲಿ **ನೊಟಂಬರಾಜ,** ಎಂಬುದಾಗಿದೆ.

ಎಕ:೨:ಶಾಸಂ:೧೩:ಕ್ರಿಸ್ತಶಕ ೧೧೬೦ರ ಶಾಸನದಲ್ಲಿ **ನೊಟಂಬ** ಕುಲಾಂತಕ ಎಂದಿದೆ. ಎಕ:೧೨:೩೭:ಕ್ರಿಸ್ತಶಕ ೯೮೮ರ ಸಿರಾದ ಒಂದು ಶಾಸನವು ಕೂಡ **'ನೊಣಂಬನಾಳಿಂಮುನ್ನಿಱೆವ'** ಎಂದಿದೆ.

ಎಕ:೩:ಶಾಸಂ:೧೪೯: ಕ್ರಿಸ್ತಶಕ ೯೧೫ರ ನಂಜನಗೂಡಿನ ಶಾಸನವು **ನೊಟಂಮ್ಮನೊಳ್** ಕಾದಿದೆ. ಇದು ನೊಳಂಬ ಪದವನ್ನು ಬಿಂಬಿಸುತ್ತದೆ.

ಎಕ:೧೧(ರೈ):೩೩:ಕ್ರಿಸ್ತಶಕ:೮೧೫:ಚಿಕ್ಕಮಧುರೆ:ಚಳ್ಳಕೆರೆ: ರಾಷ್ಟ್ರಕೂಟರ ಆಳ್ವಿಕೆಯಲ್ಲಿ ಇದು ಸಾವಿರ ಹಳ್ಳಿಗಳ ಆಡಳಿತ ವಿಭಾಗವಾಗಿತ್ತು. ಚಿಕ್ಕಮಧುರೆ ಶಾಸನ 'ನೊಳಂಬಳ್ಗೆ ಸಾಸಿರಮಂ' ಎಂದು ಸ್ಪಷ್ಟವಾಗಿ ಹೇಳಿದೆ. ಇದನ್ನು ಪಲ್ಲವಾದಿರಾಜನು ಆಳುತ್ತಿದ್ದನು.

ಎಕ:೧೧(ರೈ):ದಾವಣಗೆರೆ:ಶಾಸಂ:೧೯೯:ನಂದಗುಡಿ: ನೊಳಂಬರ ೩೨೦೦೦ ನಾಡೊಳಗಣ ಪ್ರದೇಶವಾದ **ಕದಂಬಳಿಗೆ** ಪ್ರದೇಶವು, ರಾಷ್ಟ್ರಕೂಟ ಕನ್ನರನ ಕ್ರಿ.ಶ. ೯೩೦ರ

ನಂದಗುಡಿ ಶಾಸನ ಇದರ ಪ್ರಾಚೀನ ಉಲ್ಲೇಖವಾಗಿದೆ. ಕನ್ನಡ ಶಾಸನಗಳಲ್ಲಿ ಇದು ಕದಂಬಳಿಗೆನಾಡು, ಕದಂಬಳಿಗೆ ಸಾಯಿರ, ಕಡಂಬಳಿಗೆ ಸಾಯಿರ ಮುಂತಾಗಿ ಕಾಣಿಸಿಕೊಂಡಿದೆ. ರಾಷ್ಟ್ರಕೂಟರ ಕಾಲದಲ್ಲಿ ಇದು ಯಾವ ವಿಭಾಗಕ್ಕೆ ಸೇರಿತ್ತೆಂಬುದು ತಿಳಿಯುವುದಿಲ್ಲ. ಕಲ್ಯಾಣ ಚಾಲುಕ್ಯರ ಕಾಲಕ್ಕೆ ನೊಳಂಬ ವಾಡಿಯ ಉಪವಿಭಾಗವಾಗಿತ್ತು.ಸಾವಿರ ಹಳ್ಳಿಗಳ ಈ ಆಡಳಿತ ವಿಭಾಗದ ಮುಖ್ಯಪಟ್ಟಣ ಹರಪನಹಳ್ಳಿ ತಾಲೂಕಿನ 'ಕಡಬಗೆರೆ' ಗ್ರಾಮವಾಗಿದೆ. ಕ್ರಿ.ಶ. ೧೧೩೦ರ ನಂತರ ಪಾಂಡ್ಯರು ಉಚ್ಚಂಗಿಗೆ ರಾಜಧಾನಿ ಯನ್ನು ಬದಲಿಸಿಕೊಂಡರು. ಅಂದಿನಿಂದ ಕದಂಬಳಿಗೆನಾಡಿನ ಉಲ್ಲೇಖ

ಎಕ:೧೧(ರೈ):ದಾವಣಗೆರೆ:೬:ಕ್ರಿಸ್ತಶಕ:೧೧೯೯, ಬೇತೂರು: ಕ್ರಿಸ್ತಶಕ ೧೦೬೪ರ ಉಚ್ಚಂಗಿ ಶಾಸನ ಅಲ್ಲಿಯ 'ಪರ್ವತವು ಕದಂಬಳಿಗೆನಾಡ ಮಧ್ಯದ ಮೇರು'ವಿನಂತಿದ್ದಿತೆಂದು, ಆ ಪರ್ವತಕ್ಕೆ ಒಂದೊಂದು ಯುಗದಲ್ಲಿ ಒಂದೊಂದು ಹೆಸರಿದ್ದಿತೆಂದು ಹೇಳಿದೆ. ಹಾಗೂ "ಕೋಗಳಿನಾಡೊಳಗ್ಗದ ಕದಂಬಳಿಗೆ ಸಾಯಿರ"ವೆಂದು ಹೇಳಿದೆ.

ಎಕ:೧೧(ರೈ):೧೨:೧೦: ೧೦೩೪, ಅಸಗೋಡ, ಜಗಳೂರು; ಎಕ:೧೧(ರೈ):೧೪೦: ೧೦೬೦, ಬಾಡ, ದಾವಣಗೆರೆ; ಎಕ :೧೧(ರೈ):೧೩೬: ೧೧೧೪ ಅಕ್ಟೋಬರ ೨, ಕಬ್ಬೂರು, ದಾವಣಗೆರೆ; ಎಕ: ೧೧(ರೈ):೧೪೩: ೧೦೬೨ ಮಾರ್ಚ ೧೩, ಕಂದಗಲ್ಲು, ದಾವಣಗೆರೆ: ಈ ಶಾಸನಗಳು ಕ್ರಮವಾಗಿ ಅಸಗೋಡ, ಬಾಡ, ಕೊಟಗನೂರು, ಕಂದಗಲ್ಲು ಗ್ರಾಮಗಳು ಕದಂಬಳಿಗೆ ಸಾಸಿರದಲ್ಲಿದ್ದವು ಎಂಬುದಾಗಿ ತಿಳಿಸುತ್ತವೆ. ಕದಂಬಳಿಗೆ ನಾಡಿನ ಪೂರ್ವಕ್ಕೆ ಹಡುವಗೆರೆ-೫೦೦, ದಕ್ಷಿಣಕ್ಕೆ ಆಸಂಧಿನಾಡು, ಪಶ್ಚಿಮಕ್ಕೆ ಬನವಾಸಿನಾಡಿನ ನೂರುಂಬಾಡ, ವಾಯುವ್ಯದಲ್ಲಿ ಮಾಸವಾಡಿ-೧೪೦(ಪುಲಿಗೆರೆ-೩೦೦) ಮತ್ತು ಈಶಾನ್ಯದಲ್ಲಿ ಬಲ್ಲಕುಂದೆ-೩೦೦ ಇದರ ಮೇರೆಗಳಾಗಿವೆ ಎಂಬುದರ ಬಗ್ಗೆ ಬೆಳಕು ಚೆಲ್ಲುತ್ತವೆ.

ಎಕ:೧೧(ರೈ): ೨೩: ಕ್ರಿ.ಶ. ೯೬೮, ಗುಂಡೇರಿ, ಹೊಳಲ್ಕೆರೆ: ನೊಳಂಬರ ೩೨೦೦೦ ನಾಡೊಳಗಣ ಪ್ರದೇಶವಾದ ಕೊರವಾಡಿ-೩೦೦ ಇದು ಕದಂಬಳಿಗೆಯ ಉಪವಿಭಾಗ. ಕ್ರಿಸ್ತಶಕ ೯೬೮ರ ಗುಂಡೇರಿ ಶಾಸನದಲ್ಲಿ ಇದರ ಉಲ್ಲೇಖವಿದೆ.

ಎಕ:೧೧(ರೈ):೩೫೮:ತ್ರಿಪುರಾಂತಕ, ಕರ್ನೂಲು: ದಂಡನಾಯಕ ಅನಂತಪಾಳಯ್ಯನು 'ಬೇಂಗಿ ಪನ್ನಿರ್ಚ್ಛಾಸಿರಮುಮನೆಮ್ಮೆದಲೆಯಱು ಸಾಸಿರಮುಮಂ' ಆಳುತ್ತಿದ್ದನು.

ಎಕ:೧೧(ರೈ):೧, ೧೧೨೩, ದಾವಣಗೆರೆ; ಎಕ: ೧೧(ರೈ): ೩: ೧೧೨೧ ಆನೆಕೊಂಡ, ದಾವಣಗೆರೆ; (**ಎಕ: ೧೧(ರೈ):೨: ೧೧೨೪, ದಾವಣಗೆರೆ:** ಈ ಶಾಸನಗಳು ಬೆಳ್ತೂರು-೧೨ರ ಕುರಿತು ದಾವಣಗೆರೆ ಶಾಸನ "ಕಡಂಬದೇಶ ಸಹಸ್ರಾಂತರ್ಗತ ಬೆಳ್ತೂರು ದ್ವಾದಶ" ಎಂದು ಹೇಳಿದೆ. ದಾವಣಗೆರೆ ತಾಲೂಕಿನ ಬೇತೂರು ಗ್ರಾಮದ ಪ್ರಾಚೀನ ಹೆಸರು ಬೆಳ್ತೂರು ಆಗಿರುವುದನ್ನು ತಿಳಿಸುತ್ತವೆ. ಆನೆಕೊಂಡ ಶಾಸನ "ನೊಣಂಬವಾಡಿಂನೊಳಗ್ಗದ ಸಾವಿರ ನಾಡಿನೊಳು ಕರಂ ನಾಡೆಯುವೊಳ್ಪುವೆತ್ತೆಸೆವ ಬೆಳ್ತುಱು" ಎಂದಿದೆ. ಬೆಳ್ವೂರು, ತಾರಣವಳ್ಳಿ ಗ್ರಾಮಗಳು ಈ ವಿಭಾಗದಲ್ಲಿದ್ದವು. ಬೆಲ್ತುಱು ಪನ್ನೆರಡರೊಳಗಣ ಬೆಳ್ವೂರ ತಾರಣವಳ್ಳಿ ಎಂಬುದನ್ನು ಹೇಳುತ್ತವೆ ಈ ಎಲ್ಲ ಶಾಸನಗಳು ನೊಳಂಬವಾಡಿ-೩೨೦೦೦ದೊಳಗೆ ಬರುವ ಬೆಳ್ತೂರು-೧೨ರ ಕುರಿತು ಬೆಳಕುಚೆಲ್ಲುತ್ತವೆ.

ಎಕ:೧೧(ರೈ): ೩೪, ೧೧೨೩ ಗಾರೇಹಟ್ಟಿ, ದಾವಣಗೆರೆ: ಈ ಶಾಸನವು ನೊಳಂಬವಾಡಿ-೩೨೦೦೦ದೊಳಗೆ ಬರುವ **ಅರಹಟ-೧೨** ಕ್ರಿಸ್ತಶಕ ೧೧೨೩ರ ಗಾರೇಹಟ್ಟಿ ಶಾಸನದಲ್ಲಿ ಇದರ ಉಲ್ಲೇಖವಿದೆ. ಗಾರೇಹಟ್ಟಿಯು ಪ್ರಾಚೀನ ಹೆಸರು 'ಅರಹಟ'ವಾಗಿದೆ. ಜೊತೆಗೆ ನೊಳಂಬವಾಡಿ-೩೨೦೦೦ದೊಳಗಿನ ಜಗಳವುರ-೭೦ರ ಕುರಿತು ಇದೇ ಶಾಸನದಲ್ಲಿ ಉಲ್ಲೇಖವಾಗಿದೆ. ಇದು ದಾವಣಗೆರೆ ಜಿಲ್ಲೆಯ ತಾಲೂಕು ಕೇಂದ್ರವಾದ ಜಗಳೂರು ಎಪ್ಪತ್ತು ಹಳ್ಳಿಗಳ ಆಡಳಿತ ವಿಭಾಗವಾಗಿತ್ತು. ಗಾರೇಹಟ್ಟಿ ಶಾಸನದಲ್ಲಿ ಇದರ ವಿವರವಿದೆ

ಎಕ:೧೧(ರೈ): ೧೩೫, ೧೧೮೯ ನವಂಬರ ೨೪, ಹಿರೆತೊಗಲೇರಿ, ದಾವಣಗೆರೆ: ನೊಳಂಬವಾಡಿ-೩೨೦೦೦ದೊಳಗೆ ಬರುವ **ಅತ್ತಿಗೇರಿ-೧೨** ಇದರ ಉಲ್ಲೇಖ ದಾವಣಗೆರೆ ತಾಲೂಕಿನ ಹಿರೆತೊಗಲೇರಿ ಶಾಸನ ದಲ್ಲಿದೆ. ಅದು "ಅತ್ತಿಗೇರಿ ಪನ್ನೆರಡಱ ಬಳಿಯ ಬಾಡಂ ತೊಗಲೇಱ" ಎಂದಿದೆ.

ಎಕ:೧೧: (ರೈ): ಹೊಳಲಕೆರೆ ೬೮: ಕ್ರಿಸ್ತಶಕ ೧೧೨೬: ಚಿತ್ರದುರ್ಗ: ಕುಕ್ಕವಾಡಿ-೩೦೦ ಎಂಬುದು ಗುಂಜನೂರು ಗ್ರಾಮದ ಕ್ರಿಸ್ತಶಕ ೧೧೨೬ರ ಶಾಸನ ಈ ವಿಭಾಗವನ್ನು ಹೇಳಿದೆ. ಇದು ಕೂಡ ನೊಳಂಬವಾಡಿಯ ಉಪವಿಭಾಗವಾಗಿರಬೇಕು.

ಎಕ:೧೧(ರೈ): ೧೩೩, ಮಳಲಕೆರೆ, ದಾವಣಗೆರೆ: ಈ ಶಾಸನವು ನೊಳಂಬವಾಡಿ-೩೨೦೦೦ದೊಳಗೆ ಬರುವ **ಕಂಪಣ ಅಯ್ವತ್ತು** ಇದು ಕದಂಬಳಿಗೆಯ ಉಪವಿಭಾಗ. ಮಳಲಕೆರೆ ಶಾಸನ 'ಕದಂಬಳಿಗೆ ಸಾಸಿರದ ಕಂಪಣವಯ್ವತ್ತು' ಎಂದು ಹೇಳಿದೆ.

ಎಕ:೧೨(ರೈ): ೧೦: ಕ್ರಿಸ್ತಶಕ ೧೦೫೪, ಅಸಗೋಡ, ಜಗಳೂರು: ನೊಳಂಬವಾಡಿ-೩೨೦೦೦ರದೊಳಗಿನ ಆಡಳಿತ ವಿಭಾಗವಾದ ಉಚ್ಚಂಗಿ-೩೦ ಎಂಬುದು ಹರಪನಹಳ್ಳಿ ತಾಲೂಕಿನ ಉಚ್ಚಂಗಿಯು ಪಾಂಡ್ಯರ ಆಳ್ವಿಕೆಯಲ್ಲಿ ನೊಳಂಬವಾಡಿಯ ರಾಜಧಾನಿಯಾಗಿತ್ತು. ಜಗಳೂರು ತಾಲೂಕಿನ ಅಸಗೋಡು ಶಾಸನದಲ್ಲಿ ಇದರ ಉಲ್ಲೇಖವಿದೆ.

ಎಕ:೧೧(ರೈ):೩೪:ಕ್ರಿಸ್ತಶಕ ೧೧೨೩: ಗಾರೆಹಟ್ಟಿ, ಚಿತ್ರದುರ್ಗ: ಹಡುವಗೆರೆ-೫೦೦ ಇದು ನೊಳಂಬವಾಡಿಯ ಉಪವಿಭಾಗ. ಚಿತ್ರದುರ್ಗ ತಾಲೂಕಿನ ಹಳುವದರ ಗ್ರಾಮದ ಪ್ರಾಚೀನ ಹೆಸರು ಹಡುವಗೆರೆಯಾಗಿದೆ. ದಾವಣಗೆರೆ ತಾಲೂಕಿನ ಮಳಲಕೆರೆ, ಜಗಳೂರು ತಾಲೂಕಿನ ಅಸಗೋಡು ಗ್ರಾಮಗಳು ಕದಂಬಳಿಗೆ ಸಾಸಿರ ವಿಭಾಗಕ್ಕೆ ಸೇರಿದ್ದವು. "ಹಡುವಗೆರೆ ಅಯ್ನೂಱಱೊಳಗಣ ಕಂಪಣಂ ಚೋಳುಂಗಲ್ಲು ಎಟ್ಟಿತ್ತರ ಬಳಿಯ ಬಾಡಂ ನಿಡುಗುಱುತೆ" ಎಂಬ ಉಲ್ಲೇಖದಿಂದ ತಿಳಿಯುತ್ತದೆ.

ಎಕ:೧೨:ಸಿರಾ:ಶಾಸಂ:೯: ಕ್ರಿಸ್ತಶಕ ೧೦೭೩ರ ದೊಡ್ಡಬಾಣಗೆರೆಯ ಶಾಸನವು ಉಲ್ಲೇಖಿಸುವ ಹಾಗೆ, ಕೆರೆಯನ್ನು ನಿರ್ಮಿಸಿದಾತನಿಗೆ, ಹಾಗೂ ಕೆರೆಯನ್ನು ಕಟ್ಟಿದ ಚಿಲ್ಲುಕ ಬೋವನಿಗೆ ಬಿತ್ತುವಾಟದಲ್ಲಿ ಕೆಲವು ಪಾಲನ್ನು ಬಿಟ್ಟುಕೊಡುವುದರ ಬಗೆಗೆ ಬೆಳಕು ಚೆಲ್ಲುತ್ತದೆ.

ಎಕ:೧೦ :ಮುಬಾ:ಶಾಸಂ:೩೮: ಶಾಸನದಲ್ಲಿ ನೊಳಂಬರ ಅರಸು ಇಮ್ಮಡಿ ಪೊಳಲ್ಚೋರನ ಪತ್ನಿ ದೀವಬ್ಬರಸಿ ಕಟ್ಟಿಸಿದ ಕೆರೆಯ ವರ್ಣನೆಯನ್ನು ಮಾಡುತ್ತದೆ. ದೀವಬ್ಬರಸಿಯು ತನ್ನ ಹೆಸರಿನಲ್ಲಿಯೇ **ದೀವಳಬ್ಬಾಸಮುದ್ರಂ** ಎಂಬ ತಟಾಕವನ್ನು ನಿರ್ಮಿಸಿರುವುದಲ್ಲದೆ. ತನ್ನ ಹಿರಿಯ ಮಗನಾದ ಇಮ್ಮಡಿ ಮಹೇಂದ್ರನ ಹೆಸರಿನಲ್ಲಿಯು ಕೊಳವೊಂದನ್ನು ಮಾಡಿಸಿರುವುದು ಈ ಶಾಸನದಲ್ಲಿ ಉಕ್ತವಾಗುತ್ತದೆ.

ಎಕ:೧೦:೨:ಶಾಸಂ:೩೮: ಗಾಂಡ್ಲಹಳ್ಳಿಯ ಶಾಸನವು ಬಜ್ಜವಾಡಿಯ ಕೆರೆಗೆ ಬಿತ್ತುಕಟ್ಟು ಬಿಟ್ಟದ್ದನ್ನು ಉಲ್ಲೇಖಿಸುತ್ತದೆ. ಹೆಬಗ್ರಾಮದ ಒಬ್ಬ ಸಾಮಾನ್ಯ ಮಹಿಳೆಯು ಕೆರೆಯನ್ನು ನಿರ್ಮಿಸಿರುವುದನ್ನು ಹೇಳುತ್ತದೆ. ಸಾಮಾನ್ಯವಾಗಿ ಮಹಿಳೆಯರು ಸಾಮಾಜಿಕ ಬದುಕಿನಲ್ಲಿ ತಮ್ಮನ್ನು ನಿಸ್ಸಂಕೋಚದಿಂದ ತೊಡಗಿಸಿಕೊಂಡು ನಾಡಿನ ಅಭಿವೃದ್ಧಿಗೆ ಕೊಡುಗೆ ನೀಡಿರುವುದನ್ನು ಇದು ಪ್ರಚುರಪಡಿಸುತ್ತದೆ.

ಎಕ:೧೦ :ಮುಳಬಾಗಿಲು:ಶಾಸಂ:೧೨೬: ಕ್ರಿಸ್ತಶಕ ೯೭೧ರ ನೊಳಂಬರ ಆಡಳಿತದವಧಿಯ ಉತ್ತನೂರಿನ ಶಾಸನವು ಸಾಂಬಯ್ಯನುಬ ಬಿದಿರೂರ ಕೆರೆಗೆ ಬಿತ್ತುಕಟ್ಟಬಿಟ್ಟಿರುವುದನ್ನು ತಿಳಿಸುತ್ತದೆ.

ಎಕ:೧೧:ಚಳ್ಳಕೆರೆ:೩೩: ಚಳ್ಳಕೇರಿ ಶಾಸನವೊಂದು ಹೆಂಜೇರುವನ್ನು ರಾಜಧಾನಿಯನ್ನಾಗಿ ಮಾಡಿಕೊಂಡ ಪ್ರಾಚೀನ ಕರ್ನಾಟದಲ್ಲಿ ಆಳ್ವಿಕೆ ಮಾಡುತ್ತಿದ್ದ ನೊಳಂಬರು, ತಲಕಾಡಿನ ಗಂಗರ ದಾಳಿಯಿಂದ ತತ್ತರಿಸಿ ದಕ್ಷಿಣದ ಕಡೆಯಿಂದ ಕರ್ನಾಟಕದ ಉತ್ತರದ ದಿಕ್ಕಿಗೆ ಸರಿದು ಹೋದರು. ಆ ನೊಳಂಬರು ಈಗಿನ ಬಳ್ಳಾರಿಯ ಕಂಪಿಲಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಡಳಿತವನ್ನು ನಡೆಸುತ್ತಿದ್ದರು. ಅವರ ಈ ಆಡಳಿತ ಕೇಂದ್ರಕ್ಕೆ 'ನೊಳಂಬವಾಡಿ–೩೨೦೦೦' ಆಗಿತ್ತೆಂದು, ಹಾಗೂ ನೊಳಂಬರ ಆರಂಭದ ಆಳ್ವಿಕೆಯ ಪ್ರದೇಶವಾಗಿದ್ದು ಎಂಬುದಾಗಿ ಉಲ್ಲೇಖಿಸಿದೆ.

ಎಕ:೧೦(೨); ಕಞ:೫೭: ಕ್ರಿಸ್ತಶಕ:೯೨೫ರ ಕ್ಯಾಲನೂರಿನ ಶಾಸನವು ನೊಳಂಬರ ಸಿಂಗಮುತ್ತರಸನ(ಸಿಂಗಪೋತರ) ಕಾಲದಲ್ಲಿ 'ಮಾದವ್ವೆಯುಂಬುವವಳು ಆಳ್ವಿಕೆಯನ್ನು ಮಾಡುತ್ತಿದ್ದುರ' ಬಗೆಗೆ ಮಾಹಿತಿಯನ್ನು ನೀಡುತ್ತದೆ. ಹಾಗೂ

'ಅಯ್ಯಪ್ಪದೇವನ ಕಾಲದ ಶಾಸನದಲ್ಲಿ ಕೆರೆನೂರ ೫೨ ಮಹಾಜನರು ಇಪ್ಪತ್ತು ಗದ್ಯಾಣ ಪೊನ್ನೊಗ್ಟಿ ಪಡೆದರ್ ನಿಚ್ಚಲೊಂನ್ದುಪರಿವಡಿಯಂ ನವರ್ಗ್ಗೆ ಅಂನ್ವದಿಂಬರಲ್ಲಿಂರೆಟ್ಟಿಂ ನಡಯಿಸಲಸಲ್ಪೊರ್ ಈ ಧರ್ಮ್ಮಂ ಇರುಗಮ್ಮಯ್ಯಗೊನ್ದು ಮದುಕಮಯ್ಯಂಗಂ ಅವ್ವಟ್ಟಿ ಒನ್ದು ಭಾಗಂ ಸಲ್ವುದು' ಎಂದು ತಿಳಿಸುತ್ತದೆ.

ಎಕ:೧೦:೨; ಕಇ:೫೭: ಕ್ರಿಸ್ತಶಕ ೯೯೯ರ ಅಯ್ಯಪದೇವನ ಶಾಸನವು ಬರಗೂರಿನ ಮೂಲಸ್ಥಾನದ ಎರಡೂ ದೇವಾಲಯದ ಪೆಂಜೇರುವಿನ ಪಂಚಮಠಕ್ಕೆ ಮತ್ತು ಬರಗೂರಿನ ಮಹೇಂದ್ರೇಶ್ವರ ದೇವಸ್ಥಾನಕ್ಕೆ ದಾನ ಮಾಡಿದಂತೆಯೂ ಮತ್ತು ನಾಗಿಯಬ್ಬೆಯ ಅಬ್ಬೆ ನಾರಣಬ್ಬೆಯು ಕೆರೆಯನ್ನು ಕಟ್ಟಿಸಿದ್ದನ್ನು ತಿಳಿಸುತ್ತದೆ.

ಎಕ:೯:೧: ಕಇ:೧೧೦: ನೊಳಂಬ ನಾರಸಿಂಘದೇವನ ಕಾಲದಲ್ಲಿ ಅವನ ಪತ್ನಿ ನೊಳಂಬ ಮಹಾದೇವಿಯು ಹೊಸಗೆರೆಯ ಮಹಾದೇವ ದೇವರಿಗೆ ದಾನ ನೀಡಿದ ಉಲ್ಲೇಖ ಈ ಶಾಸನದಲ್ಲಿ ಬರುತ್ತದೆ. ಅದೇ ಅಸಗೋಡುವಿನ ಕ್ರಿಸ್ತಶಕ ೧೦೫೪ರ ಶಾಸನವು ಅದೇ ನಾರಸಿಂಘದೇವನ ಕಾಲದಲ್ಲಿ ಕಂಚಿಯಬ್ಬೆಯು ಬ್ರಾಹ್ಮಣರಿಗೆ ದಾನ ಮಾಡಿದ ಉಲ್ಲೇಖ ಬರುತ್ತದೆ.

ಎಕ: ೧೦:ಮುಳಬಾಗಿಲು:ಶಾಸಂ:೫೯: ಅವನಿಯ ಕ್ರಿಸ್ತಶಕ ೯೫೦ಕ್ಕೆ ಸೇರಿದ ಶಾಸನ 'ಏಕವಾಕ್ಯ ಇರುವ ನೊಳಂಬರ ಆಳ್ವಿಕೆಯಲ್ಲಿ ಪೆರ್ಗಡೆ ಬಸವಯ್ಯನಂಕ ಭಟ್ಟನು ಮಾನಸ್ತಂಭ ಮಾಡಿಸಿದ' ಎಂಬುವುದನ್ನು ವಿವರಿಸಿದೆ.

ಎಕ:೧೦:ಮುಬಾ:ಸಂ:೩೮ ಮತ್ತು ಎಕ:೧೦:ಮುಬಾ:ಸಂ:೫೦: ಕ್ರಿಸ್ತಶಕ ೯೮೨ರ ಈ ಎರಡು ಶಾಸನಗಳಲ್ಲಿ ಇಮ್ಮಡಿ ಪೊಳಲ್ಚೋರನ ಪತ್ನಿ ದೀವಬ್ಬರಸಿಯು ಗತಿಸಿದ ತನ್ನ ಪತಿಯ ಹೆಸರಿನಲ್ಲಿ ಒಂದು ಕೊಳವನ್ನೂ, ತನ್ನ ಹೆಸರಿನಲ್ಲಿ ಒಂದು ಕೆರೆಯನ್ನೂ ಹಾಗೂ ಶಿವ ಮತ್ತು ವಿಷ್ಣುದೇವಾಲಯಗಳನ್ನೂ ನಿರ್ಮಾಣ ಮಾಡಿಸಿರುವದನ್ನು ಗಮನಿಸಬಹುದು. ಈಕೆ ಕಟ್ಟಿಸಿದ ಕೆರೆಯು ಪೊಜಿರಮಂಗಲದಲ್ಲಿ ಇತ್ತು. ಅವನಿಯಲ್ಲಿ ಕಟ್ಟಿಸಿದ ವಿಷ್ಣುಗೃಹವನ್ನು ನೊಳಂಬನಾರಾಯಣೇಶ್ವರನೆಂದು ಕರೆಯಲಾಗುತ್ತಿತ್ತು.

ಈ ಮೇಲೆ ವಿವರಿಸಿದ ದೇವಾಲಯಗಳಾದ ವಿಷ್ಣು ಮತ್ತು ಶಿವ ದೇವಾಲಯಗಳನ್ನು ರಾಣಿ ದೀವಬ್ಬರಸಿಯೇ ನಿರ್ಮಾಣ ಮಾಡಿಸಿರುವುದನ್ನು ತಿಳಿಸುತ್ತವೆ.

ಎಕ:೧೨:ಸಿರಾ::೩೮: ಕ್ರಿಸ್ತಶಕ ೮೭೪ರ 'ಮಹೇಂದ್ರ ತನ್ನ ಅರಮನೆಯನ್ನು ಮಹಾದೇವನಿಗೆ ನಿವೇದಿಸಿ ಮಾಹೇನ್ದ್ರೇಶ್ವರನನ್ನು ಮಾಡಿಸಿ ಭೂದಾನ' ಮಾಡಿದದುದನ್ನು ವಿವರಿಸುತ್ತದೆ.

ಎಕ:೭:(ರೈ):೨೮೫: ಕ್ರಿಸ್ತಶಕ ೮೯೫ರ 'ಕಲ್ಲದೇಗುಲವನ್ನು ಕಟ್ಟಿಸಿ ವರ್ಷಕ್ಕೊಮ್ಮೆಸುಣ್ಣ ಬಳಿಯಲು ದಾನ' ಮಾಡಿರುವುದರ ಮೇಲೆ ಬೆಳಕು ಚೆಲ್ಲುತ್ತದೆ.

ಎಕ:೧೦ ಕೋಲಾರ:ಶಾಸ:೯: ಕ್ರಿಸ್ತಶಕ ಸು. ೧೨ನೆಯ ಶತಮಾನದ ಕೋಲಾರ ತಾಲ್ಲೂಕಿನ ಶಿವಾರ ಪಟ್ಟಣದ ಶಾಸನವು 'ತೊಮ್ಮುಬ್ವೋಯನ ಮಕ್ಕಳಾದ ನಾಗಯ್ಯನು, ಕೊಣ್ಡಯ್ಯನು ಶ್ರೀ ಮಣ್ಣಿಮಂಗಲದ ಮಹಾಜನರಿಗೆ ಪದಿನಾಱು ಗದ್ಯಾಣ ಪೊಙ್ಗೊಟ್ಟುಕೊಂಡದ್ದನ್ನು ಇಬ್ಬರು ಬ್ರಾಹ್ಮಣಿಗೆ ದಾನ' ಮಾಡಿದ್ದನ್ನು ಉಲ್ಲೇಖಿಸಿದೆ.

ಎಕ:೧೦:ಕೋಲಾರ:ಶಾಸಂ:೫೭: ಕೋಲಾರ ತಾಲ್ಲೂಕಿನ ಮಡಿವಾಳ ಗ್ರಾಮದ ಶಾಸನವು ನೊಳಂಬಾಧಿರಾಜನು ಗಂಗರು ಸಾಸಿರವನ್ನಾಳೂತ್ತಿರುವಾಗ, ಸತ್ಯ ಶೀಲಾಚಾರ ಸಂಪನ್ನ ಬೆಂಗಡನಾಥ ಶ್ರೀಮಪೊಮ್ಪಲ್ಲವೊಡೆಯ ದುರ್ಗೆಪಾಡಿಯಲ್ಲಿ ಬಾಣ ಅರಸರ ಮೇಲೆ ಯುದ್ಧ ಮಾಡಿ ಹಲವರನ್ನು 'ಇಱಿದು ಕೊಂದು ಬಿಟ್ಟು ಸತ್ತವನನ್ನು ಮೆಚ್ಚಿ ನೊಳಂಬಾಧಿರಾಜನ ಬಿನ್ನಪದಂತೆ ನೀತಿಮಾರ್ಗ ಪೆರ್ಮಾನಡಿಗಳು ಸೂಱೂರನ್ನು ಬಾಳ್ಗಲ್ಚುನ್ನಾಗಿ' ಕೊಟ್ಟ ವಿಷಯ ಹೇಳುತ್ತದೆ.

ಎಕ:೧೦:ಮುಳಬಾಗಿಲು:ಶಾಸಂ:೩೮ ಮತ್ತು ೫೦: ಕ್ರಿಸ್ತಶಕ ೯೮೨ರ ಅವನಿಯ 'ಇಮ್ಮಡಿ ಪೊಳಲ್ಚೋರನ ಶಾಸನವು ಅವನ ಮಡದಿಯಾದ ದೀವಬ್ಬಳರಿಸಿ ತನ್ನ ಪತಿಯ ಹೆಸರಿನಲ್ಲಿ ಯಶೋರ್ಜ್ಜಿತಮೆನಿಪ ಅಗ್ರಹಾರವನ್ನು ವಿನ್ಯಾಸ ಮಾಡಿಸಿ ತೀರಿಕೊಂಡ ಮಗ ಮಹೇಂದ್ರನ ಹೆಸರಿನಲ್ಲಿ ಕೊಳವನ್ನು ಹಾಗೂ ತನ್ನ ಹೆಸರಿನಲ್ಲಿ ತಟಾಕ ಸೇರಿದಂತೆ ಹಲವು ಮುಂತಾದವುಗಳನ್ನು ಕಟ್ಟಿಸಿ' ಧಾರ್ಮಿಕ ಚಟುವಟಿಕೆಗಳಿಗೆ ಬಿಟ್ಟಿರುವುದನ್ನು ಉಲ್ಲೇಖಿಸುತ್ತದೆ.

ಏಕ:೧೦:ಬೌರಿಂಗ್‌ಪೇಟೆ:ಶಾಸಂ:೪: ಬೇತಮಂಗಲದ ಒಂದು ಶಾಸನವು ;ಇರಿವ ನೊಳಂಬಾಧಿ ರಾಜ ನುಲಿಪಯ್ಯನ ಆಳ್ವಿಕೆಯಲ್ಲಿ ವಿಜಯಾದತ್ಯಮಂಗಲದ ಪಿರಿಯ ಕೆರೆಗೆ ಬಿತ್ತುಕಟ್ಟು ಕೊಟ್ಟಿದ್ದನ್ನು' ವಿವರಿಸುತ್ತದೆ.

ಏಕ:೧೧:ಚಿತ್ರದುರ್ಗ:ಶಾಸಂ:೭: ಕ್ರಿಸ್ತಶಕ ೮೦೦ರ ದೊಡ್ಡ ಉಳ್ವರ್ತೆಯ ಶಾಸನವೊಂದು ಪ್ರತಿಮೆಗಳನ್ನು ಹಾಗೂ ದೇವಾಲಯ(ಅಮರಾಲಯ)ಗಳನ್ನು ಮಾಡಿಸಿದಂತೆ ಉಲ್ಲೇಖ ಕಂಡುಬರುತ್ತದೆ.

ಏಕ:೧೧:ಚಿತ್ರದುರ್ಗ:ಶಾಸಂ:೩೩: ಕ್ರಿಸ್ತಶಕ ೮೦೦ಕ್ಕೆ ಸೇರಿದ ಮತ್ತೊಂದು ಚಿಕ್ಕಮಧುರೆಯ ಸಿಂಗಮುತ್ತರಸನ ಕಾಲದ ಶಾಸನವು ಅವನ ಮಗನ ಆಳ್ವಿಕೆಯ ಸಂದರ್ಭದಲ್ಲಿ ಮಾರಬ್ಬೆ ಎಂಬುವಳು ಶಿವಾಲಯವನ್ನು ಕಟ್ಟಿಸಿದಂತೆ ಉಲ್ಲೇಖವಿದೆ.

ಏಕ:೧೧:ಚಿತ್ರದುರ್ಗ:ಶಾಸಂ:೩೩: ಕ್ರಿಸ್ತಶಕ ೮೨೦ಕ್ಕೆ ಸೇರಿದ ಚಿಕ್ಕಮಧುರೆಯ ಶಾಸನದಲ್ಲಿ ಚರುಪೊನ್ನೇರನ ಹೆಂಡತಿ ಗವಣಬ್ಬೆ ಮುದರಿಕಲ್ಲಿನಲ್ಲಿ ಗವಣೇಶ್ವರವೆಂಬ ಶಿವಾಲಯವನ್ನು ನಿರ್ಮಿಸಿದಂತೆ ತಿಳಿದುಬರುತ್ತದೆ.

ಏಕ:೧೨:ಸಿರಾ:ಶಾಸಂ:೩೮: ಕ್ರಿಸ್ತಶಕ ೮೭೦ರ ಶಾಸನದಲ್ಲಿ ಮಹೇಂದ್ರನು ತನ್ನ ಹೆಸರಿನಲ್ಲಿಯೇ, ಅಂದರೆ ಮಹೇಂದ್ರೇಶ್ವರ ದೇವಾಲಯವನ್ನು ಮಾಡಿಸಿ ಅದರ ನಿತ್ಯಕರ್ಮಕ್ಕೆ ಭೂಮಿಯನ್ನು ದಾನವಾಗಿ ಬಿಟ್ಟಿರುವುದನ್ನು ಈ ಶಾಸನವು ವಿವರಿಸತ್ತದೆ.

ಏಕ:೭(ರೈ): ಶಾಸಂ:.೨೮೫: ನೊಳಂಬ ಮಹೇಂದ್ರನು ತಾಯಲೂರು ಅಥವಾ ತೈಲೂರಿನಲ್ಲಿ ಕಲ್ಲದೇಗುಲವನ್ನು ನಿರ್ಮಿಸಿರುವುದರ ಬಗ್ಗೆ ಕ್ರಿಸ್ತಶಕ ೮೯೫ರ ಶಾಸನವು ವಿವರಿಸುತ್ತದೆ.

ಏಕ:೧೧:ಜಿಗಳೂರು:ಶಾಸಂ:೨೯: ಅಯ್ಯಪ್ಪದೇವನು ಮುಷ್ಟುಪುರದಲ್ಲಿ ಕಟ್ಟಿಸಿದ ದೇವಾಲಯವನ್ನು ಕುರಿತು ಹೇಳುವ ಕ್ರಿಸ್ತಶಕ ೯೩೩ರ ಶಾಸನದಲ್ಲಿ, ದೇವಾಲಯದ ರಚನೆಯನ್ನು ಕುರಿತು ವಿವರಿಸುತ್ತದೆ. ಅದರಲ್ಲಿ ಕಂಡಪೀಠ ಪಾಣಿವಟ್ಟ ಸಹಿತವಾಗಿ ಈ ದೇವಾಲಯವನ್ನು ಕಟ್ಟಿಸಲಾಗಿದೆ ಎಂದಿದೆ. ಇಲ್ಲಿ ನೊಳಂಬರ ಅರಸರು ದೇವಾಲಯಗಳನ್ನು ನಿರ್ಮಾಣ ಮಾಡುವುದರ ಜೊತೆಗೆ ನೊಳಂಬರ ಅರಸರಿಂದ

ಪ್ರಭಾವದಿಂದ ಅವರ ದಂಡನಾಯಕರು ದೇವಾಲಯವನ್ನು ನಿರ್ಮಾಣ ಮಾಡಿಸಿರುವುದರ ಬಗೆಗೆ ಹಲವು ಶಾಸನಗಳು ವಿವರಿಸುತ್ತದೆ.

ಎಕ:೧೦:ಮುಳುಬಾಗಿಲು:ಶಾಸಂ:೫೯: ಕ್ರಿಸ್ತಶಕ ೯೫೦ರ ಶಾಸನವು ಅವನಿಯಲ್ಲಿ ಏಕವಾಕ್ಯ ಇರಿವನೊಳಂಬನ ಆಳ್ವಿಕೆಯಲ್ಲಿ ಬಸವಯನಂಕ ಭಟ್ಟನು ಮಾನಸ್ತಂಭವನ್ನು ಮಾಡಿಸಿದಂತೆ ಹೇಳಿದೆ.

ಎಕ:೧೦:ಮುಳುಬಾಗಲು:ಶಾಸಂ:೩೮: ಕ್ರಿಸ್ತಶಕ ೯೮೨ರ ಶಾಸನವೊಂದು ಬೆಳಕು ಚೆಲ್ಲುತ್ತದೆ. ಅದು 'ಇಮ್ಮಡಿ ಪೊಳಲ್ಚೋರನ ಪತ್ನಿ ದೀವಬ್ಬರಸಿಯು ಗತಿಸಿದ ತನ್ನ ಪತಿಯ ಹೆಸರಿನಲ್ಲಿ ಒಂದು ಕೊಳವನ್ನೂ, ತನ್ನ ಹೆಸರಿನಲ್ಲಿ ಒಂದು ಕೆರೆಯನ್ನೂ ಹಾಗೂ ಶಿವ ಮತ್ತು ವಿಷ್ಣುದೇವಾಲಯಗಳನ್ನೂ ನಿರ್ಮಾಣ ಮಾಡಿಸಿ'ರುವದನ್ನು ತಿಳಿಸುತ್ತದೆ.

ಎಕ:೧೦:ಮುಳುಬಾಗಿಲು:ಶಾಸಂ:೫೦: ಇಮ್ಮಡಿ ಪೊಳಲ್ಚೋರನ ಪತ್ನಿ ದೀವಬ್ಬರಸಿಯು ಕಟ್ಟಿಸಿದ ಕೆರೆಯು ಪೊಜಿರಮಂಗಲದಲ್ಲಿ ಇತ್ತು. ಅವನಿಯಲ್ಲಿ ಕಟ್ಟಿಸಿದ ವಿಷ್ಣುಗೃಹವನ್ನು ನೊಳಂಬನಾರಾಯಣೇಶ್ವರನೆಂದು ಕರೆಯಲಾಗುತ್ತಿತ್ತು. ಈ ಮೇಲೆ ವಿವರಿಸಿದ ದೇವಾಲಯಗಳಾದ ವಿಷ್ಣು ಮತ್ತು ಶಿವ ದೇವಾಲಯಗಳನ್ನು ರಾಣಿ ದೀವಬ್ಬರಸಿಯೇ ನಿರ್ಮಾಣ ಮಾಡಿಸಿರುವುದನ್ನು ಮೂಳಬಾಗಿಲಿನ ಶಾಸನವು ಸ್ಪಷ್ಟಪಡಿಸುತ್ತದೆ.

ಎಕ:೭:ಹೊಳೆನರಸಿಪುರ:ಶಾಸಂ:೧೧೯: ಕ್ರಿಸ್ತಶಕ ೯೯೪ರ ನೇರಲಗುಂಡಿಯ ಶಾಸನವೊಂದರಲ್ಲಿ, ತ್ರೈಳೋಕ್ಯಮಲ್ಲ ನೊಳಂಬಪಲ್ಲವ ಪೆರ್ಮಾನಡಿದೇವನ ಕಾಲದಲ್ಲಿ ಹಯನೇರಲಗುಂಡಿಯ ಹಿಟ್ಟಮಯ್ಯನು ಮಲ್ಲಿಕಾರ್ಜುನ ದೇವಾಲಯವನ್ನು ನಿರ್ಮಾಣ ಮಾಡಿರುವುದನ್ನು ವಿವರಿಸುತ್ತದೆ.

ಎಕ:೧೦:ಚಿಂತಾಮಣಿ:ಶಾಸಂ:೪೯: ಕ್ರಿಸ್ತಶಕ ೯೫೧ರ 'ಕುರುಬೂರಿನ ಶಾಸನವೊಂದು ಭೀಮಯ್ಯ ಎಂಬುವನು ಭೀಮೇಶ್ವರ ದೇವಾಲಯವನ್ನು ದೇವಭೋಗಕ್ಕೆಂದು ಖಂಡುಗ ಗದ್ದೆಯನ್ನು ಆ ದೇವಾಲಯಕ್ಕೆ ಬಿಟ್ಟರು'ವುದನ್ನು ಉಲ್ಲೇಖಿಸಿರುವುದು ಕಂಡುಬರುತ್ತದೆ.

ಎಕ:೧೧:ಜಗಳೂರು:ಶಾಸಂ:೧೦: ಕ್ರಿಸ್ತಶಕ ೧೦೫೪ರ ನಂದಿಬೇವೂರಿನ ಶಾಸನವೊಂದರಲ್ಲಿ ಘಟ್ಟಿಯರಸನ ಕಾಲದಲ್ಲಿ ಬಸದಿಯನ್ನು ನಿರ್ಮಿಸಿರುವದರ ಬಗೆಗೆ ಉಲ್ಲೇಖವಾಗಿದೆ.

ಎಸ್ಐಐ:೬:ಶಾ.ಸಂ:೫೫೮: ಕ್ರಿಸ್ತಶಕ ೧೨೦೫ರ ಒಂದು ಶಾಸನವು ಹೆಂಜೇರಿನ ನೊಳಂಬೇಶ್ವರ ಘಟಿಕಾಸ್ಥಾನದಲ್ಲಿ ಘಟಿಕಾಸಾಹಸಿಯಾಗಿ ಹೆಸರುವಾಸಿಯಾಗಿದ್ದ 'ನರಸಿಂಹದೇವ ಘಳಿಸ' ಎಂದು ತಿಳಿಸುತ್ತದೆ. ಇಂತಹ ಘಟಿಕಾಸ್ಥಾನದಲ್ಲಿದ್ದ ವಿದ್ವಾಂಸರನ್ನು ಘಳಿಸ, ಘಳಿಸಾಸ, ಘಟಿಕಾಸಾಹಸಿ, ಘಳಿಯಸಾಸಿ ಎಂದು ಮೊದಲಾಗಿ ಸೂಚಿಸಿರುವುದು ಕಂಡುಬರುತ್ತದೆ.

ಎಸ್ಐಐ:೬:ಶಾಸಂ:೫೫೭: ಶ್ರೀನೊಣಂಬೇಶ್ವರ ದೇವರ ಸನ್ನಿಧಾನದಲ್ಲಿ ಆಚಾರ್ಯ ರಾಜಗುರುಗಳಾಗಿದ್ದ ಅನನ್ತ ಶಿವದೇವರಿಗೆ ಮತ್ತು ಶ್ರೀನೊಣಂಬೇಶ್ವರಸ್ಥಾನದಲ್ಲಿ ಸತ್ರವನ್ನು ನಡೆಸುವಂತೆ ಹೇಳಿದ ಉಲ್ಲೇಖವಿದೆ. ಇದು ನೊಳಂಬರ ಪ್ರಾರಂಭದ ರಾಜಧಾನಿಯಾದ ಹೆಂಜೇರುಪಟ್ಟಣ ದೊಡ್ಡಪ್ಪ ದೇವಸ್ಥಾನದ ಮೂರನೆಯ ಕಂಬದಲ್ಲಿದೆ.

ಎಸ್ಐಐ:೬:ಶಾಸಂ:೫೫೮: ಹೆಂಜೇರುಪಟ್ಟಣ ದೊಡ್ಡಪ್ಪ ದೇವಸ್ಥಾನದ ಕಂಬದಲ್ಲಿನ ಶಾಸನವೊಂದು 'ಡಣ್ಣಾಯಕರು ಸೀರೆ ನಾಡೊಳಗಣ ಹೆಂಜೇರು ಪಟ್ಟಣದ ಮಹಾಘಟಿಕಾಸ್ಥಾನ ಶ್ರೀನೊಣಂಬೇಶ್ವರ ದೇವರ ಅಂಗಭೋಗಕ್ಕೆ ನಂದಾದೀವಿಗೆಗೆ, ತ್ರಿಕಾಲ ನೈವೇದ್ಯಕ್ಕೆ, ಖಂಡಸ್ಫುಟಿತ ಜೀರ್ಣ್ಣೋದ್ಧಾರಕ್ಕೆ ಸದಾಕಾಲ ಹನ್ನೆರಡು ಮನುಷ್ಯ ಬ್ರಾಹ್ಮಣರಿಗೂ ಬ್ರಹ್ಮನೆರಡು ಮನುಷ್ಯ ತಪೋಧನರು। ನಾಲ್ವರು ಘಳಿಯಾರದವರು, ಇಬ್ಬರು ಪೂಜಾರಿಗಳು ಅನ್ತು ನಿತ್ಯ ಮೂವತ್ತು ಮನುಷ್ಯರ ಆಹಾರದಾನವನ್ನು ನಡೆಸುವಂತೆ ಶಕ ನೃಪ ಕಾಲದ ೧೧೨೭ನೆಯ ಕ್ರೋಧನ ಸಂವತ್ಸರದ ಪಾಲ್ಗುಣ ಅಮವಾಸ್ಯೆ ಆದಿತ್ಯವಾರ ಸೂರ್ಯಗ್ರಹಣದಂದು ಶ್ರೀನೊಣಂಬೇಶ್ವರದೇವರ ಆಸ್ಥಾನನದ ಆಚಾರ್ಯ್ಯರಪ್ಪ ಚಿಲುಕಜೀಯರ ಮಗ ಸೋಮಜೀಯರ ಮಗ ಪೋತಜೀಯರಿಗೂ ಜ್ಞಾನಭೂಷಣ ನಾಗರಾಸಿಪಂಡಿತರ ತಮ್ಮ ನೊಣಂಬ ಜೀಯಂ। ಆ ನಾಗರಾಸಿ ಪಂಡಿತರ ಮಗ ಅನಂತ ಶಿವರಿಗಂ

। ಎರಡು ಮೊದಲಾಗಿ ಕಾಲಂ ಕಚ್ಚಿ ಕೊರೆಹೆಯ ಚತುಸ್ಸೀಮೆ ಸಹಿತ ಸರ್ವಬಾಧಾ ಪರಿಹಾರಂ ಸರ್ವ್ವನಮಶ್ಯವಾಗಿ ಧಾರಾಪೂರ್ವ್ವಕಂ ಮಾಡಿ ಶ್ರೀನೊಣಂಬೇಶ್ವರದೇವರಿಗೆ ಕೊಟ್ಟರು। ಬೀದಿವಡೆಂಗದೇವರಿಗೆ ನೊಣಂಬೇಶ್ವರದೇವರಿಗೆ ಮತ್ತು ನಾಗೇಶ್ವರದೇವರಿಗೆ ಭೂದಾನ' ಮಾಡಿದ ಬಗ್ಗೆ ಬೆಳಕು ಚೆಲ್ಲುತ್ತದೆ.

ಎಸ್‌ಐಐ: ೯(೧): ೨೬೪: ಕ್ರಿಸ್ತಶಕ ೧೧೫೪: ಹಲ್ಯಂ, ಕೂಡ್ಲಿಗಿ: ನೊಳಂಬವಾಡಿಯ ಪ್ರಮುಖ ಆಡಳಿತ ವಿಭಾಗವಾಗಿದ್ದ ಬಲ್ಲಕುಂದೆ-೩೦೦ ಎಂಬುದು ಬಳ್ಳಾರಿ ಜಿಲ್ಲೆ ಸಿರಗುಪ್ಪ ತಾಲೂಕಿನ ಬಲಕುಂದಿ ಗ್ರಾಮವು ಈ ವಿಭಾಗದ ಮುಖ್ಯಪಟ್ಟಣವಾಗಿದೆ. ಮೂರುನೂರು ಹಳ್ಳಿಗಳ ಆಡಳಿತ ವಿಭಾಗವಾಗಿ ರೂಪುಗೊಂಡ ಬಲ್ಲಕುಂದೆನಾಡು ಶಾಸನಗಳಲ್ಲಿ ಬಲ್ಲಕುನ್ದ ವಿಷಯ, ಬಲ್ಲಕುಂದೆ ಮೂನೂಱು ಮತ್ತು ಬಲ್ಲಕುಂದೆನಾಡು ಎಂದು ಕಾಣಿಸಿಕೊಂಡಿದೆ.

ಎಸ್‌ಐಐ:೯:೧:ಶಾಸಂ:೯: ನೊಳಂಬರ ಆಡಳಿತದ ವ್ಯಾಪ್ತಿ ನಾಡಗೌಡನಾಗಿದ್ದ ಕೀರ್ತಿಗಾಮುಂಡನ ಮಗನಿಗೆ ಪಟ್ಟವನ್ನು ಕಟ್ಟಿ ಪುಲಿನಾಟ್ಟಿ ಕೆರೆಯ ಬೆಳಗಟೂರನ್ನು ದಾನವಾಗಿ ನೀಡಿದ್ದನ್ನು ಕರ್ಷನಪಲ್ಲೆ ಶಾಸನವು ತಿಳಿಸುತ್ತದೆ.

ಎಸ್‌ಐಐ:೯(೧):೧೨೬:ಉಚ್ಚಂಗಿ, ಹರಪನಹಳ್ಳಿ: ಕ್ರಿಸ್ತಶಕ ೧೦೬೪ರ ಉಚ್ಚಂಗಿ ಶಾಸನ ಅಲ್ಲಿಯ 'ಪರ್ವತವು ಕದಂಬಳಿಗೆನಾಡ ಮಧ್ಯದ ಮೇರು'ವಿನಂತಿದ್ದಿತೆಂದು, ಆ ಪರ್ವತಕ್ಕೆ ಒಂದೊಂದು ಯುಗದಲ್ಲಿ ಒಂದೊಂದು ಹೆಸರಿದ್ದಿತೆಂದು ಹೇಳಿದೆ. ಇದು ನೊಳಂಬರ ೩೨೦೦೦ ನಾಡೊಳಗಣ ಪ್ರದೇಶವಾಗಿದೆ.

ಎಸ್‌ಐಐ: ೧೦(೧): ೧೧೮: ೧೧೫೭ ಹಿರೇಹಡಗಲಿ; ಎಸ್‌ಐಐ :೧೦(೧): ೧೪೧: ೧೧೭೯ ಜನವರಿ ೨೦, ನೀಲ್ಗುಂದ; ಎಸ್‌ಐಐ: ೧೦(೧): ೧೮೪: ೧೧೧೧ ಜುಲೈ ೧೨, ಹನಸಿ; ಎಸ್‌ಐಐ: ೧೦(೧): ೧೬೩: ೧೧೯೩ ಸಪ್ಟಂಬರ ೨೩, ಹೊಳಗುಂದಿ, ಹೂವಿನಹಡಗಲಿ; ಎಸ್‌ಐಐ: ೧೦(೧):೧೫೩: ಕ್ರಿಸ್ತಶಕ ೧೦೮೩ ಅಂಬಳಿ, ಕೂಡ್ಲಿಗಿ: ನೊಳಂಬವಾಡಿ-೩೨೦೦೦ದೊಳಗಿನ ಪ್ರಮುಖ ಆಡಳಿತ ವಿಭಾಗವಾದ ಕೋಗಳಿ-೫೦೦ ಕುರಿತು ಅಣಜಿಗೆರೆ ಶಾಸನ "ಸಾವಿರನಾಡದಲ್ಲಿ ಉಚ್ಚಂಗಿ ಮೂವತ್ತಜೊಳು

ಕೂಚಿಗೊಳ"ವನ್ನು ಹೇಳಿದೆ. ಐದುನೂರು ಗ್ರಾಮಗಳ ಆಡಳಿತ ವಿಭಾಗವಾದ ಇದರ ಮುಖ್ಯಪಟ್ಟಣ ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ಕೋಗಳಿಯಾಗಿದೆ. ಈ ವಿಭಾಗದ ಉತ್ತರ ಮತ್ತು ಪಶ್ಚಿಮಕ್ಕೆ ತುಂಗಭದ್ರ ನದಿ, ಪೂರ್ವಕ್ಕೆ ಬಲ್ಲಕುಂದೆ-೩೦೦, ದಕ್ಷಿಣದಲ್ಲಿ ಆಗ್ನೇಯಕ್ಕೆ ಜಗಳೂರು-೭೦, ದಕ್ಷಿಣಕ್ಕೆ ಬೆಳ್ಳೂತ್ತುರು-೧೨ ಬಾಹ್ಯ ಮೇರೆಗಳಾಗಿವೆ. ಜೊತೆಗೆ ಹಿರೆಹಡಗಲಿ, ನೀಲಗುಂದ, ಹನಸಿ, ಚಿಕ್ಕಪುಣಿಸೆ, ಪೊಳಲ್ಗುಂದ, ಮೋರಿಂಗೆರೆ, ಮುತ್ತಲಿಗಿ, ಅಂಬಳಿ ಗ್ರಾಮಗಳು ಈ ವಿಭಾಗದಲ್ಲಿದ್ದುದು ಅಲ್ಲಿಯ ಶಾಸನಗಳಿಂದ ತಿಳಿಸುತ್ತವೆ.

ಎಸ್ಐಐ: ೯(೧):೨೨೪:೧೧೩೦ ಸಿಂದವಾಳ: ಸಿಂದವಾಡಿ-೧೦೦೦ ಇದು ನೊಳಂಬವಾಡಿಯ ಪ್ರಮುಖ ಆಡಳಿತ ವಿಭಾಗ. ಸಿಂದವಂಶದ ಅರಸರು ಈ ಪ್ರದೇಶವನ್ನು ಆಳುತ್ತಿದ್ದರು. ತೆಲುಗು ಶಾಸನಗಳು ಇವರನ್ನು 'ಚಿನ್ದ'ರೆಂದು ಕರೆದಿವೆ. ಅಲ್ಲದೆ ಚಿನ್ದವಾಡಿ ಹೆಸರಿನ ಆಡಳಿತ ವಿಭಾಗವೂ ಇಲ್ಲಿ ಕಾಣಸಿಗುತ್ತದೆ. ಬಳ್ಳಾರಿ ತಾಲೂಕಿನ ಹಗರಿನದಿ ದಂಡೆಯ ಮೇಲೆ ಸಿಂದವಾಳ ಹೆಸರಿನ ಗ್ರಾಮವಿದೆ. ಅದು ಸಿಂದವಾಡಿಗೆ ಸೇರಿತ್ತೆಂದು ಶಾಸನಗಳು ಸ್ಪಷ್ಟವಾಗಿ ಹೇಳಿವೆ.

ಎಸ್ಐಐ: ೯:೧:ಶಾಸಂ:೨೪: ಕ್ರಿಸ್ತಶಕ ೯೩೬ರ ನೊಳಂಬರ ಈ ಶಾಸನದಲ್ಲಿ ಗುಣಿಮೊರುಬಾಗಲಿನ ಒಂದು ಶಾಸನವು ಊರ ಮಹಾಜನರು ವರುಣಶಿವಬಟಾರರು ಸೇರಿ 'ಕೆಱೆಗೆ ಬಿತ್ತುವಟವ' ಕೊಟ್ಟಿರುವುದನ್ನು ಹೇಳುತ್ತದೆ. ಕೆರೆಗಳನ್ನು ಕಟ್ಟಿಸಿ ಅಥವಾ ನಿರ್ಮಿಸಿ ಅಷ್ಟಕ್ಕೆ ಬಿಟ್ಟುಬಿಡುವುದಲ್ಲ ಅದರ ಸ್ವಚ್ಛತೆಯನ್ನು ನೋಡಿಕೊಳ್ಳುವುದಕ್ಕೆ ಅನೇಕ ಚಟುವಟಿಕೆಗಳನ್ನು ಮಾಡುವುದು ಕಂಡುಬರುತ್ತದೆ.

ಎಸ್ಐಐ:೯(೧):ಶಾಸಂ:೨೬: ಕ್ರಿಸ್ತಶಕ ೯೫೦ರ ಮಡಕಸಿರಾದ ಶಾಸನವು 'ಮಲ್ಲಣ ಸಿವರಿಯೊಳೆ ಒಳಗಱಿಯ ಕಟ್ಟಡಕ್ಕೆ ನಾಲ್ಕೂರು ಮಿಟ್ಟು ಕಾಡಿಯಣ್ಣ, ಪಳ್ಳಿಕಾರ ತುವಣ್ಣ ಗಾವುಂಡರು ಚಿರಪಿಯ ಚಿನ್ತಕುಂಟೆಯನ್ನು ಪಡೆಯುತ್ತಾರೆ ಎಂದು ಹೇಳುತ್ತದೆ.

ಎಸ್ಐಐ:೯:ಶಾಸಂ:೩೭:ಕ್ರಿಸ್ತಶಕ:೯೪೨: 'ನನ್ನೇಶ್ವರದೇವರಿಗೆ ಪಿರಿಯ ಬಾಣಗೆರೆಯನ್ನು ನೊಳಂಬ ದಿಲೀಪರಸನು ದಾನ' ಮಾಡಿರುವುದು.

ಎಸ್‌ಐಐ:೯:(೧):ಶಾಸಂ:೯೬: ಕ್ರಿಸ್ತಶಕ ಸುಮಾರು ೧೦೨೦ರ 'ಮರೋಳದ ಘಟೆಯಂಕಕಾರನ ಕಾಲದ ಶಾಸನವು, ಸತ್ಯಾಶ್ರಯನ ಮಗಳು ಘಟೆಯಂಕಕಾರನ ಪತ್ನಿ ಮಹಾದೇವಿ ಮರುವೊಳನ್ನು ಆಳುತ್ತಿದ್ದಾಗ ಅಲ್ಲಿಯ ಜಿನ ಬಸದಿಗೆ ದಾನ'ವನ್ನು ನೀಡಿರುವುದರ ಮೇಲೆ ಮಾಹಿತಿ ಒದಗಿಸುತ್ತದೆ.

ಎಸ್‌ಐಐ:೯:ಭಾಗ:೧:ಶಾ:ಸಂ:೩೯: ಕ್ರಿಸ್ತಶಕ ೯೮೦ರ 'ಕರ್ಷನಪಲ್ಲಿಯಲ್ಲಿನ ಇಮ್ಮಡಿ ಮಹೇಂದ್ರನ ಶಾಸನವು ಪುಲಿನಾಡಿನ ಕೆರೆಯ ಬೆಳಗಟ್ಟೂರನ್ನು ನೊಳಂಬ ಗಾವುಂಡನಿಗೆ ಕೊಡುಗೆ'ಯಾಗಿ ನೀಡಲಾಗಿದೆ.

ಎಸ್‌ಐಐ: ೯(೧):ಶಾಸಂ:೧೦೭: ಕ್ರಿಸ್ತಶಕ ೧೦೫೦ರ 'ನಾರಸಿಂಘದೇವನ ಶಿರಸ್ತಹಳ್ಳಿಯ ಶಾಸನವೊಂದರಲ್ಲಿ ವಿದ್ಯಾನಿಧಿ ಪಂಡಿತರ ಕಾಲನ್ನು ತೊಳೆದು ಭೂಮಿಯನ್ನು ದಾನ'ವಾಗಿ ನೀಡಿರುವ ಉಲ್ಲೇಖವಿದೆ. ಅದರಲ್ಲಿ ಮನೆ, ತೋಟ, ತೈಲಗಾರ(ಎಣ್ಣೆಗಾಣ), ಕೈಗಾಣ ಅಡಕೆ ಮರ ಮುಂತಾದ, ದಾನಗಳನ್ನು ಮಾಡಿರುವುದನ್ನು ವಿವರಿಸುತ್ತದೆ.

ಎಸ್‌ಐಐ:೯: (೧):ಶಾಸಂ:೩೩: ಅಗಳಿಯ ಕ್ರಿಸ್ತಶಕ ಸುಮಾರು ೯೫೦ರ ನೊಳಂಬಾಧಿರಾಜನ ಶಾಸನವು ಅವನ ದಂಡನಾಯಕ ಬಲ್ಲಹನ ಕೋಟಯ್ಯನು ವಿಷ್ಣುದೇವಾಲಯವನ್ನು ಕಟ್ಟಿಸಿರುವುದರ ಬಗೆಗೆ ಹೇಳುತ್ತದೆ. ಜೊತೆಗೆ ಅದರ ನಿತ್ಯ ಕರ್ಮ ಮತ್ತು ನಿರ್ವಹಣೆಗೆ ಹನ್ನೆರಡು ಖಂಡುಗ ಭೂಮಿಯನ್ನು ದಾನವಾಗಿ ನೀಡಿರುವುದರ ಮೇಲೆ ಬೆಳಕು ಚೆಲ್ಲುತ್ತದೆ.

ಎಸ್‌ಐಐ:೯:ಭಾಗ–೧:ಶಾಸಂ:೧೧೫: ಕ್ರಿಸ್ತಶಕ ೧೦೫೪ರ ಈ ಶಾಸನವು ನೊಳಂಬ ಪಲ್ಲವಪೆರ್ಮ್ಮಾನಡಿ ಮತ್ತು ಜಗದೇಕಮಲ್ಲ ನೊಳಂಬ ಬ್ರಹ್ಮಾಧಿರಾಜ, ಪಂಚಪ್ರಧಾನರು ಊರಿನ ಮಹಾಜನರು ಸೇರಿ ಬಸದಿಯನ್ನು ಮಾಡಿಸಿದ ವಿಚಾರ ವ್ಯಕ್ತವಾಗುತ್ತದೆ.

ಎಸ್‌ಐಐ:೧೮:ಶಾಸಂ:೮೯: ನರಗುಂದದ ಮೆಕ್ಕೆಗೇರಿಯಲ್ಲಿ 'ಬಾವಿ ಶಿವಾಲಯ, ಸಭಾಸದನ, ಸಿರಬಾಗಿಲು, ದೇವಗೃಹ, ಬಾದೊಬೆ, ಶತ್ರ(ಛತ್ರ)ಶಾಲೆ ದೇವಳಗಳನ್ನು' ಮಾಡಿಸಿದರೆಂದು ಒಂದು ಶಾಸನದಲ್ಲಿ ಹೇಳಿದೆ.

ಎಸ್ಐಐ:೯(೧):ಶಾಸಂ:೩೪: ಕ್ರಿಸ್ತಶಕ ೯೫೦ ಸುಮಾರಿನ ನೊಳಂಬರ ಆಳ್ವಿಕೆಯ ಕಾಲದ ಕಲ್ಲೂರಿನ ಶಾಸನದಲ್ಲಿ 'ಕಲ್ಲಳೊರ ಕೆಱೆಯ ಕೆಱೆಗಟ್ಟಿ ಬಿತ್ತಲಣ್ದೆಯಮ ಕೆಱೆಗೆ ಇಕ್ಕದನ್ದು ಎಂದು ವಿವರಿಸುತ್ತದೆ.

ಕಇ:೪: ೩೯: ೧೧೧೧, ಮೇದೂರು, ಹಿರೇಕೆರೂರು: ಈ ಶಾಸನವು ನೊಳಂಬವಾಡಿ-೩೨೦೦೦ರದೊಳಗೆ ಬರುವ ವಿಭಾಗವಾದ ಅರಕೆರೆ-೧೨ಕುರಿತು ಮೇದೂರು ಶಾಸನ "..ರೆಡೆವಟ್ಟ ೭೦ ಮನರಕೆಱೆ ಪನ್ನೆರಡುಂ" ಎಂದು ಹೇಳಿದೆ.

ಕಇ:೪: ೪೧: ೧೧-೧೨ನೆಯ ಶತಮಾನ, ಮೇದೂರು, ಹಿರೇಕೆರೂರು: ನೊಳಂಬವಾಡಿ-೩೨೦೦೦ರದೊಳಗೆ ಬರುವ ಗ್ರಾಮವಾದ ಅರಕೆರೆ ಕುರಿತು ಮೇದೂರು ಶಾಸನ "x x x x x x x x ಸಿರದೊಳಗೆ [ಅ]ರಕೆಱೆ ಪನ್ನೆರಡ"ನ್ನು ಹೇಳಿದೆ.

ಕಇ:೪:೧೩:೧೧೬೫ :ಹಳೆನಿಡನೇಗಿಲ, ಹಿರೆಕೆರೂರು: ಕಳ್ಳಿಗನೂರು-೭೦ ಮತ್ತು ಅಯ್ವತ್ತಾರುಬಾಡ ಎಂಬ ಎರಡು ವಿಭಾಗಗಳಿವೆ. ಇವೆರಡನ್ನು ಒಬ್ಬ ವ್ಯಕ್ತಿಯೇ ಆಳುತ್ತಿರಬೇಕು. ಹಳೆನಿಡ ನೇಗಿಲ ಶಾಸನ ಇದು ನೊಳಂಬವಾಡಿಯ ಉಪವಿಭಾಗವೆಂದು ಸ್ಪಷ್ಟವಾಗಿ ಹೇಳಿದೆ.

ಕಇ:೪:೧೩:೧೧೬೫ ಹಳೆನಿಡನೇಗಿಲ, ಹಿರೆಕೆರೂರು: ನೋಳಂವಾಡಿ-೩೨೦೦೦ವನ್ನು ಕುರಿತು ಹಿರೆಕೆರೂರು ಹಳೆನಿಡನೇಗಿಲ ಶಾಸನ ಅರಕೆರೆ-೧೨ ನೊಳಂಬವಾಡಿಯ ಉಪವಿಭಾಗವೆಂದು ಸ್ಪಷ್ಟವಾಗಿ ಹೇಳಿದೆ. ಇದೆ ಹಳೆನಿಡನೇಗಿಲ ಶಾಸನದಲ್ಲಿ ಶಾಸನದಲ್ಲಿ ಭ್ರಾಂತಿ-೩೦ ಆಡಳಿತ ವಿಭಾಗದ ಕುರಿತು ಉಲ್ಲೇಖವಿದೆ.

ಕಇ:೪:೪೧, ೧೧-೧೨ನೆಯ ಶತಮಾನ, ಮೇದೂರು, ಹಿರೇಕೆರೂರು: ಕುಂದೂರು-೭೦ ಹಳೆನಿಡನೇಗಿಲ ಶಾಸನ ಮತ್ತು ಮೇದೂರು ಶಾಸನಗಳಲ್ಲಿ ಇದರ ಉಲ್ಲೇಖವಿದೆ.

ಕವಿವಿಶಾಸಂ:೧:ಹಡಗಲಿ:ಶಾಸಂ:೫೭: ನೊಳಂಬ ಪಲ್ಲವರು ಕ್ರಿಸ್ತಶಕ ಸುಮಾರು ೩ನೆಯ ಶತಮಾನದಿಂದಲೇ ಕರ್ನಾಟಕದಲ್ಲಿದ್ದರು ಎಂಬುದನ್ನು ಉಲ್ಲೇಖಿಸುವ ಶಾಸನ.

ಕವಿವಿಶಾಸಂ:೪:೧೦೪:೮೩: ಆಂಧ್ರಪ್ರದೇಶದ ಮಡಕಶಿರಾ ತಾಲ್ಲೂಕಿನ ಪೆಂಜೇರು/ಹೆಂಜೇರು ಅಥವಾ ಈಗಿನ ಹೇಮಾವತಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು.

ಈ ನೊಳಂಬ ವಂಶದ ಮಹತ್ವಾಕಾಂಕ್ಷಿ ದೊರೆಯಾದ ಒಂದನೆಯ ಮಹೇಂದ್ರನು ಗಂಗವಾಡಿಯ ಕೆಲವು ಪ್ರದೇಶಗಳಿಗೂ ತಮ್ಮ ಆಡಳಿತವನ್ನು ನಡೆಸುತ್ತಿದ್ದರು. ಹೀಗಾಗಿ ಈ ಮಹೇಂದ್ರನನ್ನು ಕೆಲವು ಶಾಸನಗಳು 'ಷಣ್ಣವತಿ ಸಹಸ್ರ ಪ್ರಮುಖ ಗಂಗ ಮಂಡಳ ವಿಳಾಸಿನ್ಯೆಕವಲ್ಲಭೋ ಮಹೇಂದ್ರ'ನೆಂಬ ಬಿರುದುಗಳನ್ನು ಉಲ್ಲೇಖಿಸುತ್ತದೆ.

ಕವಿವಿಶಾಸಂ:೧(ಬಳ್ಳಾರಿ ಜಿಲ್ಲೆ) ೨೬೪: ಕ್ರಿಸ್ತಶಕ ೧೧೫೪ ಹಲ್ಯಂ, ಕೂಡ್ಲಿಗಿ: ನೊಳಂಬವಾಡಿ ೩೨೦೦೦ದೊಳಗಿನ ಪ್ರಮುಖ ಆಡಳಿತ ವಿಭಾಗವಾಗಿದ್ದ ಕೊಟ್ಟೂರು-೧೨ ಎಂಬುದು ಹಲ್ಯಂ ಶಾಸನ "ನಚಿದೇವರಸನು ಕೋಗಳಿಯಯ್ನೂಱುಮಂ ಕೊಟೂರ್ಪ್ಪನ್ನೆರಡುಮಂ" ಅಳುತ್ತಿದ್ದನೆಂದು ಹೇಳಿದೆ. ಮುಂದುವರೆದು 'ಕುಂತಳ ದೇಶದೊಳು ಮುಖಾಂಭೋರುಹದಲ್ಲಿ ನಾಸಿಕವೆನಿಪ್ಪವೊಲಿಪ್ಪ ನೊಣಂಬವಾಡಿಯೊಳು ಸಾರಮೆನಿಪ್ಪ ದ್ರಿಷ್ಟಿಯೆನೆ ಕೋಗಳಿ ಪಂಚಶತಂ ತಾನೆ ಕೋಟೂರೆಸೆದಿರ್ಪ್ಪು ದಿಂದ್ರನಮರಾವತಿ ಯನ್ತೆವೊಲೆ ನ್ತುನೋರ್ಪ್ಪಡಂ' ಎಂದು ತಿಳಿಸುತ್ತದೆ.

ಕವಿವಿಶಾಸಂ:೧:೧:ಕ್ರಿಸ್ತಶಕ ೧೮೯೯, ಕುರುವತ್ತಿ, ಹಡಗಲಿ; ಕವಿವಿಶಾಸಂ: ೧: ೮: ಕ್ರಿಸ್ತಶಕ ೧೨೦೮, ಕುರುವತ್ತಿ; ಕವಿವಿಶಾಸಂ:೧:೪೨:೧೨೬೩ ಹ್ಯಾರಡ, ಹಡಗಲಿ; ಕವಿವಿಶಾಸಂ: ೧: ೪೭: ಕ್ರಿಸ್ತಶಕ ೧೦೨೫, ಕತ್ತೆಬೆನ್ನೂರು, ಹಡಗಲಿ: ಈ ಶಾಸನಗಳು ನೊಳಂಬವಾಡಿ-೩೨೦೦೦ರದೊಳಗಿನ ಪ್ರಮುಖ ಆಡಳಿತ ವಿಭಾಗವಾಗಿದ್ದ, ಬೆಣ್ಣೆವೂರು-೧೨ ಎಂಬುದನ್ನು ಕುರುವತ್ತಿ ಶಾಸನ "ಬೆಣ್ಣೆವೂರ್ಪ್ಪನ್ನೆರಡುಮಂ ಸುಖದಿನಾಳುತ್ತಮಿರೆ ಆ ನಾಡೊಳಗ್ರಹಾರಂ... ಕುಱುವರ್ತ್ತಿ" ಎಂದು ಹೇಳಿದೆ. ಇಲ್ಲಿಯ ಮತ್ತೊಂದು ಶಾಸನ "ಬೆಂಣೆಯೂರ ೧೨"ನ್ನು ಹೇಳಿದೆ. ಅಲ್ಲದೆ "ಬೆಂಣೆವೂರು ಹಂನೆರಡ..... ಹೆರಡ"ದ ಉಲ್ಲೇಖ ಅಲ್ಲಿಯ ಶಾಸನದಲ್ಲಿದೆ. ಮಾವನಗಂಧವಾರಣ ಬಿರುದಿನ "ಮಧುವರ್ಮದೇವರು ಬೆಣ್ಣೆವುರ ಪನ್ನೆ[ರಡು]" ವಿಭಾಗವನ್ನು ಆಳುತ್ತಿದ್ದನು. ಹಡಗಲಿ ತಾಲೂಕಿನ ಕತ್ತೆಬೆನ್ನೂರು ಇದರ ಮುಖ್ಯಪಟ್ಟಣವಾಗಿದೆ. ಈ ತಾಲೂಕಿನ ಕುರುವತ್ತಿಯು ಇದರಲ್ಲಿ ಸೇರಿತ್ತು ಎಂಬುದರ ಬಗೆಗೆ ಬೆಳಕುಚೆಲ್ಲುತ್ತವೆ.

ಕವಿವಿಶಾಸಂ:೧:೪೧: ೧೦೫೨-೫೩,ತಳಕಲ್ಲು, ಹಗರಿಬೊಮ್ಮನಹಳ್ಳಿ: ಈ ಶಾಸನವು ನೊಳಂಬಾಡಿ-೩೨೦೦೦ ದರ ಆಡಳಿತ ವಿಭಾಗವಾಗಿದ್ದ ಮೊಸಳೆಮಡು-೧೨ ತಳಕಲ್ಲು ಶಾಸನ ಕೋಗಳಿ-೫೦೦ರಲ್ಲಿಯ ಕಂಪಣ "ಮೊಸವದು ಪನ್ನೆರಡಱ ಬಱಿಯ ಬಸಿಕೋಡ" ಗ್ರಾಮವನ್ನು ಹೇಳಿದೆ. ಇದರ ಮುಖ್ಯಸ್ಥಳ ಹಡಗಲಿ ತಾಲೂಕಿನ ಮಸಲವಾಡ ಗ್ರಾಮವಾಗಿದೆ. ಜೊತೆಗೆ ಈ ಶಾಸನವು ನೊಳಂಬಾಡಿ-೩೨೦೦೦ರದರ ಆಡಳಿತ ವಿಭಾಗವಾಗಿದ್ದ, ಸೋಗೆ-೧೨ ತಳಕಲ್ಲು ಶಾಸನವು ಸಿಂದವಂಶದ ಮಹಾಸಾಮಂತ ಬರ್ಮದೇವರಸನು "ಕೋಗಳಿ ಅಯ್ನೂಱರ ಕಂಪಣ ಸೋಗೆ ಪನ್ನೆರಡರ ಬಱಿಯಗ್ರಹಾರಂ ತೊಣಕಲಿಯುಮಂ" ಆಳುತ್ತಿದ್ದನೆಂದು ಹೇಳಿದೆ. ಹಡಗಲಿ ತಾಲೂಕಿನ ಸೋಗಿ ಇದರ ಮುಖ್ಯಸ್ಥಳವಾಗಿದ್ದರೆ ಹಗರಿಬೊಮ್ಮನಹಳ್ಳಿ ತಾಲೂಕಿನ ತಳಕಲ್ಲು ಪ್ರಾಚೀನ ತೊಣಕಲಿ ಗ್ರಾಮವಾಗಿದೆ.

ಕವಿವಿಶಾಸಂ:೧:೧೩೫:ಕ್ರಿಸ್ತಶಕ ೧೦೭೧:ಹೂವಿನಹಡಗಲಿ:ಹಾಲ್ವೊಳ-೧೨: ಹನ್ನೆರಡು ಗ್ರಾಮಗಳನ್ನೊಳಗೊಂಡ ನೊಳಂಬವಾಡಿ-೩೨೦೦೦ದರ ವಿಭಾಗದ ಉಲ್ಲೇಖ ಹೂವಿನಹಡಗಲಿ ಶಾಸನದಲ್ಲಿದೆ. ಅಲ್ಲಿ "ಕೋಗಳಿ ಅಯ್ನೂಱರ ಬಳಿಯ ಕಂಪಣಂ ಹಾಲ್ವೊಳಂ ಪನ್ನೆರಡಱೊಳಗಣ ಕೊಟಿಗನೂರಂ" ಎಂದಿದೆ. ಇದು ಹಡಗಲಿ ತಾಲೂಕಿನ ಹಾರ್ವಾಳ(ಅರವಾಳ) ಗ್ರಾಮವಾಗಿದೆ.

ಕವಿವಿಶಾಸಂ:೧:೪೧:ಕ್ರಿಸ್ತಶಕ:೧೦೫೨-೫೩:ತಳಕಲ್ಲು, ಹಗರಿಬೊಮ್ಮನಹಳ್ಳಿ: ಈ ಶಾಸನವು ನೊಳಂಬವಾಡಿ-೩೨೦೦೦ದರ ಆಡಳಿತ ವಿಭಾಗ ಹುಲುಮಯಿ-೧೨ ಎಂಬುದು ತಳಕಲ್ಲು ಶಾಸನ ಕೋಗಳಿ-೫೦೦ರ ಕಂಪಣ "ಹುಲುಮಯಿ ಪಂನೆರಡಱ ಬಳಿಯ ನಿಟ್ಟೂರಮುಮಂ" ಸಿಂದರಸ ಬರ್ಮದೇವನು ಆಳುತ್ತಿದ್ದನೆಂದು ಹೇಳಿದೆ. ಹರಪನಹಳ್ಳಿ ತಾಲೂಕಿನ ಹಲುವಾಗಿಲು ಇದರ ಮುಖ್ಯಸ್ಥಳವಾಗಿದೆ. ಅಲ್ಲದೆ ಈ ತಾಲೂಕಿನ ನಿಟ್ಟೂರು ಇದರಲ್ಲಿ ಸೇರಿತ್ತು ಎಂಬುದರ ಉಲ್ಲೇಖ ಈ ಶಾಸನದಲ್ಲಿದೆ.

ಕವಿವಿಶಾಸಂ:೧:೨೦:೧೫೨೩:ಕುರಿಕುಪ್ಪೆ, ಸೊಂಡೂರು: ನೊಳಂಬವಾಡಿಯ ಅಗ್ರಹಾರವಾಗಿ ಕಂಡುಬರುವ ಸ್ವಾಮಿ ಆರುಂಬಾಡ ಎಂಬುದು ಕುರಿಕುಪ್ಪೆ ಶಾಸನ ಮಂಡಳೇಶ್ವರ ಪೆರ್ಮಾಡಿ ಕಲಿದೇವರಸನ ಅಧಿಕಾರಿ ಲಕ್ಕಯ್ಯನು ಬಲಕುಂದೆ, ದೊರವಡಿ

ಮತ್ತು ಸ್ವಾಮಿ ಆರುಂಬಾಡಗಳನ್ನು ಕುರುಗೋಡಿನಿಂದ ಆಳುತ್ತಿದ್ದನೆಂದು ಹೇಳಿದೆ. ಕುರಿಕುಪ್ಪೆ ಅದರಲ್ಲಿ ಒಂದು ಅಗ್ರಹಾರವಾಗಿತ್ತು.

ಕವಿವಿಶಾ: ೧: ೬: ೯೯೬: ಕುಡತಿನಿ: ಬಳ್ಳಾರಿ: ಸಬಾಲ ...ಎಪ್ಪತ್ತು ಇದು ಬಲ್ಲಕುಂದೆನಾಡಿನ ಮತ್ತೊಂದು ಉಪವಿಭಾಗ. ಕುಡತಿನಿ ಶಾಸನ "'ಕೊಟ್ಟೆ[ತ್ತೊಣೆಯ] ಸ್ಥಾನದಯ್ದು ವರ್ಗದ ಸಬಾಲ xxx ಳ್ಪತ್ತರ ಗಾ xx ಸನ್ನಿಧಾನದೊಳ್" ದಾನ ಬಿಟ್ಟುದನ್ನು ಹೇಳಿದೆ. ಕುಡತಿನಿಯ ಶಾಸನಗಳಲ್ಲಿ ಇದರ ಉಲ್ಲೇಖವಿಲ್ಲ.

ಕವಿವಿಶಾ: ೧: ೪೪: ೧೦೩೬: ಔರುವಾಯಿ; ಕವಿವಿಶಾ: ೨: ೧: ಕ್ರಿಸ್ತಶಕ ೧೧೮೭: ವಿಪ್ರ, ಗಂಗಾವತಿ: ನೊಳಂಬವಾಡಿ-೩೨೦೦೦ದ ವ್ಯಾಪ್ತಿಗೆ ಬರುವ ನಲ್ವಿಡಿ-೧೨ ಬಳ್ಳಾರಿ ತಾಲೂಕಿನ ನೆಲ್ಲುಡಿ ಗ್ರಾಮ ಇದರ ಮುಖ್ಯಪಟ್ಟಣವಾಗಿದೆ. ಓರುವಾಯಿ ಶಾಸನದಲ್ಲಿ "ನಲ್ವಡಿ-೧೨ಱ ಕಂಪಣಂ ಒರ್ವಾಯ"ವನ್ನು ಹೇಳಿದೆ. ವಿಪ್ರ ಶಾಸನ "ಬಲ್ಲಕುಂದೆ ಮುನೂಱಱ ಕಂಪಣಂ ನಿಲ್ವಿಡಿ ಪನ್ನೆರಡಱ ಬಳಿಯ ಬಾಡ ಇಕುಪಱಯ" ಗ್ರಾಮವನ್ನು ಕಂಪಿಲೆಯ ಗವರೇಶ್ವರದ ಸಿದ್ಧೇಶ್ವರದೇವರಿಗೆ ನೀಡಿದರೆಂದು ಹೇಳಿದೆ. ಇಲ್ಲಿಯ ಇಕುಪಳಯ ಗ್ರಾಮವು ಈಗಿನ ವಿಪ್ರವೇ ಆಗಿರಬೇಕು. ತುಂಗಭದ್ರಾ ನದಿಯ ಉತ್ತರದ ದಂಡೆಯ ಮೇಲಿರುವ ಗಂಗಾವತಿ ತಾಲೂಕಿನ ವಿಪ್ರ ಗ್ರಾಮವು ನಲ್ವಿಡಿ-೧೨ಕ್ಕೆ ಸೇರಿದೆ. ಓರುವಾಯಿಯ ಶಾಸನಗಳಲ್ಲಿ ಕೆಲವು ಹಳ್ಳಿಗಳು ಕಾಣಿಸಿಕೊಳ್ಳುತ್ತವೆ.

ಕವಿವಿಶಾಸಂ:೧:೪:ಕ್ರಿಸ್ತಶಕ ೧೦ನೆಯ ಶತಮಾನ: ಕೋಳೂರು ಬಳ್ಳಾರಿ: ನೊಳಂಬವಾಡಿ-೩೨೦೦೦ದ ವ್ಯಾಪ್ತಿಗೆ ಬರುವ ಬಳ್ಳಾರೆ-೩೦ ಎಂಬುದು ಕೋಳೂರು ಶಾಸನದಲ್ಲಿ ಈ ವಿಭಾಗದ ಉಲ್ಲೇಖವಿದೆ. ನೊಳಂಬಪಲ್ಲವ "ಮಂಗಪರಸನು ಬಳ್ಳಾರೆ ಮುವತ್ತಱ ಪೊಲೆಯ"ರಿಗೆ ದಾನ ಬಿಟ್ಟಿದ್ದಾನೆ. ಬಳ್ಳಾರಿ ಯನ್ನೊಳಗೊಂಡು ಅದರ ಸುತ್ತ ಮುತ್ತಲಿರುವ ಸಿರಿವಾರ, ಕಪ್ಪಗಲ್ಲು, ಕೋಳೂರು, ಕೊಳಗಲ್ಲುಗಳು ಇದರಲ್ಲಿ ಸೇರಿರಬೇಕು.

ಕವಿವಿಶಾಸಂ:೧:ಕ್ರಿಸ್ತಶಕ ೧೯೨:ಸಿರುಗುಪ್ಪ: ತೆಕ್ಕೆಕಲ್ಲು-೧೨; ಕವಿವಿಶಾಸಂ: ೭ ಮತ್ತು ೪: ಕ್ರಿಸ್ತಶಕ ೧೦೬೩: ಸಾಲಗುಂದಿ, ನೊಳಂಬವಾಡಿ-೩೨೦೦೦ದ ವ್ಯಾಪ್ತಿಗೆ ಬರುವ

ಸಿಂಧನೂರು ಎಂಬುದು ಸಿರುಗುಪ್ಪ ತಾಲೂಕಿನ ತೆಕ್ಕಲಕೋಟೆ ಇದರ ಮುಖ್ಯಪಟ್ಟಣವಾಗಿದೆ. ಸಿರುಗುಪ್ಪ ಮತ್ತು ಸಾಲಗುಂದೆ ಶಾಸನಗಳಲ್ಲಿ ಈ ವಿಭಾಗದ ಉಲ್ಲೇಖವಿದೆ.

ಕವಿವಿಶಾಸಂ:೧:ಹರಪನಹಳ್ಳಿ:೯೭:೧೩೬: ಕ್ರಿಸ್ತಶಕ ೧೦೧೮ರ ಬಾಗುಳಿಯ ಶಾಸನವು ನಾರಣೋಝರ ಕೆರೆ ಮತ್ತು ಶಂಕರಝೋರ ಕೆರೆಯ ಉಲ್ಲೇಖಗಳನ್ನು ತಿಳಿಸುತ್ತದೆ. ನೊಳಂಬರ ಆಡಳಿತ ಅವಧಿಯಲ್ಲಿ ಕೃಷಿ ಚಟುವಟಿಕೆಗಳು ಭರದಿಂದ ನಡೆದಿರುವುದಕ್ಕೆ ಕೆರೆಗಳು ಪೂರಕ ಮಾಹಿತಿಯನ್ನು ಒದಗಿಸುತ್ತವೆ.

ಕವಿವಿಶಾಸಂ:೧:ಹಗರಿಬಮ್ಮನಹಳ್ಳಿ:೨೭: ಕ್ರಿಸ್ತಶಕ ೧೦೪೭ರಲ್ಲಿ ನೊಳಂಬರು ಕಾಲದಲ್ಲಿ ನಿರ್ಮಾಣಗೊಂಡ ಮೊರಿಗೇರಿಯ ದೇವರಕೆರೆಯನ್ನು ಇದು ಉಲ್ಲೇಖಿಸುತ್ತದೆ.

ಎಸ್ಐಐ:೨೦;೧೦:೪೯: ಕಲ್ಕೇರಿಯ ಶಾಸನವೊಂದರಲ್ಲಿ ವೀರನೊಳಂಬನ ಪತ್ನಿ ವಾಳಲದೇವಿಯನ್ನು ದಾನಪ್ರಿಯೇ, ಯಶೋಪ್ರಿಯೆ ಎಂದು ಅವಳನ್ನು ಹಾಡಿಹೊಗಳಿರುವುದು ಕಂಡುಬರುತ್ತದೆ.

ಕವಿವಿಶಾಸಂ:೪:ಶಾನಂ:೯೩: ಕ್ರಿಸ್ತಶಕ ೮೯೨ರ ಧರ್ಮಪುರಿಯ ಒಂದು ಶಾಸನವು 'ಬಸದಿಗೆ ನೀಡಿದ ಭೂಮಿಯ ದಾನ'ವನ್ನು ವಿವರಿಸುತ್ತದೆ.

ಕವಿಶಾಸಂ:೧:ಸಿರಗುಪ್ಪಿ:ಶಾಸಂ:೫೯: 'ಮೈಲಾರದೇವರಿಗೆ ಬಲ್ಲಕುಂದೆ ಸಮೀಪದ ನೊಳಂಬಾಧಿರಾಜ ಸಿರಿಯನೂರನ್ನು ಸರ್ವಾಭ್ಯಂತರ ಸಿದ್ಧಿದಾನ'ವನ್ನು ಮಾಡಿರುವುದನ್ನು ಕ್ರಿಸ್ತಶಕ ೧೦೧೭ರ ಪಲ್ಲವಾದಿತ್ಯ ಮಗನ್ದಪಳ್ಳಿ ಮಲ್ಲಯ್ಯನಗುಡ್ಡದ ಶಾಸನವು ವಿವರಿಸುತ್ತದೆ.

ಕವಿವಿಶಾಸಂ:೧: ಬಳ್ಳಾರಿ:ಶಾಸಂ:೬೦: 'ಪ್ರಭುಮಣಿ ಪರಮ ಸುಭಗನ ಪಗೆವರ ಗನ್ದಾಸ್ತಿ ಪಾರ್ವ್ವರ ಇಚ್ಚೆನತಪೂರ್ವಾಚಾರದಾತೆಜಿಯ ಪೈಈಯೆಮೊನ್ನೊಡೆ ಪೊನ್ನೆಜಿನುಂ ಚೋಳಮಹಾರಾಜನುಂ ಮೂವದಿಬ್ಬರ್ಪ್ಪಾರ್ವ್ವರಾನ್ನೊದ್ಧಾ...' ಕುರಿತು ಹೇಳುತ್ತದೆ.

ಕವಿಶಾಸಂ:೧:ಹರಪನಹಳ್ಳಿ:ಶಾಸಂ:೯೭: ಕ್ರಿಸ್ತಶಕ ೧೦೧೮ರ ನೊಳಂಬ 'ಉದಯಾದಿತ್ಯನು ಬಾಗುಳಿ ಕಲಿದೇವೇಶ್ವರ ದೇವಾಲಯಕ್ಕೆ ಅಂಗ ರಂಗಭೋಗ ಮತ್ತು ಆಹಾರಧಾನ್ಯಕ್ಕೆ

ಭೂಮಿಯನ್ನು ದಾನ'ವನ್ನಾಗಿ ನೀಡುವುದರ ಮೂಲಕ ಅಲ್ಲಿಯ ದೇವಾಲಯದ ಆಚರಣಾ ಕ್ರಮವನ್ನು ಮುಂದುವರೆಸಲು ಪೂರಕವಾದ ವಾತಾವರಣವನ್ನು ನಿರ್ಮಿಸಿರುವುದು ಈ ಶಾಸನವು ಉಲ್ಲೇಖಿಸುತ್ತದೆ.

ಕವಿಶಾಸಂ:೧:ಬಳ್ಳಾರಿ: ಶಾಸಂ:೪೩ ಮತ್ತು ೪೪: ಕ್ರಿಸ್ತಶಕ ೧೦೩೬ರ ಶಾಸನವು 'ಓರುವಾಯಿಯ ಒಂದು ಶಾಸನವು ನೊಳಂಬ ಪುತ್ರಿ ಹಾಗೂ ಜಗದೇಕ ಮಲ್ಲದೇವ(ಇಮ್ಮಡಿ ಜಯಸಿಂಹ)ನ ಪತ್ನಿಯೂ ಆದ ದೇವಳದೇವಿ ಕಾಲವಶವಾದಾಗ ಆಕೆಯ(ಅಂಗ) ಭಸ್ಮವನ್ನು ಗಂಗೆಯಲ್ಲಿ ಬಿಟ್ಟು ಬಂದ ಮಾಧವ ಷಡಂಗಿ ಮತ್ತು ಕೃಷ್ಣಯ್ಯನಿಗೆ ಭೂದಾನ ಮತ್ತು ತುಪ್ಪದ ದೇವಯ್ಯಂಗೆ, ಪಂಡಿತರ ಸಿದ್ದಯ್ಯಂಗೆ(ದೇವರಿಗೆ) ನಂದಾದೀವಿಗೆಗೆ ಹಾಗೂ ನೈವೇದ್ಯಕ್ಕೆ ತ್ರಿಕಾಲ ಪೂಜೆಗೆ ಭೂಮಿಯನ್ನು ದಾನ'ವಾಗಿ ನೀಡಿರುವುದನ್ನು ತಿಳಿಸುತ್ತದೆ.

ಕವಿಶಾಸಂ:೧:ಹಗರಿಬೊಮ್ಮನಹಳ್ಳಿ:ಶಾಸಂ:೧೬: ಕ್ರಿಸ್ತಶಕ ೧೦೪೫ರ ಕೋಗಳಿಯ ಶಾಸನದಲ್ಲಿ 'ನೊಳಂಬಶೆಟ್ಟಿ ತನ್ನ ತಾಯಿ ಪದ್ಮಾವತಿ ಅಬ್ಬೆಯ ಪರೋಕ್ಷವಿಯಕ್ಕೆ ಛತ್ರ' ಮಾಡಿಸಿದ್ದರ ಬಗೆಗೆ ಬೆಳಕು ಚೆಲ್ಲುತ್ತದೆ.

ಕವಿವಿಶಾಸಂ:ಹಗರಿಬೊಮ್ಮನಹಳ್ಳಿ: ೨೭: ಕ್ರಿಸ್ತಶಕ ೧೦೪೬ರ 'ನನ್ನಿನೊಳಂಬನ ಮೊರಿಗೇರಿಯ ಉರೊಡೆಯರು ಮತ್ತು ತಿಕ್ಕಣ್ಣ ಪ್ರಮುಖ ಲೆಂಕಸಾಸಿರ್ವರು ಊರಿನ ಮಹಾಜನರ ಕೈಯಲ್ಲಿ ದೇವರ ಉಪಭೋಗಕ್ಕೆಂದು ಭೂಮಿಯನ್ನು ದಾನ'ವಾಗಿ ನೀಡಿರುವುದು ಕಂಡುಬರುತ್ತದೆ. ಜೊತೆಗೆ

ಕವಿವಿಶಾಸಂ:೫:ಬಾಗಲಕೋಟೆ:೧೧೭: ಕ್ರಿಸ್ತಶಕ ೮೮೩ರ 'ಮಹೇಂದ್ರನ ಕಾಲದ ಕಂಬದೂರಿನ ಶಾಸನವು ಅಲ್ಲಿಯ ಕೆರೆಯ ಕೆಳಗಿನ ಗದ್ದೆ ದೇವರಿಗೆ ಭೂಮಿಯನ್ನು ದಾನ'ವಾಗಿ ನೀಡಿರುವುದನ್ನು ವಿವರಿಸುತ್ತದೆ.

ಕವಿವಿಶಾಸಂ:೧:ಹರಪನಹಳ್ಳಿ:೪೦: ಕ್ರಿಸ್ತಶಕ ೧೦೩೦ರ ತೆಲಗಿಯ 'ಜಗದೇಕಮಲ್ಲ ನೊಳಂಬ ಪಲ್ಲವ ಪೆರ್ಮಾನಡಿಯು ತೆಲಗಿಯ ಉರೊಡೆಯನಾದ ಕಣ್ಣಿಮಯ್ಯನು ಬಿಕ್ಕಿನ ಕೆರೆಯ ಕರಿಗೌಡನಿಗೆ ಕೂಡಲೂರ ಶಂಕರನಾರಾಣದೇವರ ಸಮ್ಮುಖದಲ್ಲಿ ಗದ್ದೆಯನ್ನು ದಾನ'ವಾಗಿ ನೀಡಿರುವುದನ್ನು ಉಲ್ಲೇಖಿಸುತ್ತದೆ.

ಕವಿವಿಶಾಸಂ:೧:ಹಡಗಲಿ:೫೮: ಕ್ರಿಸ್ತಶಕ ೧೦೪೦ರ ತುಂಬಿಗೆರೆಯ 'ಇರ್ಮಡಿ ನೊಳಂಬನ ಕಾಲದ ಶಾಸನವು ಚಂದಿಮಯ್ಯನು ಮುಳಸ್ಥಾನ ದೇವರಿಗೆ ಅಲ್ಲಿನ ದೊಡ್ಡ ಕೆರೆಯ ಕಾಯಕಲ್ಪಕ್ಕೆ ಹಾಗೂ ಅದರ ಕೆಳಗೆ ದೇವರ ನೈವೇದ್ಯಕ್ಕೆ ಮತ್ತು ಮಠಕ್ಕಾಗಿ ಭೂಮಿಯನ್ನು ದಾನ'ವಾಗಿ ನೀಡಿರುವುದನ್ನು ತಿಳಿಸುತ್ತದೆ.

ಕವಿವಿಶಾಸಂ:೪:ಶಾಸಂ:೯೩: ನೊಳಂಬ ಮಹೇಂದ್ರನ ಕಾಲದಲ್ಲಿಯೇ ಕ್ರಿಸ್ತಶಕ ೮೯೨ರ ತಗಡೂರಿನ(ಧರ್ಮಪುರಿ)ಲ್ಲಿ ಚಂದಿಯಣ್ಣ ಮತ್ತು ನಿಧಿಯಣ್ಣ ಎಂಬುವವರು ಬಸದಿಯನ್ನು ಮಾಡಿಸಿದ ಬಗ್ಗೆ ಈ ಶಾಸನವು ಹೇಳುತ್ತದೆ.

ಕವಿವಿಶಾಸಂ:೧:ಸಿರಗುಪ್ಪ:ಶಾಸಂ:೨೭: ಕ್ರಿಸ್ತಶಕ ೧೦೦೮ರ ಬಲ್ಲಕುಂದೆಗ್ರಾಮದ ಘಟೆಯಂಕಕಾರ(ಚಿತ್ರವೆಡಮಗ)ನ ಆಳ್ವಿಕೆಯ ಶಾಸನದಲ್ಲಿ ಅವನ ನಿಯೋಗಿ ಕೌಶಿಕಗೋತ್ರದ ಮಾಚಿಣಾರ್ಯನ ಮಗ 'ಶ್ರೀಧರಾರ್ಯ್ಯ ಬಲ್ಲಕುಂದೆ ತೀರ್ಥವಸತಿಗೆ ಜೈನಬಿಂಬ'ವನ್ನು ಮಾಡಿಸಿದರ ಬಗೆಗೆ ಉಲ್ಲೇಖಿಸುತ್ತದೆ.

ಕವಿವಿಶಾಸಂ:೧:ಹಗರಿಬೊಮ್ಮನಹಳ್ಳಿ:ಶಾಸಂ:೨೪: ಮೊರಿಗೇರಿಯ ಕ್ರಿಸ್ತಶಕ ೧೦೪೫ರ ಶಾಸನ ತಿಕಣ್ಣ ಮತ್ತು ಲೆಂಕಸಾಸಿರ್ವರು ಸೇರಿ ಮೋರಿಂಗೆರೆಯಲ್ಲಿ ಉದಯಾದಿತ್ಯದೇವನಿಗೆ ಪರೋಕ್ಷವಿನಯವಾಗಿ ೨೪ ಸಾರ್ವಜನಿಕರಿಗಾಗಿ ಛತ್ರವನ್ನು ಕಟ್ಟಿಸಿದರು. ಅಲ್ಲಿ ಆಹಾರಕ್ಕಾಗಿ ವ್ಯವಸ್ಥೆಯನ್ನು ಮಾಡಿಸಲಾಯಿತು. ನೊಳಂಬೇಶ್ವರ ದೇವಸ್ಥಾನವನ್ನೂ ತಮ್ಮ ಹೆಸರಿನಲ್ಲಿ ಲೆಂಕೇಶ್ವರ ದೇವಾಲಯವನ್ನು ಕಟ್ಟಿಸಿದರೆಂಬುದನ್ನು ವಿವರಿಸುತ್ತದೆ.

ಅನುಬಂಧ : ೩

ನೊಳಂಬ ಅರಸು ಮನೆತನದ ಪ್ರಾಚೀನ ವಂಶವೃಕ್ಷ

(ಕ್ರಿಸ್ತಶಕ ೮ನೆಯ ಶತಮಾನದಿಂದ ಕ್ರಿಸ್ತಶಕ ೧೧ನೆಯ ಶತಮಾನದವರೆಗೆ)

ನೊಳಂಬ ಅರಸು ಮನೆತನದ ವಂಶವೃಕ್ಷ

(ಕ್ರಿಸ್ತಶಕ ೮ನೆಯ ಶತಮಾನದಿಂದ ಕ್ರಿಸ್ತಶಕ ೧೧ನೆಯ ಶತಮಾನದವರೆಗೆ)

ತ್ರಿನಯನಪಲ್ಲವ

ಮಂಗಳ (ಕ್ರಿ.ಶ.ಸು. ೭೪೦–೭೫)
(ನೊಳಂಬಾಧಿರಾಜ)

ಸಿಂಹಪೋತ(ಕ್ರಿ.ಶ.ಸು. ೭೭೫–೮೦೦)
ಕಲಿನೊಳಂಬಾಧಿರಾಜ

- ಚಾರುಪೊನ್ನೇರು(ಕ್ರಿ.ಶ.ಸು. ೮೦೦–೮೩೦)
(ಪರಮೇಶ್ವರ ಪಲ್ಲವಾಧಿರಾಜ)
ಪತ್ನಿ: ಗವಗಣಬ್ಬೆ
- ಮಹಾದೇವಿ

ನೊಳಂಬಾಧಿರಾಜ ೧ನೆಯ ಪೊಳಲ್ಚೋರ(ಕ್ರಿ.ಶ.ಸು. ೮೩೦–೭೦)
(ಪಲ್ಲವ ಮಲ್ಲ)
ಪತ್ನಿ: ಜಾಯಬ್ಬೆ, ಗಂಗ ೧ನೆಯ ರಾಚಮಲ್ಲನ ಮಗಳು

೧ನೆಯ ಮಹೇಂದ್ರ(ಕ್ರಿ.ಶ.ಸು. ೮೭೦–೯೭)
(ನೊಳಂಬಾಧಿರಾಜ, ಮಹಾಬಲಿಕುಲವಿಧ್ವಂಸಕ)
ಪತ್ನಿಯರು: ಅಗ್ರಮಹಿಷಿ, ಗಂಗವಂಶ ಗಆಮಬ್ಬೆ ಇರತರು
ಬಿಜ್ಜಮಹಾದೇವಿ, ಪರಮಮಹಾದೇವಿ, ಅಕ್ಕಬ್ಬೆ ಮತ್ತು ದೊಂಬಬ್ಬೆ

೧ನೆಯ ಅಯ್ಯಪದೇವ(ಕ್ರಿ.ಶ.ಸು. ೮೯೭–೯೩೪)
(ನನ್ನಿಗಾಶ್ರಯ, ನೊಳಿಪಯ್ಯ, ನನ್ನಿಗ)
ಪತ್ನಿಯರು: ಗಂಗವಂಶದ ಪೊಲ್ಲಬ್ಬರಸಿ ಮತ್ತು ನಾಗಿಯಬ್ಬೆ ಹೆಳೆಯಬ್ಬೆ

- ಅಣ್ಣಿಗಬೀರನೊಳಂಬ(ಕ್ರಿ.ಶ.ಸು. ೯೩೪–೪೦)
(ಅಣ್ಣಯ್ಯ)
ಪತ್ನಿ: ಅತ್ತಿಯಬ್ಬರಸಿ
    - ಇರುಳಚೋರ
    (ಕ್ರಿ.ಶ. ೯೨೯)
- ೧ನೆಯ ಏಕವಾಕ್ಯ ಇರಿವನೊಳಂಬದಿಲೀಪ(ಕ್ರಿ.ಶ.ಸು. ೯೪೧–೬೭)
(ಪಲ್ಲವರಾಮ, ಪಲರೊಡೆಗಂಡ, ತ್ರಭುವನಧೀರ ಇತ್ಯಾದಿ)
    - ೧ನೆಯ ನನ್ನಿನೊಳಂಬ(ಕ್ರಿ.ಶ.ಸು. ೯೬೮–೭೧)
    (ಛಲದಂಕಕಾರ)
        - ೨ನೆಯ ಪೊಳಲ್ಚೋರ(ಕ್ರಿ.ಶ.ಸು. ೯೬೫–೭೧)
        (ರಾಜಮನೋಜ, ಛಳದಂಕಕಾರ ಮುಂತಾದ)
        ಪತ್ನಿ: ಕದಂಭ ವಂಶದ ದೀವಬ್ಬರಸಿ
            - ೨ನೆಯ ಮಹೇಂದ್ರ(ಕ್ರಿ.ಶ.ಸು. ೯೭೭–೮೨)
            (ನೊಳಂಬ ನಾರಾಯಣ)
            - ೨ನೇ ಇರಿವನೊಳಬ(ಕ್ರಿ.ಶ.ಸು. ೧೦೧೦–೧೦೨೪)
            (ಘಟೆಯಂಕಕಾರ)
            ಪತ್ನಿ: ಚಾಳುಕ್ಯವಂಶದ ಮಹಾದೇವಿ
                - ಜಗದೇಮಲ್ಲನೊಳಂಬಪಲ್ಲವ ಉದಯಾದಿತ್ಯ
                (ಕ್ರಿ.ಶ.೧೦೧೮–೩೭)
                    - ಜಗದೇಕಮಲ್ಲಇಮ್ಮಡಿನೊಳಂಬ(ಕ್ರಿ.ಶ.೧೦೩೭–೪೪)
                    - ತ್ರೈಲೋಕ್ಯಮಲ್ಲನನ್ನಿನೊಳಂಬಪಲ್ಲವಮಾರ್ನಡಿ(ಕ್ರಿ.ಶ.೧೦೪೪–೫೪)
                - ದೇವಳದೇವಿ
                ಪತ್ನಿ: ೨ನೆಯ ಜಯಸಿಂಹ
    - ೨ನೆಯ ಅಯ್ಯಪದೇವ
        - ಗನ್ನರಸ
- ಅಂಕಯ್ಯ

ಅನುಬಂಧ : ೪

ಸಾಂಸ್ಕೃತಿಕ ಪದಸೂಚಿ

ಸಾಂಸ್ಕೃತಿಕ ಪದಸೂಚಿ

ಅಗ್ಗಿಟಗೆ : ಕೆಂಡವನ್ನು ಇಟ್ಟು ಕಾಯಿಸುವ, ಮುಖ್ಯವಾಗಿ ಸ್ಥಳದಿಂದ ಸ್ಥಳಕ್ಕೆ ಸಾಗಿಸಬಹುದಾದ ಒಲೆ.

ಅಭಿಪ್ಸೆ : ಬಯಕೆ ; ಅಪೇಕ್ಷೆ

ಅನಂತಪುರ : ಇದು ಆಂಧ್ರಪ್ರದೇಶದ ಒಂದು ಜಿಲ್ಲಾ ಕೇಂದ್ರವಾಗಿದೆ. ನೊಳಂಬರ ಆಳ್ವಿಕೆಯ ಸಂದರ್ಭದಲ್ಲಿ ಪ್ರಮುಖ ಪಟ್ಟಣವಾಗಿತ್ತು. ಮುಂದೆ ಕರ್ನಾಟಕ(ವಿಜಯನಗರ) ಸಾಮ್ರಾಜ್ಯದ ಆಳ್ವಿಕೆಯ ಅವಧಿಯಲ್ಲೂ ಪ್ರಮುಖ ವ್ಯಾಪಾರಿ ಕೇಂದ್ರವಾಗಿ ಚರಿತ್ರೆಯಲ್ಲಿ ದಾಖಲಾಗಿದೆ.

ಅರವಟ್ಟಿಗೆ : ಧರ್ಮಕ್ಕಾಗಿ, ನೀರು, ಪಾನಕ, ನೀರುಮಜ್ಜಿಗೆ, ಎಳನೀರು ಮುಂತಾದ ಪಾನೀಯಗಳನ್ನು ದಾರಿ ಹೋಕರಿಗೆ ನೀಡುವ ತಾತ್ಕಾಲಿಕವಾದ ಧರ್ಮಶಾಲೆ.

ಅವನಿ : ಕೋಲಾರ ಜಿಲ್ಲೆಯಲ್ಲಿ ಬರುವ ಗ್ರಾಮ. ಇದು ನೊಳಂಬರ ಆಡಳಿತದ ಸಂದರ್ಭದಲ್ಲಿ ಪ್ರಮುಖ ಕೇಂದ್ರವಾಗಿತ್ತು.

ಆಖ್ಯಾನ : ಹೇಳುವುದು ; ನಿರೂಪಣೆ

ಆರವೆ : ಅರಮೆ; ಆರಮೆ; ತೋಟ; ಉದ್ಯಾನವನ; ತೋಮು.

ಉಚ್ಚಂಗಿ : ಇದು ಚಿತ್ರದುರ್ಗ ಜಿಲ್ಲೆಯಲ್ಲಿದೆ. ಪ್ರಮುಖ ಐತಿಹಾಸಿಕ ಸ್ಥಳವಾಗಿರುವ ಈ ಗ್ರಾಮವು ನೊಳಂಬರ ಆಡಳಿತದವಧಿಯಲ್ಲಿ ಮುಖ್ಯ ರಾಜಕೀಯ ಕೇಂದ್ರವಾಗಿತ್ತು.

ಉತ್ತರ ಆರ್ಕಾಟು: ತಮಿಳುನಾಡಿನ ಉತ್ತರ ಭಾಗದಲ್ಲಿ ಬರುವ ಸೇಲಂ ಎಂಬ ಜಿಲ್ಲಾ ವ್ಯಾಪ್ತಿಯ ಪ್ರದೇಶವನ್ನು ಉತ್ತರ ಅರ್ಕಾಟು ಎಂದು

ಕರೆಯಲಾಗುತ್ತದೆ. ನೊಳಂಬರ ಆಳ್ವಿಕೆಯ ಸಂದರ್ಭದಲ್ಲಿ ಪ್ರಮುಖ ಪ್ರದೇಶವಾಗಿದ್ದ ಈ ಪ್ರದೇಶವು ನಂತರದವಧಿಯಲ್ಲಿ ನವಾಬ ಸುಪರ್ಧಿಗೆ ಬಂದು ಇದು ಅರ್ಕಾಟಿನ ನವಾಬರು ಎಂಬಷ್ಟು ಪ್ರಚಾರ ಪಡೆದು ಚರಿತ್ರೆಯಲ್ಲೂ ದಾಖಲಾಗಿದೆ.

ಕಂಡಪೀಠ	:	ಕಂಡ+ಪೀಠ; ಕಂಡಭೂಮಿ, ಭೂಮಿಯ ಭಾಗ; ಭೂಮಿಯ ಒಂದು ಭಾಗವನ್ನು ದೇವಸ್ಥಾನದಲ್ಲಿರುವ ದೇವರಿಗೆ ದಾನವಾಗಿ ಬಿಟ್ಟಿದ್ದನ್ನು ಕಂಡಪೀಠ ಎನ್ನಲಾಗುತ್ತದೆ.
ಕಂಪಲಿ	:	ಇಂದಿನ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನಲ್ಲಿ ಬರುವ ಕಂಪ್ಲಿ. ಇದು ನೊಳಂಬರ ರಾಜಧಾನಿಯಾಗಿತ್ತು. ನಂತರ ಕರ್ನಾಟಕ ಸಾಮ್ರಾಜ್ಯದ ಅವಧಿಯಲ್ಲಿ ಪ್ರಮುಖ ಪಾತ್ರವಹಿಸಿತ್ತು.
ಕಣಿಯಕಲ್ಲು	:	ಇದು ಕ್ರಿಸ್ತಶಕ ೧೦೬೪ರಲ್ಲಿ ಬಲ್ಲುಕುಂದೆ ನಾಡಿನೊಳಗೆ ಬರುವ ಪ್ರದೇಶ. ನೊಳಂಬವಾಡಿಯ ಗಡಿ ಭಾಗದ ಪ್ರದೇಶವಾಗಿತ್ತು.
ಕನ್ನೆ	:	ನೊಳಂಬವಾಡಿಗೆ-೩೨೦೦೦ದಲ್ಲಿ ಬರುವ ಒಂದು ವಿಭಾಗ. ಬಿದ್ದಣ ಚೋಳ ಮಹಾರಾಜರು ಕನ್ನೆವಣನೂಱುಂಪೆ ಡಕಲ್ಲೆಂಗಿಟನೂರುಂ... ಆರುತ್ತಂ(ಕಇ: ೧೧೭:೨೨:೧೮:ಕ್ರಿಸ್ತಶಕ ೧೦೭೩)
ಕಬೂರು	:	ಇದು ಸ್ಥಳನಾಮವಾಗಿದೆ. ಕ್ರಿಸ್ತಶಕ ೯೩೦ರ ತಿಪಟೂರು ಶಾಸನದಲ್ಲಿ ಕೆಲ್ಲೂರುಂಕಬೂರು ಎಂಬುದಾಗಿ ಉಲ್ಲೇಖಗೊಂಡಿದೆ.
ಕುರುಹು	:	ಗುರುತು ; ಚಿಹ್ನೆ
ಕೂಟಕನೂರು	:	ಸ್ಥಳನಾಮ. ಹಲವು ಗ್ರಾಮಗಳು ಸೇರಿದ ಊರು. ಹೋಬಳಿ.
ಚಿತ್ತೂರು	:	ಆಂಧ್ರಪ್ರದೇಶ ರಾಜ್ಯದಲ್ಲಿರುವ ಪ್ರಮುಖ ಪಟ್ಟಣ. ನೊಳಂಬರ ಆಳ್ವಿಕೆಯ ಕಾಲದಲ್ಲಿ ಪ್ರಮುಖ ವಿಭಾಗವಾಗಿತ್ತು.
ತಟಾಕ	:	ಮಳೆಯಿಂದ ಸುರಿದು ಹರಿದು ಹೋಗುತ್ತಿರುವ ನೀರನ್ನು ಸಂಗ್ರಹಿಸಲು ನಿರ್ಮಿಸಿದ ಕೆರೆ ಅಥವಾ ಜಲಾಶಯ.

ತೆಲ್ಲಿಗರು : ಕನ್ನಡ ನಿಘಂಟಿನಲ್ಲಿ ತೆಲ್ಲಿಗ; ತೈಲಿಕ; ಎಣ್ಣೆವ್ಯಾಪಾರಿ. ಅಂದರೆ, ಎಣ್ಣೆಯನ್ನು ತೆಗೆದು ಮಾರಿ ಜೀವಿಸುವವನು ಗಾಣಿಗ.

ತೊಡೈಮಂಡಲ : ಪಲ್ಲವರು ತೊಡೈಮಂಡಲವನ್ನು ಆರು ಶತಮಾನಗಳಿಗೂ ಹೆಚ್ಚು ಕಾಲ ಆಳಿದರು. ಅವರು ಕನ್ನಾರ್ ನದಿಯ ದಂಡೆಯ ಮೇಲಿನ ಕಾಂಚೀಪಟ್ಟಣವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು.

ತೈರೂರು(ತಾಯಲೂರು): ಮಹೇಂದ್ರನು ತಾಯಲೂರು ಅಥವಾ ತೈಲೂರಿನಲ್ಲಿ ಕಲ್ಲದೇಗುಲವನ್ನು ನಿರ್ಮಿಸಿರುವುದರ ಬಗ್ಗೆ ಕ್ರಿಸ್ತಶಕ ೯೫೫(ಎಕ:೭(ರೈ): ಶಾಸಂ:.೨೮೫)ರ ಶಾಸನವು ವಿವರಿಸುತ್ತದೆ.

ದ್ರಾವಿಡಶೈಲಿ : ವಾಸ್ತು ಶಿಲ್ಪದ ಒಂದು ವಿಧಾನ, ರೀತಿ, ಭರತಖಂಡದ ವಾಸ್ತು ಶಿಲ್ಪವು ಮೂರು ತೆರದ್ದೆಂದು ಹೇಳಲ್ಪಟ್ಟಿದೆ. ಭಾರತೀಯ ವಾಸ್ತುಶಿಲ್ಪದ ಮೂರು ಪ್ರಭೇದಗಳಲ್ಲಿ ಒಂದು ಆರು ಅಥವಾ ಎಂಟು ಮುಖಗಳುಳ್ಳ ದೇವಾಲಯ.

ದೋ–ಆಬ್ : ಎರಡು ನದಿಗಳ ಮಧ್ಯದ ಪ್ರದೇಶ: ಉದಾ: ರಾಯಚೂರು ಭಾಗದ ಪ್ರದೇಶವ ಮಧ್ಯಕಾಲದಲ್ಲಿ ದೋ–ಆಬ್ ಎಂದು ಕರೆಸಿಕೊಂಡಿದೆ. ಅದು ಕೃಷ್ಣ ಮತ್ತು ತುಂಗಭದ್ರಾ ನದಿಗಳ ಪ್ರದೇಶವಾಗಿದೆ.

ನಾಗರಶೈಲಿ : ವಾಸ್ತು ಶಿಲ್ಪದ ಒಂದು ವಿಧಾನ, ರೀತಿ, ಭರತಖಂಡದ ವಾಸ್ತು ಶಿಲ್ಪವು ಮೂರು ತೆರದ್ದೆಂದು ಹೇಳಲ್ಪಟ್ಟಿದೆ. ಮೂಲದಿಂದ ಶಿಖರದವರೆಗೂ ಚತುರಸ್ತಕಾರವಾಗಿರುವ ದೇವಾಲಯವು, "ನಾಗರಶೈಲಿ" ಎಂದು ಕರೆಯಲಾಗುತ್ತದೆ.

ಪಾಣಿವಟ್ಟ : ಇದನ್ನು ಪಾಣಿಪೀಠ ಎಂದು ಕರೆಯಲಾಗುತ್ತದೆ. ಸಾಮಾನ್ಯವಾಗಿ ದೇವರ ಲಿಂಗಗಳಿಗೆ ಅಭಿಷೇಕದ ನೀರು ಹರಿದು ಹೋಗಲು ಅನುಕೂಲವಾಗುವಂತೆ ಲಿಂಗದ ಸುತ್ತಲೂ ತಗ್ಗಾಗಿರುವ ಪೀಠ;

ಹರಿನಾಳ ಸಹಿತವಾದ ಲಿಂಗಪೀಠ ಎಂತಲೂ ಕರೆಯಬಹುದು.

ಬನವಾಸಿ–ವೈಜಯಂತಿ : ಉತ್ತರ ಕನ್ನಡ ಜಿಲ್ಲೆ, ಶಿರಸಿ ತಾಲ್ಲೂಕಿನಲ್ಲಿದೆ. ಕದಂಬರ ರಾಜಧಾನಿಯಾಗಿದ್ದ ಪ್ರದೇಶ.

ಬಾಡ : ಹಳ್ಳಿ : ಗ್ರಾಮ. ಕೆಲವು ಊರಿನ ಹೆಸರುಗಳ ಕಡೆಯಲ್ಲಿ ಸೇರಿಸುವ ಶಬ್ದ.

ವಣಿಕ : ಮಾರುಕಟ್ಟೆಯ ಮೂಲಕ ವ್ಯಾಪಾರವನ್ನು ಮಾಡುವವನಿಗೆ ವಣಿಕೆ ಎನ್ನಲಾಗುತ್ತದೆ. ನಿಘಂಟುವಿನಲ್ಲಿ ವರ್ತಕ, ವ್ಯಾಪಾರಿ ಎಂದು ಹೇಳಲಾಗಿದೆ.

ವಾತಾಪಿ : ಬಾಗಲಕೋಟೆ ಜಿಲ್ಲೆಯ ತಾಲೂಕು ಕೇಂದ್ರ. ಕ್ರಿಸ್ತಶಕ ೭–೮ನೆಯ ಶತಮಾನದಲ್ಲಿ ಕರ್ನಾಟಕವನ್ನು ಆಳ್ವಿಕೆ ಮಾಡಿದ ಚಾಲುಕ್ಯ ಮನತೆನವೊಂದು ಈ ಬಾದಾಮಿಯನ್ನು ರಾಜಧಾನಿಯನ್ನಾ–ಗಿಸಿಕೊಂಡಿದ್ದರು. ಅವರನ್ನು ಬಾದಾಮಿ ಚಾಲುಕ್ಯರೆಂದೆ ಚರಿತ್ರೆಯಲ್ಲಿ ದಾಖಲಿಸಲಾಗಿದೆ.

ವೇಸರಶೈಲಿ : ವಾಸ್ತು ಶಿಲ್ಪದ ಒಂದು ವಿಧಾನ, ರೀತಿ, ಭರತಖಂಡದ ವಾಸ್ತು ಶಿಲ್ಪವು ಮೂರು ತೆರದ್ದೆಂದು ಹೇಳಲ್ಪಟ್ಟಿದೆ. ದೇವಾಲಯವನ್ನು ಮೂಲದಿಂದ ಶಿಖರದವರೆಗೂ ವೃತ್ತಾಕಾರವಾಗಿ ಕಟ್ಟುವ ಒಂದು ಪ್ರಕಾರ.

ಸಂಸ್ಥಾನ : ಇದು ನಾಮಪದವಾಗಿದ್ದು, ರಾಜ್ಯ; ಪ್ರಾಂತ್ಯಗಳನ್ನು ಸಂಸ್ಥಾನ ಎಂಬುದಾಗಿ ಕರೆಯಲಾಗುತ್ತಿತ್ತು. ಅದರೊಂದಿಗೆ ಮಠಗಳನ್ನು ಸಂಸ್ಥಾನಗಳೆಂಬುದಾಗಿ ಕರೆಯಲಾಗುತ್ತದೆ.

ಸತ್ರ : ಇದು ನಾಮಪದವಾಗಿದ್ದು, ಯಾಗ; ಧರ್ಮಶಾಲೆ; ಛತ್ರ, ಪ್ರವಾಸಿಮಂದಿರ; ನ್ಯಾಯ ನಿರ್ಣಯಕ್ಕಾಗಿ ಒಂದು ಬಾರಿ ಸೇರುವ ಸಭೆ, ಒಂದು ಅಧಿವೇಶನ ಎಂದು ಇಲ್ಲಿ ಅರ್ಥೈಸಲಾಗಿದೆ.

ಸಾಮಂತರು : ಒಬ್ಬ ರಾಜನಿಗೆ ಅಧೀನದಲ್ಲಿದ್ದು, ಕಪ್ಪ ಕಾಣಿಕೆಗಳನ್ನು ಒಪ್ಪಿಸುವ ರಾಜ; ಅಥವಾ ಮಾಂಡಲಿಕ

ಸಾಮ್ರಾಟ : ಚಕ್ರಾಧಿಪತಿ; ಸಾರ್ವಭೌಮ; ಕರ್ನಾಟಕ ಚರಿತ್ರೆಯಲ್ಲಿ ಬಾದಾಮಿ ಚಾಲುಕ್ಯರ ಇಮ್ಮಡಿ ಪುಲಕೇಶಿ, ರಾಷ್ಟ್ರಕೂಟರ ಅಮೋಘವರ್ಷ ನೃಪತುಂಗ, ಕಲ್ಯಾಣ ಚಾಲುಕ್ಯರ ಆರನೆಯ ವಿಕ್ರಮಾದಿತ್ಯ ಮುಂತಾದವರು ಸಾಮ್ರಾಟರಾಗಿದ್ದರು.

ಹೇಮಾವತಿ(ಹೆಂಜೇರು) : ಕರ್ನಾಟಕದಲ್ಲಿ ಆಳ್ವಿಕೆಯನ್ನು ಆರಂಭಿಸಿದ ನೊಳಂಬ ಪಲ್ಲವರು ಮೊದಲು ಹೇಮಾವತಿ ಅಥವಾ ಹೆಂಜೇರನ್ನು ತಮ್ಮ ರಾಜಧಾನಿಯನ್ನಾಗಿಸಿಕೊಂಡಿದ್ದರು. ಇದು ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯಲ್ಲಿ ಪ್ರಮುಖವಾಗಿ ಕಂಡುಬರುವ ಐತಿಹಾಸಿಕ ಸ್ಥಳವಾಗಿದೆ.

ನೊಳಂಬರ ಕಾಲದಲ್ಲಿ ನಿರ್ಮಾಣಗೊಂಡ ದೇವಾಲಯಗಳು

ಅಗಳಿ	:	ವಿಷ್ಣುದೇವಾಲಯ
ಅರಳುಗುಪ್ಪೆ	:	ಕಲ್ಲೇಶ್ವರ ದೇವಾಲಯ
ಅವನಿ	:	ಅರುಣಾಚಲೇಶ್ವರ ದೇವಾಲಯ; ವಿಷ್ಣುದೇವಾಲಯ (ನೊಳಂಬನಾರಾಯಣೇಶ್ವರ)
ಕಂಪ್ಲಿ	:	ಸೋಮೇಶ್ವರ ದೇವಾಲಯ
ಕುರುಬೂರು	:	ಭೀಮೇಶ್ವರ ದೇವಾಲಯ
ದೊಡ್ಡಬನಗೆರೆ	:	ಮಹಿಷಾಸುರಮರ್ದಿನಿ
ಧರ್ಮಪುರಿ	:	ಕಾಮಾಕ್ಷಮ್ಮ ದೇವಾಲಯ
ಧರ್ಮಪುರಿ	:	ಮಲ್ಲಿಕಾರ್ಜುನ ದೇವಾಲಯ
ನಂದಿಭೋಗನಂದೇಶ್ವರ	:	ಭೂತೇಶ್ವರ ಮತ್ತು ವಿಷ್ಣು ದೇವಾಲಯ
ನೊಣವಿನಕೆರೆ	:	ಗರ್ಗೇಶ್ವರ ದೇವಾಲಯ, ನೊಳಂಬೇಶ್ವರ
ಪೇಲಬಂದ	:	ರಂಗನಾಥಸ್ವಾಮಿ ದೇವಾಲಯ
ಬರಗೂರು	:	ಮಂಹೇಂದ್ರೇಶ್ವರ ದೇವಾಲಯ
ಮದರಿಕಲ್ಲು	:	ಗವಣೇಶ್ವರ ದೇವಾಲಯ.
ಮೋರಿಗೆರೆ	:	ಲೆಂಕೇಶ್ವರ ದೇವಾಲಯ
ಹೇಮಾವತಿ	:	ಸಿದ್ಧೇಶ್ವರ ದೇವಾಲಯ
ಹೇಮಾವತಿ	:	ದೊಡ್ಡೇಶ್ವರ ದೇವಾಲಯ
ಹೇಮಾವತಿ	:	ವಿರುಪಾಕ್ಷ ದೇವಾಲಯ
ಹೇಮಾವತಿ	:	ಇಂದ್ರ ನಟೇಶ ವರುಣ ದೇವಾಲಯ
ಹೇಮಾವತಿ	:	ಕಾಳಿ, ಶತ್ರುಘ್ನ, ಭರತೇಶ ದೇವಾಲಯ
ಹೇಮಾವತಿ	:	ಉಮಾಶಿತಾ

ಅನುಬಂಧ : ೫.

ಛಾಯಾಚಿತ್ರಗಳು



೩.೧. ಹೆಂಜೇರಪ್ಪ ಹೇಮಾವತಿ



೩.೨. ಸಿದ್ಧೇಶ್ವರ ದೇವಾಲಯ, ಹೇಮಾವತಿ



೩.೩. ಭರತೇಶ್ವರ ದೇವಾಲಯ ಅವನಿ



೩.೪. ರಾಮಲಿಂಗೇಶ್ವರ ದೇವಾಲಯ, ಅವನಿ



೩.೫. ರಾಮಲಿಂಗೇಶ್ವರ ಲಿಂಗ ಅವನಿ



೩.೬. ನಂದಿ–ಅರಳಗುಪ್ಪೆ



೩.೭. ಉಮಾಮಹೇಶ್ವರ– ಅರಳಗುಪ್ಪೆ



೩.೮. ಉಮಾಮಹೇಶ್ವರ ಪೆನುಗೊಂಡ



೪.೧. ಸಿದ್ಧರಾಮೇಶ್ವರ ರಥೋತ್ಸವ
ಸೊಲ್ಲಾಪುರ(ತರಿಕೆರೆ)



೪.೨. ಸಿದ್ಧರಾಮೇಶ್ವರ ರಥೋತ್ಸವ
ಸೊಲ್ಲಾಪುರ(ತರಿಕೆರೆ)



೪.೩. ಗಂಗಮ್ಮನ ಹೊಂಡ ಸೊಲ್ಲಾಪುರ(ತರೀಕೆರೆ)

ಅನುಬಂಧ : ೬

ಪರಾಮರ್ಶನ ಸಾಹಿತ್ಯ

<u>ಪರಾಮರ್ಶನ</u> <u>ಸಾಹಿತ್ಯ</u>

ಉತ್ನಾಳ, ಸಿದ್ದಣ್ಣ., *ಕುಡು ಒಕ್ಕಲಿಗರು* (ಅಥಣಿ: ಅನುಪಮ ಪ್ರಕಾಶನ, ೨೦೧೦)

ಎಲಿಗಾರ, ಚೆನ್ನಕ್ಕ., *ಪ್ರಾಚೀನ ಕರ್ನಾಟಕದ ರಾಣಿಯರು* (ಧಾರವಾಡ: ನೀಲಗಂಗಾ ಪ್ರಕಾಶನ, ೧೯೮೭)

ಕತ್ತಿಗೆ, ಚನ್ನಪ್ಪ., *ಸ್ಮರಣಿಯರು* (ನಂದಿಗುಡಿ: ನಂದಿಗುಡಿ ಪ್ರಕಾಶನ, ೨೦೦೬)

ಕನ್ನಡ ವಿಶ್ವವಿದ್ಯಾಲಯದ ಶಾಸನ ಸಂಪುಟಗಳು (ಹಂಪಿ: ಕನ್ನಡ ವಿಶ್ವವಿದ್ಯಾಲಯ)

ಕಲಬುರ್ಗಿ, ಎಂ ಎಂ., *ಶಾಸನ ವ್ಯಾಸಂಗ ಸಂಪುಟ–೧* (ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ, ೧೯೭೪)

,,,,,, *ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು ಭಾಗ–೧* (ಹಂಪಿ: ಕನ್ನಡ ವಿಶ್ವವಿದ್ಯಾಲಯ, ೨೦೦೭)

,,,,,, *ಲಿಂಗಾಯತ* (ಇಲಕಲ್ಲು: ಸಿ.ಎಸ್.ವಿ.ಎಂ., ಎಜ್ಯುಕೇಶನ್ ಸೋಸೈಟಿ, ೨೦೦೯)

,,,,,, *ಲಿಂಗಾಯತ, ಉಪಪಂಗಡಗಳ ದಾಖಲೀಕರಣ* (ಇಲಕಲ್ಲು: ಸಿ.ಎಸ್.ವಿ.ಎಂ. ಎಜುಕೇಶನ್ ಸೋಸೈಟಿ, ೨೦೦೯)

,,,,,, *ಮಾರ್ಗ ಸಂಪುಟಗಳು ೧ರಿಂದ ೬* (ಬೆಂಗಳೂರು: ಸಪ್ನ, ಬುಕ್‌ಹೌಸ್, ೨೦೧೦)

ಕಲ್ಯಾಣದ ಚಾಲುಕ್ಯರ ಶಾಸನಗಳು–೧(ಮೈಸೂರು: ಮೈಸೂರು ವಿಶ್ವವಿದ್ಯಾಲಯ, ೨೦೧೦)

ಕಂಗಾಲಿ, ಮೊ ಭ.(ಮೂಲ)., ಬ್ಯಾಳಿ, ಕೆ ಬಿ.(ಅನು)., *ಗೊಂಡಿ ಭಾಷೆಯಿಂದ ಸಿಂಧೂ ರಹಸ್ಯಲಿಪಿಯ ಶೋಧ ಮತ್ತು ಓದು;* (ಬಳ್ಳಾರಿ: ಲಾಳಗೊಂಡೇಶ್ವರ ಎಜ್ಯುಕೇಶನಲ್ ಟ್ರಸ್ಟ್, ೨೦೧೨)

ಕಡ್ಲಪ್ಪನರ, ಬಸಪ್ಪ., *ಶ್ರೀ ಬನಶಂಕರಿ ಮಹಾತ್ಮೆ* (ಹೊಸದುರ್ಗ: ಬಸವಶ್ರೀ ಪ್ರಕಾಶನ, ೨೦೦೧)

ಕೊಟ್ರೇಶ್, ಎಂ.,(ಸಂ)., *ಕಲ್ಯಾಣ ಕರ್ನಾಟಕದ ಅರಸು ಮನೆತನಗಳು* (ಹಂಪಿ: ಕನ್ನಡ ವಿಶ್ವವಿದ್ಯಾಲಯ, ೨೦೧೦)

ಕೊಸಾಂಬಿ, ಡಿ ಡಿ.,(ಮೂಲ)., ವೇಣುಗೋಪಾಲ್, ಟಿ ಎಸ್. ಮತ್ತು ಶೈಲಜಾ,(ಅನು)., *ಪ್ರಾಚೀನ ಭಾರತದ ಸಂಸ್ಕೃತಿ ಮತ್ತು ನಾಗರೀಕತೆ* (ಬೆಂಗಳೂರು: ಚಿಂತನ ಪ್ರಕಾಶನ, ೨೦೧೧)

ಕೃಷ್ಣ, ಎಂ ಎಚ್., *ಕನ್ನಡ ನಾಡಿನ ಚರಿತ್ರೆ, ಭಾಗ-೩* (ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು, ೨೦೦೯)

ಗಣೇಶ, ಕೆ ಆರ್., *ಆಂಧ್ರಪ್ರದೇಶದ ಕನ್ನಡ ಶಾಸನಗಳು-ಒಂದು ಅಧ್ಯಯನ* (ಬೆಂಗಳೂರು: ಪ್ರಕಾಶನ, ೨೦೦೪)

ಗುರುಮೂರ್ತಿ, ಕೆ ಜಿ., *ಲಿಂಗಾಯತ ಧಾರ್ಮಿಕ ಸಂಪ್ರದಾಯ ಮತ್ತು ಸಾಂಸ್ಕೃತೀಕರಣ* (ಬೆಂಗಳೂರು: ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು-೨೦೦೯)

ಚಂದ್ರ, ಪೂಜಾರಿ ಎಂ., *ಸಂಶೋಧನೆ ಏನು? ಏಕೆ? ಹೇಗೆ?* (ಹಂಪಿ: ಕನ್ನಡ ವಿಶ್ವವಿದ್ಯಾಲಯ, ೨೦೦೯)

ಚನ್ನಬಸಪ್ಪ, ಗೊ ರು.,(ಸಂ)., *ಶರಣ ಕ್ಷೇತ್ರಗಳು* (ಮೈಸೂರು: ಅಖಿಲ ಭಾರತ ಶರಣ ಸಾಹಿತ್ಯ, ಪರಿಷತ್ತು, ೨೦೧೦)

ಚಿದಾನಂದಮೂರ್ತಿ, ಎಂ., *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ* (ಬೆಂಗಳೂರು: ಸಪ್ನ ಬುಕ್ ಹೌಸ್, ೨೦೦೦)

,,,,., *ವೀರಶೈವ ಧರ್ಮ ಭಾರತೀಯ ಸಂಸ್ಕೃತಿ* (ಬೆಂಗಳೂರು: ಮಿಂಚು ಪ್ರಕಾಶನ, ೨೦೦೦)

ಜಯಣ್ಣ, ಕರಿಯಣ್ಣ, ಎಚ್., *ನೊಳಂಬರ ಶಾಸನಗಳ ಸಾಂಸ್ಕೃತಿಕ ಅಧ್ಯಯನ* (ಧಾರವಾಡ: ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ೨೦೦೮)

,,,,., *ಶಾಸನಗಳಲ್ಲಿ ದಾನದತ್ತಿಗಳು* (ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು, ೨೦೧೦)

ಡಿ ವಿ ಜಿ., *ಸಂಸ್ಕೃತಿ* (ಮೈಸೂರು: ಕಾವ್ಯಾಲಯ ಪ್ರಕಾಶನ, ೨೦೦೬)

ತರೀಕೆರೆ, ರೆಹಮತ್., *ಕರ್ನಾಟಕದ ನಾಥಪಂಥ* (ಹಂಪಿ: ಕನ್ನಡ ವಿಶ್ವವಿದ್ಯಾಲಯ, ೨೦೦೨)

,,,,., *ಕನ್ನಡ ಸಂಶೋಧನೆಯ ತಾತ್ವಿಕ ವಿಚಾರ* (ಹಂಪಿ: ಕನ್ನಡ ವಿಶ್ವವಿದ್ಯಾಲಯ, ೨೦೦೯)

ತಿಪ್ಪಶೆಟ್ಟಿ, ಮಹೇಶ.,(ಸಂ)., *ಬಸವತತ್ವ ಸಾಮಾಜಿಕ ಬದಲಾವಣೆ* (ಹಂಪಿ: ಕನ್ನಡ ವಿಶ್ವವಿದ್ಯಾಲಯ, ೨೦೧೦)

ತಿಪ್ಪೇರುದ್ರಸ್ವಾಮಿ, ಎಚ್.,: *ಕರ್ಣಾಟಕ ಸಂಸ್ಕೃತಿ ಸಮೀಕ್ಷೆ* (ಮೈಸೂರು: ಡಿ ವಿ ಕೆ., ಮೂರ್ತಿ, ೨೦೧೦)

ದೇವರಕೊಂಡಾರೆಡ್ಡಿ., *ತಲಕಾಡಿನ ಗಂಗರ ದೇವಾಲಯಗಳು-ಒಂದು ಅಧ್ಯಯನ* (ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು, ೧೯೯೪)

ನಂದಿಮಠ, ಎಸ್ ಸಿ., *ಕನ್ನಡ ನಾಡಿನ ಚರಿತ್ರೆ, ಭಾಗ ೨* (ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು, ೨೦೦೯)

ನವಲಗುಂದ, ಗುರುರಾಜ, ಎಸ್., *ಕನ್ನಡ ಶಾಸನಗಳಲ್ಲಿ ಧಾರ್ಮಿಕ ಸಂಘರ್ಷ* (ಅಪ್ರಕಟಿತ ಪಿಎಚ್.ಡಿ., ಮಹಾಪ್ರಬಂಧ, ೨೦೧೪)

ನಾಯಕ, ಎಲ್ ಆರ್., *ಉತ್ತರ ಕನ್ನಡದ ಸಿದ್ಧಿ ಜನಾಂಗ* (ಹೊನ್ನಾವರ: ಜನಪದ ಪ್ರಕಾಶನ, ೧೯೯೨)

ನಾರಾಣಾಪುರ, ಚಂದ್ರಶೇಖರ., *ಕರ್ನಾಟಕದ ವೀರಶೈವ ಮಠಗಳು* (ಚಿಕ್ಕಮಗಳೂರು: ಗೆಳೆಯ ಪ್ರಕಾಶನ, ೨೦೦೨)

ನಾರಾಯಣ, ಕೆ ವಿ.,(ಸಂ)., *ಕನ್ನಡಶೈಲಿ ಕೈಪಿಡಿ* (ಹಂಪಿ: ಕನ್ನಡ ವಿಶ್ವವಿದ್ಯಾಲಯ, ೨೦೦೬)

ನೇಗಿನಹಾಳ, ಎಂ ಬಿ., *ನೇಗಿನಹಾಳರ ಪ್ರಬಂಧಗಳು* (ಹಂಪಿ: ಕನ್ನಡ ವಿಶ್ವವಿದ್ಯಾಲಯ, ೧೯೯೯)

ಪಂಪನಗೌಡ, ಎಂ ಆರ್., *ಗೊಂಡ್ವಾನ ಸಂಸ್ಕೃತಿ ಅರ್ಥಾತ್ ಸಿಂಧೂ ಸಂಸ್ಕೃತಿ* (ಬಳ್ಳಾರಿ: ಲಾಳಗೊಂಡೇಶ್ವರ ಎಜ್ಯುಕೇಶನಲ್ ಟ್ರಸ್ಟ್, ೨೦೧೩)

ಪ್ರಶಾಂತ್, ಹೆಚ್ ಡಿ.,(ಸಂ)., *ಜನಸಮುದಾಯ ಸಂಪುಟ* (ಹಂಪಿ: ಕನ್ನಡ ವಿಶ್ವವಿದ್ಯಾಲಯ, ೨೦೦೦)

ಬಂಜಗೆರೆ, ಜಯಪ್ರಕಾಶ., *ಕನ್ನಡ ರಾಷ್ಟ್ರೀಯತೆ* (ಬೆಂಗಳೂರು: ಕ್ರಾಂತಿಸಿರಿ ಪ್ರಕಾಶನ, ೨೦೦೦)

ಬಡಿಗೇರ, ವಾಸುದೇವ., *ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ* (ಹಂಪಿ: ಕನ್ನಡ ವಿಶ್ವವಿದ್ಯಾಲಯ, ೨೦೧೦)

ಬಸವರಾಜಯ್ಯ, ಎಂ ಎಸ್., *ವೀರಶೈವೇತಿಹಾಸ ಹಾಗು ತಮ್ಮಡಿಹಳ್ಳಿ ಶ್ರೀಮಠದ ಚರಿತ್ರೆ* (ಮೈಸೂರು: ರಾಜೇಂದ್ರ ಪ್ರಿಂಟರ್ಸ್ ಆ್ಯಂಡ್ ಪಬ್ಲಿಶರ್ಸ್, ೨೦೦೮)

ಬಸವರಾಜು, ಕೆ ಆರ್.,(ಸಂ)., *ನೊಳಂಬರ ಇತಿಹಾಸ ದರ್ಶನ* (ಬೆಂಗಳೂರು: ನೊಳಂಬ, ವೀರಶೈವ, ಸಂಘ, ೨೦೦೫)

,,,,, *ಶಿವಯೋಗದ ಗುರುಪರಂಪರೆ* (ಬೆಂಗಳೂರು: ಪ್ರಕಾಶನ ನೊಳಂಬ ವೀರಶೈವ ಸಂಘ, ೨೦೦೭)

ಬಿಜ್ಜರಗಿ, ಚಂದ್ರಕಾಂತ., *ರೇವಣಸಿದ್ಧ* (ಬಿಜಾಪುರ: ಶೈಲೇಂದ್ರ ಪ್ರಕಾಶನ, ೨೦೦೯)

,,,,, *ಕನಕದಾಸರು* (ಬಿಜಾಪುರ: ಶೈಲೇಂದ್ರ ಪ್ರಕಾಶನ, ೨೦೧೦)

,,,,, *ಕುರುಬರ ಹೆಜ್ಜೆಗಳು* (ಬಿಜಾಪುರ: ಶೈಲೇಂದ್ರ ಪ್ರಕಾಶನ, ೨೦೧೧)

ಬೋರಲಿಂಗಯ್ಯ, ಹಿ ಚಿ., *ಸಿದ್ಧಿಯರ ಸಂಸ್ಕೃತಿ* (ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೩)

,,,,, *ಬುಡಕಟ್ಟು ಅಧ್ಯಯನ* (ಹಂಪಿ: ಕನ್ನಡ ವಿಶ್ವವಿದ್ಯಾಲಯ, ೨೦೦೫)

ಮೇತ್ರಿ, ಕೆ ಎಂ., *ಬುಡಕಟ್ಟು ಕುಲಕಸುಬುಗಳು;* (ಹಂಪಿ: ಕನ್ನಡ ವಿಶ್ವವಿದ್ಯಾಲಯ, ೨೦೦೨)

,,,,,, ಮತ್ತು ಮೃತ್ಯುಂಜಯ, ರುಮಾಲೆ., *ಕುರುಗೋಡು ನೀಲಮ್ಮನವರ ಸಾಂಸ್ಕೃತಿಕ ಅಧ್ಯಯನ* (ಬಳ್ಳಾರಿ: ಕನ್ನಡ ಸಾಹಿತ್ಯ ಪರಿಷತ್ತು, ೨೦೦೮)

ರವಿ, ಬಿ ಕೆ., *ಭಾರತದ ಕುರುಬರು ರಾಜ ಪರಂಪರೆಯ ಬುಡಕಟ್ಟು; ಸಮಾಜೋ ಸಾಂಸ್ಕೃತಿಕ ಅಧ್ಯಯನ* (ಬೆಂಗಳೂರು: ಅಂಕಿತ ಪ್ರಕಾಶನ, ೨೦೦೮)

ರವೀಂದ್ರನಾಥ, ಕೆ., *ಕನ್ನಡ ಟೀಕಾ ಸಾಹಿತ್ಯ* (ಹಂಪಿ: ಕನ್ನಡ ವಿಶ್ವವಿದ್ಯಾಲಯ, ೨೦೦೬)

ರಾಷ್ಟ್ರಕೂಟರ ಶಾಸನಗಳು–೧ ಮತ್ತು ೨ ಸಂಪುಟಗಳು (ಮೈಸೂರು: ಮೈಸೂರು ವಿಶ್ವವಿದ್ಯಾಲಯ)

ವೆಂಕಣಗುಡ್ಡ, ಟಿ., *ಕನ್ನಡ ವಿಷಯ ವಿಶ್ವಕೋಶ* (ಮೈಸೂರು: ಮೈಸೂರು ವಿಶ್ವವಿದ್ಯಾಲಯ, ೧೯೭೦)

ಶಂಕರಪ್ಪ, ಎಂ ಪಿ., *ನೊಳಂಬರು* (ಬೆಂಗಳೂರು: ಅನ್ನಪೂರ್ಣ ಪ್ರಕಾಶನ, ೨೦೦೭)

ಶಾಂತವೀರಯ್ಯ, ಹೀ ಚಿ., *ಕುಡುಒಕ್ಕಲಿಗರು, ನೊಳಂಬರು ಮತ್ತು ಲಾಳಗೊಂಡರು ಒಂದು ಸಮೀಕ್ಷೆ* (ಅಥಣಿ: ಅನುಪಮ ಪ್ರಕಾಶನ, ೨೦೧೪)

,,,,,, *ಶ್ರೀ ಸಿದ್ಧರಾಮ ಚಾರಿತ್ರ* (ಬೆಂಗಳೂರು: ಸಚ್ಚಿನ್ ಪಬ್ಲಿಷರ್ಸ್ ೨೦೦೯)

ಶಿವಸ್ವಾಮಿ., *ಕುರುಬ ಜನಾಂಗ ಐತಿಹಾಸಿಕ ಸಂಕ್ಷಿಪ್ತ ಅಧ್ಯಯನ* (ಅಜ್ಜಂಪುರ: ಪವಿತ್ರ ಪ್ರೆಸ್, ೨೦೦೭)

ಶ್ರೀನಿವಾಸ, ಎಲ್.,(ಸಂ)., *ಪರಿವರ್ತನೆಯ ಹಾದಿಯಲ್ಲಿ ಬುಡುಕಟ್ಟು ಸಮಾಜಗಳು* (ಹಂಪಿ: ಕನ್ನಡ ವಿಶ್ವವಿದ್ಯಾಲಯ, ೨೦೧೦)

ಶ್ರೀಮತಿ, ಎಚ್ ಎಸ್., *ಪ್ರಾಚೀನ ಭಾರತದ ಚರಿತ್ರೆ ಡಿ.ಡಿ.ಕೋಸಾಂಬಿಯವರ ಚಿಂತನೆಗಳು* (ಬೆಂಗಳೂರು: ಪ್ರಗತಿ ಗ್ರಾಫಿಕ್ಸ್, ೨೦೧೨)

ಸಾಲೆತ್ತೊರೆ, ಬಿ ಎ., ಮತ್ತು ದೇಸಾಯಿ, ಪಾಂಡುರಂಗರಾಯರು., *ಕನ್ನಡ ನಾಡಿನ ಚರಿತ್ರೆ, ಭಾಗ–೧* (ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು, ೨೦೦೮)

ಸಿಂಹಭೂಪಾಲವಿರಚಿತಂ., *ಲಾಸ್ಯರಂಜನಂ* (ಮೈಸೂರು, ೧೯೬೬)

ಸುಧಾಕರ,(ಸಂ)., ಹನುಮಂತಯ್ಯ, ವ್ಹಿ ಆರ್., ಕುರುಬರ ಚರಿತ್ರೆ (ಮೈಸೂರು: ಪ್ರತಿಭಾ ಪ್ರಕಾಶನ, ೧೯೯೬)

ಹನಗುಂಡಿ, ಲ ಸಿ., *ಶ್ರೀ ಸಿದ್ಧರಾಮೇಶ್ವರರ ಮಹಾತ್ಮೆ* (ಸೋಲಾಪುರ: ಶ್ರೀಸಿದ್ಧೇಶ್ವರ ದೇವಸ್ಥಾನ ಕಮೀಟಿ ಪ್ರಕಾಶನ, ೧೯೯೯)

ಹಳ್ಳಿಕೇರಿ, ಎಫ್ ಟಿ.(ಸಂ)., *ರೇವಣಸಿದ್ಧ ಪರಂಪರೆ* (ಹಂಪಿ: ಕನ್ನಡ ವಿಶ್ವವಿದ್ಯಾಲಯ, ೨೦೧೪)

,,,,., *ಹಾಲುಮತ ವ್ಯಾಸಂಗ* (ಹಂಪಿ: ಕನ್ನಡ ವಿಶ್ವವಿದ್ಯಾಲಯ, ೨೦೧೦)

ಹಿರೇಮಠ ಆರ್ ಸಿ ಮತ್ತು ಕಲಬುರ್ಗಿ ಎಂ ಎಂ., *ಕನ್ನಡ ಶಾಸನ ಸಂಪದ;* (ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ, ೧೯೮೭)

ಹೀರೆಮಠ, ಚನ್ನಬಸಯ್ಯ, *ಪ್ರಾಚೀನ ಕರ್ನಾಟಕದ ವಿಭಾಗಗಳು* (ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ೨೦೧೫)

ಹಿರೇಮಲ್ಲೂರು, ಈಶ್ವರನ್., *ಬಸವಣ್ಣ ಹಾಗೂ ಲಿಂಗಾಯತ ಧರ್ಮ* (ಬೆಂಗಳೂರು: ಪ್ರಿಯದರ್ಶಿನಿ ಪ್ರಕಾಶನ, ೨೦೦೯)

,,,,., *ಲಿಂಗಾಯತ ಧರ್ಮ ಒಂದು ಅಧ್ಯಯನ ಭಾಗ–೧* (ಬೆಂಗಳೂರು: ಪ್ರಿಯದರ್ಶಿನಿ ಪ್ರಕಾಶನ, ೨೦೦೯)

,,,,., *ಲಿಂಗಾಯತ, ಜೈನ ಮತ್ತು ಬ್ರಾಹ್ಮಣ ಧರ್ಮಗಳು ಭಾಗ–೩* (ಬೆಂಗಳೂರು: ಪ್ರಿಯದರ್ಶಿನಿ ಪ್ರಕಾಶನ, ೨೦೦೯)

ಹೊರಿ, ಎಂ ವಿ.,, *ಸಿರಿಸಂಗಿ ಸಂಸ್ಥಾನ; ಒಂದು ಅಧ್ಯಯನ;* (ಮುಂಡರಗಿ: ತ್ಯಾಗವೀರ ಸಿರಸಂಗಿ ಲಿಂಗರಾಜ ಸೇವಾ ಸಂಸ್ಥೆ, ೨೦೧೦)

Andrew, L. Cohen., *Temple Archetecture and sculpture of the Nolambas* (New Delhi: Ajay, Kumar, Jain for Manohar, 1998)

Annual Report: 1929 (New Delhi: A S I: reprint 1986)

Biesanz Mavis Hihunen and Biesanz Johan., *Introduction to Sociology* (New Jersey: Prantice Hall, 1978)

Davis, Kingsley., *Human Society* (New York: The Macmillan Company, 1965)

Edgar, Thurston., *Caste and Tribes of Southern India* (New Delhi: Jutley for Asian Educational Servies, 1947)

Epigraphy Carnatica Vol, 7, 9(1), 10, 11, 12 (Mysore : Mysore University, Retrieved 2008-03-07)

Goode and Hatt., *Methods in Social Research* (New Delhi: Mchgraw Hall International Book Company, 1986)

Krishna, Murthy, M S., *The Nolambas* (Mysore: Published, by Prasaranaga, University, of Mysore, 1980)

Kuppu Swamy., *Social Change in India* (New Delhi: Publishing House Pvt Ltd, 1986)

More, Wilbert E., *Social change* (New Delhi: Prantice Hall of India Pvt Ltd, 1965)

Ram, Ahuja., Research Methods (Jaipur: Rawt Publication, 1992)

Rice, B L., Epigraphy Carnatica Vol, 12 (Retrieved 2008-03-07)

Select Epigraphs of Andhra Pradesh South Indian Inscriptions, IV-XI

Sharma, B A., *Research Methods in Social Sciences* (New Delhi: Strling Publisher, 1989)

Singh, K S., *The People of India: Karnataka* (New Delhi: Anthropological, Survey, of India, 2003)

Singh, Yogendra., *Modernization of indian Tradition A Systematic Study of Social Change* (Delhi: Thomson Press India Ltd, 1973)

South Indian Inscriptions Vol. VI (New Delhi: A S I: Miscellaneous Inscriptions in Tamil, Telugu and Kannada ,1968)

South Indian Inscriptions Vol. IX Pt. I (New Delhi: A S I: Miscellaneous Inscriptions in Kannada, 1968)

South Indian Inscriptions Vol. XI (New Delhi: A S I: Bombay-Karnataka Inscriptions, 1968)

South Indian Inscriptions Vol. XII (New Delhi: A S I: Pallava Inscriptions,1968)

Srinivas, M N., *Social Change in Modern India* (Los Engeles: University of California Press, 1960)

Sri, Ramamurthy., *Nolamba Sculptures in the Madras* (Madras: Fort Museum, 1964)

Sten, Konow., Epigraphia Indica, Vol, XI (New Delhi: Archaeological Survey of India,1911–12)

,,,,., Epigraphia Indica, Vol, XII (New Delhi: Archaeological Survey of India,1913–14)

ನಿಯತಕಾಲಿಕೆಗಳು

ಚನ್ನಬಸವಯ್ಯ, ವಾಯ್ ಆರ್(ಸಂ)., *ನೊಳಂಬವಾಣಿ* ಸಂಪುಟ ೧, ಸಂಚಿಕೆ ೨ (ಬೆಂಗಳೂರು: ಪ್ರಕಾಶನ, ನೊಳಂಬ ವೀರಶೈವ ಸಂಘ, ೨೦೧೨ ಜೂನ್)

,,,,.,: *ನೊಳಂಬವಾಣಿ* ಸಂಪುಟ ೧, ಸಂಚಿಕೆ ೩ (ಬೆಂಗಳೂರು: ಪ್ರಕಾಶನ, ನೊಳಂಬ ವೀರಶೈವ ಸಂಘ, ೨೦೧೨ ಸಪ್ಟೆಂಬರ್)

,,,,.,: *ನೊಳಂಬವಾಣಿ* ಸಂಪುಟ ೧, ಸಂಚಿಕೆ ೪ (ಬೆಂಗಳೂರು: ಪ್ರಕಾಶನ, ನೊಳಂಬ ವೀರಶೈವ ಸಂಘ, ೨೦೧೨ ಡಿಸಂಬರ್)

,,,,.,: *ನೊಳಂಬವಾಣಿ* ಸಂಪುಟ ೩, ಸಂಚಿಕೆ ೪ (ಬೆಂಗಳೂರು: ಪ್ರಕಾಶನ, ನೊಳಂಬ ವೀರಶೈವ ಸಂಘ, ೨೦೧೪ ಡಿಸಂಬರ್)

,,,,.,: *ನೊಳಂಬವಾಣಿ* ಸಂಪುಟ ೪, ಸಂಚಿಕೆ ೩ (ಬೆಂಗಳೂರು: ಪ್ರಕಾಶನ, ನೊಳಂಬ ವೀರಶೈವ ಸಂಘ, ೨೦೧೫ ಸೆಪ್ಟಂಬರ್)

,,,,.,: *ನೊಳಂಬವಾಣಿ* ಸಂಪುಟ ೫, ಸಂಚಿಕೆ ೧ (ಬೆಂಗಳೂರು: ಪ್ರಕಾಶನ, ನೊಳಂಬ ವೀರಶೈವ ಸಂಘ, ೨೦೧೬ ಮಾರ್ಚ್)

,,,,.,: *ನೊಳಂಬವಾಣಿ* ಸಂಪುಟ ೫, ಸಂಚಿಕೆ ೨ (ಬೆಂಗಳೂರು: ಪ್ರಕಾಶನ, ನೊಳಂಬ ವೀರಶೈವ ಸಂಘ, ೨೦೧೬ ಜೂನ್)

Gopinath, R., *Vision of Tribalism* (Tiruvanatapuram: Kerala University, 2011)



ಬುಡಕಟ್ಟು ಅಧ್ಯಯನ ವಿಭಾಗ